ಹುಬ್ಬಳ್ಳಿ
ಶುಕ್ರವಾರ, 22 ಮೇ 2026
ಸಂಪುಟ 16, ಸಂಚಿಕೆ 58, ಪುಟಗಳು 12
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



2034ರವರೆಗೂ ಬಿಜೆಪಿ ಪ್ರಬಲ ಶಕ್ತಿ | 02
ಎಬೋಲಾ: ಮಾರ್ಗಸೂಚಿ ಬಿಡುಗಡೆ | 02
ಬಂಗಾಳ ಮದರಸಾಗಳಲ್ಲಿ ವಂದೇ ಮಾತರಂ ಕಡ್ಡಾಯ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ ಉಪರಿ ಸಪ್ತಮಿ, ನಕ್ಷತ್ರ: ಆಶ್ಲೇಷ

ದಿನದ ಮಾತು

ನೀರಿನಲ್ಲಿ ಎಣ್ಣೆ, ವಿವೇಕಿಯಲ್ಲಿ ತಿಳಿವು ಇವು ಸ್ವಶಕ್ತಿಯಿಂದ ವಿಸ್ತಾರಗೊಳ್ಳುತ್ತವೆ.
▲ಲಘು ಚಾಣಕ್ಯ ಶತಕ

ಹಿಂದುಫೋಬಿಯಾ ವಿರುದ್ಧದ ತೀರ್ಪು!
ಲೇಖನ
◆ ರತನ್ ಶಾರದಾ
◆ ಪುಟ 6

ಕಿರುಸುದ್ದಿ

ತನ್ನದೇ ಜನರ ಮೇಲೆ ಪಾಕ್ ದಾಳಿ: ಭಾರತ ಛೀಮಾರಿ
◆ ಪುಟ 2

ಉ.ಪ್ರದೇಶ ಸರ್ಕಾರಿ ಕಾಲೇಜು, ವಿವಿಗಳಲ್ಲಿ ಸಮವಸ್ತ್ರ ಕಡ್ಡಾಯ
◆ ಪುಟ 2

ರುದ್ರಪ್ರಯಾಗ ಭೂಕುಸಿತ: ಯಾತ್ರಾರ್ಥಿಗಳ ಸ್ಥಳಾಂತರ
◆ ಪುಟ 2

ಅಪರಿಚಿತ ಬಂದೂಕುಧಾರಿಗಳಿಂದ ಹಮ್ಜಾ ಬುರ್ಹಾನ್ ಕೊಲೆ

ಪಿಓಕೆಯಲ್ಲಿ ಪುಲ್ವಾಮಾ ದಾಳಿಯ ರೂವಾರಿ ಹತ


◆ **ಹೊಸದಿಲ್ಲಿ:** ಪುಲ್ವಾಮಾ ದಾಳಿಯ ರೂವಾರಿಗಳಲ್ಲಿ ಒಬ್ಬನಾದ ಹಮ್ಜಾ ಬುರ್ಹಾನ್ ಅಲಿಯಾಸ್ ಡಾಕ್ಟರ್(23) ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಮುಜಫರಾಬಾದ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡಿನ ದಾಳಿಗೆ ಹತನಾಗಿದ್ದಾನೆ. ಹಮ್ಜಾ ಮೇಲೆ ಹಲವು ಸುತ್ತಿನ ಗುಂಡಿನ ಸುರಿಮಳೆ ನಡೆದಿದ್ದು, ಗಂಭೀರ ಗಾಯದ ಪರಿಣಾಮ ಸ್ಥಳದಲ್ಲೇ ಪ್ರಾಣ ಬಿಟ್ಟಿದ್ದಾನೆ. ಪಿಒಕೆಯ ಮುಜಫರಾಬಾದ್ ಪ್ರದೇಶದಲ್ಲಿ ಘಟನೆ ನಡೆದಿರುವುದಾಗಿ ತಿಳಿದುಬಂದಿದೆ.



ಉಗ್ರರ ಮಧ್ಯೆ ಡಾಕ್ಟರ್ ಹೆಸರಿನಿಂದ ಚಿರಪರಿಚಿತನಾಗಿದ್ದ ಹಮ್ಜಾನನ್ನು 2022ರಲ್ಲಿ ಕೇಂದ್ರ ಗೃಹ ಇಲಾಖೆ ಭಯೋತ್ಪಾದಕ ಎಂದು ಘೋಷಿಸಿತ್ತು. ಅಧಿಕೃತ ಅಧಿಸೂಚನೆಯಲ್ಲಿ, ಅರ್ಜುಮಂಡ್ ಗುಲ್ಜಾರ್ ದಾರ್ ಅಲಿಯಾಸ್ ಹಮ್ಜಾ ಬುರ್ಹಾನ್ ಅಲಿಯಾಸ್ ಡಾಕ್ಟರ್ ಪುಲ್ವಾಮಾ ಜಿಲ್ಲೆ ರತ್ನಿಪೊರಾದ ಖರ್ಬತ್‌ಪೊರಾ ನಿವಾಸಿಯಾಗಿದ್ದ. ➡ಪುಟ 4



ಹೆಚ್ಚಾಗಿವೆ ಭಾರತ ವಿರೋಧಿಗಳ ಹತ್ಯೆ



ಇತ್ತೀಚೆಗೆ ಪಾಕಿಸ್ತಾನದಲ್ಲಿ ಭಾರತ ವಿರೋಧಿಗಳ ಹತ್ಯೆ ಹೆಚ್ಚಾಗುತ್ತಿವೆ. ಲಷ್ಕರ್-ಎ-ತೈಬಾ (ಎಲ್‌ಇಟಿ), ಜೈಶ್-ಎ-ಮೊಹಮ್ಮದ್(ಜೆಇಟಿ) ಮತ್ತು ಹಿಜ್ಬುಲ್ ಮುಜಾಹಿದ್ದೀನ್ ಇತ್ಯಾದಿ ಉಗ್ರ ಸಂಘಟನೆಗಳಿಗೆ ಸೇರಿದ ಅಗ್ರ ಕಮಾಂಡರ್‌ಗಳು ಮತ್ತು ಉಗ್ರರನ್ನೇ ಗುರಿಯಾಗಿಸಿ ರಹಸ್ಯ ಹತ್ಯೆಗಳು ನಡೆಯುತ್ತಿವೆ. ➡ಪುಟ 4

ಮುಂದುವರಿದ ಭಾರತ ವಿರೋಧಿ ಉಗ್ರರ ಕೊಲೆ ◆ ಪುಟ 4

ಸಿಎಂ ಅಧ್ಯಕ್ಷತೆಯ ಸಂಪುಟ ಸಭೆ ಒಪ್ಪಿಗೆ

52 ಅಪರಾಧ ಕೇಸ್ ಹಿಂಪಡೆಗೆ ನಿರ್ಧಾರ

◆ **ಬೆಂಗಳೂರು:** ಕಲಬುರಗಿ ಜಿಲ್ಲೆ ಆಳಂದದ ಲಾಡ್ಲೆ ಮಶಾಕ ದರ್ಗಾದ ಶಿವಲಿಂಗ ಅಶುದ್ಧಿ ಪ್ರಕರಣಕ್ಕೆ ಸಂಬಂಧಿಸಿ ಪಟ್ಟಣದಲ್ಲಿ ಕೋಮುಗಲಭೆ ಸೃಷ್ಟಿಸಲು ಮಾರಕಾಸ್ತ್ರಗಳು ಸಹಿತ ಕಲ್ಲು, ದೊಣ್ಣೆಗಳನ್ನು ಸಂಗ್ರಹಿಸಿಟ್ಟ ಮುಸ್ಲಿಂ ಅಪ್ರಾಪ್ತ ವಯಸ್ಕರ ಮೇಲಿನ ಪ್ರಕರಣಗಳು ಸೇರಿದಂತೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 52 ಕ್ರಿಮಿನಲ್ ಮೊಕದ್ದಮೆಗಳನ್ನು ಅಭಿಯೋಜನೆಯಿಂದ ಹಿಂಪಡೆಯಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದ್ದಾರೆ. ಅಭಿಯೋಜನೆ ಹಿಂಪಡೆಯುವ 52 ಪ್ರಕರಣಗಳ ಪೈಕಿ 8 ಪ್ರಕರಣಗಳು ಇದಕ್ಕೆ ಸಂಬಂಧಿಸಿದ್ದಾಗಿವೆ.

ಇದಲ್ಲದೇ ಕನ್ನಡ ನಾಡು ಮತ್ತು ನೀರಿಗಾಗಿನ ಹೋರಾಟ, ರೈತ ಹೋರಾಟಗಳಿಗೆ ಸಂಬಂಧಿಸಿ ಪ್ರಕರಣಗಳನ್ನು ಕೈಬಿಡಲಾಗಿದೆ. ➡ಪುಟ 4

ಶಿಕ್ಷಣ ಕಿಟ್ ಖರೀದಿಗೆ ಅಸ್ತು ◆ ಪುಟ 4



ಎಸ್‌ಐಆರ್: ನಾಲ್ಕು ದಿನದಲ್ಲಿ ತೀರ್ಮಾನ

ಕರ್ನಾಟಕ ರಾಜ್ಯದಲ್ಲಿ ಮತದಾರರ ಪಟ್ಟಿಗಳ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಸಂಬಂಧಿಸಿ ಯಾವೊಬ್ಬ ಪ್ರಜೆಯ ಮತದಾನದ ಹಕ್ಕು ಉದ್ದೇಶಪೂರ್ವಕವಾಗಿ, ಅನವಶ್ಯಕವಾಗಿ ಕಸಿದುಕೊಳ್ಳುವ, ದಮನ ಮಾಡುವ ಯಾವುದೇ ಪ್ರಕ್ರಿಯೆ ನಡೆದರೂ ಸುಪ್ರೀಂ ಮೆಟ್ಟಿಲೇರುವುದಕ್ಕೆ ರಾಜ್ಯ ಸರ್ಕಾರ ಚಿಂತನೆ ನಡೆಸಿದ್ದು ಮುಂದಿನ 3-4 ದಿನಗಳಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ. ➡ಪುಟ 4

ಪ್ರಧಾನಿ ನರೇಂದ್ರ ಮೋದಿ ಪಂಚರಾಷ್ಟ್ರ ಪ್ರವಾಸ ಸಂಪನ್ನ

ವಿದೇಶಿ ನಾಯಕರಿಗೆ ದೇಸಿ ಉಡುಗೊರೆ

◆ **ಹೊಸದಿಲ್ಲಿ:** ಪಂಚ ರಾಷ್ಟ್ರಗಳ ಪ್ರವಾಸದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ದೇಶಗಳ ನಾಯಕರಿಗೆ ಭಾರತದ ಪರಂಪರೆ, ಕಲೆ ಮತ್ತು ಕೃಷಿ ವೈಭವವನ್ನು ಪ್ರತಿಬಿಂಬಿಸುವ ಹಲವು ವಿಶಿಷ್ಟ ಉಡುಗೊರೆಗಳನ್ನು ನೀಡಿದ್ದಾರೆ. ಇಟಲಿ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರಿಗೆ ಅಸ್ಸಾಂನ ಪ್ರಸಿದ್ಧ ಮುಗಾ ರೇಷ್ಮೆ ಶಾಲು ಹಾಗೂ ಶಿರುಯಿ ಲಿಲಿ ಪ್ರೇರಿತ ಸಿಲ್ಕ್ ಶಾಲು ನೀಡಲಾಗಿದೆ. ➡ಪುಟ 4

ಗಮನಸೆಳೆದ ಗಿಫ್ಟ್
- ಮೆಲೋನಿ: ಮುಗಾ ಸಿಲ್ಕ್ ಶಾಲು, ಟಾಫಿ
- ಯುಎಇ ಅಧ್ಯಕ್ಷ: ಕೇಸರ್ ಮಾವು, ರೋಗನ್ ಪೇಂಟಿಂಗ್
- ಸ್ವೀಡನ್ ಪ್ರಧಾನಿ: ಲಡಾಖ್ ಉಣ್ಣೆ ಶಾಲು
- ನೆದರ್‌ಲ್ಯಾಂಡ್ಸ್ ಪ್ರಧಾನಿ: ಮಧುಬನಿ ಚಿತ್ರ
- ನಾರ್ವೆ ಅರಸ ಕುಟುಂಬ: ತಾರಕಾಸಿ ನೌಕಾ ಮಾದರಿ
- ಐಸ್‌ಲ್ಯಾಂಡ್ ಪ್ರಧಾನಿ: ಐಸ್ ಆರ್ಕ್ಸ್ ಪ್ರತಿರೂಪ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ | ಸಿಎಂ ಸಿದ್ದರಾಮಯ್ಯ ಒತ್ತಾಯ

ಪ್ರಧಾನ್, ಪ್ರಧಾನಿ ಹೊಣೆ ಹೊರಲಿ

◆ **ಬೆಂಗಳೂರು:** ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯ ಜವಾಬ್ದಾರಿಯನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಹೊರಬೇಕು ಎಂದು ಸಿಎಂ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಗುರುವಾರ ಫ್ರೀಡಂ ಪಾರ್ಕ್‌ನಲ್ಲಿ ಯುವ ಕಾಂಗ್ರೆಸ್ ಆಯೋಜಿಸಿದ್ದ ನೀಟ್ ಪರೀಕ್ಷಾ ಅಕ್ರಮಗಳ ವಿರುದ್ಧದ ಪ್ರತಿಭಟನೆಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ಸಚಿವ ಧರ್ಮೇಂದ್ರ ಪ್ರಧಾನ್ ಅವರಾಗಲಿ, ಪ್ರಧಾನಿ ಮೋದಿ ಅವರಾಗಲಿ ಪತ್ರಿಕೆಯ ಸೋರಿಕೆ ಜವಾಬ್ದಾರಿ ಹೊತ್ತುಕೊಂಡಿಲ್ಲ. ➡ಪುಟ 4



ಕೇರಳ ವಿಧಾನ ಸಭೆಯಲ್ಲಿ ಕನ್ನಡದ ಕಂಪು

◆ **ತಿರುವನಂತಪುರ:** ಮಲಯಾಳಂ ಅಧಿಕೃತ ಭಾಷೆಯಾದ ಕೇರಳ ವಿಧಾನಸಭೆಯಲ್ಲಿ ಗುರುವಾರ ಕನ್ನಡದ ಸೊಗಡು ಮೊಳಗಿತು. ಮಂಜೇಶ್ವರ ಕ್ಷೇತ್ರದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ ಶಾಸಕ ಎ.ಕೆ.ಎಂ.ಅಶ್ರಫ್ ಅವರು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿ ಗಮನ ಸೆಳೆದರು. ➡ಪುಟ 4



ಕಿರುಸುದ್ದಿ

ಯೋಜನೆ ಶೀಘ್ರ ಜಾರಿಗೊಳಿಸಿ

ಹುಬ್ಬಳ್ಳಿ/ನವಲಗುಂದ: ಉತ್ತರ ಕರ್ನಾಟಕ ಭಾಗದ ಪ್ರಮುಖ ನೀರಾವರಿ ಯೋಜನೆ ಮಹಾದಾಯಿ ಕಳಸಾ ಬಂಡೂರಿ ಯೋಜನೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರ ತಕ್ಷಣ ಜಾರಿಗೆ ಮಾಡಬೇಕು ಎಂದು ಕರ್ನಾಟಕ ರೈತ ಸೇನೆಯ ಆಗ್ರಹಿಸಿದೆ.

ಗುರುವಾರ ಬೆಂಗಳೂರಿನ ಅರಣ್ಯ ಸಚಿವಾಯದ ಕಚೇರಿಗೆ ಭೇಟಿ ನೀಡಿ ಪ್ರದಾನ ಕಾರ್ಯದರ್ಶಿ ಅವರಿಗೆ ಮನವಿ ಸಲ್ಲಿಸಿದರು. ಕರ್ನಾಟಕ ರೈತ ಸೇನೆಯ ರಾಜ್ಯ ಅಧ್ಯಕ್ಷ ಶಂಕರಪ್ಪ ಅಂಬಲಿ ಮಾತನಾಡಿ, 1976 ರಿಂದ ನಿರಂತರವಾಗಿ ಮಹಾದಾಯಿ ಕಳಸಾಬಂಡೂರಿ ಯೋಜನೆ ಜಾರಿಗೆ ಆಗ್ರಹಿಸಿ ಹೋರಾಟ ಮಾಡುತ್ತಿದ್ದರೂ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಮನ್ವಯದ ಕೊರತೆಯಿಂದ ಈ ಯೋಜನೆಯು ಇದುವರೆಗೆ ಅನುಷ್ಠಾನ ಮಾಡಿಲ್ಲ ಹಾಗೂ ರೈತರ ಕೃಷಿ ಭೂಮಿಗೆ ನೀರು ಒದಗಿಸಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕಳಸಾ ಬಂಡೂರಿ ಯೋಜನೆ ಜಾರಿಗಾಗಿ ನ್ಯಾಯಾಧೀಕರಣದ ಆದೇಶದಂತೆ ಕೇಂದ್ರದ ಅನುಮತಿ ಪಡೆದು ಯೋಜನೆಯನ್ನು ಜಾರಿಗೊಳಿಸುವುದು ಕಡ್ಡಾಯ. ಆದರೆ ಕೇಂದ್ರ ಅರಣ್ಯ ಇಲಾಖೆಯ ಉನ್ನತಾಧಿಕಾರ ಸಮಿತಿಗೆ ಯೋಜನೆ ಜಾರಿಗೊಳಿಸುವ ಅನ್ವಯ ರಾಜ್ಯದ ಪ್ರಸ್ತಾವನೆಯನ್ನು ತಿರಸ್ಕರಿಸಿರುವುದು ಇದಕ್ಕೆ ಕೊಟ್ಟಿರುವ ಕಾರಣಗಳು, ರಾಜ್ಯ ಸರ್ಕಾರದ ಲೋಪ ಎದ್ದು ಕಾಣುತ್ತಿದೆ. ಇದರಿಂದ ರೈತರಲ್ಲಿ ಆತಂಕ ಉಂಟು ಮಾಡಿದೆ ಎಂದಿದ್ದಾರೆ.

ಈ ಯೋಜನೆ ನಿಂತರೆ ಸುಮಾರು 5.20 ಲಕ್ಷ ಹೆಕ್ಟೇರ್ ಕೃಷಿ ಭೂಮಿಗೆ ನೀರು ಇಲ್ಲದಂತಾಗಿದೆ. ಅರಣ್ಯ ಇಲಾಖೆ ಮತ್ತು ಇತರ ಇಲಾಖೆಗಳು ಸಮನ್ವಯತೆಯಿಂದ ರಾಜ್ಯ ಮತ್ತು ಕೇಂದ್ರದ ಏಕ ಸಾಮ್ಯತೆ ಇರಬೇಕು. ಆದ್ದರಿಂದ ಅತಿ ಜರೂರಾಗಿ ಈ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು. ಪರಿಸರ ಹಾಗೂ ಆರ್ಥಿಕ ತಜ್ಞ ಡಾ ಎಂ ಆರ್ ರಂಗನಾಥರವರು ಸಹ ರಾಜ್ಯದ ಪ್ರಸ್ತಾವನೆಯನ್ನು ಆವಶ್ಯಕ ತಾಂತ್ರಿಕ ಮಾಹಿತಿ ಸಂಬಂಧ ಪಟ್ಟವರಿಂದ ಪಡೆದು ಶೀಘ್ರದಲ್ಲಿ ಪ್ರಸ್ತಾವನೆ ಕೇಂದ್ರ ಸರಕಾರಕ್ಕೆ ಮತ್ತು ಕೇಂದ್ರ ಉನ್ನತಾಧಿಕಾರ ಸಮಿತಿಗೆ ಮರು ಪ್ರಸ್ತಾವನೆ ಕಳಿಸಕೊಡಬೇಕು ಎಂದು ಮನವಿ ಮಾಡಿದ್ದಾರೆ. ಪರಿಸರ ಮತ್ತು ಪರಿಸರ ವಿಜ್ಞಾನ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್ ಅವರು ಮನವಿ ಸ್ವೀಕರಿಸಿ ಕೇಂದ್ರಕ್ಕೆ ಮನವಿ ಸಲ್ಲಿಸುವುದಾಗಿ ಭರವಸೆ ನೀಡಿದರು. ಭಾರತೀಯ ಕಿಸಾನ್ ಸಂಘದ ಗದಗ ಜಿಲ್ಲಾಧ್ಯಕ್ಷ ಎಸ್ ಎಸ್ ಪಾಟೀಲ್, ಗ್ಲೋಬಲ್ ಗ್ರೀನ್ ಎನರ್ಜಿ ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಡಾ ಪ್ರವೀಣ್ ನಾಯಕ್ ಇದ್ದರು.

ಮಧು ಗುಡದನ್ನಿ ಪ್ರಥಮ






ಧಾರವಾಡ: ಎಸ್ಸೆಸ್ಸೆಲ್ಸಿ ಮರುಮೌಲ್ಯಮಾಪನದಲ್ಲಿ ಹೆಚ್ಚುವರಿ ಅಂಕ ಪಡೆದ ಜನತಾ ಶಿಕ್ಷಣ ಸಮಿತಿ ಶ್ರೀ ಮಂಜುನಾಥೇಶ್ವರ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿನಿ ಮಧು ಗುಡದನ್ನಿ ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ಈ ಮೊದಲು ಶೇ.98.4 (615) ಅಂಕ ಪಡೆದ ಮಧು, ಮರುಮೌಲ್ಯಮಾಪನದ ನಂತರ ಶೇ.98.88 (618) ಅಂಕಗಳು ಪಡೆದಿದ್ದಾಳೆ. ಅವನಿ ಶೇ.98.72, ಶ್ರೀನಿಧಿ ಹಿರೇಮಠ ಶೇ.98.72 ದ್ವಿತೀಯ ಮತ್ತು ರವಿ ಪವಾರ ಶೇ.98.08 ಅಂಕ ಗಳಿಸಿ ತೃತೀಯ ಸ್ಥಾನ ಪಡೆದ್ದಾನೆ. ವಿದ್ಯಾರ್ಥಿಗಳ ಸಾಧನೆಗೆ ಅಧ್ಯಕ್ಷ ವಿಶ್ವಪ್ರಸನ್ನ ತೀರ್ಥರು, ಕಾರ್ಯಾಧ್ಯಕ್ಷ ಡಾ. ಡಿ. ವೀರೇಂದ್ರ ಹೆಗ್ಗಡೆ, ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯೆ ಡಯಾನ ಜೋಗಿನ್, ಶಿಕ್ಷಕರು ಮತ್ತು ಸಿಬ್ಬಂದಿ ಹರ್ಷವ್ಯಕ್ತಪಡಿಸಿದ್ದಾರೆ.

ವಿಚಾರಣೆ ಮುಂದೂಡಿಕೆ

ಧಾರವಾಡ: ಮೇ 4ರಿಂದ ಮೇ 31ರವರೆಗೆ ಸಿವಿಲ್ ಕೋರ್ಟ್‌ಗಳಿಗೆ ಬೇಸಿಗೆ ರಜೆ ಇರುವ ಕಾರಣ ಜಿಲ್ಲಾಧಿಕಾರಿಗಳ ಕೋರ್ಟ್‌ನಲ್ಲಿ ನಡೆಯುವ ಕಲಾಪಕ್ಕೆ ಹಾಜರಾಗಲು ವಕೀಲರಿಗೆ ಅಸಾಧ್ಯ. ಹೀಗಾಗಿ ಪ್ರಕರಣಗಳ ವಿಚಾರಣೆ ಮೇ 31ರ ನಂತರ ತೆಗೆದುಕೊಳ್ಳಬೇಕು ಎಂದು ಧಾರವಾಡ ವಕೀಲರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 24ಕ್ಕೆ ಎಸ್ಸಿ, ಎಸ್ಟಿ ಸಭೆ

ಧಾರವಾಡ: ನಗರದ ದುರ್ಗಾದೇವಿ ದೇವಸ್ಥಾನದ ಹತ್ತಿರದ ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಜಿಲ್ಲಾ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪಂಗಡದ ಮುಖಂಡರು ಕುಂದುಕೊರತೆಗಳ ಸಭೆ ಮೇ 24ರ ಬೆಳಗ್ಗೆ 11ಕ್ಕೆ ಕರೆಯಲಾಗಿದೆ. ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮುಖಂಡರುಗಳು ಕುಂದುಕೊರತೆ ಸಭೆಯಲ್ಲಿ ಪಾಲ್ಗೊಳ್ಳುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಗುಂಜನ್ ಆರ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ/ನವಲಗುಂದ: ಉತ್ತರ ಕರ್ನಾಟಕ ಭಾಗದ ಪ್ರಮುಖ ನೀರಾವರಿ ಯೋಜನೆ ಮಹಾದಾಯಿ ಕಳಸಾ ಬಂಡೂರಿ ಯೋಜನೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರ ತಕ್ಷಣ ಜಾರಿಗೆ ಕರ್ನಾಟಕ ರೈತ ಸೇನೆ ಆಗ್ರಹಿಸಿದೆ.

ಸಂಗೀತ ಬೈಠಕ್ ಅವಶ್ಯ: ಹೆಗಡೆ

ಧಾರವಾಡ: ಸಂಗೀತ ಬೆಳವಣಿಗೆ, ಪ್ರತಿಭಾನ್ವಿತ ಯುವ ಕಲಾವಿದರಿಗೆ ವೇದಿಕೆ ಕಲ್ಪಿಸಲು ಸಂಗೀತದ ಬೈಠಕ್ ಅವಶ್ಯ ಎಂದು ಬೆಂಗಳೂರಿನ ಸಪ್ತಕ ಸಂಸ್ಥೆಯ ಸಂಸ್ಥಾಪಕ ಜಿ.ಎಸ್.ಹೆಗಡೆ ಹೇಳಿದರು.

ಬೆಂಗಳೂರಿನ ಸಪ್ತಕ ಹಾಗೂ ಧಾರವಾಡದ ಶೃತಿ ನಂದನ ಸಂಸ್ಥೆ ಇಲ್ಲಿನ ಕಲ್ಯಾಣನಗರದ ರವಿ ಕಟ್ಟಿ ಅವರ ನಿವಾಸದಲ್ಲಿ ಹಮ್ಮಿಕೊಂಡ ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಸಿತಾರ ವಾದಕರಾದ ಉಸ್ತಾದ್ ಶಫೀಕಖಾನ್ ಮಾತನಾಡಿ, ಇಂತಹ ಬೈಠಕ್‌ಗಳು ಯುವ ಪ್ರತಿಭೆಗಳ ಕಲೆ ಮುನ್ನಲೆಗೆ ತರಲಿವೆ ಎಂದರು. ವಿದೂಷಿ ಶುಭಾಂಗಿ ಜಾಧವ ಅವರ ಶಿಷ್ಯೆ ಶಿವಾನಿ ಕವತೇಕರ ಅವರ ಗಾಯನ ಪ್ರಸ್ತುತಿಯೊಂದಿಗೆ ಚಾಲನೆ ದೊರೆಯಿತು. ಶಿವಾನಿ ಮಧುವಂತಿ ರಾಗ ಹಾಗೂ ಮರಾಠಿ ಅಭಂಗವನ್ನು ಪ್ರಸ್ತುತಪಡಿಸಿದರು. ಉಸ್ತಾದ್ ಶಫೀಕಖಾನ್ ಹಾಗೂ ಶೃತಿ ಸಮನ್ವಿತಾ ಕಟ್ಟಿ ಮನಮೋಹಕ ರಾಗೇಶ್ರೀ ರಾಗ ಪ್ರಸ್ತುತಪಡಿಸಿದರು. ದೀಪ್ತಿ ಪಾಟೀಲ ಮಾರುಬಿಹಾಗ ರಾಗವನ್ನು ಸಾದರಪಡಿಸಿದರು. ಡಾ. ಶ್ರೀಹರಿ ದಿಗ್ಗಾವಿ, ಜಯತೀರ್ಥ ಪಂಚಮುಖಿ ತಬಲಾ, ಬಸವರಾಜ ಹಿರೇಮಠ ಸಂವಾದಿನಿಯಲ್ಲಿ ಸಾಥ್ ನೀಡಿದರು. ಪ್ರಕಾಶ ಬಾಳಿಕಾಯಿ ಅವರನ್ನು ಸನ್ಮಾನಿಸಲಾಯಿತು. ಸಂಗೀತಗಾರ ಪಂ.ಹನುಮಂತ ಬುರ್ಲಿ, ರಾಧಾ ದೇಸಾಯಿ, ಜೆ.ನಿರಂಜನ, ಪ್ರವೀಣ ಹೂಗಾರ, ವೇಣುಗೋಪಾಲ ಜೋಶಿ, ಕೃಷ್ಣ ಜೋಶಿ, ರಮೇಶ ಭಟ್ಟಿ, ನೂರಜಹಾನ್ ನದಾಫ್, ಲತಾ ಪಾಟೀಲ ಇದ್ದರು.



ಧಾರವಾಡ: ಬೆಂಗಳೂರಿನ ಸಪ್ತಕ ಹಾಗೂ ಧಾರವಾಡದ ಶೃತಿ ನಂದನ ಸಂಸ್ಥೆ ಇಲ್ಲಿನ ಕಲ್ಯಾಣನಗರದ ರವಿ ಕಟ್ಟಿ ಅವರ ನಿವಾಸದಲ್ಲಿ ಸಂಗೀತ ಕಾರ್ಯಕ್ರಮ ನಡೆಯಿತು.

ಬಾಟಲಿ, ಕ್ಯಾನ್‌ಗಳಿಗೆ ಪೆಟ್ರೋಲ್, ಡೀಸೆಲ್ ಹಾಕದಿರಲು ಆದೇಶ

ಕೃಷಿ ಚಟುವಟಿಕೆಗಳು ವಿಳಂಬ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಜಿಲ್ಲೆಯಲ್ಲಿ ಮುಂಗಾರು ಬಿತ್ತನೆಗೆ ರೈತರು ಸಿದ್ಧತೆ ನಡೆಸಿದ್ದು, ಕೃಷಿ ಚಟುವಟಿಕೆಗಳಿಗೆ ಪೆಟ್ರೋಲ್ ಹಾಗೂ ಡೀಸೆಲ್ ಸಮರ್ಪಕವಾಗಿ ದೊರೆದಿರುವುದು ರೈತರಿಗೆ ತಲೆ ನೋವಾಗಿ ಪರಿಣಮಿಸಿದೆ.

ಯುದ್ಧದ ಪರಿಣಾಮ ಪೆಟ್ರೋಲ್ ಹಾಗೂ ಡೀಸೆಲ್ ಮಿತವಯವಾಗಿ ಬಳಸಲು ಸರ್ಕಾರ ಪ್ಲಾಸ್ಟಿಕ್ ಬಾಟಲಿಅಥವಾ ಕ್ಯಾನ್‌ಗಳಿಗೆಪೆಟ್ರೋಲ್, ಡೀಸೆಲ್ ನೀಡಬಾರದು ಎಂದು ಆದೇಶ ನೀಡಿದೆ. ಈ ಹಿನ್ನೆಲೆ ಪೆಟ್ರೋಲ್ ಬಂಕ್‌ಗಳವರು ಹಿಂದೇಟು ಹಾಕುತ್ತಿರುವುದು ಕೃಷಿಕರಿಗೆ ತೊಂದರೆಯಾಗಿ ಪರಿಣಮಿಸಿದೆ. ಕೃಷಿ ಹಾಗೂ ತೋಟಗಾರಿಕೆ ಕೆಲಸಕ್ಕೆ ರೈತರು ವೀಡ್‌ಕಟ್ಟರ್, ಟ್ರ್ಯಾಕ್ಟರ್, ಟಿಲ್ಲರ್, ಸ್ಪೇಯರ್ ಮೊದಲಾದ ಯಂತ್ರ ಅಥವಾ ಸಾಧನಗಳನ್ನು ಬಳಸುತ್ತಾರೆ. ಇವುಗಳಲ್ಲಿ ಕೆಲಸಕ್ಕೆ ಪೆಟ್ರೋಲ್ ಅಥವಾ ಡೀಸೆಲ್ ಅತ್ಯಗತ್ಯ. ಜಮೀನುಗಳು ದೂರದಲ್ಲಿರುತ್ತವೆ. ಒಂದು ಬಾರಿ ಹೋದರೆ ಮತ್ತೆ ಬರುವುದು ಎಲ್ಲ ಕೆಲಸವಾದ ಬಳಿಕ. ಆದ್ದರಿಂದ ಮುಂಜಾಗ್ರತವಾಗಿ ಹೆಚ್ಚಿನ ಪೆಟ್ರೋಲ್ ಡೀಸೆಲ್ ಕ್ಯಾನ್ ಹಾಗೂ ಪ್ಲಾಸ್ಟಿಕ್ ಬಾಟಲಿಯಲ್ಲಿ ತೆಗೆದುಕೊಂಡು ಹೋಗುವುದು ಸಾಮಾನ್ಯ. ಈಗ ಬಂಕ್‌ನವರು ನಿರಾಕರಿಸುತ್ತಿರುವುದರಿಂದ ಕೃಷಿಕರಿಗೆ ಸಂಕಷ್ಟ ಎದುರಾಗಿದೆ. ರೈತರ ಸಮಸ್ಯೆಯನ್ನು ಜಿಲ್ಲಾಡಳಿತ ತಕ್ಷಣ ಪರ್ಯಾಯ ವ್ಯವಸ್ಥೆ ಮಾಡಬೇಕು. ಕೃಷಿ ಚಟುವಟಿಕೆಗಳಿಗೆ ಅನುಕೂಲ ಮಾಡಬೇಕು ಎಂದು ಕುಸುಗಲ್ ರೈತ ಮಲ್ಲೇಶ ಕುರಹಟ್ಟಿ ಆಗ್ರಹಿಸಿದರು.

> ರಾಜ್ಯ ಸರ್ಕಾರ ಅಧಿಕೃತ ಕ್ಯಾನ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ಖರೀದಿಸಲು ಅವಕಾಶ ನೀಡಿದೆ. ರೈತರು ಅಧಿಕೃತ ಕ್ಯಾನ್‌ಗಳ ಮೂಲಕ ಪೆಟ್ರೋಲ್-ಡೀಸೆಲ್ ಪಡೆಯಬಹುದು.
> ■ ಸ್ನೇಹಲ್ ಆರ್., ಜಿಲ್ಲಾಧಿಕಾರಿ

> ಮುಂಗಾರು ವಾರದಲ್ಲಿ ರಾಜ್ಯಕ್ಕೆ ಬರಲಿದೆ ಎಂದು ಹೇಳಲಾಗುತ್ತಿದೆ. ಅಷ್ಟರಲ್ಲಿ ಜಮೀನು ಬಿತ್ತನೆಗೆ ಹದ ಮಾಡಿ ಇಡಬೇಕು. ಟ್ರ್ಯಾಕ್ಟರ್ ನಿಂದ ರಂಟೆ ಹೊಡೆಯುವುದು, ಚಲಿಸುವ ಕಾರ್ಯ ಮಾಡುವುದಿದೆ. ಅದಕ್ಕೆ ಸಾಕಷ್ಟು ಪೆಟ್ರೋಲ್ ಖರ್ಚಾಗಲಿದೆ.
> ■ ಶಂಕರ ಕಮತರ, ರೈತ, ಬ್ಯಾಹಟ್ಟಿ ಗ್ರಾಮ

ದಿಗಂತ ವಿಶೇಷ

- ಜಿಲ್ಲೆಯಲ್ಲಿ ಕೆಲವು ಗ್ರಾಮಗಳ ಪೆಟ್ರೋಲ್ ಬಂಕ್‌ಗಳಲ್ಲಿ ದೊರೆಯುತ್ತಿಲ್ಲ ಪೆಟ್ರೋಲ್ ಡೀಸೆಲ್
- ಪೆಟ್ರೋಲ್ ಬಂಕ್ ಮಾಲೀಕರು ವಾಹನಗಳಿಗೆ ಮಾತ್ರ ಪೆಟ್ರೋಲ್, ಡೀಸೆಲ್ ಹಾಕುತ್ತಿದ್ದು, ಅರ್ಧ ಗಂಟೆಗೂ ಹೆಚ್ಚು ಸರತಿ ಸಾಲಿನಲ್ಲಿ ನಿಂತು ಪಡೆಯಬೇಕಾದ ಪರಿಸ್ಥಿತಿ ಇದೆ ಎನ್ನುತ್ತಾರೆ ರೈತರು



ಪೆಟ್ರೋಲ್, ಡೀಸೆಲ್ ಕ್ಯಾನ್‌ಗಳಲ್ಲಿ ನೀಡಿ

ಜಮೀನಿನ ಕೆಲಸ ಮಾಡುವಾಗ, ಐದೋ ಹತ್ತೋ ಲೀಟರ್ ಪೆಟ್ರೋಲ್ ಅಥವಾ ಡೀಸೆಲ್ ಅನ್ನು ಕ್ಯಾನ್‌ಗಳಲ್ಲಿ ತುಂಬಿಸಿಕೊಂಡು ಇಟ್ಟುಕೊಂಡಿರುತ್ತಿದ್ದೆವು. ಯಂತ್ರ ಅಥವಾ ವಾಹನದಲ್ಲಿ ಖಾಲಿಯಾದರೆ ತುಂಬಿಸಿಕೊಂಡು ಕೆಲಸ ಮುಂದುವರಿಸುತ್ತಿದ್ದೆವು. ಈಗ ಪೆಟ್ರೋಲ್ ಬಂಕ್‌ಗಳಲ್ಲಿ ಕ್ಯಾನ್‌ಗಳಲ್ಲಿ ಪೆಟ್ರೋಲ್, ಡೀಸೆಲ್ ನೀಡುತ್ತಿಲ್ಲ. ಇದರಿಂದ ಕೃಷಿ ಚಟುವಟಿಕೆಗಳು ವಿಳಂಬವಾಗುತ್ತಿವೆ ಎನ್ನುತ್ತಾರೆ ಕುಸುಗಲ್ ರೈತ ಮಲ್ಲೇಶ ಕುರಹಟ್ಟಿ.

ಸಮಸ್ಯೆ ಪರಿಹರಿಸಿ

ಕೃಷಿ ಚಟುವಟಿಕೆಗಳಿಗೆ ಪ್ಲಾಸ್ಟಿಕ್ ಬಾಟಲಿ ಅಥವಾ ಕ್ಯಾನ್‌ಗಳಿಗೆ ಪೆಟ್ರೋಲ್, ಡೀಸೆಲ್ ನೀಡದಿರುವುದು ರೈತರಿಗೆ ಸಮಸ್ಯೆಯಾಗಿದೆ. ಜಿಲ್ಲಾಡಳಿತ ಸುರಕ್ಷತೆಯ ಕಾರಣದಿಂದ ಆದೇಶ ಮಾಡಿರಬಹುದು. ಆದರೆ ಮುಂಗಾರ ಬಿತ್ತನೆ ಸಿದ್ದತೆಗೆ ಇದರಿಂದ ಸಮಸ್ಯೆಯಾಗುತ್ತಿದೆ. ಕೃಷಿಕರಿಗೆ ಆಗಿರುವ ಸಮಸ್ಯೆ ಪರಿಹರಿಸುವವರು ಯಾರು? ಹಲವು ಕೆಲಸಗಳಿಗೆ ಸಣ್ಣ ಪ್ರಮಾಣದಲ್ಲಿ ಬೇಕಾಗುವ ಪೆಟ್ರೋಲ್ ತರುವುದು ಹೇಗೆ, ಪರ್ಯಾಯವೇನು ಎಂದು ಕೃಷಿಕರು ಪ್ರಶ್ನಿಸುತ್ತಿದ್ದಾರೆ.

ಪರಿಶ್ರಮದಿಂದ ಉತ್ತಮ ಸಾಧನೆ ಸಾಧ್ಯ

ಧಾರವಾಡ: ಜ್ಞಾನ ಸರ್ವವ್ಯಾಪ್ತಿ. ಪಡೆದಷ್ಟು ಬದುಕಿನಲ್ಲಿ ಯಶಸ್ಸು ದೊರೆಯಲಿದೆ. ಹೀಗಾಗಿ ಶಿಸ್ತು, ನಿರಂತರ ಅಭ್ಯಾಸ ಹಾಗೂ ಪರಿಶ್ರಮದಿಂದ ಉತ್ತಮ ಸಾಧನೆ ಮಾಡಬೇಕು ಎಂದು ಜನಪದ ಗಾಯಕಿ ದಿವ್ಯ ಆಲೂರ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ನಗರದ ಜನತಾ ಶಿಕ್ಷಣ ಸಮಿತಿ ಬನಶಂಕರಿ ಕಲಾ-ವಾಣಿಜ್ಯ, ಶಾಂತಿಕುಮಾರ ವಿಜ್ಞಾನ ಕಾಲೇಜಿನ 2025-26ನೇ ಸಾಲಿನ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಮಾತನಾಡಿದ ಅವರು, ಮಕ್ಕಳ ಜೀವನದ ಗುರಿ ಸಾಧನೆಯ ಕಡೆಗೆ ಇರಬೇಕು ಎಂದರು.

ಬದುಕಿನ ಯಶಸ್ಸಿಗೆ ತಂದೆ-ತಾಯಿ ಮತ್ತು ಗುರುವಿನ ಕೃಪೆ ಬಹಳಷ್ಟು ಮುಖ್ಯ. ಸಾಮಾಜಿಕಜಾಲತಾಣಗಳಿಂದ ದೂರ ಇರಬೇಕು. ಜೀವನಕ್ಕೆ ಪೂರಕವಾಗಿರುವ ಅಧ್ಯಯನ, ಸಂಶೋಧನೆ, ಪಠ್ಯ-ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗುವಂತೆ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಮಾತನಾಡಿ, 1944ರಲ್ಲಿ ಹುಕ್ಕೇರಿಕರ ಮಾಸ್ತರ್ ಅವರಿಂದಸ್ಥಾಪಿಸಲ್ಪಟ್ಟಸಂಸ್ಥೆಗೆ ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯ ಮೊದಲ ಪ್ರಾಚಾರ್ಯರು ಎಂಬುದು ಹೆಮ್ಮೆ ವಿಷಯ ಎಂದರು.

ಜೆಎಸ್ಸೆಸ್ ಸಂಸ್ಥೆಯು ಉತ್ತರ ಕರ್ನಾಟಕದ ಶ್ರೇಷ್ಠ ಶಿಕ್ಷಣ ಸಂಸ್ಥೆಗಳಲ್ಲೊಂದಾಗಿದೆ. 25 ಅಂಗ ಸಂಸ್ಥೆಗಳಲ್ಲಿ 22 ಸಾವಿರಕ್ಕೂ ವಿದ್ಯಾರ್ಥಿಗಳ ಅಭ್ಯಾಸ ಮಾಡುವುದಾಗಿ ತಿಳಿಸಿದರು.

ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಪ್ರಾಚಾರ್ಯ ಪ್ರೊ.ವೆಂಟಕೇಶ ಮುತಾಲಿಕ, ಉಪಪ್ರಾಚಾರ್ಯೆ ಆವಂತಿಕಾ ರೊಟ್ಟಿ, ಎಂಸಿಎ ವಿಭಾಗ ನಿರ್ದೇಶಕ ಡಾ.ಸೂರಜ್ ಜೈನ್, ಡಾ.ಜಿನ್ನಪ್ಪ ಕುಂದಗೋಳ ಡಾ. ಶೌಕತ್ ಅಲಿ ಮೇಗಲಮನಿ ಸೇರಿದಂತೆ ಇತರರಿದ್ದರು.



ಗ್ಯಾಸ್ ಸಂಪರ್ಕ ಕಲ್ಪಿಸಲು ಸೂಚನೆ

ಧಾರವಾಡ: ಶಾಲಾ ಮಕ್ಕಳಿಗೆ ಮಧ್ಯಾಹ್ನದ ಊಟ ಹಾಗೂ ಮೊಟ್ಟೆ ವಿತರಣೆಯಲ್ಲಿ ಯಾವುದೇ ವ್ಯತ್ಯಯ ಆಗಬಾರದು. ಶಾಲೆಗಳು, ವಸತಿ ನಿಲಯಗಳಿಗೆ ಅಗತ್ಯ ಗ್ಯಾಸ್ ಸಂಪರ್ಕ ತಕ್ಷಣ ಒದಗಿಸಬೇಕು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೆಟ್ರೋಲ್ ಬಂಕ್ ಕಂಪನಿಗಳ ಪ್ರತಿನಿಧಿಗಳ ಮತ್ತು ಗ್ಯಾಸ್ ವಿತರಕರ ಕಂಪನಿಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ಜಿಲ್ಲೆಯ ಶಾಲೆಗಳಿಗೆ ಅಗತ್ಯಕ್ಕೆ ಅನುಗುಣ ಗ್ಯಾಸ್ ಒದಗಿಸುವಂತೆ ಆದೇಶಿಸಿದರು.

ಶಾಲೆಯಲ್ಲಿ ಮಕ್ಕಳಿಗೆ ಬೇಯಿಸಿದ ಮೊಟ್ಟೆ ನೀಡುವ ಯೋಜನೆ ಇದ್ದು, ಮೊಟ್ಟೆ ಕುದಿಸಲು ಗ್ಯಾಸ್ ಸಂಪರ್ಕ ಅತ್ಯಗತ್ಯ. ಬರುವ ಸೋಮವಾರದೊಳಗೆ ಎಲ್ಲ ಶಾಲೆಗಳು ಮತ್ತು ಹಾಸ್ಟೆಲ್‌ಗಳಿಗೆ ಗ್ಯಾಸ್ ಸಂಪರ್ಕ ಕಲ್ಪಿಸಲು ಕಂಪನಿಗಳಿಗೆ ನಿರ್ದೇಶಿಸಿದರು.

ಇಂಡಿಯನ್ ಆಯಿಲ್ ಕಾರ್ಪೋರೇಷನ್, ಭಾರತ ಪೆಟ್ರೋಲಿಯಂ ಹಾಗೂ ಹಿಂದೂಸ್ತಾನ್ ಪೆಟ್ರೋಲಿಯಂ ಸಂಸ್ಥೆಗಳು ಈಗಾಗಲೇ ಎಷ್ಟು ಸಂಪರ್ಕಗಳನ್ನು ನೀಡಿವೆ ಎಂಬ ಕುರಿತು ಸೋಮವಾರದೊಳಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಿದರು.

ಜಿಲ್ಲೆಯ ಎಲ್ಲ ಪೆಟ್ರೋಲ್ ಬಂಕ್‌ಗಳಲ್ಲಿ ನಿತ್ಯ ಲಭ್ಯವಿರುವ ಇಂಧನ ಹಾಗೂ ಪ್ರಸ್ತುತ ದರದ ವಿವರ ಸಾರ್ವಜನಿಕರಿಗೆ ಕಾಣಿಸುವಂತೆ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಆದೇಶ ಮಾಡಿದರು.

ಸಭೆಯಲ್ಲಿ ಜಿಪಂ ಸಿಇಒ ಭುವನೇಶ ಪಾಟೀಲ, ಜಿಪಂ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಶಾಲಾ ಶಿಕ್ಷಣ ಇಲಾಖೆಯ ಅಕ್ಷರ ದಾಸೋಹ ಯೋಜನೆ ಶಿಕ್ಷಣಾಧಿಕಾರಿ ರೂಪಾ ಪೂರಮಕರ, ಪೆಟ್ರೋಲ್ ಬಂಕ್, ಗ್ಯಾಸ್ ಮಾಲೀಕರು ಇದ್ದರು.



ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ ಜಾಗೃತಿ



ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ ಹಾಗೂ ವಿಷನ್ ಕರ್ನಾಟಕ ಫೌಂಡೇಶನ್ (ವಿಕೆಎಫ್) ಹಾಗೂ ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರಸಹಯೋಗದಲ್ಲಿ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮ ಯಶ್ವಿಯಾಗಿ ನಡೆಯಿತು.

ಈ ಕಾರ್ಯಕ್ರಮದ ಮೂಲಕ ಉದ್ಯಮಿಗಳು, ವ್ಯಾಪಾರಸ್ಥರು, ವೃತ್ತಿಪರರು ಹಾಗೂ ನಾಗರಿಕರಿಗೆ ರಾಷ್ಟ್ರೀಯ ಪಿಂಚಣಿ ವ್ಯವಸ್ಥೆಯ ಮಹತ್ವ, ಅದರ ಉಪಯೋಗಗಳು ಹಾಗೂ ನಿವೃತ್ತಿ ಜೀವನದ ಆರ್ಥಿಕ ಭದ್ರತೆಯಲ್ಲಿ ಎನ್‌ಪಿಎಸ್ ಯೋಜನೆಯ ಪಾತ್ರದ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ಎನ್‌ಪಿಎಸ್ ಯೋಜನೆಗೆ ಸೇರುವ ಅರ್ಹತೆ, ಹೂಡಿಕೆ ವಿಧಾನಗಳು, ವಿವಿಧ ಹೂಡಿಕೆ ಆಯ್ಕೆಗಳು, ತೆರಿಗೆ ಸೌಲಭ್ಯಗಳು, ನಿವೃತ್ತಿ ನಂತರದ ಪಿಂಚಣಿ ಲಾಭಗಳು ಹಾಗೂ ಇತರ ನಿವೃತ್ತಿ ಯೋಜನೆಗಳೊಂದಿಗೆ ಇರುವ ವ್ಯತ್ಯಾಸಗಳ ಕುರಿತು ತಜ್ಞರಿಂದ ಮಾಹಿತಿ ನೀಡಲಾಯಿತು. 18 ರಿಂದ 70 ವರ್ಷ ವಯಸ್ಸಿನ ಭಾರತೀಯ ನಾಗರಿಕರು, ಉದ್ಯಮ ಪ್ರತಿನಿಧಿಗಳು, ಎಂಎಸ್‌ಎಂಇಗಳು, ಸ್ಟಾರ್ಟ್‌ಅಪ್ ಉದ್ಯಮಿಗಳು, ಸ್ವಯಂ ಉದ್ಯೋಗಿಗಳು, ಸರ್ಕಾರಿ ಹಾಗೂ ಖಾಸಗಿ ವಲಯದ ನೌಕರರು ಮತ್ತು ಈಗಾಗಲೇ ಎನ್‌ಪಿಎಸ್ ಖಾತೆ ಹೊಂದಿರುವವರು ಕಾರ್ಯಕ್ರಮದ ಪ್ರಯೋಜನ ಪಡೆದುಕೊಂಡರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಅಧ್ಯಕ್ಷ ಜಿ. ಕೆ. ಆದಪ್ಪಗೌಡರ ಮಾತನಾಡಿ, ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ ಇಂದಿನ ದಿನಗಳಲ್ಲಿ ಪ್ರತಿಯೊಬ್ಬರಿಗೂ ಅಗತ್ಯವಾದ ದೀರ್ಘಕಾಲಿನ ಆರ್ಥಿಕ ಭದ್ರತಾ ಯೋಜನೆಯಾಗಿದೆ. ವಿಶೇಷವಾಗಿ ಉದ್ಯಮಿಗಳು ಮತ್ತು ಸ್ವಯಂ ಉದ್ಯೋಗಿಗಳಿಗೆ ನಿವೃತ್ತಿ ಜೀವನವನ್ನು ಸುರಕ್ಷಿತಗೊಳಿಸುವ ಅತ್ಯುತ್ತಮ ಸಾಧನವಾಗಿದೆ ಎಂದರು.

ಪಿಎಫ್‌ಆರ್‌ಡಿಎ ಸಹಾಯಕ ವ್ಯವಸ್ಥಾಪಕ ಶೈಲೇಂದರ್ ಬಾಬು ಮುಖ್ಯ ಅತಿಥಿಯಾಗಿ ಭಾಗವಹಿಸಿ ಎನ್‌ಪಿಎಸ್ ಯೋಜನೆಯ ವೈಶಿಷ್ಟ್ಯಗಳು ಹಾಗೂ ಸರ್ಕಾರದಿಂದ ನೀಡಲಾಗುತ್ತಿರುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಸಂಸ್ಥೆಯ ಉಪಾಧ್ಯಕ್ಷ ಸಿದ್ದೇಶ್ವರ ಕಮ್ಮಾರ, ಗೌರವ ಕಾರ್ಯದರ್ಶಿ ಉದಯ ಎಂ. ರೇವಣಕರ ಉಪಸ್ಥಿತರಿದ್ದರು.

ಮೇ 24ಕ್ಕೆ ಓಪನ್ ಚೆಸ್ ಟೂರ್ನಮೆಂಟ್

ಧಾರವಾಡ: ನಗರದ ಕಾಸ್ಮಸ್ ಕ್ಲಬ್ ಮತ್ತು ಅಭಿಜಿತ್ ಬೆಂಗೇರಿ ಫೌಂಡೇಶನ್ ಸಹಯೋಗದಲ್ಲಿ ಓಪನ್ ರ್ಯಾಪಿಡ್ ಚೆಸ್ ಟೂರ್ನಮೆಂಟ್ ಮೇ 24ರಂದು ಆಯೋಜಿಸಲಾಗಿದೆ ಎಂದು ಕಾಸ್ಮಸ್ ಕ್ಲಬ್ ಜಿಲ್ಲಾಧ್ಯಕ್ಷ ನಿತಿನ್ ಟಗರಪುರ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯ ಚೆಸ್ ಅಸೋಸಿಯೇಷನ್ ಮತ್ತು ಜಿಲ್ಲಾ ಚೆಸ್ ಅಸೋಸಿಯೇಷನ್ ಮಾನ್ಯತೆಯೊಂದಿಗೆ ಜನರಲ್ಲಿ ಚೆಸ್ ಕ್ರೀಡೆ ಪ್ರೋತ್ಸಾಹಿಸುವ ಉದ್ದೇಶದಿಂದ ಈ ಟೂರ್ನಾಮೆಂಟ್ ಆಯೋಜಿಸಿದ್ದಾಗಿ ಹೇಳಿದರು.

9, 12, 15 ವಯೋಮಿತಿ ಒಳಗಿನವರಿಗೆ ಮತ್ತು ಎಲ್ಲ ವಯೋಮಾನದವರಿಗೆ ಮುಕ್ತ ಪಂದ್ಯಾವಳಿ ಸೇರಿದಂತೆ ಒಟ್ಟು 4 ವಿಭಾಗದಲ್ಲಿ ಪಂದ್ಯಾವಳಿ ಜರುಗಲಿದೆ. ಅಂದು ಬೆಳಗ್ಗೆ 9.30 ರಿಂದ ಸಂಜೆ 4.30 ವರೆಗೆ ಪಂದ್ಯಾವಳಿ ನಡೆಯಲಿವೆ ಎಂದರು.

ವಿಜೇತರಿಗೆ ಒಟ್ಟು ರೂ.30 ಸಾವಿರ ನಗದು ಬಹುಮಾನ, 33 ಟ್ರೋಫಿಗಳು 30 ಪದಕಗಳು ವಿತರಿಸಲಿದೆ. ಚೆಸ್ ಪಂದ್ಯಾವಳಿಗೆ ರಾಷ್ಟ್ರೀಯ ಮಟ್ಟದ ನಿಯಮಗಳು ಮತ್ತು ರ್ಯಾಂಕಿಂಗ್‌ಗಳು ಚೆಸ್ ಅಸೋಸಿಯೇಷನ್ ಪ್ರಕಾರವೇ ಇರಲಿವೆ ಎಂದು ಹೇಳಿದರು.

ಆಸಕ್ತರು ಆನ್‌ಲೈನ್ ಡಿಡಿಡಿ. ಚಿಜಿಭಿರಿಶ್ಚಿಜ್ಜೀಟಿ.ಟಇ ಮೂಲಕ ತಮ್ಮ ಹೆಸರು ನೋಂದಣಿ ಮಾಡಿಸಿಕೊಳ್ಳಬೇಕು. ಈಗಾಗಲೇ 70ಕ್ಕೂ ಅಧಿಕ ಸ್ಪರ್ಧಾರ್ಥಿಗಳು ನೋಂದಾಯಿಸಿದ್ದು, 150ಕ್ಕೂ ಅಧಿಕ ಜನರು ಪಾಲ್ಗೊಳ್ಳುವ ನಿರೀಕ್ಷೆಯೂ ಇದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕಾಸ್ಮಸ್ ಕ್ಲಬ್ ಉಪಾಧ್ಯಕ್ಷ ಎಚ್.ಎಫ್. ಹೆಬ್ಬಾಳ, ಕಾರ್ಯದರ್ಶಿ ಅಶೋಕ ಹಿರೇಮಠ, ಬೆಂಗೇರಿ ಫೌಂಡೇಶನ್ ಅಧ್ಯಕ್ಷ ಅಭಿಜಿತ್ ಬೆಂಗೇರಿ ಮತ್ತು ಕಾರ್ಯದರ್ಶಿ ವಿಮರ್ಶಾ ಹೊಸಪೇಟಿ ಇದ್ದರು.



ಕವಿವಿ ಪತ್ರಿಕೋದ್ಯಮ ವಿಭಾಗ ಚಾಂಪಿಯನ್



ಧಾರವಾಡ: ತುಮಕೂರು ವಿಶ್ವವಿದ್ಯಾಲಯದಲ್ಲಿ ನಡೆದ ಇಂಪ್ರೆಷನ್ 2026 ಮಾಧ್ಯಮ ಹಬ್ಬದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಉತ್ಸವದಲ್ಲಿ ರಾಜ್ಯಾದ್ಯಂತ 15 ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳನ್ನು ಪ್ರತಿನಿಧಿಸುವ ಮೈಸೂರು, ಧಾರವಾಡ, ವಿಜಯಪುರ, ಬಾಗಲಕೋಟೆ, ಹಾವೇರಿ, ಬೆಂಗಳೂರು, ತುಮಕೂರು ವಿವಿಗಳಿಂದ 300 ಪತ್ರಿಕೋದ್ಯಮ ವಿದ್ಯಾರ್ಥಿಗಳು ಭಾಗವಹಿಸಿದ್ದರು. ನ್ಯೂಸ್ ಪ್ರೆಸೆಂಟೇಷನ್ ಸ್ಪರ್ಧೆಯಲ್ಲಿ ದಿನೇಶ ಗೌಡ, ಪೋಸ್ಟರ್ ಮೇಕಿಂಗ್ ರೂಪಾ ಕುಂಬಾರ್, ರೀಲ್ ಮೇಕಿಂಗ್ ಚೇತನ್ ನಿಡಗುಂದಿ, ಪುಟಕ್ತೆ ಭೀಮಪ್ಪ ಮಟ್ಯಾಳ ಪ್ರಥಮ, ಪಿಟುಸಿ ಸಂಜನಾ ಕುಲಕರ್ಣಿ ತೃತೀಯ ಸ್ಥಾನ ಪಡೆದಿದ್ದಾರೆ.

ವರದಿಗಾರಿಕೆ ದಿನೇಶ ಗೌಡ ತೃತೀಯ ಮತ್ತು ರಸಪ್ರಶ್ನೆ ಸಪ್ನಾ ಭಾಟಿ ಹಾಗೂ ಮೋಹನ್ ಪಲ್ಲೇದ್ ತೃತೀಯ ಸ್ಥಾನ ಪಡೆದರು. ವಿದ್ಯಾರ್ಥಿಗಳ ಸಾಧನೆಗೆ ಸಿಂಡಿಕೇಟ್ ಸದಸ್ಯ ರಾಬರ್ಟ್ ದದ್ದಾಪುರಿ, ಕವಿವಿ ಕುಲಪತಿ ಪ್ರೊ. ಎ.ಎಂ.ಖಾನ್, ಆಡಳಿತ ಕುಲಸಚಿವ(ಪ್ರಭಾರ) ಪ್ರೊ. ಮೃತ್ಯುಂಜಯ ಅಗಡಿ, ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಸಂಜಯಕುಮಾರ ಮಾಲಗತ್ತಿ, ಪ್ರಾಧ್ಯಾಪಕರಾದ ಪ್ರೊ. ಜೆ.ಎಂ. ಚಂದುನವರ, ಪ್ರೊ. ಮಂಜುನಾಥ ಅಡಿಗಲ್ ಹರ್ಷವ್ಯಕ್ತಪಡಿಸಿದ್ದಾರೆ.

ಅತ್ಯುತ್ತಮ ಶೈಕ್ಷಣಿಕ ಸಾಧನೆ ಆಚರಣೆ

ಹುಬ್ಬಳ್ಳಿ: ನಗರದ ಜೆಜಿಎಂಎಂ ವೈದ್ಯಕೀಯ ಕಾಲೇಜ್‌ನಲ್ಲಿ ಅತ್ಯುತ್ತಮ ಶೈಕ್ಷಣಿಕ ಸಾಧನೆಯನ್ನು ಆಚರಿಸಲಾಯಿತು. 2021-22ನೇ ಸಾಲಿನಲ್ಲಿ ಸ್ಥಾಪನೆಯಾದ ಜೆಜಿಎಂಎಂ ವೈದ್ಯಕೀಯ ಕಾಲೇಜು, 2021-22ನೇ ಸಾಲಿನ ತನ್ನ ಮೊದಲ ಬ್ಯಾಚ್‌ನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಒಟ್ಟು 144 ವಿದ್ಯಾರ್ಥಿಗಳು ಅಂತಿಮ ವರ್ಷದ ಎಂಬಿಬಿಎಸ್ ಪರೀಕ್ಷೆಗೆ ಹಾಜರಾಗಿದ್ದು, ಶೇ. 98 ರಷ್ಟು ಜನ ಉತ್ತೀರ್ಣರಾಗಿದ್ದಾರೆ. 3 ಡಿಸ್ಟಿಂಕ್ಷನ್‌ಗಳು, 72 ಪ್ರಥಮ ದರ್ಜೆ ಮತ್ತು 69 ರಷ್ಟು ದ್ವಿತೀಯ ದರ್ಜೆಯ ಅತ್ಯುತ್ತಮ ಫಲಿತಾಂಶಗಳನ್ನು ಹೊಂದಿದೆ. ವಿವಿ ಕುಲಪತಿ ಪ್ರಭಾಕರ ಕೋರೆ ಹಾಗೂ ನಿರ್ವಹಣಾ ಮಂಡಳಿಯ ನಿರ್ದೇಶಕ ಅಮಿತ್ ಕೋರೆ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಕುಲಪತಿ ಡಾ. ಸಂದೀಪ ಶ್ರೀವಾಸ್ತವ, ಸ್ಥಳೀಯ ಆಡಳಿತ ಮಂಡಳಿ ಅಧ್ಯಕ್ಷ ಶಂಕರಣ್ಣ ಮುನವಳ್ಳಿ ಅತಿಥಿಯಾಗಿ ಭಾಗವಹಿಸಿದರು. ಅತಿಥಿಗಳಾಗಿ ಡಾ. ವಿ.ಎಂ. ಪಟ್ಟಣಶೆಟ್ಟಿ, ಡಾ ವಿ. ಡಿ. ಪಾಟೀಲ, ಡಾ. ಎಂ.ಜಿ. ಹಿರೇಮಠ, ಡಾ. ಶಾರದಾ ಮೆಟಗುಡ್, ಅರುಣ ಕುಮಾರ, ಡಾ. ಸಮೀರ್ ದೇಸಾಯಿ ಭಾಗವಹಿಸಿದ್ದರು.



ಹಳೆಯ ವಿದ್ಯಾರ್ಥಿಗಳ ದಿನಾಚರಣೆ



ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್.ಕೋತಂಬ್ರಿ ವಿಜ್ಞಾನ ಸಂಸ್ಥೆಯ ವತಿಯಿಂದ ಸಭಾಂಗಣದಲ್ಲಿ "ಹಳೆಯ ವಿದ್ಯಾರ್ಥಿಗಳ ದಿನಾಚರಣೆ" (ಅಲ್ಯೂಮ್ನಿ ಡೇ) ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಗಜೇಂದ್ರಗಡ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಎಸ್.ಟಿ. ಬೈರಪ್ಪನವರ ಅವರು ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಿದರು. ಮುಖ್ಯ ಅತಿಥಿಗಳಿಗೆ ಸನ್ಮಾನಿಸಲಾಯಿತು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ವಿತರಿಸಲಾಯಿತು. ಬಿಎ ವಿಭಾಗದಲ್ಲಿ ರೆಹಮತ್‌ಬಿ (ಪ್ರಥಮ ವರ್ಷ), ಅಪೇಕ್ಷಾ (ದ್ವಿತೀಯ ವರ್ಷ), ಪಲ್ಲವಿ (ತೃತೀಯ ವರ್ಷ) ಮತ್ತು ಬಿಎಸ್ಸಿ ವಿಭಾಗದಲ್ಲಿ ಮಧುಮತಿ (ಪ್ರಥಮ ವರ್ಷ), ಪ್ರಜ್ವಲ್ (ದ್ವಿತೀಯ ವರ್ಷ), ಐಶ್ವರ್ಯಾ (ತೃತೀಯ ವರ್ಷ) ಬಹುಮಾನ ಪಡೆದರು. ವಿದ್ಯಾರ್ಥಿ ಪಲ್ಲವಿಗೆ ವಿಶೇಷವಾಗಿ 7,000 ರೂ. ನಗದು ಬಹುಮಾನ ನೀಡಲಾಯಿತು. ಇತರ ಎಲ್ಲಾ ವಿದ್ಯಾರ್ಥಿಗಳಿಗೆ ತಲಾ 1 ಸಾವಿರ ರೂ. ಬಹುಮಾನ ವಿತರಿಸಲಾಯಿತು. ಅಲ್ಯೂಮ್ನಿ ಅಸೋಸಿಯೇಷನ್ ಅಧ್ಯಕ್ಷ ಡಾ. ಹೆಚ್.ವಿ. ಬೆಳಗಲಿ, ಉಪಾಧ್ಯಕ್ಷ ರಮೇಶ್ ಭರಮಗೌಡರ ವಂದಿಸಿದರು. ಸ್ನಾತಕೋತ್ತರ ಗಣಿತ ವಿಭಾಗದ ಉಪನ್ಯಾಸಕ ಶ್ರುತಿ ಹಿರೇಮಠ ನಿರೂಪಿಸಿದರು. ಅಲ್ಯೂಮ್ನಿ ಅಸೋಸಿಯೇಷನ್ ಜಂಟಿ ಕಾರ್ಯದರ್ಶಿ ಕೆ.ಬಿ. ಕೋರಿ ಮತ್ತು ಕಾರ್ಯದರ್ಶಿ ಶ್ರೀಧರ ಹಿರೇಕುಂಬಿ, ಕಾಲೇಜಿನ ಪ್ರಾಚಾರ್ಯೆ ಸುಮಂಗಲಾ ಪಾಟೀಲ ಇದ್ದರು.

ಗ್ರಂಥ ಲೋಕಾರ್ಪಣೆ ನಾಳೆ

ಧಾರವಾಡ: ಪ್ರೊ. ಸೀತಾರಾಮ ಪವಾರ ಅಭಿನಂದನಾ ಸಮಾರಂಭ ಹಾಗೂ ಗ್ರಂಥ ಲೋಕಾರ್ಪಣೆ ಕಾರ್ಯಕ್ರಮ ಮೇ 23ರಂದು ಬೆಳಗ್ಗೆ 11ಕ್ಕೆ ನಗರದ ಕರ್ನಾಟಕ ವಿಶ್ವವಿದ್ಯಾಲಯದ ಮಾನಸೋಲ್ಲಾಸ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪ್ರೊ.ಸೀತಾರಾಮ ಪವಾರ ಅಭಿನಂದನಾ ಸಮಿತಿ ಸದಸ್ಯ ಡಾ.ಮಾಲತೇಶ ಬಸಮ್ಮನವರ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ವಿಜಯಪುರ ಕೆಸರಟ್ಟಿಯ ಶಂಕರಲಿಂಗ ಸಂಸ್ಥಾನ ಮಠದ ಸೋಮಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ರಾಜ್ಯ ವಿಧಾನಸಭೆಯ ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎ.ಎಂ.ಖಾನ್ ಅಧ್ಯಕ್ಷತೆ ವಹಿಸಲಿದ್ದು, ಸಾಹಿತಿ ಡಾ. ಬಿ.ಟಿ.ಲಲಿತಾ ನಾಯಕ, ನಿವೃತ್ತ ಕುಲಪತಿಗಳಾದ ಡಾ.ಡಿ.ಬಿ.ನಾಯಕ, ಡಾ.ಈ.ಟಿ.ಪುಟ್ಟಯ್ಯ, ಸಾಹಿತಿ ಪ್ರೊ. ಅರ್ಜುನ ಚವ್ಹಾಣ ಪಾಲ್ಗೊಳ್ಳಲಿದ್ದಾರೆ. ಸಾಹಿತಿಗಳಾದ ಡಾ.ಮಹೇಶ್ ದಿವಾಕರ್, ಇಂದುಮತಿ ಲಮಾಣಿ, ಡಾ. ಧನ್ಯಕುಮಾರ ಬಿರಾಜದಾರ, ಬಂಜಾರ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಕೆ.ಎಚ್. ನಾಯಕ, ಪ್ರೊ.ಈಶ್ವರ ಪವಾರ, ರಾಮಾ ನಾಯಕ ಅನೇಕರು ಪಾಲ್ಗೊಳ್ಳುವುದಾಗಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಡಾ. ಎಂ.ವೈ. ಬ್ಯಾಲ್ಯಾಳ, ಡಾ. ಮಹೇಂದ್ರ ಹರಿಹರ, ಡಾ. ಪರಮೇಶ್ವರ ಪಾಟೀಲ್ ಇದ್ದರು.



ಉತ್ತಮ ಸಂಸ್ಕಾರದಿಂದ ದೇಶ ಅಭಿವೃದ್ಧಿ: ಶ್ರೀಗಳು



ಹುಬ್ಬಳ್ಳಿ: ಉತ್ತಮ ದೇಶ ನಿರ್ಮಾಣ ಮಾಡಲು ಸಂಸ್ಕಾರ ಅವಶ್ಯಕವಾಗಿದೆ. ಉತ್ತಮ ಸಂಸ್ಕಾರವಿಲ್ಲದೇ ದೇಶ ಅಭಿವೃದ್ಧಿ ಅಸಾಧ್ಯ ಎಂದು ಸೊಂದಾ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ ತಿಳಿಸಿದರು.

ತಾಲೂಕಿನ ವರೂರು ಗ್ರಾಮದ ನವಗ್ರಹ ತೀರ್ಥ ಕ್ಷೇತ್ರದ ವತಿಯಿಂದ 9 ದಿನ ನಡೆದ ಬೇಸಿಗೆ ಜೈನ ಸಂಸ್ಕಾರ ಶಿಬಿರ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು. ಉತ್ತಮ ಸಂಸ್ಕಾರದಿಂದ ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿ ರೂಪಗೊಳ್ಳಲಿದೆ. ನಾವು ಸರಿಯಾದ ಮಾರ್ಗದಲ್ಲಿ ನಡೆಯಬೇಕಾದರೆ ಸಂಸ್ಕಾರ ಮುಖ್ಯ. ದೇಶ ಸದೃಢ ವಾಗಿ ನಿರ್ಮಿಸುವ ಉದ್ದೇಶದಿಂದ ವಿದ್ಯಾಪ್ರಾಪ್ತಿ ವಿಧಾನ ಕ್ಷೇತ್ರದಲ್ಲಿ ನಡೆಸಲಾಗುತ್ತಿದೆ ಎಂದರು.

ಸಿದ್ಧಾಂತ ಯೋಗಿ ಪುಣ್ಯಸಾಗರ ಮಹರಾಜರು ಮಾತನಾಡಿ, ಮಕ್ಕಳಿಗೆ ಸಂಸ್ಕಾರ ನೀಡದಿದ್ದರೆ ಜ್ಞಾನವಂತರು ಅಜ್ಞಾನವಂತರಾಗುತ್ತಾರೆ. ಆದ್ದರಿಂದ ಉತ್ತಮ ಸಂಸ್ಕಾರ ಕಲಿಸುವ ಕಾರ್ಯ ಮಾಡಲಾಗುತ್ತಿದೆ. ಮಕ್ಕಳಿಗೆ ಅಹಿಂಸೆ ಮಾರ್ಗ, ಪಾಪ, ಧರ್ಮದ ಹಾಗೂ ಜೀವನ ಶೈಲಿಯ ಬಗ್ಗೆ ಹೇಳಿಕೊಡಲಾಗುತ್ತಿದೆ ಎಂದು ಹೇಳಿದರು. ಮಕ್ಕಳು ಎಷ್ಟೇ ದಡ್ಡರಿದ್ದರು ಧಾರ್ಮಿಕ ಶಿಕ್ಷಣ ನೀಡಿದರೆ ಉತ್ತಮ ಅಂಕ ಗಳಿಸಲು ಸಾಧ್ಯವಾಗುತ್ತದೆ. ಧರ್ಮಶಿಕ್ಷಣದಿಂದ ಮಕ್ಕಳ ಭವಿಷ್ಯ ಉಜ್ವಲ ಆಗಲಿದೆ. ಮಕ್ಕಳು ಯಾವ ಯಾವ ಆಹಾರ ಸೇವಿಸಬೇಕು ಎಂಬುವುದರ ಬಗ್ಗೆ ತಿಳಿಸಿಕೊಡಲಾಗುತ್ತಿದೆ ಎಂದು ತಿಳಿಸಿದರು.

ಗುರು ಹಿರಿಯರಿಗೆ ಗೌರವ ನೀಡಬೇಕು. ಆಚರಣೆಯಿಂದ ಮನಸ್ಸು ಶುದ್ಧ ಆಗಲಿದೆ. ಮಕ್ಕಳು ಧ್ಯಾನ ಮಾಡುವುದರಿಂದ ಉತ್ತಮ ಮನಸ್ಸು ಇಟ್ಟುಕೊಳ್ಳು ಸಾಧ್ಯ. ಭಾರತದಲ್ಲಿ ಧರ್ಮ ಇದೆ. ನಯ ನುಡಿ ಇದೆ. ಬೇರೆ ದೇಶದಲ್ಲಿ ಧರ್ಮವಿಲ್ಲ, ಅದನ್ನು ಪಾಲನೆ ಮಾಡುವುದಿಲ್ಲ ಎಂದು ಹೇಳಿದರು.

ಸ್ವಸ್ತಿಶ್ರೀ ಧರ್ಮಸೇನ ಭಟ್ಟಾರಕ ಪಟ್ಟಚಾರ್ಯ ಸ್ವಾಮೀಜಿ ಮಾತನಾಡಿ, ಬೇಸಿಗೆ ಸಮಯದಲ್ಲಿ ಮೊಬೈಲ್‌ನಲ್ಲಿ ಕಳೆಯುವ ಮಕ್ಕಳಿಗೆ ಇಲ್ಲಿ ಶಿಬಿರ ಆಯೋಜಿಸುವ ಮೂಲಕ 9 ದಿನದಿಂದ ಧರ್ಮ, ಪೂಜೆ, ಪುರಸ್ಕರ, ಶಿಕ್ಷಣ, ಸಂಸ್ಕಾರ ನೀಡುವ ಕೆಲಸ ಮಾಡಲಾಗಿದೆ. ವಿದ್ಯಾರ್ಥಿಗಳು ಯಶಸ್ಸು ಕಾಣಲು ಗುರುಗಳ ಆಶೀರ್ವಾದ ಬೇಕು. ಮಕ್ಕಳಿಗೆ ಸಂಸ್ಕಾರ ನೀಡುವುದು ಅವಶ್ಯಕತೆ ಇದೆ ಎಂದು ತಿಳಿಸಿದರು.

9 ದಿನ ನಡೆದ ಬೇಸಿಗೆ ಜೈನ ಸಂಸ್ಕಾರ ಶಿಬಿರದಲ್ಲಿ 500 ಮಕ್ಕಳು ಭಾಗವಹಿಸಿ ಸದುಪಯೋಗ ಪಡೆದುಕೊಂಡರು.

ತೀವ್ರ ಸ್ವರೂಪ ಪಡೆದ ಪ್ರತ್ಯೇಕ ಪಾಲಿಕೆ ಹೋರಾಟ



ಧಾರವಾಡ: ಧಾರವಾಡ ಪ್ರತ್ಯೇಕ ಪಾಲಿಕೆಗೆ ಅಗ್ರಹಿಸಿ ಸ್ವಾಭಿಮಾನಿ ಹೋರಾಟ ಸಮಿತಿ ಕೈಗೊಂಡ ಸತ್ಯಾಗ್ರಹ ಏಳನೇ ದಿನಕ್ಕೆ ಮುಂದುವರಿದಿದ್ದು, ಹೋರಾಟವು ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆಯುತ್ತಿದೆ.

ಗುರುವಾರ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಕಚೇರಿ ಮುಖ್ಯ ಕಟ್ಟಡದ ಮೇಲ್ಭಾಗದಲ್ಲಿ ಧಾರವಾಡ ಮಹಾನಗರ ಪಾಲಿಕೆ ಕಚೇರಿ ನಾಮಫಲಕ ಹಾಕುವ ಮೂಲಕ ಪ್ರತಿಭಟನೆ ನಡೆಸಿದರು. ಸತ್ಯಾಗ್ರಹಕ್ಕೆ ಬೆಂಬಲಿಸಿದ ಪರಿಸರವಾದಿ ಹಾಗೂ ಚಿತ್ರನಟ ಸುರೇಶ ಹೆಬ್ಳಿಕರ್, ಅಭಿವೃದ್ಧಿ ದೃಷ್ಟಿಯಿಂದ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಅಗತ್ಯವಿದೆ. ಹೀಗಾಗಿ ಅನುಮೋದನೆಗೆ ಅಗ್ರಹಿಸಿದರು.

ಸಮೃದ್ಧ ಪರಿಸರ, ವಿಶಿಷ್ಟ ಸಂಸ್ಕೃತಿ, ಕಲೆಗಳು ಹಾಗೂ ಕಲಾವಿದರ ತವರೂರು ಧಾರವಾಡ ಅಭಿವೃದ್ಧಿಯಲ್ಲಿ ಹಿಂದುಳಿದಿದೆ. ಪ್ರತ್ಯೇಕ ಪಾಲಿಕೆಯಿಂದ ಅಭಿವೃದ್ಧಿ ಕಾಣಲಿದೆ ಎಂದು ತಿಳಿಸಿದರು. ಮುಖಂಡ ಗುರುರಾಜ ಹುಣಸಿಮರದ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಮತ್ತು ಶಾಸಕ ಅರವಿಂದ ಬೆಲ್ಲದ ಪ್ರತ್ಯೇಕ ಪಾಲಿಕೆ ವಿಚಾರದಲ್ಲಿ ಧಾರವಾಡಕ್ಕೆ ದ್ರೋಹ ಬಗೆದಿದ್ದಾರೆ ಎಂದು ಆರೋಪಿಸಿದರು.

ರಾಜ್ಯಪಾಲರಿಂದ ಅನುಮೋದನೆ ಕೊಡಿಸದಿದ್ದರೆ, ಮುಂಬರುವ ಚುನಾವಣೆಗಳಲ್ಲಿ ಉಭಯ ಬಿಜೆಪಿ ನಾಯಕರಿಗೆ ಸಾರ್ವಜನಿಕರು ತಕ್ಕಪಾಠ ಕಲಿಸುತ್ತಾರೆ ಎಂದು ಎಚ್ಚರಿಕೆಯೂ ಕೂಡ ನೀಡಿದರು. ಅರಣ್ಯ ಇಲಾಖೆ ಅಧಿಕಾರಿಗಳ ಸಂಘದ ಶಂಕರ ಸಾದನಿ, ಹುಬ್ಬಳ್ಳಿಗೆ ಹೋಲಿಕೆ ಮಾಡಿದರೆ, ಧಾರವಾಡ ಅಭಿವೃದ್ಧಿಯಲ್ಲಿ ಕುಂಠಿತವಿದೆ. ಇದೇ ಕಾರಣಕ್ಕೆ ಪ್ರತ್ಯೇಕ ಪಾಲಿಕೆ ಕೂಗು ಎದ್ದಿದೆ ಎಂದರು.

ಪ್ರತ್ಯೇಕ ಪಾಲಿಕೆ ರಚಿಸಿದರೆ ಮಾತ್ರವೇ ಧಾರವಾಡದ ಅಭಿವೃದ್ಧಿ ಸಾಧ್ಯ. ಆದರೆ, ಇದಕ್ಕೆ ರಾಜಕಾರಣಿಗಳು ಅಡ್ಡಗಾಲು ಹಾಕುವುದು ಸರಿಯಲ್ಲ, ತಕ್ಷಣವೇ ಪ್ರತ್ಯೇಕ ಪಾಲಿಕೆ ಘೋಷಿಸಲು ಅಗ್ರಹಿಸಿದರು. ಈ ಹೋರಾಟಕ್ಕೆ ಕ್ಷತ್ರೀಯ ಸಮಾಜ, ಜಿಲ್ಲಾ ಮಾದಿಗರ ಸಮಾಜ ಬೆಂಬಲವೂ ಸೂಚಿಸಿದೆ. ಅಶೋಕ ಡೊಮನಿ, ವೆಂಕಟೇಶ ಸಗಬಾಳ, ಹನುಮಂತ ಮರಡಗಿ, ಅರ್ಜುನ ಪತ್ರೆನ್ನವರ ಬೆಂಬಲಿಸಿದರು.

ಸತ್ಯಾಗ್ರಹದಲ್ಲಿ ವೆಂಕಟೇಶ ಮಾಚಕನೂರ, ಮನೋಜ ಪಾಟೀಲ, ಅರವಿಂದ ಏಗನಗೌಡರ, ಎಸ್.ಸಿ.ನೀರಾವರಿ, ವಿಠ್ಠಲಕಮ್ಮಾರ, ಕವಿತಾ ಕಬ್ಬೇರಿ, ದೀಪಾ ನೀರಲಕಟ್ಟಿ, ನವೀನ ಕದಂ, ವಸಂತ ಅರ್ಕಚಾರ, ರವಿ ಮಾಳಗೇರ, ಪ್ರಕಾಶ ಘಾಟಗೆ ಅನೇಕರು ಪಾಲ್ಗೊಂಡಿದ್ದರು.

ಆನ್‌ಲೈನ್‌ನಲ್ಲಿ ಬಾಡಿಗೆ ಕಾರ್ ಬುಕ್: ವಂಚನೆ

ಬೆಳಗಾವಿ: ಆನ್‌ಲೈನ್‌ನಲ್ಲಿ ಕಾರ್ ಬಾಡಿಗೆ ಬುಕ್ ಮಾಡಲು ಹೋಗಿದ್ದ ವ್ಯಕ್ತಿಯೊಬ್ಬರ ಬ್ಯಾಂಕ್ ಖಾತೆಯಿಂದ ಬರೋಬ್ಬರಿ 99 ಸಾವಿರ ರೂಪಾಯಿ ಹಣವನ್ನು ವಂಚಕರು ಎಗರಿಸಿರುವ ಘಟನೆ ಬೆಳಗಾವಿಯಲ್ಲಿ ನಡೆದಿದೆ.

ಬೆಳಗಾವಿ ಪ್ರಾದೇಶಿಕ ಆಯುಕ್ತರ ಕಚೇರಿಯಲ್ಲಿ ಶಿರಸ್ತೆದಾರರಾಗಿರುವ ಸಂಜೀವ್ ಮುತ್ತೆಪ್ಪಗೋಳ ಅವರು ವಂಚನೆಗೆ ಒಳಗಾದ ವ್ಯಕ್ತಿ. ಮಾರ್ಚ್ 27ರಂದು ಬಾಡಿಗೆ ಆಧಾರದಲ್ಲಿ ಕಾರ್ ಬುಕ್ ಮಾಡಲು ಇವರು ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸಿದ್ದರು. ಈ ವೇಳೆ ''ಲಕ್ಷ್ಮೀ ಕಾರ್ ರೆಂಟಲ್ ಗೋವಾ'' ಎಂಬ ವೆಬ್‌ಸೈಟ್‌ಗೆ ಸಂಬಂಧಿಸಿದ ನೀಲಂ ರಜಪೂತ್ ಎಂಬಾತನನ್ನು ಸಂಪರ್ಕಿಸಿದ್ದಾರೆ.

ಬೆಳಗಾವಿ ನಗರದಿಂದ ವಿಮಾನ ನಿಲ್ದಾಣಕ್ಕೆ ತೆರಳಲು ಕಾರ್ ಬೇಕೆಂದು ವಿಚಾರಿಸಿದಾಗ, 800 ರೂ. ಬಾಡಿಗೆ ಆಗುತ್ತದೆ. ಮೊದಲು ಆ್ಯಪ್ ಡೌನ್ಲೋಡ್ ಮಾಡಿಕೊಂಡು ಕಾರ್ ಬುಕ್ ಮಾಡಬೇಕೆಂದು ತಿಳಿಸಿದ್ದಾನೆ. ಬಳಿಕ ''ಕಾರ್ ರೆಂಟಲ್'' ಹೆಸರಿನ ಆ್ಯಪ್ ಲಿಂಕ್‌ನ್ನು ಕಳುಹಿಸಿದ್ದಾನೆ.

ಆತನ ಸೂಚನೆಯಂತೆ ಸಂಜೀವ್ ಅವರು ಆ್ಯಪ್ ಡೌನ್ಲೋಡ್ ಮಾಡಲು ಪ್ರಯತ್ನಿಸಿದರೂ ಅದು ಸರಿಯಾಗಿ ಡೌನ್ಲೋಡ್ ಆಗಿರಲಿಲ್ಲ, ನಂತರ ವಂಚಕನ ಸೂಚನೆಯಂತೆ ಫೋನ್ ಪೇ ಮೂಲಕ 149 ರೂ. ಪಾವತಿಸಿದ್ದಾರೆ. ಆದರೂ ಕಾರ್ ಬುಕ್ಕಿಂಗ್ ಖಚಿತವಾಗದ ಹಿನ್ನೆಲೆಯಲ್ಲಿ ಮತ್ತೆ ವಂಚಕನಿಗೆ ಕರೆ ಮಾಡಿ ಮಾಹಿತಿ ಕೇಳಿದ್ದಾರೆ.

ಈ ವೇಳೆ ಆ್ಯಪ್ ಡೌನ್ಲೋಡ್ ಪ್ರಕ್ರಿಯೆ ತಿಳಿಸುವ ನೆಪದಲ್ಲಿ ಗೂಗಲ್ ಮೀಟ್ ಮೂಲಕ ಮೊಬೈಲ್ ಸ್ಕ್ರೀನ್ ಶೇರ್ ಮಾಡುವಂತೆ ಹೇಳಿದ್ದಾನೆ. ದೂರುದಾರರು ತಿಳಿಯದಂತೆ ಅವರ ಮೊಬೈಲ್ ಹಾಗೂ ಬ್ಯಾಂಕ್ ವಿವರಗಳಿಗೆ ಪ್ರವೇಶ ಪಡೆದ ವಂಚಕ, ಖಾತೆಯಲ್ಲಿದ್ದ 99 ಸಾವಿರ ರೂ. ಹಣವನ್ನು ಎಗರಿಸಿದ್ದಾನೆ. ಈ ಕುರಿತು ಬೆಳಗಾವಿ ನಗರ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂಚಮಸಾಲಿ ಪೀಠದ ಟ್ರಸ್ಟ್‌ನವರು

ಲೆಕ್ಕ ಕೊಡದೇ ತಪ್ಪಿಸಿಕೊಳ್ಳುವಂತಿಲ್ಲ: ಶಿವಶಂಕರ

ಕೊಟ್ಟೂರು: ಹರಿಹರ ಪಂಚಮಸಾಲಿ ಪೀಠದ ಟ್ರಸ್ಟ್‌ನಲ್ಲಿ ಅಂದಾಜು 50 ಕೋಟಿ ರೂ.ಗಳಷ್ಟು ಅವ್ಯವಹಾರವಾಗಿದ್ದು, ಸಮಾಜದ ಶ್ರಮಿಕರ ಒಂದೊಂದು ಪೈಸಕ್ಕೂ ಸರಿಯಾದ ಲೆಕ್ಕವನ್ನು ಕೊಡದೇ ಟ್ರಸ್ಟ್‌ನವರು ತಪ್ಪಿಸಿಕೊಳ್ಳಲಿಕ್ಕೆ ಬಿಡುವುದಿಲ್ಲ ಎಂದು ಹರಿಹರ ಮಾಜಿ ಶಾಸಕ ಹಾಗೂ ಪಂಚಮಸಾಲಿ ಮುಖಂಡ ಎಚ್.ಎಸ್.ಶಿವಶಂಕರ ಹೇಳಿದರು.

ಪಟ್ಟಣದಲ್ಲಿ ಅವರು ಈ ಕುರಿತು ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ವಚನಾನಂದ ಸ್ವಾಮಿಗಳೇ ಹರಿಹರ ಪೀಠದ ಜಗದ್ಗುರುಗಳಾಗಿ ಮುಂದುವರಿಯುತ್ತಾರೆ. ಲೆಕ್ಕ ಕೇಳುತ್ತಿದ್ದ ಸಮಾಜದವರನ್ನು ತಿರಸ್ಕರಿಸುತ್ತಿದ್ದ ಟ್ರಸ್ಟ್‌ನವರು, ಪ್ರಬಲವಾದ ಲೆಕ್ಕ ಕೊಡಿ ಚಳವಳಿಯಿಂದ ಆತಂಕಗೊಂಡು ಲೆಕ್ಕ ಕೊಡಲು ಮುಂದಾಗಿರುವುದು ನಮ್ಮ ಹೋರಾಟಕ್ಕೆ ಸಿಕ್ಕ ಫಲವಾಗಿದೆ.

ಶಾಸಕರಾದ ಬಸವನಗೌಡ ಯತ್ನಾಳ್, ಅರವಿಂದ ಬೆಲ್ಲದ, ಮಾಜಿ ಸಚಿವ ಮುರುಗೇಶ ನಿರಾಣಿ ಇತರರು, ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಎರಡೂ ಕಡೆಯವರನ್ನು ಕರೆಸಿ ನಡೆಸಿರುವ ಸಭೆಯಲ್ಲಿ ಲೆಕ್ಕ ನೀಡಲು ಅವರು ಒಪ್ಪಿದ್ದಾರೆ. ಪರಸ್ಪರ ಹೇಳಿಕೆ ನೀಡದಂತೆ, ಹೋರಾಟ ನಡೆಸದಂತೆ ಮುಖಂಡರು ಸೂಚಿಸಿರುವ ಹಿನ್ನಲೆಯಲ್ಲಿ, ಮೇ 25ರಿಂದ ಕೊಟ್ಟೂರು, ಹ.ಬೊ.ಹಳ್ಳಿ, ಹೂ. ಹಡಗಲಿಗಳಿಂದ ಆರಂಭಿಸಬೇಕಾಗಿದ್ದ ಲೆಕ್ಕ ಕೊಡು ಅಭಿಯಾನವನ್ನು ತಾತ್ಕಾಲಿಕವಾಗಿ ಮುಂದೂಡಿದ್ದೇವೆ. ಮುಂದಿನ ದಿನಗಳಲ್ಲಿ ನಡೆವ ಸಭೆಯಲ್ಲಿ ನಮ್ಮ ಬೇಡಿಕೆಗಳಿಗೆ ಟ್ರಸ್ಟ್‌ನವರು ಸ್ಪಂದಿಸದಿದ್ದರೆ ಹೋರಾಟ ಮುಂದುವರಿಸಲಾಗುವುದು ಎಂದರು.

ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಲೆಕ್ಕ ಕೊಡಿ ಚಳುವಳಿ ಅಧ್ಯಕ್ಷ ಪರಮೇಶ್ವರಗೌಡ, ಪಂಚಮಸಾಲಿ ಮುಖಂಡರಾದ ಅಂಗಡಿ ಪಂಪಾಪತಿ, ಬದಾಮಿ ಮೃತ್ಯುಂಜಯ, ಗಡಿಮಾಕುಂಟೆ ಸಿದ್ದೇಶ, ಎನ್. ಗೋಪಿ, ಪ್ರಕಾಶ, ವಿ.ಟಿ.ಮುಖೇಶ ಇತರರು ಇದ್ದರು.

ಬಿಎಸ್‌ಎಫ್ ಯೋಧನ ದರ್ಪಕ್ಕೆ ನಲುಗಿದ ಕೋಳಿಹಾಳ ತಾಂಡಾ

12 ಕುಟುಂಬಗಳ ಮೇಲೆ ದಾಳಿ, 6 ಜನರಿಗೆ ಗಂಭೀರ ಗಾಯ

ಮಲ್ಲಿಕಾರ್ಜುನ ಗುತ್ತೇದಾರ



ಹುಣಸಗಿ: ಸೈನಿಕರನ್ನು ಗೌರವದಿಂದ ಕಾಣುತ್ತಿರುವ ಇಂದಿನ ದಿನಮಾನಗಳಲ್ಲಿ ಯಾದಗಿರಿ ಜಿಲ್ಲೆಯ ಹುಣಸಗಿ ತಾಲೂಕಿನ ಕೋಳಿಹಾಳ ನಡುವಿನ ತಾಂಡಾದ ಬಿಎಸ್‌ಎಫ್ ಯೋಧನ ದರ್ಪಕ್ಕೆ ತಾಂಡಾ ಜನರು ಬೆಚ್ಚಿ ಬೀಳಿಸುವಂತಾಗಿದೆ.

ದೇಶ ಸೇವೆಯಲ್ಲಿ ತೊಡಗಿರುವ ಯೋಧನೊಬ್ಬ 12 ಕುಟುಂಬಗಳ ಮೇಲೆ ಮಾರಣಾಂತಿಕ ದಾಳಿ ನಡೆಸಿದ ಪ್ರಕರಣ ಬೆಳಕಿಗೆ ಬಂದಿದ್ದು, ಕೋಳಿಹಾಳ ತಾಂಡಾದ ಜನತೆ ಆತಂಕದ ವಾತಾವರಣದಲ್ಲಿ ಬದುಕುವಂತಾಗಿದೆ.

> ಕೋಳಿಹಾಳ ತಾಂಡದ ಘಟನೆಗೆ ಸಂಬಂಧಿಸಿದಂತೆ 29 ಜನರ ಮೇಲೆ ಮೂರು ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಈಗಾಗಲೇ ಐದು ಜನರನ್ನು ಬಂಧಿಸಲಾಗಿದೆ. ಇನ್ನೂಳಿದವರ ಬಗ್ಗೆ ಶೋಧ ಕಾರ್ಯ ನಡೆದಿದೆ.
>
> ■ ಪೃಥ್ವಿಕ ಶಂಕರ, ಎಸ್‌ಪಿ ಯಾದಗಿರಿ

ದಿಗಂತ ವಿಶೇಷ

ತಾಲೂಕಿನ ಕೋಳಿಹಾಳ ನಡುವಿನ ತಾಂಡಾದ ನಿವಾಸಿ ಬಿಎಸ್‌ಎಫ್ ಯೋಧ ರಾಮು ರೇವಪ್ಪ ಚವ್ಹಾಣ ಅವರು, ಜಮೀನಿನ ವಿಚಾರದ ನೆಪ ಮಾಡಿಕೊಂಡು ತನ್ನ ಹೆಂಡತಿ, ಮಕ್ಕಳು ಹಾಗೂ ಅಳಿಯಂದಿರಾದ ಆನಂದ ರಾಠೋಡ, ವಿನೋದ್ ರಾಠೋಡ ಸೇರಿದಂತೆ ಸುಮಾರು 29 ಜನರ ತಂಡವನ್ನು ಕಟ್ಟಿಕೊಂಡು 12 ಮನೆಗಳ ಮೇಲೆ ದಾಳಿ ನಡೆಸಿದ್ದಾನೆ ಎಂಬ ಆರೋಪ ಕೇಳಿಬಂದಿದೆ.

ರಜೆ ಮೇಲೆ ಸ್ವಗ್ರಾಮಕ್ಕೆ ಬಂದಿದ್ದ ಯೋಧ ರಾಮು ಚವ್ಹಾಣ, ಜಮೀನಿನ ವಿಚಾರವಾಗಿ ಮೇ 16ರ ರಾತ್ರಿ ಸಮಯದಲ್ಲಿ ಕೀರಪ್ಪ ಚವ್ಹಾಣ ಅವರ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾನೆ. ಗಂಭೀರ ಗಾಯಗೊಂಡ ಕೀರಪ್ಪನನ್ನು ಸಂಬಂಧಿಕರು ತಕ್ಷಣ ಹುಣಸಗಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆ ವಿಜಯಪುರದ ಬಿಎಲ್‌ಇಡಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಕೀರಪ್ಪ ಚವ್ಹಾಣ, ಸೀತಪ್ಪ ಚವ್ಹಾಣ, ಚಂದಪ್ಪ ರಾಠೋಡ, ಪಾರ್ವತಿ ಚವ್ಹಾಣ, ಎರಡು ವರ್ಷದ ಬಾಲಕಿ ಯಶೋಧಾ ಹಾಗೂ ಗೋರಿಬಾಯಿ ರಾಠೋಡ ಒಟ್ಟು ಆರು ಜನರ ಮೇಲೆ ಕಲ್ಲು, ಕಬ್ಬಿಣದ ರಾಡ್‌ನಿಂದ ಗಂಭೀರವಾಗಿ ಹಲ್ಲೆ ಮಾಡಲಾಗಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಗಾಯಾಳುಗಳು ಚಂದಪ್ಪ ರಾಠೋಡ ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದಾರೆ ಎಂದು ತಿಳಿದುಬಂದಿದೆ.

ದಾಳಿಯ ವೇಳೆ ಮಹಿಳೆಯರು ಹಾಗೂ ವೃದ್ಧರಿಗೆ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿ, ಜೀವ ಬೆದರಿಕೆ ಹಾಕಲಾಗಿದೆ. ಆದ್ದರಿಂದ ಪೊಲೀಸ್ ಇಲಾಖೆ ನಮ್ಮ ಕುಟುಂಬಗಳಿಗೆ ಸೂಕ್ತ ರಕ್ಷಣೆ ಕೊಡಬೇಕೆಂದು ಹಲ್ಲೆಗೆ ಒಳಗಾದ ಕುಟುಂಬದ ಸದಸ್ಯರು ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ.

ಘಟನೆಯ ಕುರಿತು ಹುಣಸಗಿ ಪೊಲೀಸ್ ಠಾಣೆಯಲ್ಲಿ ಮೂರು ಪ್ರಕರಣಗಳು ದಾಖಲಾಗಿವೆ. ಘಟನಾ ಸ್ಥಳಕ್ಕೆ ಯಾದಗಿರಿ ಎಸ್‌ಪಿ ಪೃಥ್ವಿಕ್ ಶಂಕರ, ಸಿಪಿಐ ರವಿಕುಮಾರ ಎಸ್‌ಎನ್, ಪಿಎಸ್‌ಐ ರಾಹುಲ್ ಪವಾಡೆ, ಕ್ರೈಂ ಪಿಎಸ್‌ಐ ಭಾಗಣ್ಣ ಭೇಟಿ ನೀಡಿ ಪರಿಶೀಲನೆ ಮಾಡಿದ್ದಾರೆ. ಸೈನಿಕ ರಾಮು ಚವ್ಹಾಣ ಸೇರಿದಂತೆ ಐದು ಜನರನ್ನು ಈಗಾಗಲೇ ಬಂಧಿಸಿದ್ದಾರೆ. ಜೊತೆಗೆ ಕೋಳಿಹಾಳ ತಾಂಡಾಕ್ಕೆ ಪೊಲೀಸ್ ಬಿಗಿ ಬಂದೋಬಸ್ತ್ ನೀಡಲಾಗಿದೆ.

ಕೋಟ್ಯಂತರ ಮಹಿಳೆಯರ ಬಾಳಿಗೆ ಆಸರೆಯಾದ ಸರ್ಕಾರದ ಉಚಿತ ಬಸ್ ಪಯಣ

ಪ್ರಯಾಣದ ಸ್ವಾತಂತ್ರ್ಯ ತಂದ ಶಕ್ತಿ ಯೋಜನೆ



ಅಂಕಿ-ಅಂಶ

₹18,943 ಕೋಟಿ
ಈವರೆಗೆ 'ಶಕ್ತಿ'ಗೆ ವ್ಯಯಿಸಲಾದ ಮೊತ್ತ

726 ಕೋಟಿಗೂ ಅಧಿಕ
ವಿತರಿಸಲಾದ ಒಟ್ಟು ಉಚಿತ ಟಿಕೆಟ್‌ಗಳು

ಗ್ಯಾರಂಟಿ ವಾರ್ತೆ

ಬೆಂಗಳೂರು: 2023ರಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಪ್ರಕಟಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಶಕ್ತಿ ಯೋಜನೆ ಮೊದಲನೆಯದಾಗಿದೆ. ರಾಜ್ಯದಾದ್ಯಂತ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ ಕಲ್ಪಿಸುವ ಈ ಯೋಜನೆಗೆ 2023ರ ಜೂನ್ 11ರಂದು ಅಧಿಕೃತವಾಗಿ ಚಾಲನೆ ನೀಡಲಾಗಿತ್ತು. ಕಳೆದ ಮೂರು ವರ್ಷಗಳ ಅವಧಿಯಲ್ಲಿ, ಈ ಮಹತ್ವಾಕಾಂಕ್ಷಿ ಯೋಜನೆಯು ರಾಜ್ಯದಲ್ಲಿ ಕೋಟ್ಯಂತರ ಮಹಿಳೆಯರಿಗೆ ಪ್ರಯಾಣದ ಸ್ವಾತಂತ್ರ್ಯ ಕಲ್ಪಿಸಿ ಕ್ರಾಂತಿಕಾರಿ ಬದಲಾವಣೆಯನ್ನು ತಂದಿದೆ.

ದಿನನಿತ್ಯ ದುಡಿಮೆಗೆ ಹೋಗುವ ಗಾರ್ಮೆಂಟ್ ಕಾರ್ಮಿಕರು, ಪೌರಕಾರ್ಮಿಕರು ಹಾಗೂ ಕೆಳ-ಮಧ್ಯಮ ವರ್ಗದ ಮಹಿಳೆಯರಿಗೆ ಪ್ರತಿ ತಿಂಗಳು ಸುಮಾರು 1,500 ರಿಂದ 2,000 ರೂಪಾಯಿಗಳವರೆಗೆ ಉಳಿತಾಯವಾಗುತ್ತಿದೆ. ಈ ಹಣವನ್ನು ಅವರು ಮಕ್ಕಳ ಶಿಕ್ಷಣ, ದಿನಸಿ ಖರ್ಚಿಗೆ, ಔಷಧಿ ಖರೀದಿ ಸೇರಿದಂತೆ ಇನ್ನಿತರ ಸಣ್ಣಪುಟ್ಟ ಉಳಿತಾಯ ಖಾತೆಗಳಲ್ಲೂ ತೊಡಗಿಸುತ್ತಿದ್ದಾರೆ. ಗ್ರಾಮೀಣ ಪ್ರದೇಶದ ವಿದ್ಯಾರ್ಥಿನಿಯರು ಯಾವುದೇ ಆರ್ಥಿಕ ಹೊರೆಯಿಲ್ಲದೆ ಕಾಲೇಜು ಮತ್ತು ಉನ್ನತ ಶಿಕ್ಷಣಕ್ಕಾಗಿ ನಗರ ಪ್ರದೇಶಗಳಿಗೆ ಪ್ರಯಾಣಿಸಲು ಶಕ್ತಿ ನೆರವಾಗಿದೆ. ಯೋಜನೆಯ ಜಾರಿಯ ನಂತರ ರಾಜ್ಯದ ಪ್ರಮುಖ ದೇವಸ್ಥಾನಗಳು ಮತ್ತು ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಮಹಿಳಾ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದು, ಧಾರ್ಮಿಕ ಪ್ರವಾಸೋದ್ಯಮಕ್ಕೂ ಉತ್ತೇಜನ ನೀಡಿದಂತಾಗಿದೆ.

726 ಕೋಟಿಗೂ ಅಧಿಕ ಪ್ರಯಾಣ

ಸರ್ಕಾರದ ಅಂಕಿ-ಅಂಶಗಳ ಪ್ರಕಾರ, ಯೋಜನೆ ಜಾರಿಯಾದಾಗಿನಿಂದ ಈವರೆಗೆ 726 ಕೋಟಿಗೂ ಅಧಿಕ ಬಾರಿ ಮಹಿಳಾ ಪ್ರಯಾಣಿಕರು 'ಶಕ್ತಿ' ಯೋಜನೆಯಲ್ಲಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ 18,943 ಕೋಟಿ ರೂಪಾಯಿಗಳಿಗೂ ಅಧಿಕ ಮೌಲ್ಯದ ಟಿಕೆಟ್‌ಗಳನ್ನು ವಿತರಿಸಿದ್ದು, ಸಾರಿಗೆ ಸಂಸ್ಥೆಗಳಿಗೆ ಸಕಾಲದಲ್ಲಿ ಅನುದಾನ ಬಿಡುಗಡೆ ಮಾಡುತ್ತಿದೆ. ಹೆಚ್ಚುತ್ತಿರುವ ಪ್ರಯಾಣಿಕರ ಒತ್ತಡವನ್ನು ನಿಭಾಯಿಸಲು ಸಾವಿರಾರು ಹೊಸ ಬಸ್‌ಗಳನ್ನು ಸಾರಿಗೆ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಲಾಗಿದೆ. ಯೋಜನೆಯನ್ನು ಇನ್ನಷ್ಟು ಸುಗಮಗೊಳಿಸಲು ಮತ್ತು ದುರುಪಯೋಗ ತಡೆಯಲು ಸರ್ಕಾರವು ಮಹಿಳೆಯರಿಗೆ 'ಶಕ್ತಿ ಸ್ಮಾರ್ಟ್ ಕಾರ್ಡ್' (Smart Card) ವಿತರಿಸುವ ಪ್ರಕ್ರಿಯೆಯನ್ನು ಕೂಡ ಶೀಘ್ರದಲ್ಲೇ ಜಾರಿಗೊಳಿಸುವತ್ತ ಹೆಜ್ಜೆ ಇಟ್ಟಿದೆ.

ಇತರೆ ರಾಜ್ಯಗಳಿಗೆ ಮಾದರಿ

ಕರ್ನಾಟಕದ ಈ 'ಶಕ್ತಿ' ಯೋಜನೆ ಕೇವಲ ಉಚಿತ ಬಸ್ ಪ್ರಯಾಣಕ್ಕೆ ಸೀಮಿತವಾಗಿರದೆ, ಮಹಿಳೆಯರ ಪ್ರಯಾಣವನ್ನು ಹೆಚ್ಚಿಸುವ ಮೂಲಕ ಅವರಲ್ಲಿ ಹೊಸ ಆತ್ಮವಿಶ್ವಾಸವನ್ನು ತುಂಬಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ನೋಡಿ ದೇಶದ ಇತರೆ ರಾಜ್ಯಗಳು ಕೂಡ ಇಂತಹದೇ ಯೋಜನೆಗಳನ್ನು ಜಾರಿಗೆ ತರಲು ಮುಂದಾಗುತ್ತಿರುವುದು ಇದರ ಯಶಸ್ಸಿಗೆ ಸಾಕ್ಷಿಯಾಗಿದೆ. ಈಗಾಗಲೇ ತೆಲಂಗಾಣದಲ್ಲಿ 'ಮಹಾಲಕ್ಷ್ಮೀ', ಆಂಧ್ರಪ್ರದೇಶದಲ್ಲಿ 'ಸ್ತ್ರೀ ಶಕ್ತಿ' ಹಾಗೂ ಕೇರಳದಲ್ಲೂ ಕೂಡ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ಪಶ್ಚಿಮ ಬಂಗಾಳದಲ್ಲಿ ಕೂಡ ಈ ಯೋಜನೆಯನ್ನು ಘೋಷಿಸಿ, ಅನುಷ್ಠಾನಕ್ಕೂ ಮುಂದಾಗಿದೆ.



3 ವರ್ಷಗಳ ಸಾಧನೆ, 'ಗ್ಯಾರಂಟಿ ಹಬ್ಬ' ಘೋಷಣೆ


ಜನಪರ ಆಡಳಿತದ ಯಶಸ್ವಿ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ರಾಜ್ಯ ಸರ್ಕಾರವು 3 ವರ್ಷಗಳ ಸಾಧನಾ ಸಮಾವೇಶವನ್ನು ಮೇ 19ರಂದು ತುಮಕೂರಿನಲ್ಲಿ ಯಶಸ್ವಿಯಾಗಿ ನಡೆಸಿದ್ದು, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ತಿಂಗಳು ಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಘೋಷಿಸಿದ್ದರು. ಅದರಂತೆ ರಾಜ್ಯ ಸರ್ಕಾರವು 'ಗ್ಯಾರಂಟಿ ಹಬ್ಬ' ಹೆಸರಿನಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ತಿಂಗಳು ಪೂರ್ತಿ ವಿವಿಧ ಅಭಿಯಾನಗಳು ನಡೆಯಲಿವೆ.

ಗ್ಯಾರಂಟಿ ಹಬ್ಬ – 4ನೇ ವರ್ಷಕ್ಕೆ ಪಾದಾರ್ಪಣೆ




"ನಮ್ಮ ಹಳ್ಳೀಲಿ ದಿನವೂ ಕೆಲಸ ಸಿಗುತ್ತಿರಲಿಲ್ಲ, ಒಮ್ಮೆ ಕೆಲಸವಿದ್ದರೆ ಮತ್ತೊಮ್ಮೆ ಇರುತ್ತಿರಲಿಲ್ಲ. ಅಂತಹದ್ರಲ್ಲಿ ಆಸ್ಪತ್ರೆಗೆ ಹೋಗಬೇಕೆಂದರೆ ಬಸ್ ಚಾರ್ಜ್‌ಗೇ ಪರದಾಡಬೇಕಿತ್ತು. ಈಗ ಶಕ್ತಿ ಯೋಜನೆಯಿಂದಾಗಿ ಫ್ರೀ ಬಸ್ ಬಂದಿದ್ದರಿಂದ ಆಸ್ಪತ್ರೆಗೆ ಹೋಗಿ ಬರಲು ಅನುಕೂಲವಾಗಿದೆ. ಅಷ್ಟೇ ಅಲ್ಲ, ಮನಸ್ಸಿನ ಬೇಸರ ಕಳೆಯಲು ಧರ್ಮಸ್ಥಳಕ್ಕೂ ಹೋಗಿ ಬಂದೆ. ಬಸ್ ಚಾರ್ಜ್‌ನಿಂದ ಉಳಿತಾಯವಾಗುತ್ತಿರುವ ಹಣದಲ್ಲೇ ಅನಾರೋಗ್ಯ ಬಿದ್ದಾಗ ಗುಳಿಗೆಗಳನ್ನು ಕೊಂಡುಕೊಳ್ಳುತ್ತಿದ್ದೇನೆ.

○ ಹನುಮವ್ವ, ಹಾವೇರಿ



"ಮನೆಯ ಪರಿಸ್ಥಿತಿ ತೀರಾ ಹದಗೆಟ್ಟಿತ್ತು. ತವರು ಮನೆಗೆ ಹೋಗಬೇಕೆಂದರೂ ಬಸ್ ಚಾರ್ಜ್‌ಗೆ ದುಡ್ಡಿಲ್ಲದೆ, ಕಾಲಿನಲ್ಲಿ ಗುಳ್ಳೆಗಳು ಏಳುವಂತೆ ಮೈಲುಗಟ್ಟಲೆ ನಡೆದುಕೊಂಡು ಹೋಗುತ್ತಿದ್ದೆವು. ಬಡತನ ನಮ್ಮ ಕಾಲಿಗೆ ಬೇಡಿ ಹಾಕಿತ್ತು. ಆದರೆ ಇಂದು ಫ್ರೀ ಬಸ್ ಇರುವುದರಿಂದ ಮೈಸೂರಿನಲ್ಲಿರುವ ನನ್ನ ಮಗಳನ್ನು, ಮನಸ್ಸಿಗೆ ಬೇಸರವಾದಾಗ ದೇವರನ್ನು ನೋಡಿ ಬರುವ ಶಕ್ತಿ ನನಗೆ ಸಿಕ್ಕಿದೆ.

○ ಲಕ್ಕಮ್ಮ, ಕೊಪ್ಪಳ



"ಬಂಡವಾಳದ ಕೊರತೆಯಿಂದಾಗಿ ಕಸೂತಿ ಉದ್ಯಮವನ್ನು ನಡೆಸಲಾಗದೆ ಕಂಗಾಲಾಗಿದ್ದೆ. ಕಸೂತಿ ಕೆಲಸಕ್ಕೆ ಬೇಕಾದ ಕಚ್ಚಾ ವಸ್ತುಗಳನ್ನು ತರಲು ಪೇಟೆಗೆ ಹೋಗಿ ಬರಲು ಬಸ್ ಟಿಕೆಟ್ ದುಡ್ಡೇ ದೊಡ್ಡ ಹೊರೆಯಾಗಿತ್ತು. ಆದರೆ, ಸರ್ಕಾರದ 'ಶಕ್ತಿ' ಯೋಜನೆಯ ಉಚಿತ ಬಸ್ ಸೌಲಭ್ಯ ಸಿಕ್ಕ ಮೇಲೆ ನಂಗೆ ಬಸ್ ಓಡಾಟದ ಖರ್ಚಿನ ಚಿಂತೆ ದೂರವಾಗಿದೆ.

○ ಜಮಲಾ ಬಾಯಿ, ಯಾದಗಿರಿ

ಮಹಿಳಾ ಸಬಲೀಕರಣವೇ ಸಮೃದ್ಧ ಕರ್ನಾಟಕದ ಬುನಾದಿ



'ಶಕ್ತಿ' ಯೋಜನೆಯು ಕೇವಲ ಉಚಿತ ಸಾರಿಗೆ ಸೌಲಭ್ಯವಲ್ಲ; ಇದು ರಾಜ್ಯದ ಪ್ರತಿಯೊಬ್ಬ ಮಹಿಳೆಯ ಗೌರವ, ಸಮಾನತೆ ಮತ್ತು ಪ್ರಗತಿಗಾಗಿ ನಮ್ಮ ಸರ್ಕಾರ ಹೊಂದಿರುವ ಅಚಲ ಬದ್ಧತೆಯ ಸಂಕೇತವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕೋಟ್ಯಂತರ ಉಚಿತ ಪ್ರಯಾಣಗಳು ಮಹಿಳೆಯರಿಗೆ ಯಾವುದೇ ಆರ್ಥಿಕ ಅಡೆತಡೆಗಳಿಲ್ಲದೆ ಶಿಕ್ಷಣ, ಉದ್ಯೋಗ ಹಾಗೂ ಆರೋಗ್ಯ ಸೇವೆಗಳನ್ನು ಪಡೆದುಕೊಳ್ಳಲು ನೆರವಾಗಿವೆ. ಸಬಲ ಮಹಿಳೆಯೇ ಬಲಿಷ್ಠ ಕುಟುಂಬದ ಆಧಾರಸ್ತಂಭ, ಆ ಬಲಿಷ್ಠ ಕುಟುಂಬಗಳೇ ಸಮೃದ್ಧ ಕರ್ನಾಟಕದ ಬುನಾದಿ. ಸರ್ವರನ್ನೂ ಒಳಗೊಳ್ಳುವ ಇಂತಹ ಪ್ರಗತಿಪರ ಅಭಿವೃದ್ಧಿಗೆ ನಮ್ಮ ಸರ್ಕಾರ ಸದಾ ಕಟಿಬದ್ಧವಾಗಿದೆ.

• ಸಿದ್ದರಾಮಯ್ಯ, ಮುಖ್ಯಮಂತ್ರಿಗಳು


ಸ್ವತಂತ್ರ ಪ್ರಯಾಣ: ಮಹಿಳಾ ಸಬಲೀಕರಣದ ಹೊಸ ಆಯಾಮ



ಮುಕ್ತ ಪ್ರಯಾಣವು ಮಹಿಳೆಯರ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರಿಂದಾಗಿ ಅವರಿಗೆ ಉದ್ಯೋಗ, ಶಿಕ್ಷಣ ಹಾಗೂ ಮಾರುಕಟ್ಟೆಯ ಅವಕಾಶಗಳು ಕೈಗೆಟುಕುತ್ತವೆ. ಶಕ್ತಿ ಯೋಜನೆಯು ಕುಟುಂಬಗಳ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿದ್ದಲ್ಲದೆ, ಕರ್ನಾಟಕದ ಸಾಮಾಜಿಕ-ಆರ್ಥಿಕ ಪ್ರಗತಿಯಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆಯನ್ನು ದ್ವಿಗುಣಗೊಳಿಸಿದೆ. ನಮ್ಮ ಆಡಳಿತದ ನಾಲ್ಕನೇ ವರ್ಷಕ್ಕೆ ಹೆಜ್ಜೆ ಇಡುತ್ತಿರುವ ಈ ಸುಸಂದರ್ಭದಲ್ಲಿ, ಹೆಚ್ಚು ಸಮಾನತೆಯ ಮತ್ತು ಸಬಲ ಕರ್ನಾಟಕದ ನಿರ್ಮಾಣಕ್ಕೆ ನಾವು ಮತ್ತೊಮ್ಮೆ ಸಂಕಲ್ಪ ತೊಡುತ್ತೇವೆ.

• ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

ಪ್ರಗತಿಯ ಪಥದಲ್ಲಿ ಸಾರ್ವಜನಿಕ ಸಾರಿಗೆ



ಶಕ್ತಿ ಯೋಜನೆಯು ಕರ್ನಾಟಕದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮಹಿಳಾ ಪ್ರಗತಿಯ ಶಕ್ತಿಶಾಲಿ ವಾಹನವನ್ನಾಗಿ ಪರಿವರ್ತಿಸಿದೆ. ನಮ್ಮ ಸಾರಿಗೆ ಸಂಸ್ಥೆಗಳ ಬಸ್ಸುಗಳಲ್ಲಿ ವಿತರಿಸಲಾಗುವ ಪ್ರತಿಯೊಂದು ಉಚಿತ ಟಿಕೆಟ್ ಸಹ ರಾಜ್ಯದ ಮಹಿಳೆಯರ ಹಕ್ಕು, ಆರ್ಥಿಕ ಉಳಿತಾಯ ಮತ್ತು ಆತ್ಮವಿಶ್ವಾಸದ ಪ್ರತೀಕವಾಗಿದೆ. ಗ್ರಾಮೀಣ ಭಾಗದಿಂದ ಹಿಡಿದು ಮಹಾನಗರಗಳವರೆಗೆ ಮಹಿಳೆಯರು ಇಂದು ಎಂದಿಗಿಂತಲೂ ಹೆಚ್ಚು ಧೈರ್ಯದಿಂದ ಮತ್ತು ಸ್ವತಂತ್ರವಾಗಿ ಪ್ರಯಾಣಿಸುತ್ತಿದ್ದಾರೆ. ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು ಮತ್ತು ಈ ಐತಿಹಾಸಿಕ ಯೋಜನೆಯ ಲಾಭ ನಿರಂತರವಾಗಿ ಸಿಗುವಂತೆ ಮಾಡಲು ನಮ್ಮ ಇಲಾಖೆ ಬದ್ಧವಾಗಿದೆ.

• ರಾಮಲಿಂಗಾರೆಡ್ಡಿ, ಸಾರಿಗೆ ಹಾಗೂ ಮುಜರಾಯಿ ಸಚಿವರು

ಕರ್ನಾಟಕ ವಾರ್ತೆ

ಕೇರಳ ವಿಧಾನ ಸಭೆಯಲ್ಲಿ ಕನ್ನಡದ ಕಂಪು

ಪುಟ 1ರಿಂದ ಗಡಿನಾಡಿನ ಭಾಷಾ ಸೌಹಾರ್ದಕ್ಕೆ ಈ ಘಟನೆ ವಿಶೇಷ ಸಾಕ್ಷಿಯಾಯಿತು. ಅಶ್ರಫ್ ಅವರ ಪ್ರಮಾಣ ವಚನ ಮುಗಿದ ತಕ್ಷಣ ಸದನದಲ್ಲಿ ಸದಸ್ಯರು ಮೇಜು ತಟ್ಟಿ ಅಭಿನಂದನೆ ಸಲ್ಲಿಸಿದರು. ಮುಖ್ಯಮಂತ್ರಿ ವಿ.ಡಿ. ಸತೀಶನ್ ಸೇರಿದಂತೆ ಹಲವು ಸದಸ್ಯರು ಅಶ್ರಫ್ ಅವರ ಕನ್ನಡಾಭಿಮಾನವನ್ನು ಶ್ಲಾಘಿಸಿದರು. ಇದಕ್ಕೂ ಮುನ್ನ ವಿಧಾನಸಭೆಯ ಅಧಿವೇಶನದಲ್ಲಿ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದ ಅಶ್ರಫ್, ಎಕೆಎಂ ಅಶ್ರಫ್ ಎಂಬವನಾದ ನಾನು ವಿಧಾನಸಭೆಯ ಸದಸ್ಯನಾಗಿ ಚುನಾಯಿತನಾಗಿ ಕಾನೂನು ಮೂಲಕ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ನಿಜವಾದ ಶ್ರದ್ಧೆ ಮತ್ತು ನಿಷ್ಠೆಯನ್ನು ಹೊಂದಿರುತ್ತೇನೆಂದು ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುತ್ತೇನೆಂದು, ನಾನು ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದು ಸೃಷ್ಟಿಕರ್ತನ ಹೆಸರಿನಲ್ಲಿ ಪ್ರಮಾಣ ಮಾಡುತ್ತೇನೆ ಎಂದು ಕನ್ನಡದಲ್ಲೇ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಕಾಸರಗೋಡು ಜಿಲ್ಲೆಯ ಗಡಿಭಾಗದಲ್ಲಿರುವ ಮಂಜೇಶ್ವರ ಕ್ಷೇತ್ರದಲ್ಲಿ ಕನ್ನಡಿಗರ ಸಂಖ್ಯೆ ಹೆಚ್ಚಾಗಿದೆ. ತುಳು ಹಾಗೂ ಮಲಯಾಳಂ ಜತೆಗೆ ಕನ್ನಡವೂ ಇಲ್ಲಿ ಸಾಮಾನ್ಯ ಬಳಕೆಯ ಭಾಷೆಯಾಗಿದೆ. ಈ ಹಿನ್ನೆಲೆ ಅಶ್ರಫ್ ಅವರ ಕನ್ನಡ ಪ್ರಮಾಣ ವಚನ ಗಡಿನಾಡಿನ ಜನರಲ್ಲಿ ವಿಶೇಷ ಸಂತಸ ಮೂಡಿಸಿದೆ. ಮಾತೃಭಾಷೆ ಮಲಯಾಳಂ ಆಗಿದ್ದರೂ ಅಶ್ರಫ್ ಅವರಿಗೆ ಕನ್ನಡದ ಮೇಲೆ ಅಪಾರ ಪ್ರೀತಿ ಇದೆ. ಅವರು ಕಣ್ಣೂರು ವಿಶ್ವವಿದ್ಯಾಲಯದಲ್ಲಿ ಕನ್ನಡದಲ್ಲೇ ಪದವಿ ಪಡೆದಿದ್ದಾರೆ. ಚುನಾವಣಾ ಪ್ರಚಾರದ ಸಂದರ್ಭದಲ್ಲೂ ಕನ್ನಡದಲ್ಲೇ ಭಾಷಣ ಮಾಡಿ ಮತದಾರರ ಮನಸೆಳೆದಿದ್ದರು. ಮಂಜೇಶ್ವರ ಕ್ಷೇತ್ರದಲ್ಲಿ ಕನ್ನಡ ಶಾಲೆಗಳ ಉಳಿವಿಗಾಗಿ ಹಲವು ಹೋರಾಟಗಳು ನಡೆದಿವೆ. ಗಡಿಭಾಗದ ಜನರ ಭಾಷಾ ಹಕ್ಕುಗಳ ಪ್ರಶ್ನೆ ಸದಾ ಚರ್ಚೆಯಲ್ಲಿರುವ ಈ ಪ್ರದೇಶದಲ್ಲಿ, ಕನ್ನಡದಲ್ಲಿನ ಪ್ರಮಾಣ ವಚನ ಮತ್ತೊಮ್ಮೆ ಭಾಷಾ ಸೌಹಾರ್ದ ಮತ್ತು ಗಡಿನಾಡಿನ ಸಾಂಸ್ಕೃತಿಕ ಬಾಂಧವ್ಯವನ್ನು ಪ್ರತಿಬಿಂಬಿಸಿದೆ.

ರಾಜ್ಯದ ವೈವಿಧ್ಯತೆ, ಸಂಸ್ಕೃತಿ ಪ್ರತಿಬಿಂಬ: ಕೇರಳದ 16ನೇ ವಿಧಾನಸಭಾ ಸದಸ್ಯರ ಗುರುವಾರದ ಪ್ರಮಾಣವಚನ ಸ್ವೀಕಾರ ಸಮಾರಂಭವು, ಸಾಂವಿಧಾನಿಕ ಕಾರ್ಯಕ್ರಮಕ್ಕಿಂತಲೂ ರಾಜ್ಯದ ವೈವಿಧ್ಯತೆ, ಸರಳತೆ ಮತ್ತು ರಾಜಕೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಆಕರ್ಷಕ ಸಮಾರಂಭವಾಗಿ ಕಂಗೊಳಿಸಿತು. ಹೊಸ ಶಾಸಕರಲ್ಲಿ ಕೆಲವರು ಬೈಸಿಕಲ್ ಏರಿ ವಿಧಾನಸಭೆ ತಲುಪಿದ್ದು ಗಮನ ಸೆಳೆಯಿತು.

ಶಾಸಕರು ವಿಭಿನ್ನ ಭಾಷೆಗಳಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಕೆಲವರು ದೇವರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದರೆ ಮತ್ತು ಕೆಲ ಶಾಸಕರು ವಿಧ್ಯುಕ್ತವಾಗಿ ಪ್ರಮಾಣವಚನ ಸ್ವೀಕರಿಸುವ ಮುಖೇನ ಕಲಾಪಗಳಿಗೆ ವೈಯಕ್ತಿಕ ಅಥವಾ ಆತ್ಮೀಯ ಸ್ಪರ್ಶ ನೀಡಿದರು.

ವಿಧಾನಸಭಾ ಚುನಾವಣಾ ಪ್ರಚಾರ ಸಂದರ್ಭ ಪರಸ್ಪರ ಆರೋಪ-ಪ್ರತ್ಯಾರೋಪ ಮಾಡಿದ್ದ ವಿವಿಧ ರಾಜಕೀಯ ಪಕ್ಷಗಳ ನಾಯಕರು, ಪ್ರಮಾಣವಚನ ಕಾರ್ಯಕ್ರಮ ಮುಗಿಯುತ್ತಲೇ ರಾಜಕೀಯ ದ್ವೇಷ ಮರೆತು ಪರಸ್ಪರ ನಗೆ ವಿನಿಮಯ ಮಾಡಿಕೊಂಡರು ಮತ್ತು ಪರಸ್ಪರ ಕೈಕುಲುಕಿಕೊಂಡು ಸೌಹಾರ್ದತೆ ಮೆರೆದ ಅಪೂರ್ವ ಕ್ಷಣಗಳಿಗೂ ಸದನ ಸಾಕ್ಷಿಯಾಯಿತು.

ವಿದೇಶಿ ನಾಯಕರಿಗೆ ದೇಸಿ ಉಡುಗೊರೆ

ಪುಟ 1ರಿಂದ ನೆದರ್‌ಲ್ಯಾಂಡ್ಸ್ ಪ್ರಧಾನಿ ರಾಬ್ ಜೆಟ್ಟನ್ ಅವರಿಗೆ ಮಧುಬನಿ ಚಿತ್ರ, ಸ್ವೀಡನ್ ಪ್ರಧಾನಿ ಉಲ್ಫ್ ಕ್ರಿಸ್ಟರ್ಸನ್ ಅವರಿಗೆ ಲಡಾಖಿನ ಶುದ್ಧ ಉಣ್ಣೆಯ ಶಾಲು ಉಡುಗೊರೆಯಾಗಿ ನೀಡಲಾಗಿದೆ.ಮೆಲೋನಿ ಅವರಿಗೆ ನೀಡಲಾದ ಮೆಲೋಡಿ ಟಾಫಿ ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗೆ ಕಾರಣವಾಗಿದ್ದು, ಅವರು ಅದನ್ನು 'ತುಂಬಾ ರುಚಿಕರ ಟಾಫಿ' ಎಂದು ಹೇಳಿರುವುದು ವಿಶೇಷ.

ಯುಎಇ ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಜಾಯದ್ ಅಲ್ ನಹಯಾನ್ ಅವರಿಗೆ ಕೇಸರ್ ಮಾವು, ಮೇಘಾಲಯದ ಅನಾನಸ್ ಮತ್ತು ಗುಜರಾತಿನ ರೋಗನ್ ಪೇಂಟಿಂಗ್ ನೀಡಲಾಗಿದೆ. ನೆದರ್‌ಲ್ಯಾಂಡ್ಸ್ ಅರಸ ವಿಲೆಂ-ಅಲೆಕ್ಸಾಂಡರ್ ಅವರಿಗೆ ಜೈಪುರ ಬ್ಲ್ಯೂ ಪೊಟ್ಟರಿ, ರಾಣಿ ಮ್ಯಾಕ್ಸಿಮಾ ಅವರಿಗೆ ಮೀಣಾಕಾರಿ-ಕುಂದನ್ ಆಭರಣ ನೀಡಲಾಗಿದೆ. ನಾರ್ವೆ ಪ್ರಧಾನಿ ಜೋನಾಸ್ ಗಾರ್ ಸ್ಟೋರ್ ಅವರಿಗೆ ಸಿಕ್ಕಿಂನ ಒಣಹೂವಿನ ಕಲಾಕೃತಿಗಳು, ಅರಸ ಹರಾಲ್ಡ್ 5 ಅವರಿಗೆ ತಾರಕಾಸಿ ನೌಕಾ ಮಾದರಿ, ರಾಣಿ ಸೋನ್ಯಾ ಅವರಿಗೆ ತಾಳೆ ಎಲೆ ಪಟ್ಟಚಿತ್ರ ನೀಡಲಾಗಿದೆ. ಪ್ರಧಾನಿ ಮೆಟ್ಟೆ ಫ್ರೆಡರಿಕ್ಸನ್ ಅವರಿಗೆ ಬಿದ್ರಿ ಕಲಾಕೃತಿ, ಫಿನ್‌ಲ್ಯಾಂಡ್ ಪ್ರಧಾನಿ ಅವರಿಗೆ ಪಿಚ್ವಾಯಿ ಚಿತ್ರ ನೀಡಲಾಗಿದೆ. ಈ ಪ್ರವಾಸದಲ್ಲಿ ಮೋದಿ ಯುಎಇ, ನೆದರ್‌ಲ್ಯಾಂಡ್ಸ್, ಸ್ವೀಡನ್, ನಾರ್ವೆ, ಇಟಲಿ ದೇಶಗಳಿಗೆ ಭೇಟಿ ನೀಡಿ, ಭಾರತೀಯ ಪರಂಪರೆಯ ವೈಶಿಷ್ಟ್ಯತೆಯನ್ನು ವಿಶ್ವ ನಾಯಕರಿಗೆ ಪರಿಚಯಿಸಿದರು.

ಕೃ. ರುಕ್ಮಿಣಿ ಅಕ್ಕ ಇನ್ನಿಲ್ಲ



ಬೆಂಗಳೂರು: ರಾಷ್ಟ್ರ ಸೇವಿಕಾ ಸಮಿತಿಯ ಪೂರ್ವ ಅಖಿಲ ಭಾರತ ಸಹ ಕಾರ್ಯವಾಹಿಕಾ ಆಗಿದ್ದಂತಹ ಕೃ. ರುಕ್ಮಿಣಿ ಅಕ್ಕ (98) ಗುರುವಾರ ಬೆಂಗಳೂರಿನ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಕೆಲವು ದಿನಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿದ್ದರು. ಕೃ. ರುಕ್ಮಿಣಿ ಅಕ್ಕ ಅವರು ರಾಷ್ಟ್ರ ಸೇವಿಕಾ ಸಮಿತಿ ಪ್ರಮುಖರಾಗಿದ್ದು, ಸಂಘಟನೆಯ ಅಖಿಲ ಭಾರತ ಕಾರ್ಯಕಾರಿಣಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಈ ಹಿಂದೆ ಸಹಕಾರ್ಯವಾಹಿಕಾ ಮತ್ತು ಅಖಿಲ ಭಾರತ ಪ್ರಚಾರಿಕಾ ಪ್ರಮುಖರಾಗಿ ಮಹತ್ವದ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು.

ಶುಕ್ರವಾರ ಬೆಳಗ್ಗೆ 7.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ಸ್ವಗೃಹದಲ್ಲಿ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿದೆ. ನಂತರ ಹರಿಶ್ಚಂದ್ರಘಾಟ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ರುಕ್ಮಿಣಿ ಅಕ್ಕನವರು ಬೆಂಗಳೂರಿನ ಎಂಎಲ್‌ಎ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಸುಕೃಪಾ ಟ್ರಸ್ಟ್ ಸಂಸ್ಥಾಪಕ ವಿಶ್ವಸ್ತರಾಗಿ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. ಸಮಾಜ ಸೇವೆಯನ್ನು ಗುರುತಿಸಿ, ವಿಶ್ವ ಸಂವಾದ ಕೇಂದ್ರ ವತಿಯಿಂದ ಇವರ ಕುರಿತಾದ ಚೈತನ್ಯಮಯಿ ಎಂಬ ಪುಸ್ತಕವನ್ನು ಮಿಥಿಕ್ ಸೊಸೈಟಿಯಲ್ಲಿ ಬಿಡುಗಡೆ ಮಾಡಲಾಗಿತ್ತು. ಮಹಿಳೆಯರಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ, ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಕೃ. ರುಕ್ಮಿಣಿ ಅಕ್ಕನವರ ಕೊಡುಗೆ ಅಪಾರವಾಗಿದೆ.

ಯುವತಿಯರಿಗೆ ಕಿರುಕುಳ: 3 ಯುವಕರ ಸೆರೆ

ಬೆಳ್ತಂಗಡಿ: ಪ್ರವಾಸಕ್ಕೆಂದು ಬಂದಿದ್ದ ಮೂವರು ಯುವತಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಮೂವರು ಯುವಕರನ್ನು ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ಕೇರಳ ಕಾಸರಗೋಡು ಮೂಲದ ಅಬ್ದುಲ್ ಖಾದರ್ ಅಲ್ತಾಫ್ (36), ಫೈಜಲ್ ಅದಿಲ್ (27) ಹಾಗೂ ಉಸ್ಮಾನ್ ಸಾಲೀಂ (18) ಎಂದು ಗುರುತಿಸಲಾಗಿದೆ.

ಕಿಡಿ ನುಡಿ

•ವಾಸುದೇವರಾವ್ ಕಕ್ಕೆನೇಜಿ

◈ ಅಭಿವೃದ್ಧಿಗೆ ಗುಜರಾತ್ ಅಲ್ಲ, ಕರ್ನಾಟಕವೇ ಮಾದರಿ – ಸಿದ್ದರಾಮಯ್ಯ

- ಎರಡೂ ಮಾದರಿಗಳೇ ಹೌದು. ಒಂದು ಒಳ್ಳೆಯ ಮಾದರಿ, ಇನ್ನೊಂದು ಕೆಟ್ಟ ಮಾದರಿ!

ದಿನ ಭವಿಷ್ಯ

ಮೇಷ
ಕುಟುಂಬದ ಹಿತಕ್ಕೆ ಹೆಚ್ಚು ಕಾಳಜಿ ವಹಿಸಿ. ಉದ್ಯಮಿಗಳು ಇಂದು ರಿಸ್ಕ್ ತೆಗೆದುಕೊಳ್ಳದಿರಿ. ದಿನದಂತ್ಯಕ್ಕೆ ತುಸು ನಿರಾಳ ಬೆಳವಣಿಗೆ.

ವೃಷಭ
ನಿಮ್ಮ ಗುಣಾತ್ಮಕ ನಡವಳಿಕೆ ಯಶಸ್ಸಿಗೆ ಕಾರಣವಾಗಲಿದೆ. ಎಲ್ಲರಿಂದ ದೂರವಾಗಿ ಇರುವುದನ್ನು ಬಿಡಿ. ಎಲ್ಲರ ಜತೆ ಸೇರಿ.

ಮಿಥುನ
ವ್ಯಕ್ತಿಯೊಬ್ಬರ ಜತೆ ವಿಶ್ವಾಸಭರಿತ ಬಾಂಧವ್ಯ ಬೆಳೆಯಬಹುದು. ಆದಾಯದಲ್ಲಿ ಹೆಚ್ಚಳ. ಮನೆಯ ಸಮಸ್ಯೆ ಪರಿಹಾರದಿಂದ ನೆಮ್ಮದಿ.

ಕಟಕ
ನಿಮ್ಮ ಶ್ರಮದಿಂದ ಉದ್ಯೋಗದಲ್ಲಿ ಯಶ. ಆರ್ಥಿಕ ಉನ್ನತಿ. ಪ್ರೀತಿಯ ವಿಷಯದಲ್ಲಿ ಎಚ್ಚರದ ಹೆಜ್ಜೆ ಇಡಿ. ಅಪಸ್ವರ ಏಳದಂತೆ ನೋಡಿಕೊಳ್ಳಿ.

ಸಿಂಹ
ಚಿಪ್ಪಿನಿಂದ ಹೊರಬನ್ನಿ. ಎಲ್ಲರ ಜತೆ ಮುಕ್ತವಾಗಿ ಬೆರೆಯಿರಿ. ಎಲ್ಲರನ್ನು ಸಂಶಯದಿಂದ ನೋಡಬೇಡಿ. ವಿಶ್ವಾಸ ಮುಖ್ಯ ತಿಳಿಯಿರಿ.

ಕನ್ಯಾ
ವೃತ್ತಿ ಒತ್ತಡದಿಂದ ಇಂದು ಮುಕ್ತಿ. ಆಪ್ತರ ಜತೆ ಬೆರೆಯುವ ಅವಕಾಶ. ನಿಮ್ಮನ್ನು ಶ್ಲಾಘಿಸುವ ನಿರ್ವಹಣೆ ತೋರುವಿರಿ. ಖಾಸಗಿ ಚಿಂತೆ ಪರಿಹಾರ.

ತುಲಾ
ನಿಮ್ಮ ಮೇಲೆ ದೊಡ್ಡ ಜವಾಬ್ದಾರಿ ಬೀಳಲಿದೆ. ಮಾನಸಿಕ ಒತ್ತಡದಿಂದ ನೆಮ್ಮದಿ ಹಾಳು. ಕೌಟುಂಬಿಕ ಬಿಕ್ಕಟ್ಟು ಶಮನಕ್ಕೆ ಯತ್ನಿಸಿ.

ವೃಶ್ಚಿಕ
ವೃತ್ತಿಯಲ್ಲಿ ಅಚ್ಚರಿಯ ಬೆಳವಣಿಗೆ. ಅನ್ಯರ ಜತೆಗಿನ ವೈರವನ್ನು ದೀರ್ಘ ಎಳೆಯಬೇಡಿ. ಕೌಟುಂಬಿಕ ನೆಮ್ಮದಿ ಹಾಳಾಗುವ ಪ್ರಸಂಗ.

ಧನು
ಭಾವುಕತೆ ನಿಮ್ಮ ವಿವೇಕ ಮರೆಸಬಹುದು. ಸಹೋದರರಿಂದ ಸಮಸ್ಯೆ ಸೃಷ್ಟಿ, ಆಪ್ತ ಸಂಬಂಧ ಕೆಡಲಿದೆ. ಸಂಘರ್ಷ ಉಲ್ಬಣಿಸಬೇಡಿ.

ಮಕರ
ಒತ್ತಡದ ಬದುಕಿಂದ ವಿರಾಮ ಪಡೆಯಿರಿ. ಆ ಮೂಲಕ ಮಾನಸಿಕ ನೆಮ್ಮದಿ ಪಡೆಕೊಳ್ಳಿ. ಪ್ರೇಮದ ಆಹವಾಲು ಮಂಡನೆ ಫಲ ನೀಡದು.

ಕುಂಭ
ವೃತ್ತಿ ಕ್ಷೇತ್ರದಲ್ಲಿ ನಯವಂಚಕರ ಬಗ್ಗೆ ಎಚ್ಚರದಿಂದಿರಿ. ಕುಟುಂಬದಲ್ಲಿ ಸಮಸ್ಯೆ ಉಂಟಾದೀತು. ಪ್ರೀತಿಯ ವ್ಯವಹಾರದಲ್ಲಿ ಬಿಕ್ಕಟ್ಟು.

ಮೀನ
ಆದಾಯ ಗಳಿಕೆಯ ಹೊಸ ದಾರಿ ತೋರಲಿದೆ. ನಿಮ್ಮ ವ್ಯಕ್ತಿತ್ವ ಇತರರ ಮೆಚ್ಚುಗೆ ಗಳಿಸುವುದು. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ.

ರಾಹುಕಾಲ : 10.30-12.00
ಗುಳಿಕಕಾಲ : 7.30-9.00

ಅದೃಷ್ಟ ಸಂಖ್ಯೆ : 0,3,7,2

ಇಂದಿನಿಂದ ಧರ್ಮ ವಿಜಯ ಯಾತ್ರೆ

ಶೃಂಗೇರಿ: ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಗಳು ನೇಪಾಳ ದೇಶಕ್ಕೆ ಮೇ 22 ರಿಂದ 27 ರವರೆಗೆ ಧರ್ಮ ವಿಜಯ ಯಾತ್ರೆ ಕೈಗೊಳ್ಳಲಿದ್ದಾರೆ. ಶ್ರೀಮಠದಿಂದ ಮಂಗಳೂರಿಗೆ ತೆರಳಿ ಅಲ್ಲಿಂದ ವಿಶೇಷ ವಿಮಾನದಲ್ಲಿ ಕಠ್ಮಂಡಿಗೆ ತೆರಳಿ ನೇಪಾಳದ ವಿವಿದೆಡೆ ಸಂಚಾರ ನಡೆಸಿ, ವಿವಿಧ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಈಗಾಗಲೇ 200ಕ್ಕೂ ಹೆಚ್ಚು ಪುರೋಹಿತರ ತಂಡ ನೇಪಾಳ ತಲುಪಿದೆ. ಕಠ್ಮಂಡಿವಿನ ಪಶುಪತಿನಾಥ, ಮುಕ್ತಿನಾಥ ಮಂದಿರ ಮುಂತಾದ ಕಡೆಗೆ ಶ್ರೀಗಳು ತೆರಳಲಿದ್ದಾರೆ. ಜಗದ್ಗುರುಗಳೊಂದಿಗೆ ಶ್ರೀಮಠದ ಆಡಳಿತಾಧಿಕಾರಿ ಪಿ.ಎ.ಮುರುಳಿ ಸಹಿತ ಪುರೋಹಿತರ ತಂಡ ತೆರಳಲಿದೆ.

ಏಜೆನ್ಸಿ ನೇಮಕ

ಬೆಂಗಳೂರು: ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರು, ಪ್ರಾಂಶುಪಾಲರು ಹಾಗೂ ಬೋಧಕೇತರ ಸಿಬ್ಬಂದಿಯ ತರಬೇತಿ ಮತ್ತು ಶೈಕ್ಷಣಿಕ ಸಂಶೋಧನಾ ಕಾರ್ಯಗಳ ಹೊಣೆಯನ್ನು ನಿರ್ವಹಿಸಲು ನೋಡಲ್ ಸಂಸ್ಥೆಯನ್ನಾಗಿ ರಾಜ್ಯ ಮಟ್ಟದಲ್ಲಿ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿಎಸ್‌ಇಆರ್‌ಟಿ) ಮತ್ತು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್) ನಿಯೋಜಿಸಲಾಗಿದೆ. ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ತರಬೇತಿ ಮತ್ತು ಸಂಶೋಧನಾ ಕ್ಷೇತ್ರಗಳಲ್ಲಿ ಪರಿಣತಿ ಹೊಂದಿದ ಸಿಬ್ಬಂದಿ ಕೊರತೆ ಇರುವುದರಿಂದ, ಶೈಕ್ಷಣಿಕ ನಿರಂತರತೆ ಮತ್ತು ಬೋಧನಾ ಗುಣಮಟ್ಟವನ್ನು ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಆದೇಶದಲ್ಲಿ ತಿಳಿಸಿದೆ.

ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್ವಾಲ್ ವಿಶ್ವಾಸ

ರಾಜ್ಯದಲ್ಲಿ ಬಿಜೆಪಿಗೆ ಅಧಿಕಾರ

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ಸಿನ ಸ್ಥಿತಿ ಹದಗೆಟ್ಟಿದೆ. ಹಲವಾರು ಕಾಂಗ್ರೆಸ್ ಶಾಸಕರು ನಮ್ಮ ಸಂಪರ್ಕದಲ್ಲಿದ್ದಾರೆ. ನಾಳೆ ವಿಧಾನಸಭೆ ಚುನಾವಣೆ ನಡೆದರೂ ಜನರು ಕಾಂಗ್ರೆಸ್ಸನ್ನು ಸೋಲಿಸಿ ಬಿಜೆಪಿ ಸರ್ಕಾರ ಮಾಡಲು ಅವಕಾಶ ಮಾಡಿಕೊಡಲಿದ್ದಾರೆ ಎಂದು ಬಿಜೆಪಿ ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗರ್ವಾಲ್ ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ವಿಫಲ, ಭ್ರಷ್ಟಾಚಾರಿಗಳ ಸರ್ಕಾರ ಇದೆ. ತುಷ್ಟೀಕರಣ ಆಧರಿತ ಸರ್ಕಾರ ಇದಾಗಿದೆ. ಅದು ಕರ್ನಾಟಕದ ಜನರಿಗೆ ಮೋಸ ಮಾಡಿದೆ. ಗ್ಯಾರಂಟಿಗಳನ್ನೂ ಸರಿಯಾಗಿ ನೀಡಿಲ್ಲ ಎಂದು ಟೀಕಿಸಿದರು. ಹೊರಗಡೆಯಿಂದ ಹೆಚ್ಚು ಸಾಲ ಪಡೆದುದರಿಂದ ರಾಜ್ಯವು ಆರ್ಥಿಕ ಸಂಕಷ್ಟದಲ್ಲಿದೆ. ಆರೇಳು ತಿಂಗಳುಗಳಿಂದ ಇಲ್ಲಿ ಸರ್ಕಾರವೇ ಇಲ್ಲವಾಗಿದೆ. ಇವರು ಪರಸ್ಪರ ಜಗಳ ಮಾಡಿಕೊಳ್ಳುತ್ತಿದ್ದಾರೆ ಎಂದು ಆಕ್ಷೇಪಿಸಿದರು. ನಮ್ಮ ಪಕ್ಷದ ರಾಷ್ಟ್ರೀಯ ಸಹ-ಸಂಘಟನಾ ಕಾರ್ಯದರ್ಶಿಯವರು ಇಲ್ಲಿಗೆ ಬಂದಿದ್ದಾರೆ. 2028ರಲ್ಲಿ ವಿಧಾನ ಸಭಾ ಚುನಾವಣೆ ಇದೆ ಅದಕ್ಕಾಗಿ ಈಗಿನಿಂದಲೇ ತಯಾರಿ ನಡೆಸಿದ್ದೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಪೂರ್ಣಾವಧಿ ರಾಜ್ಯಾಧ್ಯಕ್ಷ: ನಮ್ಮ ಪೂರ್ಣಾವಧಿ ರಾಜ್ಯಾಧ್ಯಕ್ಷರಿದ್ದು, ಅವರು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಅಧ್ಯಕ್ಷರಾಗಿ ಮುಂದುವರೆಯುವರೇ ಇಲ್ಲವೇ ಎಂಬುದು ಇಲ್ಲಿನ ಸಭೆಯಲ್ಲಿ ನಿರ್ಧಾರ ಆಗುವುದಿಲ್ಲ, ಇಲ್ಲಿ ಅಧ್ಯಕ್ಷರ ಮೌಲ್ಯಮಾಪನ ನಡೆಯುತ್ತದೆ ಎಂಬ ಭ್ರಮೆ ಇದ್ದರೆ ಅದು ಸರಿಯಲ್ಲ. ನಮ್ಮಲ್ಲಿ ಮೌಲ್ಯಮಾಪನ ನಿರಂತರವಾಗಿ ನಡೆಯುತ್ತಿರುತ್ತದೆ. ಯಾವ ಬಿಜೆಪಿ ನಾಯಕ ಏನು ಮಾಡುತ್ತಿದ್ದಾರೆ ಎಂಬುದನ್ನು ತಿಳಿಯಲು ಇಲ್ಲಿ ಬರುವ ಅವಶ್ಯಕತೆ ಇಲ್ಲ. ನಾನು ಅಧ್ಯಕ್ಷರ ಕಾರ್ಯಕರ್ತನಲ್ಲ; ನಾನು ಬಿಜೆಪಿ ಕಾರ್ಯಕರ್ತ. ನಾನೇ ಎಲ್ಲವನ್ನೂ ಹೇಳಬಲ್ಲೆ ಎಂದು ಪ್ರಶ್ನೆಗೆ ಉತ್ತರಿಸಿದರು. ಅಧ್ಯಕ್ಷತೆ ಎಂಬುದು ಒಂದು ಉದ್ಯೋಗವಲ್ಲ ಹೀಗೇ ಘೋಷಿಸಬೇಕು ಅಥವಾ ಇಂತಿಷ್ಟು ವೇತನ ನೀಡಬೇಕು ಎನ್ನಲು ಆಗುವುದಿಲ್ಲ. ಈಗ ಶಕ್ತಿಶಾಲಿ ಅಧ್ಯಕ್ಷರಿದ್ದಾರೆ. ಇದೇ ಅಧ್ಯಕ್ಷರ ನೇತೃತ್ವದಲ್ಲೇ ನಾವು ಲೋಕಸಭಾ ಚುನಾವಣೆ ಎದುರಿಸಿದ್ದೇವೆ. ಯಾರು ಅಧ್ಯಕ್ಷರಿರುತ್ತಾರೋ ಅವರ ನೇತೃತ್ವದಲ್ಲಿ ವಿಧಾನಸಭಾ ಚುನಾವಣೆ ಎದುರಿಸುತ್ತೇವೆ ಎಂದು ಸ್ಪಷ್ಟಪಡಿಸಿದರು.



ಬಿಜೆಪಿ ಮುಖಂಡರಿಂದ ವಿಶೇಷ ಸಂಘಟನಾ ಸಭೆ

ಭಾರತೀಯ ಜನತಾ ಪಕ್ಷದ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಗುರುವಾರ ವಿಶೇಷ ಸಂಘಟನಾ ಸಭೆ ನಡೆಯಿತು. ಬಿಜೆಪಿ ರಾಷ್ಟ್ರೀಯ ಸಹ-ಸಂಘಟನಾ ಕಾರ್ಯದರ್ಶಿ ಶಿವಪ್ರಕಾಶ್, ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಧಾಮೋಹನ್ ದಾಸ್ ಅಗರ್ವಾಲ್, ರಾಷ್ಟ್ರೀಯ ಉಪಾಧ್ಯಕ್ಷ ಮತ್ತು ಸಂಸದ ಬೈಜಯಂತ್ ಜಯ್ ಪಾಂಡಾ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಪಕ್ಷದ ಪ್ರಮುಖರು ಇದ್ದರು.

ಪ್ರಧಾನ್, ಪ್ರಧಾನಿ ಹೊಣೆ ಹೊರಲಿ

ಪುಟ 1ರಿಂದ ಧರ್ಮೇಂದ್ರ ಪ್ರಧಾನ್ ಅವರು ನೀಟ್ ಪರೀಕ್ಷೆಗೆ ಮತ್ತೊಂದು ದಿನಾಂಕ ನಿಗದಿ ಮಾಡಿ ಕೈ ತೊಳೆದುಕೊಂಡಿದ್ದಾರೆ ಎಂದು ಕಿಡಿಕಾರಿದರು. ಧರ್ಮೇಂದ್ರ ಪ್ರಧಾನ್ ಅವರು ಕೇವಲ ನೀಟ್ ಪರೀಕ್ಷೆಯನ್ನು ಮುಂದೂಡುವ ಜತೆಗೆ ಪ್ರಕರಣದ ಹೊಣೆ ಹೊತ್ತು ರಾಜೀನಾಮೆ ನೀಡಬೇಕು. ಕೇಂದ್ರ ಶಿಕ್ಷಣ ಸಚಿವರು ಹೊಣೆಗಾರಿಕೆ ಹೊತ್ತು ರಾಜೀನಾಮೆ ನೀಡುವವರೆಗೂ ಇಲ್ಲಿನ ಹೋರಾಟವನ್ನು ಮುಂದುವರಿಸಬೇಕು ಎಂದರು.

ಕರ್ನಾಟಕ ಮತ್ತಿತರ ರಾಜ್ಯಗಳಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಬಯಸುವವರಿಗೆ ಸಿಇಟಿ ಪಾರದರ್ಶಕವಾಗಿ ನಡೆಯುತ್ತಿತ್ತು. ನರೇಂದ್ರ ಮೋದಿಯವರು 2014ರಲ್ಲಿ ಪ್ರಧಾನಿಯಾದ ನಂತರ ಹಿಂದೆ ಇದ್ದ ಪದ್ಧತಿಯನ್ನು ಬದಲಾಯಿಸಿ 2016ರಲ್ಲಿ ನೀಟ್ ಜಾರಿಗೆ ತಂದರು. ಹತ್ತು ವರ್ಷಗಳಲ್ಲಿ ಐದು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದರು.

ಸತತ ಪರಿಶ್ರಮಪಟ್ಟಿದ್ದ ಕೆಲವು ವಿದ್ಯಾರ್ಥಿಗಳು, ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯ ಪ್ರಕರಣದಿಂದ ಹತಾಶರಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವಿದ್ಯಾರ್ಥಿಗಳ ಆತ್ಮಹತ್ಯೆಗೆ ಕಾರಣರಾದ ಪ್ರಕರಣದ ರೂವಾರಿಗಳನ್ನು ಕೊಲೆಗಾರರೆಂದು ಪರಿಗಣಿಸಿ ಶಿಕ್ಷೆ ನೀಡಬೇಕು. ಪ್ರಧಾನಿ ಮೋದಿಯವರು ತಮ್ಮ ವಿದೇಶಿ ಪ್ರವಾಸವನ್ನು ಮೊಟಕುಗೊಳಿಸಿ, ನೀಟ್ ಬರೆದ ಯುವ ಜನರ ಬೇಷರತ್ ಕ್ಷಮೆ ಯಾಚಿಸಬೇಕು ಎಂದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಕನಾಟಕ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕಾರ್ಯದರ್ಶಿ ಅಭಿಷೇಕ್ ದತ್ತಾ, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ ಬಾನು, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ಗೌಡ, ಸಚಿವರು, ಶಾಸಕರು ಇದ್ದರು.

ರಾಜ್ಯಗಳಿಗೆ ಪರೀಕ್ಷೆ ಜವಾಬ್ದಾರಿ ವಹಿಸಿ: ವೈದ್ಯಕೀಯ ಕಾಲೇಜುಗಳಿಗೆ ಪರೀಕ್ಷೆ ನಡೆಸುವ ಸಿಇಟಿ ವ್ಯವಸ್ಥೆಯನ್ನು ರಾಜ್ಯಗಳಿಗೇ ಅವಕಾಶ ನೀಡಬೇಕು. ಇನ್ನು ಮುಂದೆ ಕೇಂದ್ರ ಸರ್ಕಾರ ನೀಟ್ ಪರೀಕ್ಷೆಗಳನ್ನು ನಡೆಸದೇ, ಈ ಜವಾಬ್ದಾರಿಯನ್ನು ಆಯಾ ರಾಜ್ಯಗಳಿಗೆ ಪರೀಕ್ಷೆ ನಡೆಸುವ ಅಧಿಕಾರವನ್ನು ಕೊಡಬೇಕೆಂದು ಒತ್ತಾಯಿಸುವುದಾಗಿ ಸಿದ್ದರಾಮಯ್ಯ ತಿಳಿಸಿದರು.

ಶೇ.69 ಯುವಜನತೆ ನಿರುದ್ಯೋಗಿಗಳು: ದೇಶದ ಜನರಿಗೆ ಚಿನ್ನ ಖರೀದಿಸಬೇಡಿ, ಪೆಟ್ರೋಲ್, ಡೀಸೆಲ್ ಮಿತವ್ಯಯ ಮಾಡಿ, ವಿದೇಶ ಪ್ರವಾಸ ಮಾಡಬೇಡಿ ಎಂದು ಕರೆನೀಡಿ, ತಾವು ಮಾತ್ರ ಐದು ದೇಶಗಳ ವಿದೇಶಿ ಪ್ರವಾಸದಲ್ಲಿದ್ದಾರೆ. ದೇಶದಲ್ಲಿ 20ರಿಂದ 29 ವಯೋಮಾನದ ಯುವಕ ಯುವತಿಯರಲ್ಲಿ ಶೇ.67ರಷ್ಟು ಯುವಜನತೆ ನಿರುದ್ಯೋಗಿಗಳಾಗಿದ್ದಾರೆ. ಪ್ರತಿ ವರ್ಷ 2 ಕೋಟಿ ಉದ್ಯೋಗ ಒದಗಿಸುವ ಮೂಲಕ ಕಳೆದ 12 ವರ್ಷಗಳ ಪ್ರಧಾನಿ ಮೋದಿಯವರ ಆಡಳಿತದಲ್ಲಿ 24 ಕೋಟಿ ಉದ್ಯೋಗಗಳು ಸೃಷ್ಟಿಯಾಗಬೇಕಿತ್ತು. ಆದರೆ, ಈವರೆಗೆ 2 ಕೋಟಿಯಷ್ಟೂ ಉದ್ಯೋಗಗಳನ್ನು ಕೊಡಲಾಗಲಿಲ್ಲ ಎಂದು ಸಿದ್ದರಾಮಯ್ಯ ಆರೋಪಿಸಿದರು.

ಪಿಒಕೆಯಲ್ಲಿ ಪುಲ್ವಾಮಾ ದಾಳಿಯ ರೂವಾರಿ ಹತ

ಪುಟ 1ರಿಂದ ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ ಅನ್ವಯ, ನಿಷೇಧಿತ ಉಗ್ರ ಸಂಘಟನೆ ಅಲ್-ಬದರ್‌ನ ಸಹಚರ ಸದಸ್ಯನಾಗಿದ್ದಾನೆ ಎಂದು ಉಲ್ಲೇಖಿಸಲಾಗಿತ್ತು.

ಅಲ್-ಬದರ್ ಕಮಾಂಡರ್: ಉನ್ನತ ಶಿಕ್ಷಣ ಪಡೆಯುವ ನೆಪದಲ್ಲಿ 2017ರಲ್ಲಿ ಪಾಕಿಸ್ತಾನಕ್ಕೆ ತೆರಳಿದ್ದ, ಅಲ್ಲಿ ನಿಷೇಧಿತ ಭಯೋತ್ಪಾದಕ ಸಂಘಟನೆ ಅಲ್-ಬದರ್ ಸೇರಿಕೊಂಡು ಶೀಘ್ರ, ಆ ಸಂಘಟನೆಯಲ್ಲಿ ಕಮಾಂಡರ್ ಹುದ್ದೆಗೆ ಬಡ್ತಿ ಪಡೆದಿದ್ದ. ಆ ಬಳಿಕ ಕಾಶ್ಮೀರಕ್ಕೆ ಮರಳಿದ ಬುರ್ಹಾನ್, ಸ್ಥಳೀಯ ಯುವಕರಲ್ಲಿ ಇಸ್ಲಾಂ ಮೂಲಭೂತವಾದಿ ಪ್ರಚೋದಿಸುವ ಕೆಲಸದಲ್ಲಿ ತೊಡಗಿಸಿಕೊಂಡಿದ್ದ. ಪಿಒಕೆ ಅಷ್ಟೇ ಅಲ್ಲದೆ, ಪುಲ್ವಾಮಾದಿಂದ ಶೋಪಿಯಾನ್ ವರೆಗೂ ತನ್ನ ಉಗ್ರ ಸಂಪರ್ಕಜಾಲ ವಿಸ್ತರಿಸಿಕೊಂಡಿದ್ದ. ಕಣಿವೆಯಲ್ಲಿ ಈತನ ಸಂಪರ್ಕಕ್ಕೆ ಬಂದ ಯುವಕರೆಲ್ಲಾ ಉಗ್ರ ಸಂಘಟನೆಗಳನ್ನು ಸೇರಿಕೊಂಡಿದ್ದಾರೆ.

ಹೆಚ್ಚಾಗಿವೆ ಭಾರತ ವಿರೋಧಿಗಳ ಹತ್ಯೆ

ಪುಟ 1ರಿಂದ ಅಪರಿಚಿತ ಬಂದೂಕುಧಾರಿಗಳು ಹತ್ಯೆ ನಡೆಸಿದ್ದಾರೆ ಎಂಬುದು ಬಿಟ್ಟರೆ ಇಂತಹ ಹತ್ಯೆಗಳ ಕುರಿತು ಯಾವುದೇ ಮಾಹಿತಿಗಳು ಲಭ್ಯವಿಲ್ಲ. ಕಳೆದ ತಿಂಗಳು, ಸಿಂದೂರ ಪ್ರತಿದಾಳಿಗೆ ವರ್ಷ ತುಂಬಿದ ಸಂದರ್ಭ ಲಾಹೋರ್‌ನಲ್ಲಿ ಎಲ್‌ಇಟಿ ಸ್ಥಾಪಕ ಸದಸ್ಯ ಆಮಿರ್ ಹಮ್ಜಾ ಮೇಲೆ ಅಪರಿಚಿತ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದರು. ಮಾರ್ಚ್‌ನಲ್ಲಿ ಜೆಇಎಂ ಮುಖ್ಯಸ್ಥ ಮಸೂದ್ ಅಜರ್‌ನ ಹಿರಿಯ ಸಹೋದರ ಮುಹಮ್ಮದ್ ತಾಹಿರ್ ಅನ್ವರ್ ಪಾಕ್‌ನಲ್ಲಿ ರಹಸ್ಯ ರೀತಿಯಲ್ಲಿ ಸಾವಿಗೀಡಾಗಿದ್ದ. ಒಂದು ವರ್ಷ ಹಿಂದೆ, ಎಲ್‌ಇಟಿ ಉಗ್ರ ಅಬು ಖತಲ್ ಪಾಕಿಸ್ತಾನದ ಝೀಲಂ ಸಿಂಧ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡೇಟಿಗೆ ಬಲಿಯಾಗಿದ್ದ. 26/11 ಮುಂಬೈ ದಾಳಿಯ ರೂವಾರಿ ಹಫೀಜ್ ಸಯೀದ್‌ನ ಆಪ್ತನಾಗಿದ್ದ. ಜಮ್ಮು ಕಾಶ್ಮೀರದ ಶಿವ ಖೋರಿ ಗುಹೆಗೆ ತೆರಳಿದ್ದ 9 ಹಿಂದು ಯಾತ್ರಾರ್ಥಿಗಳ ಸಾವಿಗೆ ಕಾರಣವಾಗಿದ್ದ 2024ರ ರಿಯಾಸಿ ದಾಳಿಯಲ್ಲಿ ಈತನ ಪಾತ್ರವಿತ್ತು. 2023ರಲ್ಲೂ ಇದೇ ರೀತಿ 7 ಉಗ್ರರ ಹತ್ಯೆ ನಡೆದಿತ್ತು. 2024ರಲ್ಲಿ ಬಾಂಗ್ಲಾದೇಶದ ಭಾರತ ವಿರೋಧಿ ಯುವ ನಾಯಕ ಶರೀಫ್ ಒಸ್ಮಾನ್ ಹಾದಿ(32) ಢಾಕಾದಲ್ಲಿ ಅಪರಿಚಿತ ಬಂದೂಕುಧಾರಿಗಳ ಗುಂಡಿನ ದಾಳಿಗೆ ಬಲಿಯಾಗಿದ್ದ.

ಮುಂದುವರಿದ ಭಾರತ ವಿರೋಧಿ ಉಗ್ರರ ಕೊಲೆ

ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಅನಾಮಧೇಯ ದಾಳಿಕೋರರು ಎಂಬ ಹಣೆಪಟ್ಟಿಯಲ್ಲಿ ಭಾರತ ವಿರೋಧಿ ಉಗ್ರ ಸಂಘಟನೆಗಳ ಪ್ರಮುಖರನ್ನು ಹತ್ಯೆ ಮಾಡುತ್ತಿರುವ ಪರಂಪರೆ 2022ರಿಂದಲೂ ಮುಂದುವರಿದಿದೆ. ಇಂದು (ಮೇ 21, 2026) ಪುಲ್ವಾಮಾ ದಾಳಿ ಪ್ರಮುಖ ಸಂಚುಕೋರ ಹಮ್ಜಾ ಬುರ್ಹಾನ್ ಮುಜಾಫರಾಬಾದ್‌ನಲ್ಲಿ ಹತ್ಯೆಗೀಡಾದ ಸುದ್ದಿ ಬಂದಿದ್ದು, ಇತ್ತೀಚಿನ ಪ್ರಮುಖ ಪ್ರಕರಣಗಳ ಪಟ್ಟಿ ಇಲ್ಲಿದೆ.

- **ಮೇ 21, 2026- ಹಮ್ಜಾ ಬುರ್ಹಾನ್ (ಅರ್ಜುಮಂಡ್ ಗುಲ್ಜಾರ್ ದಾರ್, ಅಲಿಯಾಸ್ ಡಾಕ್ಟರ್):** ಮುಜಾಫರಾಬಾದ್, ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಗುಂಡಿಕ್ಕಿ ಹತ್ಯೆ. 2019ರ ಪುಲ್ವಾಮಾ ದಾಳಿಯ ಪ್ರಮುಖ ಸಂಚುಕೋರ.
- **ಏಪ್ರಿಲ್ 29, 2026- ಮೌಲಾನಾ ಸಲ್ಮಾನ್ ಅಜರ್:** ಜೈಶ್-ಎ-ಮೊಹಮ್ಮದ್‌ನ ಉನ್ನತ ಕಮಾಂಡರ್; ಬಹಾವಲ್ಪುರದಲ್ಲಿ ಅನಾಮಧೇಯ ಚಾಲಕನೊಬ್ಬನ ವಾಹನದ ಡಿಕ್ಕಿಯಿಂದ ಹತ್ಯೆ.
- **ಏಪ್ರಿಲ್ 27, 2026- ಶೇಖ್ ಯೂಸುಫ್ ಆಫ್ರಿದಿ:** ಲಷ್ಕರ್-ಎ-ತೈಬಾ (ಎಲ್‌ಇಟಿ) ಕಮಾಂಡರ್; ಖೈಬರ್ ಪಖ್ತೂನ್‌ಖ್ವಾದಲ್ಲಿ ಗುಂಡಿಕ್ಕಿ ಹತ್ಯೆ.
- **ಏಪ್ರಿಲ್ 16, 2026- ಅಮೀರ್ ಹಮ್ಜಾ:** ಲಷ್ಕರ್-ಎ-ತೈಬಾದ ಸಹ-ಸಂಸ್ಥಾಪಕ; ಲಾಹೋರ್‌ನ ಸುದ್ದಿ ವಾಹಿನಿಯ ಕಚೇರಿ ಬಳಿ ಗುಂಡಿನ ದಾಳಿ, ಗಂಭೀರ ಗಾಯ. ಬದುಕುಳಿದಿರುವ ವರದಿ.
- **ಮಾರ್ಚ್ 31, 2026- ಮೊಹಮ್ಮದ್ ತಾಹಿರ್ ಅನ್ವರ್:** ಜೈಶ್ ಮುಖ್ಯಸ್ಥ ಮಸೂದ್ ಅಜರ್‌ನ ಸಹೋದರ; ಸಂಶಯಾಸ್ಪದ ಪರಿಸ್ಥಿತಿಯಲ್ಲಿ ಪಾಕ್‌ನಲ್ಲಿ ಮೃತ.
- **ಮಾರ್ಚ್ 21, 2026- ಬಿಲಾಲ್ ಆರಿಫ್ ಸಲಫಿ:** ಲಷ್ಕರ್‌ನ ಹಿರಿಯ ಕಮಾಂಡರ್, ನೇಮಕಾತಿ ಮತ್ತು ಸೈದ್ಧಾಂತಿಕ ತರಬೇತಿ ವಿಭಾಗದ ಮುಖ್ಯಸ್ಥ; ಮುರಿದ್ಕೆಯ ಮರ್ಕಜ್ ತೈಬಾದಲ್ಲಿ ಈದ್-ಉಲ್-ಫಿತರ್ ನಮಾಜ್ ನಂತರ ಚಾಕು ಇರಿತ ಮತ್ತು ಗುಂಡಿನ ದಾಳಿಯಿಂದ ಹತ್ಯೆ.
- **ಫೆಬ್ರವರಿ 16, 2026- ಮೊಹಮ್ಮದ್ ಕಾಸಿಮ್ ಗುಜ್ಜರ್:** ಎಲ್‌ಇಟಿ ಉಗ್ರ; ಪೆಶಾವರದಲ್ಲಿ ಗುಂಡಿಕ್ಕಿ ಹತ್ಯೆ.
- **ಜನವರಿ 28, 2026- ಲೆಫ್ಟಿನೆಂಟ್ ಕರ್ನಲ್ ಇಮ್ರಾನ್ ದಯಾಲ್:** ಪಾಕ್ ಸೇನೆಯ ಅಧಿಕಾರಿ ಮತ್ತು ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹ್ಯಾಂಡ್ಲರ್; ಡೇರಾ ಇಸ್ಮಾಯಿಲ್ ಖಾನ್‌ನಲ್ಲಿ ಅನಾಮಧೇಯ ದಾಳಿಕೋರರಿಂದ ಹತ್ಯೆ.
- **ಜನವರಿ 18, 2026- ಅಬ್ದುಲ್ ಗಫಾರ್:** ಲಷ್ಕರ್-ಎ-ತೈಬಾ ಕಮಾಂಡರ್; ನಿಗೂಢ ಪರಿಸ್ಥಿತಿಯಲ್ಲಿ ಹತ್ಯೆ.
- **ಜನವರಿ 1, 2026- ಅಸದುಲ್ಲಾ ವಲೀದ್:** ಪಿಎಎಫ್‌ಎಫ್/ಎಲ್‌ಇಟಿ ಪ್ರಚಾರ ವಿಡಿಯೋಗಳ ಸಂಪಾದಕ; ಪಂಜಾಬ್‌ನ ಕೋಟ್ ರಾಧಾ ಕಿಶನ್‌ನಲ್ಲಿ ರಸ್ತೆ ಅಪಘಾತದಲ್ಲಿ ಮೃತ.

ಪುಲ್ವಾಮದಲ್ಲಿ ಏನಾಗಿತ್ತು?

2019ರ ಫೆ.14ರಂದು ಜಮ್ಮು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ಲೆಥ್‌ಪೊರಾ ಪ್ರದೇಶದಲ್ಲಿ ಸಿಆರ್‌ಪಿಎಫ್ ಬೆಂಗಾವಲು ಪಡೆಯ ಸೇನಾ ವಾಹನಗಳಿಗೆ ಜೈಶ್-ಎ-ಮೊಹಮ್ಮದ್ ಉಗ್ರ ಆದಿಲ್ ಅಹ್ಮದ್ ದಾರ್ ಸ್ಫೋಟಕಗಳನ್ನು ತುಂಬಿದ್ದ ವಾಹನವನ್ನು ಡಿಕ್ಕಿ ಹೊಡೆಸಿದ್ದ. ಈ ಸ್ಫೋಟದಲ್ಲಿ ಸಿಆರ್‌ಪಿಎಫ್‌ನ 40 ಸಿಬ್ಬಂದಿ ಹುತಾತ್ಮರಾಗಿದ್ದರು. ಪುಲ್ವಾಮಾ ದಾಳಿ ಭಾರತದ ಸಶಸ್ತ್ರಪಡೆಗಳ ಮೇಲೆ ಜೆಇಎಂ ನಡೆಸಿದ ಅತ್ಯಂತ ಭೀಕರ ದಾಳಿಗಳಲ್ಲೊಂದು.

ಎಂ.ಟೆಕ್ ಪ್ರವೇಶ ಪರೀಕ್ಷೆಗೆ ಸಿದ್ಧತೆ

ಬೆಂಗಳೂರು: ಇಂಜಿನಿಯರಿಂಗ್ ಕೋರ್ಸ್‌ನ ಮೂರನೇ ಸೆಮಿಸ್ಟರ್ ಅಥವಾ ಎರಡನೇ ವರ್ಷಕ್ಕೆ ಪ್ರವೇಶ ಕಲ್ಪಿಸುವ ಡಿಸಿಇಟಿ ಹಾಗೂ ಎಂ.ಟೆಕ್/ಎಂಇ ಪ್ರವೇಶ ಪರೀಕ್ಷೆಗಳು ಮೇ 23ರಂದು ನಡೆಯಲಿದ್ದು ಸಕಲ ತಯಾರಿ ಮಾಡಿಕೊಳ್ಳಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಈ ಎರಡೂ ಪರೀಕ್ಷೆಗಳು ಅಂದು ಬೆಂಗಳೂರು, ಬಳ್ಳಾರಿ, ಬಾಗಲಕೋಟೆ, ದಾವಣಗೆರೆ, ಧಾರವಾಡ, ಕಲಬುರಗಿ, ಮೈಸೂರು ಮತ್ತು ತುಮಕೂರು ಕೇಂದ್ರಗಳಲ್ಲಿ ನಡೆಯ ಲಿವೆ ಎಂದು ವಿವರಿಸಿದ್ದಾರೆ. ಡಿಸಿಇಟಿ ಪರೀಕ್ಷೆಯನ್ನು 51 ಕೇಂದ್ರಗಳಲ್ಲಿ ಒಟ್ಟು 21,095 ಹಾಗೂ ಎಂ.ಟೆಕ್ ಪರೀಕ್ಷೆ ಯನ್ನು 26 ಕೇಂದ್ರಗಳಲ್ಲಿ ಒಟ್ಟು 12,116 ಅಭ್ಯರ್ಥಿಗಳು ಬರೆಯುತ್ತಿದ್ದಾರೆ. ಈ ಎರಡೂ ಕೋರ್ಸ್‌ಗಳಿಂದ ಒಟ್ಟು 34,211 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದು ಬಿಗಿ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.. ಅಲ್ಲದೇ ಹೊರನಾಡು, ಗಡಿನಾಡು ಅಭ್ಯರ್ಥಿಗಳಿಗೆ ಕಡ್ಡಾಯ ಕನ್ನಡ ಪರೀಕ್ಷೆ ಕೂಡ ಬೆಂಗಳೂರಿನಲ್ಲಿ ಅದೇ ದಿನ ನಡೆಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

52 ಅಪರಾಧ ಕೇಸ್ ಹಿಂಪಡೆಗೆ ನಿರ್ಧಾರ

ಪುಟ 1ರಿಂದ ಮೇಕೆದಾಟು ಯೋಜನೆಗೆ ತಮಿಳರ ವಿರೋಧವನ್ನು ಖಂಡಿಸಿ ಹಾಗೂ ಕಾವೇರಿ ನದಿ ನೀರು ತಮಿಳುನಾಡಿಗೆ ಹರಿಸದಂತೆ ಆಗ್ರಹಿಸಿ ನಡೆಸಿದ ಹೋರಾಟಗಳ ಹಲವು ಪ್ರಕರಣಗಳನ್ನು ಕೈಬಿಡುವುದಕ್ಕೆ ಸಂಪುಟ ತೀರ್ಮಾನಿಸಿದೆ. ಬೆಳಗಾವಿ ಅಧಿವೇಶನದ ವೇಳೆ ನಡೆದ ರೈತ ಹೋರಾಟಗಳ ಸಹಿತ ಉತ್ತರ ಕರ್ನಾಟಕ ಜಿಲ್ಲೆಯ ಕೆಲವು ಹೋರಾಟಗಳಲ್ಲಿ ಭಾಗವಹಿಸಿ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ವಾಪಸ್ ಪಡೆಯುವುದಕ್ಕೆ ಸಂಪುಟ ಸಮ್ಮತಿಸಿದೆ.

ಎಸ್‌ಐಆರ್: 4 ದಿನದಲ್ಲಿ ತೀರ್ಮಾನ

ಪುಟ 1ರಿಂದ ರಾಜ್ಯದಲ್ಲಿ ಪ್ರಾರಂಭವಾಗಲಿರುವ ಎಸ್‌ಐಆರ್ ಕುರಿತಂತೆ ಗಂಭೀರವಾಗಿ ಚರ್ಚಿಸಲಾಗಿದೆ. ರಾಷ್ಟ್ರದಲ್ಲಿ ಹಲವಾರು ರಾಜ್ಯಗಳಲ್ಲಿ ಅವಘಡಗಳು ಜರುಗಿವೆ. ಪಶ್ಚಿಮ ಬಂಗಾಳದಲ್ಲಿ 27 ಲಕ್ಷ ಮತದಾರರ ಮತದಾನದ ಹಕ್ಕು ಹೋಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಆಗಿರುವ ಹಲವು ಅತ್ಯಂತ ಗಂಭೀರ ಆಕ್ಷೇಪಗಳು, ತಮಿಳುನಾಡಿನಲ್ಲಿನ ಹಲವು ಆಕ್ಷೇಪಗಳು ಇವೆಲ್ಲವುಗಳ ಹಿನ್ನೆಲೆಯಲ್ಲಿ ಈ ಕುರಿತು ವಿಸ್ತೃತ ಚರ್ಚೆ ನಡೆಸಲಾಗಿದೆ. ನಾಗರಿಕನಿಗೆ ಮತದಾನದ ಹಕ್ಕನ್ನು ಉಳಿಸಿಕೊಡಲು ಎಲ್ಲ ರೀತಿಯ ಪ್ರಯತ್ನ ಮಾಡಬೇಕೆಂದು ಚಿಂತನೆ ಮಾಡಲಾಗಿದೆ. ಇದಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಬಹುದೇ ಎಂಬುದನ್ನು ಚರ್ಚೆ ನಡೆಸಲಾಗಿದೆ. 10-12 ವಿಷಯಗಳ ಕುರಿತು ಚರ್ಚಿಸಿದ್ದೇವೆ. ಚರ್ಚೆ ಅಪೂರ್ಣವಾಗಿದೆ. ಇನ್ನೆರಡು ದಿನ ಈ ಕುರಿತು ಚರ್ಚೆ ಮಾಡುತ್ತೇವೆ. ಅಂತಿಮ ನಿರ್ಣಯವನ್ನು ಮೂರ್ನಾಲ್ಕು ದಿನಗಳಲ್ಲಿ ತೆಗೆದುಕೊಳ್ಳುತ್ತೇವೆ ಎಂದು ತಿಳಿಸಿದರು.

ಶಿಕ್ಷಣ ಕಿಟ್ ಖರೀದಿಗೆ ಅಸ್ತು

ಬೆಂಗಳೂರು: ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಶಾಲಾಪೂರ್ವ ಶಿಕ್ಷಣ ಕಿಟ್‌ಗಳನ್ನು ಪ್ರತಿ ಕೇಂದ್ರಕ್ಕೆ 3000 ರೂ. ಘಟಕ ವೆಚ್ಚದಲ್ಲಿ 69,922 ಅಂಗನವಾಡಿಗಳಿಗೆ ಒಟ್ಟು 20.98 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಖರೀದಿಸಲು ಸಚಿವ ಸಂಪುಟ ಸಭೆ ಸಮ್ಮತಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಗುರುವಾರ ವಿಧಾನಸೌಧದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಕುರಿತು ಕಾನೂನು ಸಚಿವ ಎಚ್.ಕೆ. ಪಾಟೀಲ್ ಮಾಧ್ಯಮಗಳಿಗೆ ಮಾಹಿತಿ ನೀಡಿದರು. ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ನೆರವಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿವರ್ತನೆ (ಕೆಎಸ್‌ಎಚ್‌ಇಟಿ) ಯೋಜನೆಯಡಿ ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆಯ ಸಾಲದ ಮಾತುಕತೆ ಸಿದ್ಧತೆಯ ಮಾನದಂಡಗಳ ಪ್ರಕಾರ 53 ಸರ್ಕಾರಿ ಪದವಿ ಕಾಲೇಜುಗಳು, 14 ಸರ್ಕಾರಿ ಪಾಲಿಟೆಕ್ನಿಕ್‌ಗಳು, 5 ಉತ್ಕೃಷ್ಟತಾ ಕೇಂದ್ರಗಳು ಹಾಗೂ ಯೋಜನಾ ನಿರ್ವಹಣಾ (ಪಿಎಂಯು) ಘಟಕಕ್ಕೆ ಒಟ್ಟು 802 ಕೋಟಿ ರೂ.ಗಳ ಮೊತ್ತದ ವಸ್ತುಗಳ ಮುಂಗಡ ಖರೀದಿಗೆ ಸಂಪುಟ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ 10ನೇ ತರಗತಿಯ ಬೋರ್ಡ್ ಪರೀಕ್ಷೆಯಲ್ಲಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿ ಜಿಲ್ಲೆಗೆ 15 ವಿದ್ಯಾರ್ಥಿಗಳಂತೆ 500 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 15 ಕೋಟಿ ರೂ.ಗಳ ವೆಚ್ಚದಲ್ಲಿ 2 ವರ್ಷಗಳ ವಸತಿ ಸಹಿತ ಪಿಯುಸಿ (ಪ್ರಥಮ ಪಿಯುಸಿ ಮತ್ತು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ) ಶಿಕ್ಷಣದೊಂದಿಗೆ ನೀಟ್/ ಜೆಇಇ / ಸಿಇಟಿ ಪರೀಕ್ಷಾ ಪೂರ್ವ ತರಬೇತಿ ನೀಡಲು ಒಪ್ಪಿಗೆ ಕೊಟ್ಟಿದೆ ಎಂದರು.

ಕಾರವಾರಕ್ಕೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ!: ರಾಜ್ಯದ 32 ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ಗಳಲ್ಲಿ ಹೊಸ ಯಂತ್ರೋಪಕರಣಗಳು ಮತ್ತು ಸಲಕರಣೆಗಳನ್ನು 90 ಕೋಟಿ ರೂ.ಗಳ ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 200 ಹಾಸಿಗೆಗಳ ಸಾಮರ್ಥ್ಯದ ಹೊಸ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡವನ್ನು 100 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ಕೊಟ್ಟಿದೆ ಎಂದು ವಿವರಿಸಿದರು.

ಪ್ರಮುಖ ನಿರ್ಣಯಗಳು

- ವೈದ್ಯಕೀಯ ಶಿಕ್ಷಣ ಇಲಾಖೆಯಡಿಯಲ್ಲಿನ ವೈದ್ಯಕೀಯ ಬೋಧನಾ ಕಾಲೇಜು ಆಸ್ಪತ್ರೆಗಳಲ್ಲಿನ ಅಂದಾಜು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಕ್ಲೈಮ್ ಪ್ರಕ್ರಿಯೆಯನ್ನು 17.85 ಕೋಟಿ ರೂ.ಗಳ ಮೊತ್ತದಲ್ಲಿ ಸುವ್ಯವಸ್ಥಿತಗೊಳಿಸಲು (ಡಿಜಿಟಲೀಕರಣ) ಒಪ್ಪಿಗೆ
- ಕರ್ನಾಟಕ ಮಹಾನಗರ ಪಾಲಿಕೆಗಳು (ಮಹಾನಗರ ಪಾಲಿಕೆಗಳಲ್ಲಿ ಯುಜಿಡಿ ಸಹಾಯಕರ ನೇಮಕಾತಿ) (ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮಹಾನಗರ ಪಾಲಿಕೆಗಳನ್ನು ಹೊರತುಪಡಿಸಿ) (ವಿಶೇಷ) ನಿಯಮಗಳು, 2026ಕ್ಕೆ ಅನುಮೋದನೆ
- ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕು ಪ್ರಜಾಸೌಧ ಕಟ್ಟಡ ನಿರ್ಮಾಣ ಕಾಮಗಾರಿಗಳ 10.61 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ

ನೀಟ್ ಫಲಿತಾಂಶಕ್ಕೂ ಮುನ್ನ ಸಿಇಟಿ ಕೌನ್ಸೆಲಿಂಗ್: ಸುಧಾಕರ್

ಬೆಂಗಳೂರು: ನೀಟ್ ಪರೀಕ್ಷೆ ಫಲಿತಾಂಶಕ್ಕೆ ನಾವು ಕಾಯದೇ ಸಿಇಟಿ ಫಲಿತಾಂಶ ಬಂದ ಬಳಿಕ ನಾವು ಇಂಜಿನಿಯರಿಂಗ್ ಸೇರಿದಂತೆ, ಉಳಿದ ಕೋರ್ಸ್‌ಗಳಿಗೆ ಕೌನ್ಸೆಲಿಂಗ್ ಮಾಡುತ್ತೇವೆ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ತಿಳಿಸಿದರು.



ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿರುದ್ಧ ಕೇಂದ್ರ ಸರ್ಕಾರದ ವಿರುದ್ಧ ಯುವ ಕಾಂಗ್ರೆಸ್ ವತಿಯಿಂದ ಗುರುವಾರ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಸರ್ಕಾರ ಚೆಲ್ಲಾಟ ಆಡಿದೆ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಮೋದಿ ಕ್ಷಮಾಪಣೆ ಕೇಳಬೇಕು ಎಂದು ಆಗ್ರಹಿಸಿದರು.

ಪ್ರತಿಬಾರಿ ಇಂಜಿನಿಯರಿಂಗ್, ಮೆಡಿಕಲ್ ಸೀಟಿಗೆ ಒಟ್ಟಾಗಿ ಕೌನ್ಸೆಲಿಂಗ್ ಮಾಡುತ್ತಿದ್ದೆವು. ಈಗ ನೀಟ್ ಪರೀಕ್ಷೆ ಫಲಿತಾಂಶಕ್ಕೆ ನಾವು ಕಾಯೋದಿಲ್ಲ. ಸಿಇಟಿ ಫಲಿತಾಂಶ ಆಧರಿಸಿ ಇಂಜಿನಿಯರಿಂಗ್ ಸೀಟುಗಳಿಗೆ ಮೊದಲೇ ಕೌನ್ಸೆಲಿಂಗ್ ಮಾಡುತ್ತೇವೆ. ರಾಜ್ಯ ಸರ್ಕಾರಗಳಿಗೆ ಮೆಡಿಕಲ್ ಸೀಟುಗಳಿಗೆ ಪರೀಕ್ಷೆ ಮಾಡಲು ಅವಕಾಶ ನೀಡಬೇಕು ಅಂತಾ ಸಚಿವ ಎಂ.ಸಿ. ಸುಧಾಕರ್ ಆಗ್ರಹಿಸಿದ್ರು. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಮಾತನಾಡಿ, ಮೋದಿ ಸರ್ಕಾರದಲ್ಲಿ ಶಿಕ್ಷಣ ಮಾಫಿಯಾ ನಡೆಯುತ್ತಿದೆ. ಹಿಂದಿನ ಬಿಜೆಪಿ ಸರ್ಕಾರ ಪೇಪರ್ ಲೀಕ್‌ಗೆ ಹೆಸರುವಾಸಿಯಾಗಿತ್ತು. ನೂರಾರು ಪರೀಕ್ಷೆ ಪೇಪರ್‌ಗಳು ಬಿಜೆಪಿ ನಾಯಕರ ಮೂಗಿನ ಅಡಿಯಲ್ಲೇ ಲೀಕ್ ಆಗಿವೆ ಅಂದು ಆರೋಪಿಸಿದರು.

> 22 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಕೇಂದ್ರ ಸರ್ಕಾರ ಚೆಲ್ಲಾಟ ಆಡಿದೆ. ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು. ಮೋದಿ ಕ್ಷಮಾಪಣೆ ಕೇಳಬೇಕು.
> ■ ಡಾ. ಎಂ.ಸಿ.ಸುಧಾಕರ್, ಉನ್ನತ ಶಿಕ್ಷಣ ಸಚಿವ



ಭಯೋತ್ಪಾದನಾ ವಿರೋಧಿ ದಿನಾಚರಣೆ ಅಂಗವಾಗಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಭಯೋತ್ಪಾದನಾ ವಿರೋಧಿ ದಿನದ ಪ್ರತಿಜ್ಞಾವಚನ ಬೋಧಿಸಿದರು. ಸಚಿವ ಡಾ.ಜಿ.ಪರಮೇಶ್ವರ, ಸಿಎಂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ, ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಸೇರಿ ಇನ್ನಿತರರಿದ್ದರು.

ಎಚ್‌ಡಿಕೆ ಹೇಳಿಕೆ ಸತ್ಯಕ್ಕೆ ದೂರು

ಬೆಂಗಳೂರು: ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳ ಕುರಿತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ನೀಡಿರುವ ಹೇಳಿಕೆಗಳು ವಾಸ್ತವಾಂಶಗಳಿಗೆ ದೂರವಾಗಿದ್ದು, ಜನರಲ್ಲಿ ಅನಗತ್ಯ ಗೊಂದಲ ಸೃಷ್ಟಿಸುವ ಪ್ರಯತ್ನವಾಗಿದೆ ಎಂದು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ (ಎನ್‌ಸಿಆರ್‌ಬಿ) ಅಂಕಿ ಅಂಶಗಳು ಪೊಲೀಸ್ ಠಾಣೆಗಳಲ್ಲಿ ದಾಖಲಾಗುವ ಎಫ್‌ಐಆರ್ ಹಾಗೂ ಪ್ರಕರಣಗಳ ಆಧಾರದ ಮೇಲೆ ಸಂಗ್ರಹವಾಗುತ್ತವೆ. ಹಲವು ವರ್ಷಗಳಿಂದ ಇದೇ ಮಾನದಂಡದ ಆಧಾರದ ಮೇಲೆ ಎನ್‌ಸಿಆರ್‌ಬಿ ವರದಿಗಳು ಪ್ರಕಟವಾಗುತ್ತಿವೆ. ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿರುವ ಕೇಂದ್ರ ಸಚಿವರಿಗೆ ಈ ವಾಸ್ತವಾಂಶಗಳ ಅರಿವು ಇರ ಬೇಕಾಗಿತ್ತು. ಆದರೂ ರಾಜಕೀಯ ಲಾಭಕ್ಕಾಗಿ ಜನರನ್ನು ತಪ್ಪು ದಾರಿಗೆಳೆಯುವ ರೀತಿಯಲ್ಲಿ ಹೇಳಿಕೆ ನೀಡಿರುವುದು ವಿಷಾದನೀಯ ಎಂದು ಅವರು ಟೀಕಿಸಿದರು. ರೈತರ ಆತ್ಮಹತ್ಯೆಯಂತಹ ಸೂಕ್ಷ್ಮ ಹಾಗೂ ದುಃಖಕರ ವಿಚಾರಗಳಲ್ಲಿ ರಾಜಕೀಯ ಮಾಡುವುದಕ್ಕಿಂತ ಸಂಕಷ್ಟದಲ್ಲಿರುವ ರೈತ ಕುಟುಂಬಗಳ ಜತೆ ನಿಲ್ಲುವುದು ಜನಪ್ರತಿನಿಧಿಗಳ ನೈತಿಕ ಜವಾಬ್ದಾರಿಯಾಗಿದೆ ಎಂದು ಸಚಿವ ಚಲುವರಾಯಸ್ವಾಮಿ ಹೇಳಿದರು.

ರೈತ ಆತ್ಮಹತ್ಯೆ ಪ್ರಕರಣಗಳಲ್ಲಿ ಗಣನೀಯ ಇಳಿಕೆ

ಸರ್ಕಾರದ ಅಂಕಿ ಅಂಶಗಳ ಪ್ರಕಾರ 2023ರಲ್ಲಿ 1,090 ರೈತ ಆತ್ಮಹತ್ಯೆ ಪ್ರಕರಣಗಳು, 2024ರಲ್ಲಿ 1,032 ಪ್ರಕರಣಗಳು ಹಗೂ 2025ರಲ್ಲಿ 644 ಪ್ರಕರಣಗಳು ದಾಖಲಾಗಿವೆ. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು, ಬೆಳೆ ಪರಿಹಾರ, ಬೆಳೆ ವಿಮೆ, ಸಾಲ ಸೌಲಭ್ಯಗಳು ಹಾಗೂ ರೈತ ಕಲ್ಯಾಣ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾದ ಪರಿಣಾಮ ರೈತ ಆತ್ಮಹತ್ಯೆ ಪ್ರಕರಣಗಳಲ್ಲಿ ಗಣನೀಯ ಇಳಿಕೆ ಕಂಡುಬಂದಿದೆ ಎಂದು ಚೆಲುವರಾಯಸ್ವಾಮಿ ತಿಳಿಸಿದ್ದಾರೆ.

ಕಿರುಸುದ್ದಿ

ಸಿಎಂ ಬದಲಾವಣೆ ವಿಚಾರಕ್ಕೆ ಪ್ರತಿಕ್ರಿಯೆ ನೀಡಲ್ಲ: ಸಚಿವ

ಬೆಂಗಳೂರು: ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಒಬ್ಬೊಬ್ಬರು ಒಂದೊಂದು ರೀತಿ ವ್ಯಾಖ್ಯಾನ ಮಾಡುತ್ತಾರೆ. ಒಂದೊಂದು ವಿಶ್ಲೇಷಣೆ ಮಾಡುತ್ತಾರೆ. ಅದಕ್ಕೆಲ್ಲ ನಾನು ಪ್ರತಿಕ್ರಿಯೆ ಮಾಡುವುದಿಲ್ಲ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದ್ದಾರೆ. ಗುರುವಾರ ತಮ್ಮ ನಿವಾಸದಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರನ್ನು ಬದಲಾಯಿಸುವ ಹಾಗೂ ಮುಂದುವರಿಸುವ ಪ್ರಸ್ತಾವನೆ ಬಗ್ಗೆ ನಾವು ಚರ್ಚೆ ಮಾಡಿ ಏನಾಗುತ್ತೆ, ಎಲ್ಲವೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು. ನಮಗೆ ಗೊತ್ತಿರುವ ಹಾಗೆ ಯಾವುದನ್ನೂ ನಿಗದಿ ಮಾಡಿ ಮುಖ್ಯಮಂತ್ರಿಯನ್ನಾಗಿ ಮಾಡಿರುವುದಿಲ್ಲ. ಪಕ್ಷದಲ್ಲಿ ಹೈಕಮಾಂಡ್ ಇದೆ. ಹೈಕಮಾಂಡ್‌ಗೆ ಯಾವ ಸಂದರ್ಭದಲ್ಲಿ ಏನು ಮಾಡಬೇಕು ಅಂತ ಗೊತ್ತಿದೆ. ಮಾಧ್ಯಮದ ಮೂಲಕ ನಾನೇನೋ ಆಗುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು.



ಗೊಂದಲವನ್ನು ಯಾಕೆ ಹೈಕಮಾಂಡ್ ಬಗೆಹರಿಸುತ್ತಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಗೊಂದಲದ ಪ್ರಶ್ನೆಯೇ ಇಲ್ಲ ಅಂದರೆ ಅದಕ್ಕೆ ಸ್ಪಷ್ಟನೆ ಯಾಕೆ ಕೊಡುತ್ತಾರೆ. ಬದಲಾವಣೆಯ ಪ್ರಶ್ನೆಯನ್ನು ಯಾರು ಎತ್ತಿದ್ದಾರೆ, ಯಾರು ಕೇಳುತ್ತಿದ್ದಾರೆ. ಡಿಸಿಎಂ ಸ್ಪಷ್ಟನೆ ಮಾಡಿದ್ದಾರೆ. ಈಗ ಪ್ರಶ್ನೆ ಯಾರಿಂದ ಬಂದಿದೆ ಎಂಬುದೇ ಪ್ರಶ್ನೆ ಎಂದರು. ರಾಜಣ್ಣ ಅವರು ನಮ್ಮ ಜಿಲ್ಲೆಯ ವರು. ಆತ ನನ್ನ ಸ್ನೇಹಿತ. ನಾವೆಲ್ಲ ಜೊತೆಯಲ್ಲೇ ಓದಿದ್ದೇವೆ. ಸ್ವಾಭಾವಿಕವಾಗಿ ಅಭಿಮಾನ ಇದ್ದೇ ಇರುತ್ತದೆ. ತುಮಕೂರಿಗೆ ಒಂದು ಅವಕಾಶ ಇದ್ರೆ ಕೊಡಿ ಅಂತ ಕೇಳಿದ್ದಾರೆ. ಅವರು ಹೇಳಿಕೆಯಲ್ಲಿ ನನಗೇನು ತಪ್ಪು ಕಾಣಿಸಿಲ್ಲ ಎಂದರು.

ರಿಯಲ್ ಎಸ್ಟೇಟ್ ದಂಧೆ ವಿಸ್ತರಣೆ ಯತ್ನ: ಅಶೋಕ

ಬೆಂಗಳೂರು: ರಾಜಧಾನಿಯ ಅಕ್ಕಪಕ್ಕದ ಜಿಲ್ಲೆಗಳಿಗೆ ಬೆಂಗಳೂರು ಹೆಸರು ಅಂಟಿಸಿ ರಿಯಲ್ ಎಸ್ಟೇಟ್ ದಂಧೆ ವಿಸ್ತರಿಸುವುದರಲ್ಲಿ ತೋರಿಸುತ್ತಿರುವ ಆಸಕ್ತಿಯ ಅರ್ಧದಷ್ಟಾದರೂ ಬೆಂಗಳೂರಿನ ಸುರಕ್ಷತೆ, ಕಾನೂನು ಸುವ್ಯವಸ್ಥೆ ಕುರಿತಾಗಿ ಈ ಕಾಂಗ್ರೆಸ್ ಸರ್ಕಾರ ಕ್ಕಿದ್ದಿದ್ದರೆ ಇಂದು ಸಿಲಿಕಾನ್ ಸಿಟಿ ಕ್ರೈಂ ಸಿಟಿ ಆಗುತ್ತಿರಲಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ ಟೀಕಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಅವರು ಈ ಕುರಿತು ಸುದೀರ್ಘ ಪೋಸ್ಟ್ ಮಾಡಿದ್ದಾರೆ.



ಬೆಂಗಳೂರಿನ ಅಕ್ಕಪಕ್ಕದ ಜಿಲ್ಲೆಗಳಿಗೆ ಬೆಂಗಳೂರು ಹೆಸರು ತಳುಕು ಹಾಕಿ, ಜಮೀನಿನ ಬೆಲೆ ಏರಿಸಿ ರಿಯಲ್ ಎಸ್ಟೇಟ್ ಲಾಬಿಯ ಜೇಬು ತುಂಬಿಸುವುದನ್ನೇ ಏಕೈಕ ಅಜೆಂಡಾ ಮಾಡಿ ಕೊಂಡಿರುವ ಕಾಂಗ್ರೆಸ್ ಸರ್ಕಾರ ಬೆಂಗಳೂರಿನ ಅಭಿವೃದ್ಧಿ, ಕಾನೂನು ಸುವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ. ಇದರ ಪರಿಣಾಮವಾಗಿ ನಮ್ಮ ಹೆಮ್ಮೆಯ ಸಿಲಿಕಾನ್ ಸಿಟಿ, ಕ್ರೈಮ್ ಸಿಟಿಯಾಗಿ ಮಾರ್ಪಟ್ಟಿದೆ. ಆವಿಷ್ಕಾರದ ರಾಜಧಾನಿ, ಅಪರಾಧಗಳ ರಾಜಧಾನಿಯಾಗಿ ಮಾರ್ಪಟ್ಟಿದೆ ಎಂದು ಆರೋಪಿಸಿದ್ದಾರೆ. 2024ರಲ್ಲಿ ಬೆಂಗಳೂರಿನಲ್ಲಿ 176 ಕೊಲೆ ಪ್ರಕರಣಗಳು ದಾಖಲಾಗಿವೆ. ಮಹಾ ನಗರಗಳ ಅಪರಾಧ ಪಟ್ಟಿಯಲ್ಲಿ ಬೆಂಗಳೂರು ಟಾಪ್ ನಗರಗಳಲ್ಲಿ ಒಂದಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಸಂಬಂಧಿಸಿ 4,748 ಪ್ರಕರಣಗಳು ದಾಖಲಾಗಿವೆ. ಅದರಲ್ಲೂ 16 ಗ್ಯಾಂಗ್ ರೇಪ್ ಪ್ರಕರಣಗಳು ಸೇರಿವೆ. ಒಂದೇ ವರ್ಷದಲ್ಲಿ 17,561 ಸೈಬರ್ ಅಪರಾಧ ಪ್ರಕರಣಗಳು ದಾಖಲಾಗಿವೆ. ಜನರ ಬೆವರಿನ ಹಣವನ್ನು ಸೈಬರ್ ಕಳ್ಳರು ಲೂಟಿ ಮಾಡುತ್ತಿದ್ದಾರೆ ಎಂದು ಆರೋಪಿದರು.

ಕೇಂದ್ರ ಸರ್ಕಾರದ ಅನುಮತಿ ಬಳಿಕ ಭೂಮಿಪೂಜೆ: ಡಿಸಿಎಂ

ಮೇಕೆದಾಟು ಡಿಪಿಆರ್ ಶೀಘ್ರ

ಚಾಮರಾಜನಗರ: ಮೇಕೆದಾಟು ಯೋಜನೆಗೆ ಡಿಪಿಆರ್ ಸಿದ್ಧಪಡಿಸಲಾಗಿದ್ದು, ಶೀಘ್ರವೇ ಕೇಂದ್ರಕ್ಕೆ ಡಿಪಿಆರ್ ಸಲ್ಲಿಕೆ ಮಾಡಲಿದ್ದು, ಕೇಂದ್ರ ಸರ್ಕಾರ ಅನುಮತಿ ಬಂದ ಬಳಿಕ ಯೋಜನೆಯ ಭೂಮಿ ಪೂಜೆ ಮಾಡಲಾಗುವುದು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾವೇರಿ ವಿಚಾರದಲ್ಲಿ ತಮಿಳುನಾಡಿಗೆ 177 ಟಿಎಂಸಿ ನೀರನ್ನು ಬಿಡಲೇಬೇಕು ಎಂದು ಸ್ಪಷ್ಟ ಆದೇಶ ನೀಡಲಾಗಿದೆ. ಇದನ್ನು ಹೇಗೆ ಬಗೆಹರಿಸಬೇಕು ಎಂದು ಮುಂದಿನ ದಿನಗಳಲ್ಲಿ ಚರ್ಚೆ ಮಾಡುತ್ತೇನೆ. ಮೇಕೆದಾಟು ಯೋಜನೆಗೆ ಆಕ್ಷೇಪ ಸಲ್ಲಿಸಲು ತ.ನಾಡಿಗೆ ಯಾವುದೇ ರೀತಿಯ ಹಕ್ಕಿಲ್ಲ, ಇದರ ಬಗ್ಗೆ ಕೇಂದ್ರ ಜಲ ಆಯೋಗ ತೀರ್ಮಾನ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದೆ ಎಂದರು.

ಅಧಿಕಾರದಲ್ಲಿರುದಕ್ಕಿಂತ ಅಧಿಕಾರದಲ್ಲಿದ್ದಾಗ ನಾವು ಏನು ಮಾಡುತ್ತೇವೆ ಎಂಬುದು ಮುಖ್ಯ. ನಮ್ಮ ಸರ್ಕಾರಕ್ಕೆ ಮೂರು ವರ್ಷ ಪೂರ್ಣಗೊಂಡಿದೆ. ಕೊಟ್ಟ ಮಾತಿನಂತೆ ನಡೆದಿದ್ದೇವೆ. ಜತೆಗೆ ಆರನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ನೀಡಿದ್ದೇವೆ. ಪ್ರತಿಯೊಬ್ಬ ಫಲಾನುಭವಿಗಳ ಆಸ್ತಿ ದಾಖಲೆಗಳಲ್ಲಿ ಅವರ ಫೋಟೋ, ಆಸ್ತಿಯ ಫೋಟೋ ಹಾಕಿ ಮನೆ ಮನೆಗೆ ಖಾತೆ ಒದಗಿಸಿಕೊಡುತ್ತಿದ್ದೇವೆ. ಬೇರೆಯವರು ಮಾಡಲಾಗದ ಕೆಲಸವನ್ನು ನಾವು ಮಾಡಿ ಜನರ ಋಣ ತೀರಿಸುತ್ತಿದ್ದೇವೆ. ಮುಂದಿನ 2 ವರ್ಷಗಳಲ್ಲಿ ಇನ್ನು ಹೆಚ್ಚಿನ ಕೆಲಸ ಮಾಡುತ್ತಿದ್ದೇವೆ. ಕಳೆದ ಎರಡು ವರ್ಷ ಉತ್ತಮ ಮಳೆಯಾಗಿತ್ತು. ಈ ವರ್ಷ ಮಳೆ ಕೊರತೆಯಾಗಿದೆ. ರೈತರನ್ನು ಹೇಗೆ ಕಾಪಾಡಬೇಕು, ಕುಡಿಯುವ ನೀರಿನ ಸಮಸ್ಯೆ ಹೇಗೆ ಬಗೆಹರಿಸಬೇಕು ಎಂದು ಚರ್ಚೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೌಢ್ಯ: ಚಾಮರಾಜನಗರ ಐತಿಹಾಸಿಕವಾದಂತಹ ಜಿಲ್ಲೆ, ಧಾರ್ಮಿಕ, ಪ್ರಾಕೃತಿಕ ಸಂಪತ್ತು ಹೊಂದಿರುವ ಕಾವೇರಿ ನದಿ ತೀರದಲ್ಲಿರುವ ಪುಣ್ಯಭೂಮಿ. ಚಾಮರಾಜನಗರ ಜಿಲ್ಲೆಗೆ ಭೇಟಿ ನೀಡಿದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬುದು ಮೌಢ್ಯ. ಎಲ್ಲಿ ಭಕ್ತಿ ಇದೆಯೋ ಅಲ್ಲಿ ಭಗವಂತ ಇದ್ದಾನೆ. ಮಲೆ ಮಾದೇಶ್ವರ, ಮಧ್ಯರಂಗ, ಸಿದ್ದಪ್ಪಾಜಿ, ಗೋಪಾಲಸ್ವಾಮಿ ಪುಣ್ಯಕ್ಷೇತ್ರಗಳಿಗೆ ಬಂದು ಜನ ನೆಮ್ಮದಿ ಕಂಡುಕೊಳ್ಳುತ್ತಾರೆ. ಬೆಳಗ್ಗೆಯಿಂದ ಸೂರ್ಯಮುಳುಗುವ ವೇಳೆಗೆ ಶ್ರೀರಂಗಪಟ್ಟಣ (ಆದಿರಂಗ), ಮಧ್ಯರಂಗ ಹಾಗೂ ಅಂತ್ಯರಂಗ ದೇವಾಲಯಗಳಿಗೆ ಭೇಟಿ ನೀಡುವ ಪದ್ಧತಿ ನಡೆದುಕೊಂಡು ಬಂದಿದೆ ಎಂದು ತಿಳಿಸಿದರು.

ನಮ್ಮ ಸರ್ಕಾರ ಹಾಗೂ ಖಾಸಗಿಯವರು ಸೇರಿ ಈ ದೇವಾಲಯದ ಜೀರ್ಣೋದ್ಧಾರದ ಕೆಲಸ ಮಾಡುತ್ತಿದ್ದೇವೆ. ಇಂದು ಸಚಿವ ಸಂಪುಟ ಸಭೆ ಇದ್ದರೂ ನಾನು ಸೇರಿದಂತೆ ಅನೇಕ ಸಚಿವರು ಈ ಕಾರ್ಯಕ್ರಮಕ್ಕೆ ಬಂದಿದ್ದೇವೆ. ಭಕ್ತ ಹಾಗೂ ಭಗವಂತನ ನಡುವೆ ವ್ಯವಹಾರ ನಡೆಯುವ ಸ್ಥಳ ದೇವಾಲಯ. ಈ ಪುಣ್ಯಕ್ಷೇತ್ರ ಯಾತ್ರಿಕರಿಗೆ ಪ್ರಸಿದ್ಧವಾಗಿದೆ. ಇದು ಪ್ರಕೃತಿಯ ಕೊಡುಗೆ. ನಮ್ಮ ಸರ್ಕಾರ ಕೂಡ ಎಲ್ಲೆಡೆ ಅನೇಕ ಅಭಿವೃದ್ಧಿ ಕೆಲಸ ಮಾಡಿಕೊಂಡು ಬಂದಿದೆ. ಇಲ್ಲಿ ಸಚಿವ ಸಂಪುಟ ಸಭೆ ಮಾಡಿ ಈ ಭಾಗದ ಅಭಿವೃದ್ಧಿಗೆ ಅನೇಕ ಕ್ರಮ ಕೈಗೊಳ್ಳಲಾಗಿದೆ. ಕೈಗಾರಿಕಾ ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದೇವೆ. ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸರ್ಕಾರಿ ಕೆಲಸ ನೀಡಿ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ಇದು ಇತಿಹಾಸ ಪುಟಕ್ಕೆ ಹೋಗುವ ಕೆಲಸವನ್ನು ನಮ್ಮ ಸಚಿವರಾದ ವೆಂಕಟೇಶ್ ಅವರು ಮಾಡಿದ್ದಾರೆ ಎಂದು ತಿಳಿಸಿದರು.

ಜಿಬಿಎ ಚುನಾವಣೆಗೆ ಸಿದ್ಧತೆ

ಜಿಬಿಎ ಚುನಾವಣೆ ಬಗ್ಗೆ ಕೇಳಿದಾಗ ಜಿಬಿಎ ಚುನಾವಣೆ ನಡೆಸುವ ಜವಾಬ್ದಾರಿ ಚುನಾವಣಾ ಆಯೋಗದ ಮೇಲಿದೆ. ಚುನಾವಣೆ ನಡೆಸಲು ಸರ್ಕಾರ ಸಂಪೂರ್ಣವಾಗಿ ಸಹಕಾರ ನೀಡಲು ಸಿದ್ಧವಾಗಿದೆ. ಸಮಯದ ಪ್ರಕಾರ ಚುನಾವಣೆ ನಡೆಯಲಿದೆ. ನಾವೆಲ್ಲ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆ ಎಂದು ಸ್ಪಷ್ಟಪಡಿಸಿದರು. ನೀವು ಯಾವಾಗ ಸಿಎಂ ಆಗುತ್ತೀರಿ ಎಂದು ಕೇಳಿದಾಗ ಅದನ್ನು ಕಾಲ ತೀರ್ಮಾನ ಮಾಡುತ್ತದೆ ಎಂದು ತಿಳಿಸಿದರು.

ರಾಹುಲ್ ಕ್ಷಮೆಯಾಚನೆಗೆ ವಿಜಯೇಂದ್ರ ಒತ್ತಾಯ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಹೇಳಿಕೆ ನೀಡಿರುವ ರಾಹುಲ್ ಗಾಂಧಿ ದೇಶದ ಜನರ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಎಚ್ಚರಿಸಿದ್ದಾರೆ.



ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷರಾಗಿದ್ದವರು ಈ ರೀತಿ ಬಾಲಿಷವಾಗಿ ಹೇಳಿಕೆ ನೀಡಬಾರದು. ಪ್ರಧಾನಿ, ಕೇಂದ್ರ ಗೃಹ ಸಚಿವರ ಬಗ್ಗೆ ಅವಮಾನಕರ ವಾಗಿ ಮಾತನಾಡಬಾರದು ಎಂದರು. ಪಶ್ಚಿಮ ಬಂಗಾಳ, ಅಸ್ಸಾಂನಲ್ಲಿ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ಇದನ್ನು ರಾಹುಲ್ ಅವರಿಗೆ ಸಹಿಸಲು ಆಗುತ್ತಿಲ್ಲ.

ಹಿಂದುಳಿದ ಸಮಾಜಕ್ಕೆ ಸೇರಿದ ಮೋದಿ ಅವರು ಪ್ರಧಾನಿಯಾಗಿ ಮೂರನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾರೆ. ದೇಶವನ್ನು ನಾಲ್ಕನೇ ಆರ್ಥಿಕ ಶಕ್ತಿಯಾಗಿ ಮಾಡಿದ್ದಾರೆ. ದೇಶದ ಅಭಿವೃದ್ಧಿ ಸಹಿಸದೆ ರಾಹುಲ್ ಅವರು ಈ ರೀತಿ ಮಾತನಾಡುತ್ತಿದ್ದಾರೆಯೇ ಎಂದು ಪ್ರಶ್ನಿಸಿದರು.

ಕಾಶ್ಮೀರದಲ್ಲಿ 370ನೇ ವಿಧಿಯನ್ನು ಕಿತ್ತು ಹಾಕುವ ಧೈರ್ಯ ಕಾಂಗ್ರೆಸ್‌ಗೆ ಇರಲಿಲ್ಲ. ಅದನ್ನು ಕಿತ್ತು ಹಾಕಿದ್ದು ಅಮಿತ್ ಶಾ ಅವರು. ಇದಕ್ಕೆ ರಾಹುಲ್ ಗಾಂಧಿ ಅವರು ಅಮಿತ್ ಶಾ ಅವರನ್ನು ದೇಶದ್ರೋಹಿ ಎಂದು ಕರೆಯುತ್ತಾರೆಯೇ? ದೇಶದಲ್ಲಿ ನಕ್ಸಲರನ್ನು ಬುಡಸಮೇತ ನಾಶ ಮಾಡುವಲ್ಲಿ ಅಮಿತ್ ಶಾ ಅವರು ಕೆಲಸ ಮಾಡಿದ್ದಾರೆ. ಮೋದಿ ಅವರು ಭ್ರಷ್ಟಾಚಾರರಹಿತ ಆಡಳಿತ ನೀಡಿದ್ದಾರೆ. ಅದನ್ನು ರಾಹುಲ್‌ಗೆ ಸಹಿಸಲು ಆಗುತ್ತಿಲ್ಲ ಎಂದರು.

ನಿತಿನ್ ನವೀನ್ ರಾಜ್ಯಕ್ಕೆ ಭೇಟಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಅವರು ಇದೇ ಮೇ 23ಕ್ಕೆ ರಾಜ್ಯಕ್ಕೆ ಆಗಮಿಸುತ್ತಿದ್ದಾರೆ. ರಾಷ್ಟ್ರೀಯ ಅಧ್ಯಕ್ಷ ಬಳಿಕ ರಾಜ್ಯಕ್ಕೆ ಅವರ ಮೊದಲ ಭೇಟಿ ಇದಾಗಿದೆ. ಮೇ 24 ರಂದು ಬೆಂಗಳೂರು ಉತ್ತರ ಜಿಲ್ಲೆ ಪ್ರಶಿಕ್ಷಣ ವರ್ಗದಲ್ಲಿ ಭಾಗವಹಿಸಲಿದ್ದಾರೆ.

ಕಾಡುಗೊಲ್ಲ ಸಂಘದ ಅಧ್ಯಕ್ಷ ರಾಜಣ್ಣ ಬಿಜೆಪಿಗೆ

ಬೆಂಗಳೂರು: ಕಾಡುಗೊಲ್ಲರ ಸಂಘದ ರಾಜ್ಯಾಧ್ಯಕ್ಷ ರಾಜಣ್ಣ ಅವರು ತಮ್ಮ ಬೆಂಬಲಿಗರೊಂದಿಗೆ ಗುರುವಾರ ಬಿಜೆಪಿ ಕಚೇರಿಯಲ್ಲಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಸೇರ್ಪಡೆಯಾದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ಬಿಜೆಪಿ ತತ್ತ್ವ - ಸಿದ್ಧಾಂತಗಳನ್ನು ಒಪ್ಪಿಕೊಂಡು, ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ವಿಶ್ವಾಸ ಇರಿಸಿ ರಾಜಣ್ಣ ಅವರು ಬಿಜೆಪಿ ಸೇರಿದ್ದಾರೆ. ರಾಜ್ಯದಲ್ಲಿ ಬಿಜೆಪಿಗೆ ಬಲ ತುಂಬುವ ಅಪೇಕ್ಷೆ ಹೊಂದಿ, ಯಾವುದೇ ನಿರೀಕ್ಷೆಗಳಿಲ್ಲದೇ ಸೇರಿದ್ದಾರೆ ಎಂದರು. ವ್ಯಕ್ತಿಗಿಂತ ಪಕ್ಷ ಮುಖ್ಯ, ಪಕ್ಷಕ್ಕಿಂತ ದೇಶ ಮುಖ್ಯ ಎನ್ನುವ ಧ್ಯೇಯವಾಕ್ಯ ಬಿಜೆಪಿಯದ್ದು. ಪಕ್ಷದ ವ್ಯವಸ್ಥೆಯಲ್ಲಿ ರಾಜಣ್ಣ ಮತ್ತು ಅವರ ಬೆಂಬಲಿಗರಿಗೆ ಗೌರವ ನೀಡಿ, ತಮ್ಮ ಶಕ್ತಿಯನ್ನು ಬಲಪಡಿಸಿ ಪಕ್ಷ ಸಂಘಟಿಸಲಾಗುವುದು ಎಂದು ತಿಳಿಸಿದರು.

ಪಿಯುಸಿ ಫಲಿತಾಂಶ ಶೇ.7.06 ಏರಿಕೆ

ಬೆಂಗಳೂರು: 2026ರ ದ್ವಿತೀಯ ಪಿಯುಸಿ ಪರೀಕ್ಷೆ-2ರ ಫಲಿತಾಂಶ ಪ್ರಕಟವಾಗಿದ್ದು, ಶೇ.45.65ರಷ್ಟು ಫಲಿತಾಂಶ ದಾಖಲಾಗಿದೆ. ಪರೀಕ್ಷೆ 1 ಮತ್ತು 2ರ ಒಟ್ಟು ಕ್ರೋಢೀಕೃತ ಫಲಿತಾಂಶ ಶೇ.92.25ರಷ್ಟು ದಾಖಲಾಗಿದೆ. ಕಳೆದ ವರ್ಷ 85.19ಕ್ಕೆ ಹೋಲಿಸಿದರೆ, ಈ ಬಾರಿ ಶೇ.7.06ರಷ್ಟು ಏರಿಕೆಯಾಗಿದೆ.

ರಾಜ್ಯ ಸರ್ಕಾರ ಜಾರಿಗೆ ತಂದಿರುವ 2 ಪರೀಕ್ಷೆಗಳ ವಿಧಾನ ದೇಶದಲ್ಲೇ ಮೊದಲ ಪ್ರಯೋಗವಾಗಿದ್ದು, ವಿದ್ಯಾರ್ಥಿಗಳಿಗೆ ತಮ್ಮ ಅಂಕಗಳನ್ನು ಉತ್ತಮಪಡಿಸಿಕೊಳ್ಳಲು ವಿಶೇಷ ಅವಕಾಶ ಒದಗಿಸಿದೆ. ಪರೀಕ್ಷೆ-1 ಮತ್ತು ಪರೀಕ್ಷೆ-2ರಲ್ಲಿ ಪಡೆದ ಅಂಕಗಳಲ್ಲಿ ಗರಿಷ್ಠ ಅಂಕವನ್ನು ಪರಿಗಣಿಸುವ ವ್ಯವಸ್ಥೆಯಿಂದ ಸಾವಿರಾರು ವಿದ್ಯಾರ್ಥಿಗಳಿಗೆ ಪ್ರಯೋಜನವಾಗಿದೆ ಎಂದು ಇಲಾಖೆ ತಿಳಿಸಿದೆ.

ಕಲಾ, ವಾಣಿಜ್ಯ, ವಿಜ್ಞಾನ - ಮೂರೂ ವಿಭಾಗಗಳಲ್ಲಿ ದಾಖಲೆ: ಈ ಬಾರಿ ಮೂರೂ ವಿಭಾಗಗಳಲ್ಲಿಯೂ ಉತ್ತಮ ಫಲಿತಾಂಶ ದಾಖಲಾಗಿದ್ದು, ಕಲಾ ವಿಭಾಗದಲ್ಲಿ ಅತಿದೊಡ್ಡ ಏರಿಕೆ ಕಂಡುಬಂದಿದೆ. ಕಳೆದ ವರ್ಷದ ಶೇ.69.47ರಷ್ಟು ಫಲಿತಾಂಶ ಈ ಬಾರಿ ಶೇ.83.31ಕ್ಕೆ ಏರಿಕೆಯಾಗಿದೆ. ವಾಣಿಜ್ಯ ವಿಭಾಗದಲ್ಲಿ ಫಲಿತಾಂಶ ಶೇ.87.83 ರಿಂದ 92.84ಕ್ಕೆ ಏರಿಕೆಯಾದರೆ, ವಿಜ್ಞಾನ ವಿಭಾಗದಲ್ಲಿ ಕಳೆದ ವರ್ಷದ ಶೇ.91.88 ಫಲಿತಾಂಶ ಈ ಬಾರಿ 96.01ಕ್ಕೆ ತಲುಪಿದೆ.

ಗ್ರಾಮೀಣ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ: ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳು ಈ ಬಾರಿ ನಗರ ಪ್ರದೇಶದ ವಿದ್ಯಾರ್ಥಿಗಳಿಗಿಂತ ಉತ್ತಮ ಸಾಧನೆ ಮಾಡಿರುವುದು ವಿಶೇಷವಾಗಿದೆ. ಗ್ರಾಮೀಣ ಭಾಗದ ಫಲಿತಾಂಶ ಶೇ.92.77 ದಾಖಲಾಗಿದ್ದು, ನಗರ ಪ್ರದೇಶದ ಫಲಿತಾಂಶ ಶೇ.92.01 ರಷ್ಟಾಗಿದೆ. ಕಳೆದ ವರ್ಷ ಗ್ರಾಮೀಣ ಭಾಗದ ಫಲಿತಾಂಶ ಶೇ.84.94ರಷ್ಟು ಇದ್ದರೆ, ಈ ಬಾರಿ ಗಣನೀಯ ಏರಿಕೆ ಕಂಡುಬಂದಿದೆ. ಇನ್ನೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಫಲಿತಾಂಶದಲ್ಲೂ ಈ ಬಾರಿ ದೊಡ್ಡ ಮಟ್ಟದ ಸುಧಾರಣೆ ಕಂಡುಬಂದಿದೆ.



> ಯಾವೊಬ್ಬ ಮಗುವೂ ಹಿಂದೆ ಉಳಿಯಬಾರದು ಎಂಬ ಸರ್ಕಾರದ ಆಶಯಕ್ಕೆ ಈ ಫಲಿತಾಂಶ ಸ್ಪಷ್ಟ ಸಾಕ್ಷಿಯಾಗಿದೆ. ಮುಂದಿನ ದಿನಗಳಲ್ಲಿ ತಂತ್ರಜ್ಞಾನ ಆಧಾರಿತ ಹಾಜರಾತಿ ವ್ಯವಸ್ಥೆ, ಎಐ ಆಧಾರಿತ ಕಲಿಕೆ, ಡಿಜಿಟಲ್ ಶಿಕ್ಷಣ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುವುದು.
> ■ ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ

ರಾಜ್ಯಾದ್ಯಂತ ಪೂರ್ವ ಮುಂಗಾರು ಮಳೆ

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಅಬ್ಬರ ಜೋರಾಗಿದೆ. ಕರಾವಳಿ ಹಾಗೂ ಮಲೆನಾಡು ಭಾಗ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಕೆಲವು ಜಿಲ್ಲೆಗಳಲ್ಲಿ ವರುಣನ ಆರ್ಭಟ ಮುಂದುವರೆದಿದ್ದು, ಮೇ 22 ರಿಂದ 24 ವರೆಗೆ ಭಾರೀ ಮಳೆಯಾಗುವ ಸಾಧ್ಯತೆಯಿದೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂಗಾರು ಪೂರ್ವ ಮಾರುಗಳ ತೀವ್ರತೆ ಹೆಚ್ಚಾಗಿರುವುದರಿಂದ ಗುಡುಗು, ಮಿಂಚು ಹಾಗೂ ಬಿರುಗಾಳಿ ಸಹಿತ ಭಾರೀ ಮಳೆಯಾಗುವ ಸಂಭವವಿದೆ. ಈ ಹಿನ್ನೆಲೆಯಲ್ಲಿ ಬೆಂಗಳೂರು , ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಅಲರ್ಟ್ ಘೋಷಣೆ: ಬೆಂಗಳೂರಿನಲ್ಲಿ ಮೇ 22 ರಿಂದ 24 ವರೆಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಮೇ 22 ರಂದು ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಮತ್ತು 17 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್, ಮೇ 23ರಂದು ಬೀದರ್ ಹಾಗೂ ಕಲಬುರಗಿ ಎರಡು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹಾಗೂ ಬೆಂಗಳೂರು ಸೇರಿದಂತೆ ದಕ್ಷಿಣ ಹಾಗೂ ಉತ್ತರ ಒಳನಾಡಿನ 19 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಬಂಗಾಳಕೊಲ್ಲಿ, ಅರಬ್ಬೀ ಸಮುದ್ರದ ವಿವಿಧ ಭಾಗಗಳಲ್ಲಿ ಬಿರುಗಾಳಿ ಹಿನ್ನೆಲೆಯಲ್ಲಿ ಕಡಲಿಗೆ ಇಳಿಯದಂತೆ ಕರಾವಳಿ ಮೀನುಗಾರರಿಗೆ ಮುನ್ನೆಚ್ಚರಿಕೆ ನೀಡಲಾಗಿದೆ.

ಬೆಂಗಳೂರಿನಲ್ಲಿ ಆಲಿಕಲ್ಲು ಮಳೆ ಆರ್ಭಟ: ಬೆಂಗಳೂರಿನ ಹಲವೆಡೆ ಗುರುವಾರ ಸಂಜೆ ಆಲಿಕಲ್ಲು ಸಹಿತ ಭಾರೀ ಮಳೆ ಸುರಿದಿದೆ. ಮೆಜೆಸ್ಟಿಕ್, ಮಲ್ಲೇಶ್ವರ, ಮೈಸೂರು ರಸ್ತೆ, ವಿಜಯನಗರ, ಶಾಂತಿನಗರ, ಲಾಲ್‌ಬಾಗ್, ಕೆ.ಆರ್.ಮಾರ್ಕೆಟ್, ಜಯನಗರ, ರಾಜಾಜಿನಗರ, ವಸಂತನಗರ, ವಿಧಾನಸೌಧ ಸೇರಿದಂತೆ ಪ್ರಮುಖ ಪ್ರದೇಶಗಳಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದಿದೆ.



ರಸ್ತೆಗಳು ಜಲಾವೃತವಾಗಿ ಸಂಚಾರಕ್ಕೆ ಅಡ್ಡಿಯಾಗಿದ್ದು, ಟ್ರಾಫಿಕ್ ಜಾಮ್ ಕೂಡ ಉಂಟಾಗಿತ್ತು, ಇನ್ನು ಬೃಹತ್ ಮರ ಉರುಳಿಬಿದ್ದು ಅವಾಂತರಗಳು ಸಂಭವಿಸಿತು. ಭಾರೀ ಗಾಳಿ ಮಳೆಯಿಂದಾಗಿ ನಗರದ ಹಲವೆಡೆ ಬೃಹತ್ ಮರಗಳು ಧರೆಗುರುಳಿ ಅವಾಂತರಗಳು ಸಂಭವಿಸಿವೆ. ವೆಸ್ಟ್ ಆಫ್ ಕಾರ್ಡ್ ರಸ್ತೆಯ ಸಿಟಿ ಆಸ್ಪತ್ರೆ ಬಳಿ ಮರ ಬಿದ್ದು ಎರಡು ಕಾರುಗಳು ಜಖಂಗೊಂಡಿವೆ. ಇಂದಿರಾನಗರ 16ನೇ ಕ್ರಾಸ್‌ನಲ್ಲಿ ಮರ ನೇರವಾಗಿ ಕಾರಿನ ಮೇಲೆ ಬಿದ್ದ ಪರಿಣಾಮ ವಾಹನ ಜಖಂಗೊಂಡಿದೆ.

ನಕಲಿ ಫಲಾನುಭವಿಗಳ ಪತ್ತೆಗೆ ಪ್ರತ್ಯೇಕ ಆ್ಯಪ್ | ಕಂದಾಯ ಇಲಾಖೆಯಿಂದ ಕ್ರಮ

ಸಂದೇಹಾಸ್ಪದ ಪಿಂಚಣಿದಾರರ ಪತ್ತೆಗೆ ವೇಗ

ವೀರಣ್ಣ ಬಳಿಗಾರ

ಬೆಂಗಳೂರು: ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆಗಳ ಮೂಲಕ ಸರ್ಕಾರದ ವತಿಯಿಂದ ನೀಡುತ್ತಿರುವ ಪಿಂಚಣಿಯಲ್ಲಿ ಸಂದೇಹಾಸ್ಪದ ಫಲಾನುಭವಿಗಳ ಪತ್ತೆ ಕಾರ್ಯವನ್ನು ಕಂದಾಯ ಇಲಾಖೆ ಕೈಗೊಂಡಿದೆ.

ಪಿಂಚಣಿ ಪಡೆಯಲು ಅರ್ಹರಾಗಿರುವ ವ್ಯಕ್ತಿಗಳನ್ನು ಗುರುತಿಸುವ ಕಾರ್ಯ ಮಾರ್ಚ್ ತಿಂಗಳಿನಿಂದ ರಾಜ್ಯಾದ್ಯಂತ ನಡೆಯುತ್ತಿದ್ದು, ಬೇರೆ ಊರಿನಲ್ಲಿ ವಾಸವಿರುವ ಫಲಾನುಭವಿಗಳ ಪತ್ತೆ ಮತ್ತು ನಕಲಿ ಅಥವಾ ಮೃತಪಟ್ಟ ಪಿಂಚಣಿದಾರರನ್ನು ಪಟ್ಟಿಯಿಂದ ತೆಗೆಯುವ ಕಾರ್ಯವನ್ನು ಗ್ರಾಮ ಲೆಕ್ಕಾಧಿಕಾರಿ ಮತ್ತು ತಾಲೂಕು ಕಚೇರಿಯ ಅಧಿಕಾರಿಗಳಿಗೆ ವಹಿಸಲಾಗಿದೆ.

ದಿಗಂತ ವಿಶೇಷ

ಕಳೆದ ವರ್ಷ ಜುಲೈ ತಿಂಗಳಲ್ಲಿ ಪರಿಶೀಲನೆ ಕಾರ್ಯ ಕೈಗೊಂಡ ಸಂದರ್ಭದಲ್ಲಿ ಸಾಮಾಜಿಕ ಭದ್ರತಾ ಪಿಂಚಣಿಯ 11.8 ಲಕ್ಷಕ್ಕೂ ಹೆಚ್ಚು ನಕಲಿ ಫಲಾನುಭವಿಗಳನ್ನು ಗುರುತಿಸಲಾಗಿತ್ತು. ಇದೀಗ ಕಂದಾಯ ಇಲಾಖೆ ಸಂದೇಯಾಸ್ಪದ ಫಲಾನುಭವಿಗಳ ಪರಿಶೀಲನೆ ನಡೆಸುತ್ತಿದೆ. ಪಿಂಚಣಿ ಪಡೆಯುತ್ತಿರುವ ಸಂಶಯಾತ್ಮಕ ಪ್ರಕರಣಗಳ ಭೌತಿಕ ಪರಿಶೀಲನೆ ಮತ್ತು ಪ್ರಗತಿ ಕುರಿತಂತೆ ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮೇ 12 ರಂದು ವಿಡಿಯೋ ಸಂವಾದದ ಮೂಲಕ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಆಯುಕ್ತಾಲಯದ ಎಲ್ಲಾ ಅಧಿಕಾರಿ, ಸಿಬ್ಬಂದಿಯ ಸಭೆ ನಡೆಸಿದ್ದು, ಪರಿಶೀಲನೆ ಕಾರ್ಯವನ್ನು ಶೀಘ್ರದಲ್ಲೇ ಮುಗಿಸುವಂತೆ ಸೂಚನೆ ನೀಡಿದ್ದಾರೆ.

ಆ್ಯಪ್ ಮೂಲಕ ಸಮೀಕ್ಷೆ

ಮೊಬೈಲ್ ಆ್ಯಪ್ ಮೂಲಕ ಸಂದೇಹಾಸ್ಪದ ಫಲಾನುಭವಿಗಳ ಪಿಂಚಣಿಗಳನ್ನು ಪರಿಶೀಲನೆ ನಡೆಸಲಾಗುತ್ತಿದ್ದು, ಪ್ರತಿಯೊಂದು ಗ್ರಾಮ ಲೆಕ್ಕಾಧಿಕಾರಿಗೆ ಪ್ರತ್ಯೇಕ ಆ್ಯಪ್ ಲಾಗಿನ್ ನೀಡಲಾಗಿದ್ದು, ತಮ್ಮ ವ್ಯಾಪ್ತಿಯ ಪ್ರಕರಣಗಳನ್ನು ದಾಖಲಿಸಿಕೊಂಡು ಅಂತಿಮ ಪಟ್ಟಿ ತಯಾರಿ ತಹಶೀಲ್ದಾರ್‌ಗೆ ಕಳಿಸಿಕೊಡಲಾಗುತ್ತದೆ. ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳು ಬೇರೆ ಊರಲ್ಲಿ ವಾಸವಾಗಿದ್ದಲ್ಲಿ ಅವರನ್ನು ಆ ಗ್ರಾಮದ ಲಾಗಿನ್‌ಗೆ ವರ್ಗಾಹಿಸಲಾಗುತ್ತದೆ.

> ಗ್ರಾಮ ಲೆಕ್ಕಾಧಿಕಾರಿಗಳು ಮೊಬೈಲ್ ಆ್ಯಪ್ ಮೂಲಕ ಮ್ಯಾಪಿಂಗ್ ಕೈಗೊಂಡಿದ್ದು, ಜನಗಣತಿಗೆ ಸಿಬ್ಬಂದಿಯನ್ನು ನೇಮಿಸಿದ್ದರಿಂದ ಪಿಂಚಣಿದಾರರ ಪರಿಶೀಲನೆ ಕಾರ್ಯ ಸ್ವಲ್ಪ ನಿಧಾನವಾಗಿದೆ. ಜನಗಣತಿ ಕಾರ್ಯ ಮುಗಿದ ನಂತರ ಮತ್ತೆ ವೇಗವಾಗಲಿದೆ. ಶೀಘ್ರದಲ್ಲೇ ಮುಗಿಯಲಿದೆ. ಮಾರ್ಚ್ ಮತ್ತು ಏಪ್ರಿಲ್ ತಿಂಗಳ ಪಿಂಚಣಿ ಮಾತ್ರ ಬಾಕಿ ಇದೆ. ಪಿಂಚಣಿ ಬಾಕಿಗೆ ಪರಿಶೀಲನೆ ಕಾರ್ಯ ಕಾರಣವಲ್ಲ.
> ■ ಹೊನ್ನಾಂಬ, ಆಯುಕ್ತರು ಕಂದಾಯ ಇಲಾಖೆ

81.88 ಲಕ್ಷ ಫಲಾನುಭವಿಗಳು: ವೃದ್ಧಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಸೇರಿದಂತೆ ಕಂದಾಯ ಇಲಾಖೆಯಡಿಯ 12 ಬಗೆಯ ಪಿಂಚಣಿಗಳನ್ನು ನೀಡಲಾಗುತ್ತಿದೆ. ಈ ಪಿಂಚಣಿ ಯೋಜನೆಯುಗಳಡಿ 81.88 ಲಕ್ಷ ಫಲಾನುಭವಿಗಳಿದ್ದು, ತಿಂಗಳಿಗೆ 894 ಕೋಟಿ ರೂ. ನೀಡಬೇಕಿದೆ. ಪ್ರತಿ ವರ್ಷ ಬಜೆಟ್‌ನಲ್ಲಿ 10,736 ಕೋಟಿ ರೂ. ಮೀಸಲಿಡಲಾಗುತ್ತದೆ.

ಪಿಯು ವಿದ್ಯಾರ್ಥಿಗಳಿಗೆ ಡಿಜಿಟಲ್ ವರ್ಗಾವಣೆ

ಬೆಂಗಳೂರು: ರಾಜ್ಯದ ದ್ವಿತೀಯ ಪಿಯುಸಿ ಹಾಗೂ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಇದೇ ಮೊದಲ ಬಾರಿಗೆ ಡಿಜಿಲಾಕರ್ ಮೂಲಕ ಡಿಜಿಟಲ್ ಅಂಕಪಟ್ಟಿ ನೀಡಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಇದೀಗ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಿದ್ದು, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಡಿಜಿಟಲ್ ವರ್ಗಾವಣೆ ಪ್ರಮಾಣ ಪತ್ರ (ಡಿಜಿಟಲ್ ಟಿಸಿ) ನೀಡಲು ಮುಂದಾಗಿದೆ.

ಕರ್ನಾಟಕ ಸರ್ಕಾರ
ಶಾಲಾ ಶಿಕ್ಷಣ ಇಲಾಖೆ

ಈ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದ್ದು, ಪ್ರಾಯೋಗಿಕವಾಗಿ ಈ ಸಾಲಿನಿಂದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ತೇರ್ಗಡೆಯಾದ ಹೊಸ ವಿದ್ಯಾರ್ಥಿಗಳಿಗೆ ಡಿಜಿಟಲ್ ಟಿಸಿ ಸೌಲಭ್ಯ ಕಲ್ಪಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಅನುಮತಿ ನೀಡಿದೆ.

ಹೊಸ ವ್ಯವಸ್ಥೆಯ ಪ್ರಕಾರ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ (ಕೆಎಸ್‌ಇಎಬಿ) ವತಿಯಿಂದ ದ್ವಿತೀಯ ಪಿಯುಸಿಯ ಎರಡನೇ ವಾರ್ಷಿಕ ಪರೀಕ್ಷೆಯ ಫಲಿತಾಂಶ ಪ್ರಕಟವಾದ ಬಳಿಕ, ಮಂಡಳಿಯ ದತ್ತಾಂಶವನ್ನು ಆಧರಿಸಿ ಡಿಜಿಟಲ್ ಟಿಸಿಯನ್ನು ಸ್ವಯಂಚಾಲಿತವಾಗಿ ಸೃಜಿಸಲಾಗುತ್ತದೆ. ವಿದ್ಯಾರ್ಥಿಗಳು ತಮ್ಮ ಡಿಜಿಲಾಕರ್ ಖಾತೆಗೆ ಲಾಗಿನ್ ಆಗಿ ಟಿಸಿಯನ್ನು ನೇರವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಡಿಜಿಟಲ್ ಟಿಸಿ ವ್ಯವಸ್ಥೆಯನ್ನು ಸರಳ ಮತ್ತು ಪರಿಣಾಮಕಾರಿಯಾಗಿಸಲು ಹಳೆಯ ಟಿಸಿ ನಮೂನೆಯಲ್ಲಿ ಇದ್ದ ಅನಗತ್ಯ ಮಾಹಿತಿಗಳನ್ನು ಕೈಬಿಡಲಾಗಿದೆ. ಶುಲ್ಕ ಬಾಕಿ, ವಿದ್ಯಾರ್ಥಿವೇತನ, ಹಾಜರಾತಿ ಲೆಕ್ಕಾಚಾರ ಸೇರಿದಂತೆ ಹಲವು ಕಾಲಂಗಳನ್ನು ತೆಗೆದುಹಾಕಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ದಾಖಲೆಗಳ ನಿಖರ ಜೋಡಣೆಗೆ ಸ್ಯಾಟ್ಸ್ ಸಂಖ್ಯೆಯೊಂದಿಗೆ ಪರೀಕ್ಷಾ ನೋಂದಣಿ ಸಂಖ್ಯೆ ಹಾಗೂ ಅಪಾರ್ ಐಡಿಯನ್ನು ಕೂಡ ಸೇರಿಸಲಾಗುತ್ತದೆ. ಇದೇ ವೇಳೆ, ಪ್ರಾಂಶುಪಾಲರು ನಿಗದಿತ ಅವಧಿ ಯೊಳಗೆ ಯಾವುದೇ ನಕಾರಾತ್ಮಕ ಅಭಿಪ್ರಾಯ ದಾಖಲಿಸದಿದ್ದರೆ, ತಂತ್ರಾಂಶವು ವಿದ್ಯಾರ್ಥಿಯ ನಡತೆಯನ್ನು ಸ್ವಯಂಚಾಲಿತವಾಗಿ ಉತ್ತಮ ಎಂದು ನಮೂದಿಸುವ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ.

ಡಿಜಿಟಲ್ ಟಿಸಿಯಲ್ಲಿ ಸುರಕ್ಷಿತ ಕ್ಯೂಆರ್ ಕೋಡ್ ಅಳವಡಿಸಲಾಗುತ್ತಿದ್ದು, ಇದರ ಮೂಲಕ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಆಧಾರ್ ಕೇಂದ್ರಗಳು ದಾಖಲೆಯ ನೈಜತೆಯನ್ನು ತಕ್ಷಣ ಪರಿಶೀಲಿಸಬಹುದು. ಇದರಿಂದ ನಕಲಿ ಟಿಸಿ ಬಳಕೆ ತಡೆಯಲು ಸಹಕಾರಿಯಾಗಲಿದೆ ಎಂದು ಇಲಾಖೆ ತಿಳಿಸಿದೆ. ಫಲಿತಾಂಶ ಪ್ರಕಟವಾದ ತಕ್ಷಣವೇ ಡಿಜಿಲಾಕರ್‌ನಲ್ಲಿ ಟಿಸಿ ಲಭ್ಯವಾಗುವುದರಿಂದ ವಿದ್ಯಾರ್ಥಿಗಳು ಪ್ರಾಂಶುಪಾಲರ ಭೌತಿಕ ಸಹಿಗಾಗಿ ಕಾಲೇಜುಗಳಿಗೆ ಅಲೆಯಬೇಕಾಗುವುದಿಲ್ಲ. ಉನ್ನತ ಶಿಕ್ಷಣ ಪ್ರವೇಶಾತಿಗೆ ಈ ಡಿಜಿಟಲ್ ಟಿಸಿ ಸಂಪೂರ್ಣ ಮಾನ್ಯತೆ ಹೊಂದಿರಲಿದೆ ಎಂದು ಸರ್ಕಾರ ಸ್ಪಷ್ಟಪಡಿಸಿದೆ. ಪ್ರಥಮ ಹಂತದಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ತೇರ್ಗಡೆಯಾದ ಹೊಸ ವಿದ್ಯಾರ್ಥಿಗಳಿಗೆ ಮಾತ್ರ ಈ ಸೌಲಭ್ಯ ಲಭ್ಯವಾಗಲಿದೆ. ಖಾಸಗಿ ವಿದ್ಯಾರ್ಥಿಗಳು, ರಿಪೀಟರ್ಸ್ ಹಾಗೂ ಮಧ್ಯದಲ್ಲಿ ವರ್ಗಾವಣೆ ಪತ್ರ ಬಯಸುವ ವಿದ್ಯಾರ್ಥಿಗಳು ಈ ಹಿಂದಿನಂತೆ ಪ್ರಾಂಶುಪಾಲರಿಗೆ ಅರ್ಜಿ ಸಲ್ಲಿಸಿ ಕಾಲೇಜು ಮಟ್ಟದಲ್ಲೇ ಟಿಸಿ ಪಡೆಯಬೇಕಾಗಿದೆ.

ಸಂಪಾದಕೀಯ

ಪಾಕ್ ಉಗ್ರರಿಗೆ ತಕ್ಕ ಪಾಠ

ಭಾರತದ ವಿರುದ್ಧ ದಶಕಗಳ ಕಾಲ ಭಯೋತ್ಪಾದನೆಯನ್ನು ಆಯುಧವನ್ನಾಗಿ ಬಳಸಿಕೊಂಡ ಪಾಕಿಸ್ತಾನದಲ್ಲೇ ಈಗ ಅನಾಮಧೇಯರಿಂದ ಉಗ್ರರ ಹತ್ಯೆಗಳ ಸರಣಿ ನಡೆಯುತ್ತಿರುವುದು ಗಮನಾರ್ಹ ಬೆಳವಣಿಗೆ. ಪುಲ್ವಾಮಾ ದಾಳಿಯ ಸಂಚುಕೋರರಲ್ಲಿ ಒಬ್ಬನೆಂದು ಪರಿಗಣಿಸಲ್ಪಟ್ಟ ಹಮ್ಜಾ ಬುರಹಾನ್ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಅಪರಿಚಿತ ಗನ್‌ಮನ್‌ಗಳ ಗುಂಡಿಗೆ ಬಲಿಯಾದ ಘಟನೆ ಅತ್ಯಂತ ಪ್ರಮುಖ ಬೆಳವಣಿಗೆಯಾಗಿದೆ. ಭಾರತದ ವಿರುದ್ಧ ದಾಳಿ ರೂಪಿಸಿದ್ದ ಅನೇಕ ಉಗ್ರರು ಕಳೆದ ಕೆಲವು ವರ್ಷಗಳಿಂದ ಇದೇ ರೀತಿಯಲ್ಲಿ ಹತ್ಯೆಯಾಗುತ್ತಿದ್ದಾರೆ.



ಇದು ಕೇವಲ ಅಪರಾಧ ಪ್ರಕರಣಗಳ ಸರಣಿಯಲ್ಲ, ಭಯೋತ್ಪಾದನೆಯನ್ನು 'ತಂತ್ರಾತ್ಮಕ ಆಸ್ತಿ' ಎಂದು ಬೆಳೆಸಿದ ಪಾಕಿಸ್ತಾನಕ್ಕೆ ಅದರದ್ದೇ ಪರಿಣಾಮ ಈಗ ಎದುರಾಗುತ್ತಿದೆ. ವಿಶೇಷವೆಂದರೆ, 2022ರಿಂದಲೂ ನಡೆಯುತ್ತಿರುವ ಈ ಅನಾಮಧೇಯರಿಂದ ಗುಂಡೇಟಿಗೆ ಬಲಿಯಾಗುತ್ತಿರುವ ಪ್ರಕರಣಗಳು ಪಾಕ್‌ಗೆ ತಕ್ಕ ಪಾಠ ಕಲಿಸುತ್ತಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ತನ್ನನ್ನು ಸಂತ್ರಸ್ತನೆಂದು ಕರೆದುಕೊಳ್ಳುತ್ತಾ, ತನ್ನಲ್ಲಿ ಉಗ್ರರೇ ಇಲ್ಲ ಎಂದು ಹೇಳಿಕೊಂಡು ಬರುತ್ತಿರುವ ಪಾಕಿಸ್ತಾನದ ನಾಯಕರಿಗೆ ಈ ಬೆಳವಣಿಗೆಗಳು ಹೆದರಿಕೆ ಹುಟ್ಟಿಸಿವೆ ಎಂದರೆ ತಪ್ಪಾಗಲಾರದು. ಹಾಗೆಯೇ, ಉಗ್ರರನ್ನು ಸಾಕುವ ನೀತಿ ಕೊನೆಗೆ ದೇಶದ ಒಳಭದ್ರತೆಯನ್ನೇ ನಾಶ ಮಾಡುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಆದರೆ ಇದರಿಂದ ಭಯೋತ್ಪಾದನೆ ಸಂಪೂರ್ಣ ಅಂತ್ಯವಾಯಿತು ಎಂದು ಭಾವಿಸುವುದು ತಪ್ಪು. ಪಾಕಿಸ್ತಾನದ ನೆಲದಲ್ಲಿ ಉಗ್ರ ಸಂಘಟನೆಗಳಿಗೆ ಇರುವ ಮೂಲಸೌಕರ್ಯ ಇನ್ನೂ ಜೀವಂತವಾಗಿದೆ. ಹೆಸರುಗಳು ಬದಲಾಗಬಹುದು, ಮುಖಗಳು ಬದಲಾಗಬಹುದು, ಆದರೆ ಭಾರತದ ವಿರುದ್ಧದ ದ್ವೇಷ ರಾಜಕೀಯ ಇನ್ನೂ ಅಲ್ಲಿ ಉಳಿದಿದೆ. ಆದ್ದರಿಂದ ಭಾರತ ತನ್ನ ಭದ್ರತಾ ಎಚ್ಚರಿಕೆಯನ್ನು ಯಾವತ್ತೂ ಸಡಿಲಿಸಬಾರದು.

ಪಾಕಿಸ್ತಾನವು ಜಗತ್ತಿನ ಮುಂದೆ ಸದಾ 'ಭಯೋತ್ಪಾದನೆಯ ಬಲಿಪಶು' ಎಂಬ ಮುಖವಾಡ ಧರಿಸಲು ಯತ್ನಿಸಿದೆ. ಆದರೆ ವಾಸ್ತವದಲ್ಲಿ ಅನೇಕ ಜಾಗತಿಕ ಉಗ್ರ ಸಂಘಟನೆಗಳಿಗೆ ಆಶ್ರಯ, ತರಬೇತಿ ಮತ್ತು ರಕ್ಷಣೆ ನೀಡಿದ ದಾಖಲೆಗಳು ಅದರ ವಿರುದ್ಧವೇ ನಿಂತಿವೆ. ಒಸಾಮಾ ಬಿನ್ ಲಾಡೆನ್‌ನಿಂದ ಹಿಡಿದು ಭಾರತದ ವಿರುದ್ಧ ಕಾರ್ಯಾಚರಣೆ ನಡೆಸಿದ ಹಲವಾರು ಉಗ್ರರ ತನಕ ಪಾಕಿಸ್ತಾನದ ನೆಲವೇ ಸುರಕ್ಷಿತ ತಾಣವಾಗಿತ್ತು ಎಂಬುದು ಜಗತ್ತಿಗೆ ತಿಳಿದ ಸಂಗತಿ.

ಇದೀಗ ಉಗ್ರರ ಹತ್ಯೆಗಳ ಸರಣಿ ಪಾಕಿಸ್ತಾನದ ಸೇನೆ ಹಾಗೂ ಐಎಸ್‌ಐ ಮೇಲೆಯೂ ಪ್ರಶ್ನೆ ಎಬ್ಬಿಸುತ್ತಿದೆ. ಒಂದು ಕಡೆ ದೇಶದ ಭದ್ರತಾ ವ್ಯವಸ್ಥೆ ದುರ್ಬಲವಾಗಿದೆಯೇ ಎಂಬ ಅನುಮಾನ ಮೂಡಿದರೆ, ಇನ್ನೊಂದು ಕಡೆ ಆಂತರಿಕ ಗುಂಪು ಸಂಘರ್ಷಗಳೇ ಇದಕ್ಕೆ ಕಾರಣವೇ ಎಂಬ ಚರ್ಚೆಯೂ ನಡೆಯುತ್ತಿದೆ. ಯಾವುದೇ ಕಾರಣವಾಗಿರಲಿ, ಪಾಕಿಸ್ತಾನವು ತನ್ನದೇ ನಿರ್ಮಿಸಿದ ಬಲೆಯೊಳಗೆ ಸಿಲುಕಿಕೊಂಡಿದೆ ಎನ್ನುವುದು ಸ್ಪಷ್ಟ.

ಹಿಂದುಫೋಬಿಯಾ ವಿರುದ್ಧದ ತೀರ್ಪು!

ರತನ್ ಶಾರದಾ

ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶದ ವಿಶ್ಲೇಷಣೆ ಮಾಡಿದ ಬಹುತೇಕ ಮಂದಿ ಬಂಗಾಳವು ತನ್ನ ಐತಿಹಾಸಿಕ ಹಿಂದುತ್ವದ ಮೂಲಕ್ಕೆ ಮತ್ತು ರಾಷ್ಟ್ರೀಯತೆಯ ಮೂಲಕ್ಕೆ ಮರಳಿದ್ದನ್ನು ಉಲ್ಲೇಖಿಸಿದ್ದಾರೆ. ಹಿಂದು ಮತಗಳು ಧ್ರುವೀಕರಣಗೊಂಡಿರುವುದನ್ನೂ ಬಣ್ಣಿಸಿದ್ದಾರೆ. ನಿಜಕ್ಕೂ ಇದೊಂದು ಐತಿಹಾಸಿಕ ಕ್ಷಣ. ಆದರೆ ನಾವು ಇದನ್ನು ಇನ್ನಷ್ಟು ಸ್ಥೂಲವಾಗಿ ಗಮನಿಸಿದರೆ ಇದೊಂದು ಅಪರೂಪದ ವಿದ್ಯಮಾನವಲ್ಲ, ಇದರ ಹಿಂದೆ ಇನ್ನೂ ದೊಡ್ಡ ಸಂದೇಶವಿರುವುದು ತಿಳಿದುಬರುತ್ತದೆ.

ಇತ್ತೀಚೆಗೆ 4 ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಕ್ಕೆ ನಡೆದ ಚುನಾವಣಾ ಫಲಿತಾಂಶವು ಒಂದು ವಿಷಯದಲ್ಲಿ ಅತ್ಯಂತ ಸ್ಪಷ್ಟ ಸಂದೇಶ ರವಾನಿಸಿದೆ. ಅದೆಂದರೆ ನೀವು ಹಿಂದು ವಿರೋಧಿ ನಿಲುವನ್ನು ತಳೆದರೆ ನೀವು ಗೆಲ್ಲುವುದು ಅಸಾಧ್ಯ ಎಂಬುದು! ಇತ್ತೀಚಿನ ದಿನಗಳಲ್ಲಿ ಹಲವಾರು ತಥಾಕಥಿತ ಜಾತ್ಯತೀತ ಪಕ್ಷಗಳು ಹಿಂದು ನಿಂದನೆಯಲ್ಲಿ ಪೈಪೋಟಿಯನ್ನೇ ನಡೆಸಿದಂತಿದ್ದವು. ಹಿಂದಿನಿಂದಲೂ ಹಿಂದುಗಳನ್ನು ನಿಂದಿಸುವ ಪ್ರಯತ್ನಗಳು ನಡೆಯುತ್ತಿದ್ದವಾದರೂ ಇತ್ತೀಚಿನ ಕೆಲವು ತಿಂಗಳುಗಳಲ್ಲಂತೂ ಅದು ಮಿತಿಮೀರಿತ್ತು. ಆದರೀಗ, ಶೇ. 78ರಷ್ಟು ಹಿಂದುಗಳಿರುವ ದೇಶದಲ್ಲಿ ಹಿಂದುಗಳನ್ನು ಜಾತಿ ಆಧಾರದಲ್ಲಿ ವಿಭಜಿಸುವ, ಅವರನ್ನು ಅವಮಾನಿಸುವ ಕಾರ್ಯವು ಒಂದು ಮಿತಿಗಿಂತ ಹೆಚ್ಚು ಹೋಗಬಾರದು ಎಂಬ ಸಂದೇಶವನ್ನು ಜನರು ನೀಡಿದ್ದಾರೆ. ಜಾತ್ಯತೀತ ಪಕ್ಷಗಳು ಹಿಂದುಗಳನ್ನು ಒಡೆದು ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನಕ್ಕೆ ತಡೆ ಹಾಕಿದ್ದಾರೆ. ಹಿಂದುಗಳು ಕೆಲವಾರು ವಿಷಯಗಳಲ್ಲಿ ವಿಭಜಿತರಾಗಿದ್ದರೂ ತಮ್ಮ 'ಹಿಂದು ಅಸ್ಮಿತೆಗೇ' ಅಪಾಯ ಒದಗುತ್ತಿದೆ ಎಂದು ಕಂಡುಬಂದಾಗ ಅದನ್ನು ತೀವ್ರವಾಗಿ ಪ್ರತಿರೋಧಿಸುತ್ತಾರೆ. ಹಾಗಾಗಿಯೇ ಹಿಂದು ವಿರೋಧಿ ಶಕ್ತಿಗಳಿಗೆ ಅವರು ನಿಚ್ಚಳ ಸೋಲು ಉಣಿಸಿದ್ದಾರೆ. ಉತ್ತರ– ದಕ್ಷಿಣ, ಪೂರ್ವ–ಪಶ್ಚಿಮ ವಿಭಜನೆಗಳೆಲ್ಲವೂ ಒಂದು ಮಿಥ್ಯೆ, ನಿಜಾರ್ಥದಲ್ಲಿ ತಾವೆಲ್ಲರೂ ಒಂದೇ ಎಂಬ ಸಂದೇಶ ಹಿಂದುಗಳಿಂದ ಘೋಷಿಸಲ್ಪಟ್ಟಿದೆ.

ಅಸ್ಸಾಂ, ಪಶ್ಚಿಮ ಬಂಗಾಳ, ತಮಿಳ್ನಾಡು ಮತ್ತು ಪುದುಚೇರಿಗಳಲ್ಲಿ ಜನರು ಹಿಂದುಫೋಬಿಯಾದ ವಿರುದ್ಧ ಸ್ಪಷ್ಟ ಜನಾದೇಶ ನೀಡಿದ್ದಾರೆ. ಹಿಂದುಗಳು ಬಹಳ ಕಾಲದಿಂದಲೇ ಅಲ್ಪಸಂಖ್ಯಾತರನ್ನು ಓಲೈಸುವ ರಾಜಕಾರಣವನ್ನು ಕಂಡು ರೋಸಿದ್ದರಾದರೂ ಆ ಕುರಿತಂತೆ ತೀವ್ರವಾಗಿ ಪ್ರತಿಭಟಿಸುವ ಕಾರ್ಯಕ್ಕೆ ಹೋಗಿರಲಿಲ್ಲ, ಆ ಕುರಿತಂತೆ ಹಿಂದುಗಳಿಗೆ ಅಸಮಾಧಾನವಿತ್ತು ನಿಜ. ತಾವು ಬಹುಸಂಖ್ಯಾತರಾದ ಕಾರಣಕ್ಕೆ ತಮಗೆ ಸೌಲಭ್ಯಗಳು ಸಿಗುತ್ತಿಲ್ಲವೆಂಬ ನೋವಿತ್ತು. ಸಮಾನ ನ್ಯಾಯದಿಂದ ತಾವು ವಂಚಿತರಾಗುತ್ತಿದ್ದೇವೆ ಎಂಬ ಖೇದವಿತ್ತು. ದೇವಸ್ಥಾನವನ್ನು ಸರಕಾರವು ನಿಯಂತ್ರಿಸುವ ವಿಷಯದಲ್ಲಾಗಲಿ ಅಥವಾ ಶಿಕ್ಷಣ ಹಕ್ಕಿನ ವಿಷಯದಲ್ಲಾಗಲಿ ಹಿಂದುಗಳು ಮತ್ತು ಅಲ್ಪಸಂಖ್ಯಾತರ ಮಧ್ಯೆ ಭೇದ ಮಾಡಲಾಗುತ್ತಿತ್ತು. ಶಿಕ್ಷಣದಲ್ಲಿ ಹಿಂದು ಧರ್ಮವನ್ನು ಬೋಧಿಸುವುದಕ್ಕೆ ನಿಷೇಧ ಹೇರಿರುವುದು ಮನಸ್ಸಿಗೆ ಘಾಸಿ ತಂದಿತ್ತು. ಆದರೆ ಸಹಿಷ್ಣುತೆ ಹಿಂದುಗಳ ಸಹಜ ಮನೋಭಾವ. ಹಾಗಾಗಿ ಅವನ್ನೆಲ್ಲ ಸೈರಿಸಿಕೊಂಡು ಬಂದಿದ್ದರು. ಆದರೆ ಯಾವುದಕ್ಕೂ ಒಂದು ಮಿತಿ ಇದೆ ಎಂಬುದು ಹಿಂದುಗಳ ಅರಿವಿನಲ್ಲಿತ್ತು. ಅಂತಹ ಮಿತಿ ದಾಟದಂತೆ ಕೆಂಪು ರೇಖೆಯನ್ನು ಹಿಂದು ಸಮಾಜ ಎಳೆದಿತ್ತು. ಆ ರೇಖೆಯನ್ನೂ ದಾಟಿ ಹಿಂದುಗಳನ್ನೇ ನಿಂದಿಸುವಂತಹ ಅತಿರೇಕಕ್ಕೆಳಸಿದ ಪಕ್ಷಗಳಿಗೆ ಈಗ ಹಿಂದುಗಳು ಪಾಠ ಕಲಿಸಿದ್ದಾರೆ.

ಇತ್ತೀಚಿನ ಚುನಾವಣೆಯಲ್ಲಿ ಕೇರಳ ಮಾತ್ರ ಎಡಪಂಥದಿಂದ ಜಾತ್ಯತೀತ ಪಕ್ಷದೆಡೆಗೆ ಹೊರಳುವ ಸಂಕೇತ ತೋರಿದೆ. ಇಲ್ಲಿಯೂ ಬಿಜೆಪಿಯು 3 ಸ್ಥಾನ ಗೆಲ್ಲುವ ಮೂಲಕ ಹಾಗೂ 6 ಸ್ಥಾನಗಳಲ್ಲಿ ಎರಡನೇ ಸ್ಥಾನ ಪಡೆಯುವ ಮೂಲಕ ತನ್ನ ಪ್ರಾಬಲ್ಯ ವೃದ್ಧಿಯನ್ನು ತೋರ್ಪಡಿಸಿದೆ. ಲೋಕಸಭೆಗೆ ಪ್ರವೇಶ, ಪಂಚಾಯತ್ ಮತ್ತು ನಗರಸಭೆಗಳಲ್ಲಿ ಆಡಳಿತ ಹಾಗೂ ಈಗ ಅಸೆಂಬ್ಲಿಗೆ ಪ್ರವೇಶ ಇವುಗಳಿಂದ ಬಿಜೆಪಿ ಮುಂದಿನ ದಿನಗಳಲ್ಲಿ ಕೇರಳ ರಾಜಕೀಯದಲ್ಲಿ ಪ್ರಮುಖ ವಹಿಸಲಿರುವುದರ ಸಂಕೇತ ತೋರಿದೆ. ನೀವು ಸೂಕ್ಷ್ಮವಾಗಿ ಗಮನಿಸಿದರೆ ಕೇರಳದಲ್ಲಿ ಈ ಬಾರಿ ಯಾವುದೇ ರಾಜಕೀಯ ಪಕ್ಷವು ಹಿಂದುಗಳ ಮೇಲೆ ದಾಳಿ ನಡೆಸುವಂತಹ ಧೈರ್ಯ ತೋರಿಲ್ಲ ಎಂಬುದನ್ನು ಕಾಣಬಹುದು. ಕಮ್ಯುನಿಸ್ಟರು ಕೂಡಾ ಶಬರಿಮಲೆ ಪ್ರಕರಣದಲ್ಲಿ ತಮ್ಮ ನಿಲುವನ್ನು ಬದಲಿಸಬೇಕಾಯಿತು. ಯುಡಿಎಫ್ ಕೂಡಾ ಕೋಮುವಾದಿ ಹೇಳಿಕೆಗಳಿಂದ ದೂರ ಉಳಿಯಿತು. ಕೇರಳದ ಹಿಂದುಗಳು ಮತ್ತು ಬಹುಮಂದಿ ಕ್ರೈಸ್ತರು ಸಣ್ಣ ಪುಟ್ಟ ಜಾತಿ ರಾಜಕಾರಣ ಮತ್ತು ಅಲ್ಪಸಂಖ್ಯಾತ ರಾಜಕಾರಣದಿಂದ ಮೇಲೆದ್ದು ಪ್ರಬುದ್ಧತೆ ಪ್ರದರ್ಶಿಸಿದ್ದಾರೆ. ಕೇರಳದ ಭವಿಷ್ಯವು ಉಜ್ವಲವಾಗಿ ಕಂಡು ಬರುತ್ತಿದೆ.

ಕೆಲವು ಅತಿರೇಕದ ಹಿಂದುತ್ವವಾದಿಗಳು, ಜಾತಿವಾದಿ ರಾಜಕಾರಣಿಗಳು, ಹಿಂದು ವಿರೋಧಿಗಳು ಸಮಾಜವನ್ನು ಒಡೆಯಲು ಪ್ರಯತ್ನ ನಡೆಸುತ್ತಿದ್ದಾರಾದರೂ ಹಿಂದುಗಳು ಅದೆಲ್ಲವನ್ನು ಮೀರಿ ಒಗ್ಗಟ್ಟು ಪ್ರದರ್ಶಿಸುತ್ತಿದ್ದಾರೆ. ಸರಕಾರದ ನೀತಿಗಳನ್ನು ರಚನಾತ್ಮಕವಾಗಿ ಟೀಕಿಸುವುದು ಸರಿ. ಆದರೆ ಅದನ್ನು ನಿಂದನೆಯ ಮಟ್ಟಕ್ಕೆ ಕೊಂಡೊಯ್ಯುವುದು, ದ್ವೇಷ ಸೃಷ್ಟಿಸುವುದು ಸರಿಯಲ್ಲ, ಆ ಮೂಲಕ ಹಿಂದುಗಳ ಮಧ್ಯೆಯೇ ವಿಭಜನೆ ಸೃಷ್ಟಿಸುವುದು ಹಿಂದು ಹಿತವನ್ನು ಕಾಯಲಾರದು. ಅತಿರೇಕದ ಭಾವೋದ್ರೇಕ ಸೃಷ್ಟಿಸುವುದು ಅಭಿಮಾನಿಗಳನ್ನು ಹುಟ್ಟಿಸಬಹುದಾದರೂ ಅದು ಒಂದು ಮಿತಿಗಿಂತ ಮುಂದೆ ಹಿಂದು ಹಿತ ಕಾಯಲಾರದು. ಸಕ್ರಿಯ ಕ್ರಿಯಾಶೀಲತೆ ಬೇಕು ನಿಜ, ಆದರೆ ಹಿಂದುಗಳ ಭಾವನೆಯನ್ನು ಸದಾ ಕಾಲ ಕೆರಳಿಸುವುದೂ ಸಲ್ಲದು. ನಮ್ಮ ಕಾಲು ನೆಲದ ಮೇಲೆಯೇ ಇರುವುದು ಅಗತ್ಯ. ಸೋಷಿಯಲ್ ಮೀಡಿಯಾಗಳಲ್ಲಿ ದೊರಕುವ 'ಮೆಚ್ಚಿಕೆ'ಗಳು ಅಥವಾ ಟ್ರೋಲ್‌ಗಳು ನೆಲಮಟ್ಟದಲ್ಲಿ ಮಾಡುವ ಕಠಿಣ ಪರಿಶ್ರಮದ ಸಮಾನಕ್ಕೆ ಬರಲಾರವು. ಬಿಜೆಪಿ ಈ ಸತ್ಯವನ್ನು ಅರಿತಿರುವುದರಿಂದಲೇ ಮೂರು ಅವಧಿಗಳಿಗೂ ಅಧಿಕಾರದಲ್ಲಿ ಉಳಿದಿರುವುದು.

ನೀವು ಜನರ ಆಶೋತ್ತರಗಳನ್ನು ಈಡೇರಿಸಲು ವಿಫಲರಾದಾಗ ಜನರು ನಿಮ್ಮನ್ನು ಒದ್ದು ಓಡಿಸುತ್ತಾರೆ. ಕಮ್ಯುನಿಸ್ಟರಿಗೆ, ಈಗ ತೃಣಮೂಲ ಕಾಂಗ್ರೆಸಿಗೆ ಇದರ ಅನುಭವವಾಗಿದೆ. ಹಿಮಾಚಲದಲ್ಲಿ ಬಿಜೆಪಿಯೂ ಈ ಪಾಠ ಕಲಿತಿದೆ. ಜನರಿಗೆ ತಮ್ಮ ವೋಟ್‌ನ ಪ್ರಾಮುಖ್ಯತೆ ಈಗ ಅರಿವಾಗಿದೆ.

ಸಹನೆ ಮತ್ತು ಧೈರ್ಯ

ಈ ಚುನಾವಣೆಯು ಭಾರತದ ಎಲ್ಲಾ ರಾಜಕೀಯ ಪಕ್ಷಗಳಿಗೆ ಕಲಿಸಿರುವ ಅತ್ಯಂತ ಮುಖ್ಯವಾದ ಪಾಠವೇನೆಂದರೆ, ದುಡ್ಡಿಗಾಗಿ ಕೆಲಸ ಮಾಡುವ ಕಾರ್ಯಕರ್ತರು ನಿಸ್ವಾರ್ಥ ಕಾರ್ಯಕರ್ತರ ಸಮಾನಕ್ಕೆ ಎಂದಿಗೂ ಬರಲಾರರು ಎಂಬುದು. ಬಿಜೆಪಿ ಈ ಕಹಿ ಪಾಠವನ್ನು ಮೊದಲಿಗೆ 2004ರಲ್ಲಿ ಹಾಗೂ ಬಳಿಕ 2024ರಲ್ಲಿ ಕಂಡುಕೊಂಡಿತು. ಕಮ್ಯುನಿಸ್ಟರು ಮತ್ತು ಶಿವಸೇನೆ ಕೂಡಾ ಈ ಕಹಿಸತ್ಯ ಅರಿತುಕೊಂಡಿವೆ. ಕೇವಲ ದುಡ್ಡಿಗಾಗಿ ದುಡಿಯುವ ಕಾರ್ಯಕರ್ತರು ಪಕ್ಷವನ್ನು, ಸಂಘಟನೆಯನ್ನು ಭ್ರಷ್ಟಗೊಳಿಸುತ್ತಾರಷ್ಟೆ. ಈಗ ಟಿಎಂಸಿ ಕೂಡಾ ಅದೇ ಸಮಸ್ಯೆ ಎದುರಿಸಿತು.

ಕೇವಲ ನಿಸ್ವಾರ್ಥ ಕಾರ್ಯಕರ್ತರು ಮಾತ್ರ ಜನರಿಗೆ ತಿಳುವಳಿಕೆ ನೀಡಬಲ್ಲ ತಾಳ್ಮೆಯನ್ನು ಹೊಂದಿದ್ದಾರೆ. ಅದು ಅತ್ಯಂತ ಕಠಿಣ ಕೆಲಸವಾದರೂ ನಿಷ್ಠೆಯಿಂದ ಮಾಡುತ್ತಾರೆ. ಕೆಲವರು ಸಾಮಾಜಿಕ ಮಾಧ್ಯಮಗಳ ಮೂಲಕ ಇದನ್ನು ಸಾಧಿಸಬಹುದೆಂದು ಭಾವಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳು ನೆರವೀಯುತ್ತವೆ ಎಂಬುದು ನಿಜ. ಆದರೆ ಸಮಾಜದಲ್ಲಿ ನೇರ ಸಂಪರ್ಕದಿಂದ ಬೆಳೆದ ಆತ್ಮೀಯತೆಗೆ ಅದು ಸಾಟಿಯಾಗಲಾರದು. ಭಾರತವು ಇನ್ನೂ ಸಂಪೂರ್ಣ ಛಿದ್ರ ಸಮಾಜವಲ್ಲ, ಸಂಬಂಧ ಬೆಳೆಸುವುದೆಂದರೆ ವಿಶ್ವಾಸ ಬೆಳೆಸುವುದೆಂದರ್ಥ. ಆರೆಸ್ಸೆಸ್ ಮತ್ತು ಬಿಜೆಪಿಯ ಕಾರ್ಯಕರ್ತರು ಬಹಳಷ್ಟು ವರ್ಷಗಳಿಂದ ಮಾಡಿಕೊಂಡು ಬಂದುದು ಇದನ್ನೇ. ತಮಿಳ್ನಾಡಿನಲ್ಲಿ ಅವರ ಪ್ರಯತ್ನ ಫಲ ನೀಡದಿರಬಹುದು. ಆದರೆ ಮಾಡುವ ವಿಧಾನ ಇದುವೇ ಸರಿ ಎಂಬುದು ಅವರಿಗೆ ತಿಳಿದಿದೆ. ಜನರಿಗೆ ಕಮ್ಯುನಿಸ್ಟರ ಬಗ್ಗೆ, ಕಾಂಗ್ರೆಸ್, ದ್ರಾವಿಡ ಪಕ್ಷಗಳು ಮತ್ತು ಟಿಎಂಸಿಯ ಕೆಟ್ಟ ಮುಖಗಳ ಬಗ್ಗೆ ತಿಳಿ ಹೇಳಲು ಹಾಗೂ ಅವರಿಂದ ಒದಗಿದ ಕಿರುಕುಳವನ್ನು ತಾಳಿ ಉಳಿಯಲು ಈ ಕಾರ್ಯಕರ್ತರು ತೋರಿದ ಧೈರ್ಯವನ್ನು ನೆನಪಿಸಿಕೊಳ್ಳಬೇಕು. ಹಲವಾರು ಬಿಜೆಪಿ ಬೆಂಬಲಿಗರು 'ಸಂಘವು ಇಷ್ಟು ತಾಳ್ಮೆಯಿಂದ ವರ್ತಿಸುವುದೇಕೆ?' ಎಂದು ನನ್ನಲ್ಲಿ ಆಗಾಗ ಕೇಳುವುದಿದೆ. ಆದರೆ ನಮ್ಮದು ಪ್ರಜಾಪ್ರಭುತ್ವ ದೇಶ. ಸಂಘವು ಇದನ್ನು 'ಲೋಕ್ ಸಂಗ್ರಹ್' ಎಂದು ಕರೆಯುತ್ತದೆ. ಜನರನ್ನು ಸಂಪರ್ಕಿಸಿ ಅವರನ್ನು ತನ್ನೊಂದಿಗೆ ಇರಿಸಿಕೊಳ್ಳುವುದು ಈ ಕಾರ್ಯದ ಅರ್ಥ.

ರಾಜಕೀಯವು ದೀರ್ಘಾವಧಿಯಲ್ಲಿ ಯಶಸ್ಸು ಕಾಣುತ್ತದೆ. ಕೇವಲ ಚುನಾವಣೆ ಗೆಲ್ಲುವುದು, ಐದು ವರ್ಷ ಅಧಿಕಾರ ನಡೆಸುವುದೇ ಗುರಿಯಲ್ಲ, ದೇಶವನ್ನು ಉನ್ನತಿಗೆ ಕೊಂಡೊಯ್ಯಬಲ್ಲ ಅತೀ ದೊಡ್ಡ ಹಾಗೂ ದೀರ್ಘಾವಧಿ ಗುರಿ ಇಟ್ಟುಕೊಳ್ಳಬೇಕು. 2014ರ ನಂತರದ ಭಾರತ ಹಾಗೂ ಅದರ ಹಿಂದಿನ ಭಾರತದ ನಡುವಿನ ಪ್ರಮುಖ ವ್ಯತ್ಯಾಸ ಕಾಣುವುದು ಇಲ್ಲಿಯೇ. ಹಿಂದಿನ ರಾಜಕೀಯ ಮುಖಂಡರೆಲ್ಲ ಮುಂದಿನ ಐದು ವರ್ಷಗಳ ಆಡಳಿತದ ಬಗ್ಗೆಯಷ್ಟೇ ಯೋಚಿಸುತ್ತಿದ್ದರು. ಆದರೆ ಮೋದಿಯವರು ಮುಂದಿನ ತಲೆಮಾರಿನ ಬಗ್ಗೆ ಯೋಚಿಸುತ್ತಿದ್ದಾರೆ. ಸ್ವಾತಂತ್ರ್ಯದ ಅಮೃತಕಾಲ ಎಂಬುದು ಕೇವಲ ಒಂದು ಮಾರ್ಕೆಟಿಂಗ್ ಗಿಮಿಕ್ ಅಲ್ಲ, ಅದು ದೇಶವನ್ನು ಪ್ರಗತಿಗೆ ಕೊಂಡೊಯ್ಯುವ ಕಾಲ.

ಭಾರತವು ಸ್ವಾತಂತ್ರ್ಯದ 25 ವರ್ಷ ಪೂರೈಸಿದಾಗ ನಾನೊಬ್ಬ ಹದಿಹರೆಯದ ಹುಮ್ಮಸ್ಸು ತುಂಬಿದ ವ್ಯಕ್ತಿಯಾಗಿದ್ದೆ. ಇಂದಿರಾಗಾಂಧಿ ಆಗ ಅಧಿಕಾರದ ತುತ್ತತುದಿಯಲ್ಲಿದ್ದರೂ ಸಾಮಾನ್ಯ ಭಾರತೀಯನಿಗೆ ಪ್ರೇರಣೆ ನೀಡಬಲ್ಲ, ಹುರುಪು ತುಂಬಬಲ್ಲ ಯಾವುದೇ ಯೋಜನೆಯನ್ನು ಹಾಕಿಕೊಳ್ಳಲಿಲ್ಲ. ಆದರೀಗ ಮೋದಿಯವರು ತಮ್ಮ ದೂರದೃಷ್ಟಿಯ ಕಾರ್ಯಕ್ರಮಗಳ ಮೂಲಕ ಭಾರತಕ್ಕೆ ಭವ್ಯ ಭವಿಷ್ಯದ ರೂಪುರೇಷೆ ಹಾಕಿಕೊಟ್ಟಿದ್ದಾರೆ. ಇವೆಲ್ಲ ಸಾಧ್ಯವಾಗಲು ಕಾರಣವೇನೆಂದರೆ, ಹಿಂದುಗಳು ಈಗ ಡಾ. ಹೆಡಗೇವಾರ್ 100 ವರ್ಷಗಳ ಹಿಂದೆ ಪ್ರತಿಪಾದಿಸಿದ 'ನಾಗರಿಕ ಹೊಣೆಗಾರಿಕೆ'ಯನ್ನು ನಿಭಾಯಿಸಲು ಕಲಿತುಕೊಂಡಿರುವುದೇ ಆಗಿದೆ.

ಅಪರಿಚಿತ ಬಂದೂಕುಧಾರಿಗೊಂದು ಸಲಾಂ!

ಪೃಥ್ವಿರಾಜ್ ಕುಲಕರ್ಣಿ



ಎಲ್ಲಾ ಕೇಸುಗಳಲ್ಲಿ ಒಂದು ಸಾಮಾನ್ಯ ಸೆಟ್ ಅಪ್. ಬೈಕುಗಳಲ್ಲಿ ಬರುವ ಇಬ್ಬರು ಅಪರಿಚಿತ ಬಂದೂಕುಧಾರಿಗಳು ವ್ಯಕ್ತಿಯೊಬ್ಬನ ಮುಂದೆ ನಿಲ್ಲುತ್ತಿದ್ದಂತೆ ಜೇಬಿನಿಂದ ಬಂದೂಕು ತೆಗೆದು ಹಣೆಗಿಡುತ್ತಾರೆ. ಬೀದಿಯಲ್ಲಿ ಗತಿಯಿಲ್ಲದಂತೆ ಹೆಣವಾಗುವವನು ಸಾಮಾನ್ಯ ಮನುಷ್ಯನಾಗಿರಲ್ಲ, ಆತ ಭಯೋತ್ಪಾದಕ. ಹೊಡೆದವರು ಯಾರೋ ಅಲ್ಲಿಯವರೇ! ಯಾವುದೋ ಹೆಸರಿನಲ್ಲಿ ಪರಿಚಿತರು. ಮೇಲ್ನೋಟಕ್ಕೆ ಅದೇ ದೇಶದಲ್ಲಿರುವ ಜನಸಾಮಾನ್ಯರಂತೇ ಕಾಣಿಸಿಕೊಳ್ಳುತ್ತಾರೆ. ಹೊಡೆಯುತ್ತಿದ್ದಂತೆ ನನ್ನ ಕೆಲಸ ಮುಗಿದೇ ಬಿಡ್ತು ಅನ್ನುವಂತೆ ಪಾರಾಗಿಬಿಡುತ್ತಾರೆ. ಸುತ್ತಮುತ್ತಲಿನ ಜನ ಮರಳಿ ದಾಳಿ ಮಾಡುವಷ್ಟರಲ್ಲಿ ಎಲ್ಲಿರುತ್ತಾರೋ? ಯಾವ ದೇಶಕ್ಕೆ ಹೋಗುತ್ತಾರೋ?. ಇದು ದ್ವೇಷಕ್ಕಾಗಿ ನಡೆದ ಹತ್ಯೆ ಅಲ್ಲ, ಅಥವಾ ರೆಹಮಾನ್ ಡಕಾಯತ್, ಅರ್ಷದ್ ಪಪ್ಪು ನಡುವೆ ನಡೆಯುತ್ತಿದ್ದ ದಂಗೆಯೂ ಅಲ್ಲ. ಹೆಣವಾಗಿ ಬಿದ್ದವನು ಇವರಿಬ್ಬರಿಗಿಂತ ಮೋಸ್ಟ್ ವಾಂಟೆಡ್! ಹೊಡೆದವನು ಗೂಂಡಾ ಅಲ್ಲ. ಜಾತಿ, ಧರ್ಮ, ಸಾಮಾನ್ಯ ಜೀವನ ತ್ಯಜಿಸಿ ಯಾರಿಂದಲೂ ಸಾಧ್ಯವಾಗದ ಕೆಲಸ ಮಾಡುವವ. ಅವನಿಗೆ ಶ್ರೇಯ ಸಿಗಲ್ಲ, ಅವನ ಹೆಸರಲ್ಲಿ ಸಿನಿಮಾಗಳಾಗಲಿ, ಕಾರ್ಯಕ್ರಮಗಳಾಗಲಿ ಆಗಲ್ಲ, ಆತ ಮಾಡುವುದು ದೇಶ ಹಿತದ ಕೆಲಸವಾಗಿದ್ದರೂ, ಆತನ ನೈಜ ಹೆಸರು ಯಾರಿಗೂ ಗೊತ್ತಾಗುವುದೇ ಇಲ್ಲ. ಆತ ಪಡೆಯುವುದು ಕೇವಲ ಅನ್‌ನೌನ್ ಗನ್‌ಮ್ಯಾನ್ ಎಂಬ ಹೆಡ್‌ಲೈನ್. ಆತನ ಹರಸಾಹಸ ಥ್ರಿಲ್ಲಿಂಗ್ ಸಿನಿಮಾ ಇದ್ದಂತೆ! ಆದರೆ ಸಿನಿಮಾ ಮಾಡಿದಷ್ಟು ಸರಳ ಕೆಲಸವೇ ಅಲ್ಲ.

ಹೊಸ ಭಾರತದ ಪರಿಕಲ್ಪನೆಯಲ್ಲಿ ಹಿಂದುಸ್ಥಾನದ ವಿರುದ್ಧ ಸಂಚು ರೂಪಿಸುವವರೆಲ್ಲಾ ತಮ್ಮ ಮನೆಯ ಮುಂದೆ ಬೀದಿ ಹೆಣವಾಗಿ ಬೀಳುತ್ತಿದ್ದಾರೆ. ಇದಕ್ಕೆ ನೂರಾರು ಸಾಕ್ಷಿಗಳಿವೆ. ದಶಕಗಳ ಕಾಲದಿಂದ ಭಾರತದ ವಿರುದ್ಧ ಭಯೋತ್ಪಾದಕ ಸಂಚು ರೂಪಿಸುವುದು, ದಾಳಿ ಮಾಡಿಸುವುದು, ಭಾರತ ವಿರುದ್ಧ ಷಡ್ಯಂತ್ರಗಳನ್ನು ರಚಿಸುವ ಪಾಕ್ ಭಯೋತ್ಪಾದಕನಿಗೆ ಈಗ ಸೇನೆಯ ಭಯಕ್ಕಿಂತಲೂ ಅಪರಿಚಿತ ಬಂದೂಕುಧಾರಿಯದ್ದೇ ಭಯ ಜಾಸ್ತಿ. ಯಾವ ದೇಶದವನೋ? ಎಲ್ಲಿಂದ ಬಂದನೋ? ಇಲ್ಲೇ ನನ್ನ ಜತೆಗೇ ಇರುತ್ತಿದ್ದ, ಆದರೆ ಒಂದು ದಿನ ನನ್ನ ಹಣೆಗೇ ಬಂದೂಕು ಇಟ್ಟುಬಿಟ್ಟ ಎಂಬ ಗೋಳಾಟ. ಈ ನಡುವೆ ದೊಡ್ಡ ಕಾಕತಾಳೀಯವೆಂದರೆ, ಸತ್ತ ಭಯೋತ್ಪಾದಕ ಭಾರತ ವಿರೋಧಿ, ಭಾರತದ ಶತ್ರು. ಅಂಥವರ ಪಟ್ಟಿ ಗಮನಿಸಿದರೆ, ಹತ್ತಾರು ಹೆಸರು ಸಿಗುತ್ತವೆ.

ಅಪರಿಚಿತ ಬಂದೂಕುಧಾರಿಯ ಅರ್ಭಟ ಶುರುವಾಗಿದ್ದೇ 2022ರಲ್ಲಿ. ಪಾಕಿಸ್ತಾನದ ದೊಡ್ಡ ನಗರವೊಂದರಲ್ಲಿ ಕಾರ್ಖಾನೆ ನಡೆಸುತ್ತಿದ್ದ ಜಹೀದ್ ಅಖುನ್ ಎಂಬ ವ್ಯಕ್ತಿ ಅಪರಿಚಿತ ಬಂದೂಕುಧಾರಿ ಹೊಡೆತಕ್ಕೆ ಕರಾಚಿ ನಡು ಬೀದಿಯಲ್ಲೇ ಸತ್ತು ಬಿದ್ದ. ಆತ ಯಾರು ಎಂಬ ತನಿಖೆ ನಡೆಸಿದಾಗ, ಆತನ ಅಸಲು ಹೆಸರು ಜಹೂರ್ ಮಿಸ್ತ್ರಿ! 1999ರಲ್ಲಿ 814 ವಿಮಾನ ಹೈಜ್ಯಾಕ್ ಮಾಡಿದ ಭಯೋತ್ಪಾದಕ ಎಂಬ ಮಾಹಿತಿ ಬಹಿರಂಗವಾಯಿತು. ಮಸೂದ್ ಅಝರ್ ಬಿಡುಗಡೆಗೆ ಬೇಡಿಕೆ ಇಟ್ಟ ಮಹಾ ರಾಕ್ಷಸ. ಪ್ರಯಾಣಿಕ ರೂಪಿನ್ ಕತ್ಯಾಲ್ ಹತ್ಯೆಗೈದವನೆಂಬ ಆತಂಕಕಾರಿ ವಿಷಯವೂ ಗೊತ್ತಾಯಿತು. ಅದೇ ಮಿಸ್ತ್ರಿ ಬೀದಿಯಲ್ಲಿ ಬೀದಿ ಹೆಣವಾಗಿ ಸತ್ತು ಬಿದ್ದ. ಅಂದಿನಿಂದ ಅಪರಿಚಿತ ಬಂದೂಕುಧಾರಿ ಹೆಸರು ವಿಶ್ವದಲ್ಲಿ ಖ್ಯಾತಿ ಪಡೆಯಿತು.

ಕೆಲವು ದಿನಗಳ ನಂತರ ಪಾಕಿಸ್ತಾನದಲ್ಲಿ ಮುಫ್ತಿ ಶಾಹ್ ಮಿರ್ ಎಂಬ ಭಾರತ ವಿರೋಧಿ ಭಯೋತ್ಪಾದಕ ಕೂಡ ಅಪರಿಚಿತ ಬಂದೂಕುಧಾರಿ ಹೊಡೆತಕ್ಕೆ ಬಲಿಯಾದ. ಭಾರತದ ಹಿಟ್‌ಲಿಸ್ಟ್‌ನಲ್ಲಿದ್ದ ಪ್ರಮುಖ ಭಯೋತ್ಪಾದಕ, ಮುಂಬೈ ದಾಳಿಯ ಸಂಚುಕೋರ ಅಬು ಕತಾಲ್/ಕತಾಲ್ ಶಿಂಧಿ ಕೂಡ ಬಲಿಯಾದ. ಪಠಾಣ್‌ಕೋಟ್ ದಾಳಿಯ ಶಯೀದ್ ಲತೀಫ್, ಮಿಯಾ ಮುಜಾಯಿದ್ದೀನ್ ಕಮಾಂಡರ್ ಖಿವಾಜಾ ಶಾಹೀದ್, ಜಮ್ಮು-ಕಾಶ್ಮೀರದ ಯುವಕರನ್ನು ಭಾರತ ವಿರುದ್ಧ ಪ್ರಚೋದಿಸುತ್ತಿದ್ದ ಅಕ್ರಮ್ ಖಾನ್ ಕೂಡ ಅನ್‌ನೌನ್ ಗನ್‌ಮ್ಯಾನ್ ಅಬ್ಬರಕ್ಕೆ ಬಲಿಯಾಗಿದ್ದಾರೆ. ಇದರಲ್ಲಿ ಕೆಲವುಗಳನ್ನು ಧುರಂಧರ್ ಸಿನಿಮಾದಲ್ಲಿ ತೋರಿಸಲಾಗಿದೆ. ಆದರೆ, ವಿಚಿತ್ರ ವಿಚಾರವೆಂದರೆ ಇತ್ತೀಚಿನ ದಿನಗಳಲ್ಲೂ ಬಂದೂಕುಧಾರಿಯ ಕೆಲಸ ಹೆಚ್ಚಾಗುತ್ತಿದೆ.

ಲಷ್ಕರ್‌ನ ಕಮಾಂಡರ್ ಅಬ್ದುಲ್ ಗಫಾರ್ ಎಂಬ ಭಯೋತ್ಪಾದಕ ಸಂಘಟನೆಗಳ ದೊಡ್ಡ ನಾಯಕರುಗಳ ಜತೆಗೆ ಕಾಣಿಸಿಕೊಳ್ಳುತ್ತಿದ್ದ. ಭಾರತ ವಿರುದ್ಧ ಮಾತನಾಡುವುದು, ಭಯೋತ್ಪಾದಕ ದಾಳಿಗೆ ಪ್ರಚೋದನೆ



ನೀಡುವುದು ಈತನ ಕೆಲಸವಾಗಿತ್ತು. ಜನವರಿಯಲ್ಲಿ ಈತ ಅಪರಿಚಿತ ಬಂದೂಕುಧಾರಿಯ ಹೊಡೆತಕ್ಕೆ ಈತನೂ ಬಲಿಯಾದ. ಪಹಲ್ಗಾಮ್ ದಾಳಿಯ ಸಂಚುಕೋರರಲ್ಲಿ ಒಬ್ಬನಾದ ಇಮ್ರಾನ್ ದಯಾಲ್, ಲಷ್ಕರ್ ಸಂಘಟನೆಯೊಂದಿಗೆ ಕಾಣಿಸಿಕೊಳ್ಳುತ್ತಿದ್ದ. ಇಮ್ರಾನ್ ಪಾಕಿಸ್ತಾನಿ ಸೇನೆಯಲ್ಲೂ ಲೆಫ್ಟಿನೆಂಟ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ. ದಾಳಿಗೆ ಸೇನೆಯಿಂದ ಬೇಕಾದ ಸಹಾಯ ಪಡೆದುಕೊಳ್ಳುತ್ತಿದ್ದ ಎಂಬ ಆರೋಪಗಳಿದ್ದವು. ಈತನಿಗೂ ಕೂಡ ಬಂದೂಕುಧಾರಿಗಳೇ ಪಾಕಿಸ್ತಾನದ ದೇರಾದಲ್ಲಿ ಹೊಡೆದಿದ್ದಾರೆ.

ಪಾಕಿಸ್ತಾನದ ಬಲೋಚಿಸ್ತಾನದ ಬೀದಿಯಲ್ಲಿ ಹೆಣವಾಗಿ ಬಿದ್ದ ಈತ ಜಮ್ಯೆತ್ ಉಕೇಮಾ-ಎ ಇಸ್ಲಾಂ ಸದಸ್ಯ. ಭಾರತ ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿದ್ದ ಮತ್ತೊಬ್ಬನ ಹೆಸರು ಮುಫ್ತಿ ಶಾಹ್ ಮಿರ್ ಅಜೀಜ್. ಡ್ರಗ್ ಮಾಫಿಯಾದಲ್ಲಿ ಹೆಸರು ಪಡೆದ ಈತ ಭಾರತದ ಕಮಾಂಡರ್ ಕುಲ್‌ಬುಷನ್ ಜಾದವ್ ಅವರನ್ನು ಅಪಹರಿಸಲು ಐಎಸ್‌ಐಗೆ ಸಹಾಯ ಮಾಡಿದ್ದ. ಮಾರ್ಚ್ 7ರಂದು ಅಪರಿಚಿತ ಬಂದೂಕುಧಾರಿಯಿಂದಲೇ ಹತನಾಗಿದ್ದಾನೆ.

ಭಾರತದ ವಿರುದ್ಧ ಸಂಚು ರೂಪಿಸುವವರಿಗೆ ನಾಯಿ ಪಾಡು. ಈ ಕೃತ್ಯಗಳನ್ನು ಯಾರು ಮಾಡುತ್ತಿದ್ದಾರೆ ಎಂಬುದಕ್ಕೆ ಪುರಾವೆಗಳಿಲ್ಲ. ಧುರಂಧರ್ ಸಿನಿಮಾ ನೋಡಿದವರೆಲ್ಲಾ ನಮ್ಮವರೇ ಯಾರೋ ಹೊಡೆದಿದ್ದಾರೆ ಎಂಬ ವಿಚಾರ ನಂಬುತ್ತಿದ್ದಾರೆ. ಆದರೆ ಪಾಕಿಸ್ತಾನ, ಕೆನಡಾ ಅಂಥ ರಾಷ್ಟ್ರಗಳ ಆರೋಪ ಹೊರತು ಇದಕ್ಕೆ ಯಾವ ಸಾಕ್ಷಿಯೂ ಇಲ್ಲ, ಭಾರತ ಮಾಡುತ್ತಿದೆ ಎಂಬ ಆರೋಪ ಮಾಡುವ ಪಾಕಿಸ್ತಾನ ಅಂತಹ ಭಯೋತ್ಪಾದನೆಗೆ ಪ್ರಚೋದಿಸುವ ರಾಷ್ಟ್ರಗಳು ನಮ್ಮಲ್ಲೊಬ್ಬ ಇದ್ದ, ಅವನು ಸತ್ತ ಎಂಬ ಮಾತುಗಳೂ ಹೇಳಲಾಗಲ್ಲ, ಏಕೆಂದರೆ ಭಯೋತ್ಪಾದಕರು ನಮ್ಮಲ್ಲಿ ಜೀವಂತವಿಲ್ಲ ಎಂಬ ಮಾತುಗಳನ್ನು ಹೇಳುವ ಪಾಕ್ ಭಯೋತ್ಪಾದಕ ಸತ್ತ ಎಂಬ ವಿಚಾರ ಹೇಗೆ ಹೇಳಿಕೊಳ್ಳುತ್ತದೆ?

ಆದರೆ ಯಾರೇ ಮಾಡಿರಲಿ, ಯಾವುದೇ ದೇಶದವರು ಮಾಡಿರಲಿ, ಅದು ವಿಶ್ವದ ಹಿತಕ್ಕಾಗಿ ಮಾಡಿರುವ ಮಹಾ ಕಾರ್ಯ. ಸಾಮಾನ್ಯ ಜನರ ಜೀವ ನುಂಗಲು ಯತ್ನಿಸುವವರಿಗೆ ಹೊಡೆಯುವುದು ದ್ವೇಷಕ್ಕಾಗಿ ಅಲ್ಲ, ಪ್ರತಿಕಾರ ಮತ್ತು ಶಾಂತಿ ಸ್ಥಾಪನೆಗಾಗಿ. ಹೊಡೆದವರು ಯಾವುದೇ ದೇಶದವರಲಾಗಿರಲಿ, ಅವರು ದೇವರಿಗಿಂತ ಕಮ್ಮಿಯಿಲ್ಲ. ಇಲ್ಲಿ ಹೊಡೆದ ಧೈರ್ಯಕ್ಕಿಂತಲೂ ಬಂದೂಕುಧಾರಿಗಳ ತ್ಯಾಗಗಳನ್ನು ಮೆಚ್ಚಬೇಕು.

ಎಐ ಕಾಲದಲ್ಲಿ ನಾವಿದ್ದೇವೆ. ಒಂದು ಪ್ರದೇಶದಲ್ಲಿ ಎಷ್ಟು ಜನರು ಇರುತ್ತಾರೆ, ಯಾವ ದೇಶದವರು ಇರುತ್ತಾರೆ. ಹೇಗೆ ಕಾಣಿಸುತ್ತಾರೆ, ಅವರ ಫಿಂಗರ್ ಪ್ರಿಂಟ್ ಎಲ್ಲವೂ ಸೆಕೆಂಡುಗಳಲ್ಲಿ ಗೊತ್ತಾಗುತ್ತದೆ. ಇಂಥಾ ಸಮಯದಲ್ಲಿ ಬೇರೆ ದೇಶದ ವ್ಯಕ್ತಿ ಬಂದಿರುತ್ತಾನೆ. ಅವರು ಹೆಸರು, ಗುರುತು, ಪರಿಚಯಗಳನ್ನು ಮುಚ್ಚಿಟ್ಟುಕೊಂಡಿರುತ್ತಾರೆಂದರೆ ಅದೇ ಸಾಹಸ. ಮೂಲಗಳನ್ನು ಹುಡುಕುತ್ತಾ ಹೋಗಬೇಕು. ಗೊತ್ತಿಲ್ಲದವರನ್ನು ಬೇಡವಾದರೂ ಪರಿಚಯ ಮಾಡಿಕೊಳ್ಳಬೇಕು. ಸ್ಪೈ ಲೋಕದಲ್ಲಿ ಸಾಮಾನ್ಯರಿಂದ ಇರಲು ಸಾಧ್ಯವೇ ಇಲ್ಲ, ಎಷ್ಟೋ ಬೇಡವಾದ ಕೆಲಸ ಮಾಡಬೇಕಾಗುತ್ತದೆ. ಒಬ್ಬ ಸ್ಪೈ ಜೀವನ ಸಿನಿಮಾದಲ್ಲಿ ತೋರಿಸಿದಂತೆ ಸರಳವಾಗಿರಲ್ಲ, ತನಗೆ ಬೇಕಾದದ್ದನ್ನೆಲ್ಲಾ ಬದಿಗಿಟ್ಟು ರಾಷ್ಟ್ರ ಹಿತಕ್ಕಾಗಿ ಕೆಲಸ ಮಾಡಬೇಕಾಗುತ್ತದೆ. ತನ್ನ ಇಷ್ಟದ ವಿರುದ್ಧ ಇರಬೇಕು. ಬೇಡವಾದ ಪ್ರದೇಶದಲ್ಲಿರಬೇಕು, ಬೇಡವಾದವರ ಜತೆಗೆ ಬದುಕಬೇಕು. ಹೆಸರು, ಜಾತಿ, ಧರ್ಮ ಎಲ್ಲವನ್ನೂ ಬದಲಾಯಿಸಿಕೊಳ್ಳಬೇಕು. ಪಾಕಿಸ್ತಾನದಂತಹ ಭಯೋತ್ಪಾದನಾ ರಾಷ್ಟ್ರಗಳಲ್ಲಿ ಭಯೋತ್ಪಾದಕರಿಗೆ ಅಲ್ಲಿನ ಸರ್ಕಾರ ಮತ್ತು ಸೇನೆ ಬೆಂಬಲಿಸುತ್ತವೆ. ಹೀಗಿರುವಾಗ ಅಂಥವರ ಸನಿಹಕ್ಕೆ ಹೋಗಿ, ಸಮಯ ನೋಡಿಕೊಂಡು ಹೊಡೆಯಬೇಕೆಂದರೆ ಅದು ದೊಡ್ಡ ಸಾಧನೆಯೇ ಸರಿ.

ಇವೆಲ್ಲದಕ್ಕೂ ಮಿಗಿಲಾಗಿ ಜೀವವೇ ಪಣಕ್ಕಿಡಬೇಕು. ಒಂದು ದೇಶದ ವಿರುದ್ಧ ಅದೇ ದೇಶದಲ್ಲಿ ಯುದ್ಧ ಮಾಡುವುದೆಂದರೆ ಜೀವನ ಪಣಕ್ಕಿಟ್ಟಂತೆ. ಗೂಡಾಚಾರಿಕೆಗೆ ಹೋಗುವವರಿಗೆ ಮರಳಿ ಬರುತ್ತೇನೆ ಎಂಬ ಆಸೆ ಇರಬಾರದು ಎಂಬ ಮಾತುಗಳಿವೆ. ಕೊಟ್ಟ ಕೆಲಸ ಮುಗಿಸಿ ಮಾಹಿತಿಗಳನ್ನು ತೆಗೆದುಕೊಂಡು ಮರಳಿ ದೇಶಕ್ಕೆ ಬರುವುದೆಂದರೆ ಅದು ಪವಾಡ. ಇಷ್ಟೆಲ್ಲಾ ಮಾಡುವ ಒಬ್ಬ ಗೂಡಾಚಾರನಿಗೆ ಶ್ರೇಯ ಸಿಕ್ಕಿತೆ? ಹೆಗ್ಗಳಿಕೆ ಸಿಕ್ಕಿತೆ? ಅಥವಾ ಯಾರು ಹೊಡೆದರೆಂಬ ಮಾಹಿತಿ ಜನರಿಗೆ ತಲುಪಿತೇ? ಇಲ್ಲ! ಸ್ಪೈಗಳು ಮಾಡುವ ಸಾಧನೆಗೆ ಸಿಗುವುದು, ಅಪರಿಚಿತ ಬಂದೂಕುಧಾರಿ ಎಂಬ ಹೆಡ್‌ಲೈನ್ ಮಾತ್ರ. ಅವರ ಹೆಸರಲ್ಲಿ ಸರ್ಕಲ್ಲುಗಳಾಗಲ್ಲ, ಅವರಿಗೆ ದೊಡ್ಡ ದೊಡ್ಡ ಹೆಸರು, ಪೋಸ್ಟ್ ಅಥವಾ ಫೇಮ್ ಕೂಡ ಸಿಗಲ್ಲ, ಹೋಗಲಿ, ನಾನೇ ಸಾಧನೆ ಮಾಡಿದ್ದು ಎಂದು ಹೇಳಿಕೊಳ್ಳಲೂ ಆಗದ ಪರಿಸ್ಥಿತಿ. ಜೀವ ಪಣಕ್ಕಿಟ್ಟು ದೇಶದ ರಕ್ಷಣೆಗಾಗಿ ಹೋಗುವ ಗೂಡಾಚಾರನಿಗೆ ಮನಸಲ್ಲಿರುವುದು ಒಂದೇ. ದೇಶಕ್ಕಾಗಿ ಏನಾದರೂ ಮಾಡಬೇಕೆಂಬ ಆಸೆ. ಅವರ ಬಲಿದಾನಕ್ಕೆ, ಧೈರ್ಯಕ್ಕೆ, ತ್ಯಾಗಕ್ಕೆ ಮತ್ತು ದೇಶಭಕ್ತಿಗೊಂದು ಸಲಾಂ!

ಸಿದ್ಧಿ ಪಡೆಯದ ವಿದ್ಯೆ ವ್ಯರ್ಥ

ಅಗುಣಸ್ಯ ಹತಂ ರೂಪಂ ಅಶೀಲಸ್ಯ ಹತಂ ಕುಲಮ್।
ಅಸಿದ್ಧೇಽಸ್ತು ಹತಾ ವಿದ್ಯಾ ಅಭೋಗಸ್ಯ ಹತಂ ಧನಮ್ ॥ – ಸುಭಾಷಿತಾವಳಿ

ಸದ್ಗುಣಗಳ ಕೊರತೆಯು ರೂಪವನ್ನು ಕೆಡಿಸುತ್ತದೆ. ಸೌಶೀಲ್ಯವು ಇಲ್ಲದಲ್ಲಿ ಕುಲವು ಕೀಳಾಗಿ ಎಣಿಸಲ್ಪಡುತ್ತದೆ; ಸಿದ್ಧಿಯನ್ನು ಹೊಂದದ ವಿದ್ಯೆ ವ್ಯರ್ಥ – ಎಂಬುದು ಶ್ಲೋಕಾರ್ಥ.

ವ್ಯಕ್ತಿಯ ಜೀವನ ಚೆನ್ನಾಗಿರಬೇಕು ಎಂಬುದು ಎಲ್ಲರ ಸಹಜವಾದ ಆಶಯ. ಚೆನ್ನಾಗಿರುವುದು ಎಂದರೇನು? ಎಂಬ ಪ್ರಶ್ನೆಗೆ ಈ ರೀತಿ ಹೇಳಬಹುದು. ನಡೆ, ನುಡಿ ಚೆನ್ನಾಗಿರಬೇಕು. ಪ್ರಾಮಾಣಿಕನೂ, ಪರಿಶ್ರಮಿಯೂ ಆಗಿರಬೇಕು ಇತ್ಯಾದಿ. ಒಟ್ಟಿನಲ್ಲಿ ಲೋಕ ಮೆಚ್ಚುವ ರೀತಿಯಲ್ಲಿ ವ್ಯವಹಾರವಿರಬೇಕು.



ಇವುಗಳೋ ಭೂಷಣಕ್ಕೆ ಭೂಷಣ. ಉಳಿದವುಗಳು ಎಷ್ಟೇ ಇದ್ದರೂ ಈ ಎಲ್ಲ ಸಭ್ಯತೆಗಳ ಅಂಶಗಳು ಇಲ್ಲವಾದರೆ ಚೆನ್ನಾದ ಬದುಕು ಅಸಾಧ್ಯ.

ಎಷ್ಟೇ ಚೆನ್ನಾಗಿರಲಿ, ಆಕರ್ಷಕ ರೂಪರಾಶಿಯಿರಲಿ, ಸದ್ಗುಣವಿಲ್ಲದಿದ್ದರೆ ಪ್ರಯೋಜನಕ್ಕೆ ಬಾರದು. 'ಗುಣಾಃ ಪೂಜಾಸ್ಥಾನಮ್' ಎಂದರೆ ಸಜ್ಜನ ಸಮಾಜದಲ್ಲಿ ಗುಣಕ್ಕೆ ಪೂಜ್ಯತೆಯೇ ವಿನಾ ರೂಪಕ್ಕಲ್ಲ. ಸದ್ಗುಣಗಳು ಇಲ್ಲದಿದ್ದರೆ ರೂಪವಂತನಲ್ಲ; ರೂಪಸಿಯೂ ಅಲ್ಲ. ಸದ್ಗುಣ, ಸನ್ನಡತೆಗಳು ವಿಶೇಷ ರೂಪವನ್ನು ತಂದುಕೊಡುತ್ತವೆ. ಸೌಂದರ್ಯವನ್ನು ಮೆರೆಸುತ್ತವೆ. ಗುಣವಿಲ್ಲದಿದ್ದರೆ ರೂಪ ಕೆಡುತ್ತದೆ. ನೋಡುವುದಕ್ಕೆ ಚೆನ್ನಾಗಿರಬಹುದು. ಆದರೆ ಜನರು ಬಯಸುವುದಿಲ್ಲ; ಸಮೀಪಿಸುವುದಿಲ್ಲ. ಯಾವಾಗಲೂ ರೂಪಕ್ಕೆ ಸದ್ಗುಣಗಳು ಪೋಷಕವಾಗಿ ನಿಲ್ಲುತ್ತವೆ. ಅಂತಹ ಜೀವನಕ್ಕೆ ಬಂಗಾರದ ಕಮಲ ಪರಿಮಳಿಸಿದಂತಾಗುತ್ತದೆ.

'ಶೀಲಂ ಸರ್ವತ್ರ ಭೂಷಣಮ್' ಎಂಬ ಸೂಕ್ತಿಯೇ ಶೀಲದ ಮಹತ್ವವನ್ನು ಹೇಳುತ್ತದೆ. ಶೀಲವನ್ನು ಕಳೆದುಕೊಂಡರೆ ಎಲ್ಲವನ್ನೂ ಕಳೆದುಕೊಂಡಂತೆ. ಶೀಲಾದಿಗಳಿಲ್ಲದ ವ್ಯಕ್ತಿಯನ್ನೂ, ಕುಟುಂಬವನ್ನೂ ಜನರು ತಿರಸ್ಕಾರದಿಂದ ನೋಡುತ್ತಾರೆ. ಕೀಳಾಗಿ ಕಾಣುತ್ತಾರೆ. ಸೌಶೀಲ್ಯವೆಂಬುದು ಸರ್ವದಾ, ಸರ್ವರಿಗೂ ಭೂಷಣಪ್ರಾಯವಾದದ್ದು, ಶೀಲವಿಲ್ಲದಿದ್ದ ಕುಟುಂಬವನ್ನಾಗಲೀ ವ್ಯಕ್ತಿಯನ್ನಾಗಲಿ, ಜನರನ್ನಾಗಲಿ ಸಮಾಜವೆಂದೂ ಮನ್ನಿಸಲಾರದು.

ವಿದ್ಯೆ ಅಪೂರ್ವ ಸಂಪತ್ತು. ವಿಶಿಷ್ಟವಾದ ಭೂಷಣ, ಎಲ್ಲರೂ ಹೊಂದಲೇಬೇಕಾದ ನಿತ್ಯೋಪಯೋಗಿ ಆಭರಣ. ಮನುಷ್ಯನಾಗಿ ಹುಟ್ಟಿದ ಮೇಲೆ ವಿದ್ಯೆಯನ್ನು ಕಲಿಯಲೇಬೇಕು. ಕೇವಲ ಕಲಿಕೆಯಿಂದ ಪ್ರಯೋಜನವಿಲ್ಲ. ಸಿದ್ಧಿಯನ್ನು ಪಡೆದಿರಬೇಕು. ತುಂಬಾ ಓದಿಕೊಂಡಿದ್ದಾನೆ, ಸಾಕಷ್ಟು ಡಿಗ್ರಿಗಳನ್ನು ಸಂಪಾದಿಸಿದ್ದಾನೆ ಎಂಬುದು ಸತ್ಯವಾದರೂ ಕಾಲಕ್ಕೆ ಒದಗಿ ಬರದಿದ್ದರೆ ಅದು ವಿದ್ಯೆಯಲ್ಲ. ನಾವು ಕಲಿತ ವಿದ್ಯೆ ನಮ್ಮ ಜೀವನ ಪಯಣದಲ್ಲಿ ಕೈ ಹಿಡಿದು ನಡೆಸುವಂತಿರಬೇಕು. ನನ್ನಲ್ಲಿರುವ ವಿದ್ಯೆಯಿಂದ ಎಲ್ಲಿಯೂ ಬದುಕಬಲ್ಲೆ; ಚೆನ್ನಾಗಿ ಬದುಕಬಲ್ಲೆ ಎಂಬ ಆತ್ಮವಿಶ್ವಾಸ ಬೆಳೆಸಬೇಕು.

ಕಲಿತ ವಿದ್ಯೆ ಹಾಗೂ ಗಳಿಸಿದ ಹಣಗಳೆರಡೂ ನಿತ್ಯ ಬದುಕಿನಲ್ಲಿ ಬಳಕೆಯಾಗಬೇಕು. ಜೀವನ ನಿರ್ವಹಣೆಗೆ ವಿಶ್ವಾಸಪೂರ್ಣ ಭದ್ರ ಬುನಾದಿಯನ್ನು ಹಾಕಿಕೊಡಬೇಕು. ಗಳಿಸಿದ ಸಂಪತ್ತನ್ನು ಭೋಗಿಸಬೇಕು. ಬಳಸಿಕೊಳ್ಳಬೇಕು. ಗಳಿಸಿದ ಸಂಪತ್ತಿನಿಂದ ಸುಖವನ್ನನುಭವಿಸಬೇಕು. ಗಳಿಕೆಯ ಸಾರ್ಥಕತೆ ಇರುವುದು ಇಲ್ಲಿಯೇ.

ಪತ್ರ ಮಿತ್ರ

ಇಮ್ರಾನ್ ಪದಚ್ಯುತಿಯಲ್ಲಿ ಅಮೆರಿಕದ ಪಾತ್ರ

ಪಾಕಿಸ್ತಾನದ ಮಾಜಿ ಮುಖ್ಯಮಂತ್ರಿ ಇಮ್ರಾನ್ ಖಾನ್‌ರವರು ತಮ್ಮ ಪದಚ್ಯುತಿಯಲ್ಲಿ ಅಮೆರಿಕದ ಕೈವಾಡವಿದೆಯೆಂದು ಆರೋಪಿಸುತ್ತಾ ಬಂದಿದ್ದರು. ಅವರ ಆರೋಪವನ್ನು ಬಹುತೇಕರು ಅಂದು ನಂಬಿರಲಿಲ್ಲ. ಆದರೆ ಅಮೆರಿಕದ ಮಾಜಿ ವಿದೇಶಾಂಗ ಕಾರ್ಯದರ್ಶಿ ಮತ್ತು ಅಮೆರಿಕದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿದ್ದ ಮಜೀದ್ ಖಾನ್ ನಡುವೆ ಇಮ್ರಾನ್ ಪದಚ್ಯುತಿಯ ಕೆಲವೇ ದಿನಗಳ ಮೊದಲು ನಡೆದಿದ್ದ ಮಾತುಕತೆಯ ದಾಖಲೆಗಳು ಈಗ ಬಹಿರಂಗಗೊಳ್ಳುವುದರೊಂದಿಗೆ ಇಮ್ರಾನ್ ಖಾನ್ ಪದಚ್ಯುತಿಯಲ್ಲಿ ನಿಜಕ್ಕೂ ಅಮೆರಿಕದ ಕೈವಾಡ ಇರುವುದು ಶ್ರುತಪಟ್ಟಿದೆ. ಇಮ್ರಾನ್ ಖಾನ್ ಸರಕಾರವನ್ನು ವಜಾಗೊಳಿಸಬೇಕು ಎಂಬುದಾಗಿ ಅಮೆರಿಕವು ಅಂದು ಪಾಕಿಸ್ತಾನಿ ಸೇನೆಯ ಮೇಲೆ ಒತ್ತಡ ಹೇರಿತ್ತೆಂಬುದು ಈ ದಾಖಲೆಯಿಂದ ಸ್ಪಷ್ಟವಾಗಿದೆ.

ಇಮ್ರಾನ್ ಖಾನ್ ರಷ್ಯಾಕ್ಕೆ ಭೇಟಿ ನೀಡಿದ್ದು, ಉಕ್ರೇನ್ ಸಮರದಲ್ಲಿ ತಟಸ್ಥ ನೀತಿ ಅನುಸರಿಸಿದ್ದು ಅಮೆರಿಕಕ್ಕೆ ಅಸಮಾಧಾನ ಹುಟ್ಟಿಸಿತ್ತು. ಅದಕ್ಕಾಗಿಯೇ ಪ್ರಜಾತಾಂತ್ರಿಕವಾಗಿ ಆಯ್ಕೆಯಾದ ಇಮ್ರಾನ್‌ರನ್ನು ಕೆಳಗಿಳಿಸಿ, ಸೇನೆಯೇ ಅಧಿಕಾರ ಸೂತ್ರ ಹಿಡಿಯುವಂತೆ ಅಮೆರಿಕ ತಂತ್ರ ಹೆಣೆದಿತ್ತು. ಪ್ರಜಾತಂತ್ರದ ರಕ್ಷಕನೆಂದು ಹೇಳಿಕೊಳ್ಳುವ ಅಮೆರಿಕದ ದ್ವಂದ್ವ ನಿಲುವು ಇದರಿಂದ ಜಗಜ್ಜಾಹೀರಾಗಿದೆ.

ಅಮೆರಿಕವು ಪ್ರಜಾತಾಂತ್ರಿಕ ಸರಕಾರವನ್ನು ಉರುಳಿಸಿರುವುದು ಇದೇ ಮೊದಲಲ್ಲ, ಬಾಂಗ್ಲಾ ಸರಕಾರದ ಪತನದಲ್ಲೂ ಅಮೆರಿಕದ ಕೈವಾಡವಿತ್ತು. ಭಾರತದಲ್ಲಿ ಕೂಡಾ ಆಡಳಿತ ಬದಲಾವಣೆಗೆ ಅಮೆರಿಕ ಯತ್ನಿಸಿತ್ತು. ಸ್ವತಂತ್ರ ವಿದೇಶಾಂಗ ನೀತಿಯನ್ನು ಹೊಂದಿರುವ ಮೋದಿ ಸರಕಾರವು ಅಮೆರಿಕದ ಪಾಲಿಗೆ ಆರಂಭದಿಂದಲೂ ಅಪಥ್ಯವೇ ಆಗಿದೆ. ಹಾಗಾಗಿ ಮೋದಿ ಸರಕಾರವನ್ನು ಉರುಳಿಸಲು ಕೂಡಾ ಅಮೆರಿಕದಿಂದ ಪ್ರಯತ್ನಗಳು ನಡೆದಿವೆ. ಆದರೆ ಮೋದಿ ಸರಕಾರ ಇಂತಹ ತಂತ್ರ ಸಫಲವಾಗಲು ಬಿಡಲಿಲ್ಲ ಅಷ್ಟೆ. ಇನ್ನು ಮುಂದಕ್ಕೂ ಇಂತಹ ಪ್ರಯತ್ನ ನಡೆಯಲಾರದು ಎನ್ನುವಂತಿಲ್ಲ. ಆದ್ದರಿಂದ ಭಾರತದ ಜನತೆ ಕೂಡಾ ಈ ನಿಟ್ಟಿನಲ್ಲಿ ಎಚ್ಚರದಿಂದಿರಬೇಕಾಗಿದೆ.

–ಚಿದಾನಂದ ರಾವ್, ಕುಂದಾಪುರ

ಧೀರಃ ತತ್ರ ನ ಮುಹ್ಯತಿ

'ವಿಕಾರ ಹೇತೌಸತಿ ವಿಕ್ರಿಯಂತೇ ಯೇಷಾಂನ ಚೇತಾಂಸಿ ತ ಏವ ಧೀರಾಃ' (ಚಿತ್ತಚಾಂಚಲ್ಯಕ್ಕೆ ಕಾರಣಗಳಿದ್ದರೂ ಯಾರ ಮನಸ್ಸು ವಿಚಲಿತವಾಗುವುದಿಲ್ಲವೋ ಅವರು ಧೀರರೇ ಸರಿ.) ಕಾಳಿದಾಸನ ಈ ಮಾತು ಮೋದಿಯವರಿಗೆ ಸೊಗಸಾಗಿ ಅನ್ವಯಿಸುತ್ತದೆ. ಇತ್ತೀಚೆಗಿನ ವಿದ್ಯಮಾನಗಳನ್ನು ಪರಿಗಣಿಸಿದರೆ ಅವರು ದೇಶವನ್ನು ನಿಭಾಯಿಸಿದ ರೀತಿ ಅಚ್ಚರಿಯನ್ನುಂಟು ಮಾಡುತ್ತದೆ. ಸ್ವಾರ್ಥಿಗಳಾದ ಪ್ರತಿಪಕ್ಷಗಳು, ದುರ್ಬುದ್ಧಿ ಜೀವಿಗಳು, ಪೀತಪತ್ರಕರ್ತರು ದಿನನಿತ್ಯವೆಂಬಂತೆ ಒಂದಲ್ಲ ಒಂದು ಕಾರಣಕ್ಕೆ ಮೋದಿಯವರನ್ನು ನಿಂದಿಸುತ್ತಲೇ ಇದ್ದಾರೆ. ಕಾಂಗ್ರೆಸ್ಸಿನ ಬಹುಮಂದಿ ಇಂಗು ತಿಂದವರಂತೆ ವರ್ತಿಸುತ್ತಿರುವುದು ಹೊಸತೇನಲ್ಲ. ಇದೀಗ ನಾರ್ವೆಯ ಅಪ್ರಬುದ್ಧ ಪತ್ರಕರ್ತೆಯ ಬಾಲ ಹಿಡಿದು ನೇತಾಡಲು ಹೊರಟ ಇವರ ಪರಿಸ್ಥಿತಿ ನೀಚ ಮನಸ್ಸಿನ ಪ್ರತೀಕವೇ ಸರಿ.

ಮೋದಿಯಂತಹ ಸ್ಥಿತಪ್ರಜ್ಞ ಈ ದೇಶದ ಪ್ರಧಾನಿಯಾಗಿರುವುದು ನಮ್ಮೆಲ್ಲರ ಸೌಭಾಗ್ಯ. ಶಿಕ್ಷಣ ಕ್ಷೇತ್ರವನ್ನು ಗೊಂದಲದಲ್ಲಿ ಮುಳುಗಿಸಿದ ಶಿಕ್ಷಣ ಸಚಿವರು, ಆಡಳಿತವನ್ನು ಹದಗೆಡಿಸಿದ ಮಂತ್ರಿಮಾಗಧರು ಮತದಾರ ಪ್ರಭುಗಳನ್ನು ದಿಕ್ಕು ತಪ್ಪಿಸುವಲ್ಲಿ ಯಶಸ್ವಿಗಳಾಗಿದ್ದಾರೆ. ವಿಶ್ವಯುದ್ಧದ ಪರಿಣಾಮವಾಗಿ ನಮ್ಮ ದೇಶದ ವಿವಿಧ ಕ್ಷೇತ್ರಗಳಿಗೆ ಹಾನಿಯಾಗಿದೆ. ದೇಶದ ಹಿತಚಿಂತನೆಯ ದೃಷ್ಟಿಯನ್ನಿಟ್ಟುಕೊಂಡು ಮೋದಿಯವರು ನಮಗೆ ಉಪದೇಶಿಸಿದ ಮಾತು ಸ್ವಾಗತಾರ್ಹ. 'ಧೀರಃ ತತ್ರನ ಮುಹ್ಯತಿ' ಎಂಬುದಕ್ಕೆ ಮೋದಿಯವರೇ ಸಾಕ್ಷಿ.

–ಎಂ. ಸುಬ್ರಹ್ಮಣ್ಯ ಭಟ್, ಮುಡಿಪು

ಜನಸಂಖ್ಯೆ ಹೆಚ್ಚಳಕ್ಕೆ ಪ್ರೋತ್ಸಾಹ

ಜನಸಂಖ್ಯೆ ಕುಸಿತದ ಆತಂಕ ಎದುರಿಸುತ್ತಿರುವ ಆಂಧ್ರಪ್ರದೇಶ ಇದೀಗ ಜನನ ಪ್ರಮಾಣ ಹೆಚ್ಚಿಸಲು ನಗದು ಪ್ರೋತ್ಸಾಹದ ದಾರಿ ಹಿಡಿದಿರುವುದು ಅಚ್ಚರಿಕರ. ರಾಜ್ಯದಲ್ಲಿ ಮೂರನೇ ಮಗುವಿಗೆ ರೂ. 30,000 ಹಾಗೂ ನಾಲ್ಕನೇ ಮಗುವಿಗೆ 40,000 ರೂ. ಪ್ರೋತ್ಸಾಹಧನ ನೀಡಲಾಗುವುದು ಎಂದು ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರು ಘೋಷಿಸಿರುವುದು ವಿಪರ್ಯಾಸವಾಗಿದೆ.

ಸರ್ಕಾರ ಕೊಡುವ ಮೂವತ್ತು ಹಾಗೂ ನಲವತ್ತು ಸಾವಿರದ ಆಸೆಗೆ ಮಕ್ಕಳನ್ನು ಹೇರುವವರು ಬಡವರೇ ಹೊರತು ಶ್ರೀಮಂತರಲ್ಲ. ಸರ್ಕಾರ ನೀಡಿದ ದುಡ್ಡು ಖಾಲಿಯಾದ ಮೇಲೆ ಈ ಮಕ್ಕಳ ಲಾಲನೆ ಪಾಲನೆ ಹಾಗೂ ಪೋಷಣೆ ಮಾಡುವವರು ಯಾರು? ಅವರನ್ನು ಸಾಕಲಿಕ್ಕೆ ಹಾಗೂ ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಹಣ ಬೇಡವಾ? ಮೊದಲೇ ಬಡತನದ ಬೇಗೆಯಿಂದ ಬಳಲುತ್ತಿರುವ ಕುಟುಂಬಕ್ಕೆ ಹಾಗೂ ಮಕ್ಕಳ ಭವಿಷ್ಯಕ್ಕೆ ಆಸರೆಯಾಗುವವರು ಯಾರು? ಮಕ್ಕಳನ್ನು ಹೆತ್ತು ಜನಸಂಖ್ಯೆ ಹೆಚ್ಚು ಮಾಡಿದರಷ್ಟೇ ಸಾಲದು. ಹೀಗಿರುವ ಒಂದೆರಡು ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡಿಸಿ, ಒಳ್ಳೆಯ ಸಂಸ್ಕಾರವನ್ನು ಕಲಿಸಿ, ದೇಶಪ್ರೇಮ ಬೆಳೆಸಿದರೆ ಅದೇ ನಾವು ನಮ್ಮ ದೇಶಕ್ಕೆ ಮಾಡುವ ನಿಜವಾದ ದೇಶಸೇವೆ ಅಲ್ಲವೇ? ಮುಖ್ಯಮಂತ್ರಿ ಚಂದ್ರಬಾಬು ನಾಯ್ಡುರವರ ಮಾತನ್ನು ಆಂಧ್ರದ ಜನತೆ ಗಂಭೀರವಾಗಿ ತೆಗೆದುಕೊಳ್ಳದಿದ್ದರೆ ಅಷ್ಟೇ ಸಾಕು!

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಪರಿಹಾರ ಕೊಡಿ

ಮೇ 3ರಂದು ನಡೆದಿದ್ದ ನೀಟ್ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಹಿನ್ನೆಲೆಯಲ್ಲಿ ಪರೀಕ್ಷೆಯೇ ರದ್ದಾಗಿರುವುದು ಲಕ್ಷಾಂತರ ವಿದ್ಯಾರ್ಥಿಗಳಿಗೆ ಆಘಾತ ಉಂಟು ಮಾಡಿದೆ. ಇದೀಗ ನೀಟ್ ಪರೀಕ್ಷೆಯನ್ನು ಮತ್ತೆ ಜೂನ್ 21ಕ್ಕೆ ನಡೆಸಲಾಗುತ್ತಿದೆ. ಮತ್ತೊಮ್ಮೆ ಅದೇ ಪರೀಕ್ಷೆ ಬರೆಯಲು ವಿದ್ಯಾರ್ಥಿಗಳು ಪುನಃ ಹಣ ಖರ್ಚು ಮಾಡಬೇಕಾಗಿ ಬಂದಿದೆ. ಆದ್ದರಿಂದ, ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳಿಗೂ ಪರೀಕ್ಷಾ ಕೇಂದ್ರಕ್ಕೆ ಹೋಗಿ ಬರಲು ಕನಿಷ್ಠ ರೂ. 500 ರಂತೆ ನಗದು ನೀಡಿದರೆ ಅಲ್ಪ ಮಟ್ಟಿಗಾದರೂ ನೆರವಿಗೆ ಬರಬಹುದು.

–ಲಕ್ಷ್ಮಣ್ ಗೊರ್ಲಕಟ್ಟಿ, ಮೈಸೂರು

ಪಾಕಿಸ್ತಾನಕ್ಕೆ ವಿಶ್ವಸಂಸ್ಥೆಯಲ್ಲಿ ಭಾರತ ಛೀಮಾರಿ

ತನ್ನದೇ ನಾಗರಿಕರ ಮೇಲೆ ಪಾಕ್ ದಾಳಿ

•ವಿಶ್ವಸಂಸ್ಥೆ : ಪಾಕ್ ಮಿಲಿಟರಿ ಪಡೆಗಳ ಗಡಿಯಾಚಿನ ಹಿಂಸಾಚಾರಗಳಿಗೆ ಅಫಘಾನಿಸ್ತಾನದ ಸಹಸ್ರಾರು ಅಮಾಯಕ ನಾಗರಿಕರು ಬಲಿಯಾಗುತ್ತಿರುವುದು ಮತ್ತು ಗಾಯಗೊಳ್ಳುತ್ತಿರುವ ಅನ್ಯಾಯವನ್ನು ವಿಶ್ವಸಂಸ್ಥೆಯಲ್ಲಿ ನೇರಾನೇರ ಉಲ್ಲೇಖಿಸಿರುವ ಭಾರತ, ತನ್ನದೇ ಜನರ ಮೇಲೆ ಬಾಂಬ್ ದಾಳಿ ನಡೆಸಿ, ವ್ಯವಸ್ಥಿತವಾಗಿ ನರಮೇಧ ನಡೆಸುವ ರಾಷ್ಟ್ರವೊಂದು ಈ ತೆರ ಹೀನಾಯವಾಗಿ ಆಕ್ರಮಣ ನಡೆಸುತ್ತಿರುವುದರಲ್ಲಿ ಅಚ್ಚರಿಯೇನಿಲ್ಲ ಎಂದು ಪಾಕ್‌ಗೆ ಛೀಮಾರಿ ಹಾಕಿದೆ.



ಮೇ ತಿಂಗಳಲ್ಲಿ ಚೀನಾ ಭದ್ರತಾ ಮಂಡಳಿ ಅಧ್ಯಕ್ಷತೆ ವಹಿಸುವ ವಿಚಾರವಾಗಿ ಚರ್ಚೆ ಸಂದರ್ಭ, ವಿಶ್ವಸಂಸ್ಥೆಗೆ ಪಾಕ್ ರಾಯಭಾರಿ ಆಸಿಮ್ ಇಫ್ತಿಕಾರ್ ಅಹಮದ್ ಜಮ್ಮು ಕಾಶ್ಮೀರ ವಿಚಾರವೆತ್ತಿದ್ದರು. ತಕ್ಷಣ ಪಾಕಿಸ್ತಾನವನ್ನು ತೀವ್ರವಾಗಿ ತರಾಟೆಗೆತ್ತಿಕೊಂಡ ,ವಿಶ್ವಸಂಸ್ಥೆಗೆ ಭಾರತದ ಖಾಯಂ ಪ್ರತಿನಿಧಿ-ರಾಯಭಾರಿ ಹರೀಶ್ ಪರ್ವತನೇಣಿ, ಸುದೀರ್ಘಕಾಲದಿಂದ ನರಮೇಧ ಕೃತ್ಯಗಳ ಪಾತಕಿ ದಾಖಲೆ ಹೊಂದಿರುವುದು ಪಾಕಿಸ್ತಾನ ಎಂದು ವಸ್ತುನಿಷ್ಠ ವಿಚಾರವನ್ನು ಬಹಿರಂಗಪಡಿಸಿದರು.

ಅಮಾನುಷ ನರಮೇಧಗಳಿಗೆ ಕುಖ್ಯಾತ ಮತ್ತು ಇಂತಹ ಹೀನಾಯ ಕೃತ್ಯಗಳ ಸುದೀರ್ಘ ದಾಖಲೆ ಹೊಂದಿರುವ ಪಾಕಿಸ್ಥಾನ , ಭಾರತಕ್ಕೆ ತೀರಾ ಆಂತರಿಕವಾಗಿರುವ ವಿಚಾರಗಳಲ್ಲಿ ತಲೆಹಾಕುವುದು ತೀರಾ ವಿಪರ್ಯಾಸ ಎಂದು ಹರೀಶ್ ಟೀಕಿಸಿದರು. ಸಶಸ್ತ್ರ ಸಂಘರ್ಷದಲ್ಲಿ ನಾಗರಿಕರ ರಕ್ಷಣೆ ಕುರಿತ ಭದ್ರತಾ ಮಂಡಳಿಯ ವಾರ್ಷಿಕ ಮುಕ್ತ ಚರ್ಚೆಯಲ್ಲಿ ಹರೀಶ್ ಪಾಲ್ಗೊಂಡು ಪಾಕಿಸ್ತಾನಕ್ಕೆ ಈ ರೀತಿ ಛೀಮಾರಿ ಹಾಕಿದರು.

ಮೂರು ತಿಂಗಳಲ್ಲಿ 750ನಾಗರಿಕರು ಬಲಿ

ಪಾಕ್ ಮಿಲಿಟರಿ ಪಡೆಗಳ ಗಡಿಯಾಚೆಯ ಸಶಸ್ತ್ರ ಹಿಂಸಾಚಾರಗಳು ಮತ್ತು ಬಹುತೇಕ ವೈಮಾನಿಕ ದಾಳಿಯಿಂದ 2026ರ ಮೊದಲ ಮೂರು ತಿಂಗಳಲ್ಲಿ ಅಫಘಾನಿಸ್ಥಾನದಲ್ಲಿ 750ನಾಗರಿಕರು ಅನ್ಯಾಯವಾಗಿ ಸಾವಿಗೀಡಾಗಿದ್ದಾರೆಂಬ, ಅಫಘಾನಿಸ್ಥಾನದಲ್ಲಿನ ವಿಶ್ವಸಂಸ್ಥೆಯ ನೆರವು ಸಂಸ್ಥೆಯ ಅಂದಾಜುಗಳನ್ನು ಹರೀಶ್ ಇದೇ ಸಂದರ್ಭ ಉಲ್ಲೇಖಿಸಿದರು. ಅಫಘಾನಿಸ್ಥಾನದಲ್ಲಿ ಸಂಭವಿಸಿರುವ ನಾಗರಿಕರ ಸಾವುನೋವುಗಳ 95ರಲ್ಲಿ 94 ಪ್ರಕರಣಗಳು ಪಾಕ್ ಭದ್ರತಾ ಪಡೆಗಳ ದಾಳಿಯಿಂದ ಸಂಭವಿಸಿವೆ ಎಂದು ವಿಶ್ವಸಂಸ್ಥೆಯ ನೆರವು ಮಿಷನ್ ತಿಳಿಸಿತ್ತು. ಮಾರ್ಚ್‌ನಲ್ಲಿ ಪವಿತ್ರ ರಂಜಾನ್ ತಿಂಗಳಲ್ಲಿ ಕಾಬೂಲ್‌ನ ಒಮಿಡ್ ಎಡಿಕ್ಷನ್ ಟ್ರೀಟ್‌ಮೆಂಟ್ ಆಸ್ಪತ್ರೆ ಮೇಲೆ ಪಾಕ್ ನಡೆಸಿದ ಭೀಕರ ವಾಯುದಾಳಿಯನ್ನು ಜಗತ್ತು ಮರೆತಿಲ್ಲ. ಪಾಕ್ ಮಿಲಿಟರಿ ಆಸ್ಪತ್ರೆ ಮೇಲೆ ನಡೆಸಿದ ಅತ್ಯಂತ ಹೇಡಿತನದ ಮತ್ತು ಆಘಾತಕಾರಿ ದಾಳಿಯಿಂದ 269 ನಾಗರಿಕರು ಮೃತಪಟ್ಟಿದ್ದು, 122 ಮಂದಿ ಗಾಯಗೊಂಡಿದ್ದರು. ಆ ಆಸ್ಪತ್ರೆ ಯಾವುದೇ ಕಾರಣಕ್ಕೂ ಮಿಲಿಟರಿ ಟಾರ್ಗೆಟ್ ಎಂದು ಸಮರ್ಥಿಸುವಂತಿಲ್ಲ ಎಂದು ಹರೀಶ್ ಪಾಕಿಸ್ಥಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡರು. ಕತ್ತಲಲ್ಲಿ ಅಮಾಯಕ ನಾಗರಿಕರ ಮೇಲೆ ದಾಳಿ ನಡೆಸುತ್ತಿರುವ ಪಾಕಿಸ್ಥಾನ ಮುಗದೊಂದೆಡೆ ಅಂತಾರಾಷ್ಟ್ರೀಯ ಕಾನೂನಿನ ಉನ್ನತ ಸಿದ್ಧಾಂತಗಳನ್ನು ಉಲ್ಲೇಖಿಸುವುದು ತೀರಾ ಬೂಟಾಟಿಕೆ ಎಂದು ಹರೀಶ್ ಟೀಕಿಸಿದ್ದಾರೆ.

ಕೇರಳಕ್ಕೆ ಸಿಕ್ಕ ಭಾರತದ ಮೊದಲ ಎಐ ಸಚಿವ!



ಭಾರತದಲ್ಲಿ ಕೃತಕ ಬುದ್ಧಿಮತ್ತೆ(ಎಐ) ಆಡಳಿತ ಮತ್ತು ಸಾರ್ವಜನಿಕ ಸೇವೆಗಳನ್ನು ವೇಗವಾಗಿ ಪ್ರವೇಶಿಸುತ್ತಿರುವ ಸಂದರ್ಭದಲ್ಲಿ, ಇದೇ ಮೊದಲ ಬಾರಿಗೆ ರಾಜ್ಯ ಸರ್ಕಾರವೊಂದು ಎಐ ಕ್ಷೇತ್ರಕ್ಕೆ ಸಚಿವ ಸ್ಥಾನ ಸೃಷ್ಟಿಸುವ ಮೂಲಕ ಗಮನಸೆಳೆದಿದೆ. ಮುಸ್ಲಿಂ ಲೀಗ್(ಐಯುಎಂಎಲ್) ಹಿರಿಯ ನಾಯಕ ಪಿ.ಕೆ. ಕುನ್ಹಾಲಿಕುಟ್ಟಿ ಮೊದಲ ಎಐ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ. ತಮಿಳುನಾಡಿನಲ್ಲಿ ಕಾಂಗ್ರೆಸ್ ಬೆಂಬಲ ಪಡೆದುಕೊಂಡು ಸರ್ಕಾರ ರಚನೆ ಮಾಡಿರುವ ಟಿವಿಕೆ ವಿಜಯ್ ಸರ್ಕಾರವೂ ಇದೇ ನಡೆ ಪರಿಗಣಿಸಲಿದೆ ಎನ್ನುವ ವರದಿಗಳು ಹರಿದಾಡುತ್ತಿವೆ. ಈ ಕುರಿತಾದ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಸುದ್ದಿ ಸಮಗ್ರ

- ಶೀಘ್ರದಲ್ಲಿ ತಮಿಳುನಾಡಿನಲ್ಲೂ ಎಐ ಸಚಿವಾಲಯ?
- ಎಐ ಸಚಿವರ ಮುಂದಿರುವ ಸವಾಲುಗಳೇನು?



ಎಐ ಸಚಿವರ ಪಾತ್ರವೇನು?

ಎಐ ಸಚಿವರ ಪಾತ್ರ ಸಾಮಾನ್ಯ ಐಟಿ ಇಲಾಖೆಯಿಂದ ಸ್ವಲ್ಪ ಭಿನ್ನವಾಗಿರುತ್ತದೆ. ಎಐ ಸಚಿವಾಲಯವು ವಿವಿಧ ಸರ್ಕಾರಿ ಇಲಾಖೆಗಳಾದ್ಯಂತ ಎಐ ಹೇಗೆ ಬಳಸಬೇಕೆಂದು ನಿರ್ಧರಿಸುವುದರ ಜತೆಗೆ ಎಐ ತರಬಹುದಾದ ಬದಲಾವಣೆಗಳಿಗೆ ರಾಜ್ಯ ಸರ್ಕಾರವು ಹೇಗೆ ಸಿದ್ಧವಾಗಬೇಕು ಎಂಬ ಕುರಿತು ನೀತಿ, ನಿಯಮ ಮತ್ತು ಕಾರ್ಯತಂತ್ರಗಳನ್ನು ರೂಪಿಸುವ ಸಾಧ್ಯತೆಯಿದೆ.

ಪ್ರಮುಖ ಜವಾಬ್ದಾರಿಗಳು ಹೀಗಿರುವ ಸಾಧ್ಯತೆಯಿದೆ:

- ಸರ್ಕಾರಿ ಸೇವೆಗಳಲ್ಲಿ ಎಐ ಬಳಕೆ: ನಾಗರಿಕ ಸೇವೆಗಳು, ದಾಖಲೆ ನಿರ್ವಹಣೆ, ದೂರು ಪರಿಹಾರ ವ್ಯವಸ್ಥೆಗಳನ್ನು ಹೆಚ್ಚು ವೇಗ ಮತ್ತು ಪರಿಣಾಮಕಾರಿಯಾಗಿ ಮಾಡುವುದು.
- ಎಐ ನೀತಿ ಮತ್ತು ನಿಯಂತ್ರಣ: ಸರ್ಕಾರದ ಇಲಾಖೆಗಳು ಎಐ ಅನ್ನು ಹೇಗೆ ಬಳಸಬೇಕು ಎಂಬ ಮಾರ್ಗಸೂಚಿ ರೂಪಿಸುವುದು.
- ಡೇಟಾ ಸುರಕ್ಷತೆ ಮತ್ತು ಗೌಪ್ಯತೆ: ನಾಗರಿಕರ ಮಾಹಿತಿಯ ರಕ್ಷಣೆ ಹಾಗೂ ಹೊಣೆಗಾರಿಕೆಯಿಂದ ಎಐ ಬಳಕೆಗೆ ಮಾನದಂಡ ರೂಪಿಸುವುದು.
- ಸ್ಟಾರ್ಟ್‌ಅಪ್ ಮತ್ತು ಕೈಗಾರಿಕಾ ಉತ್ತೇಜನ: ಎಐ ಆಧಾರಿತ ಉದ್ಯಮಗಳು, ಸಂಶೋಧನೆ ಮತ್ತು ಹೂಡಿಕೆಗಳಿಗೆ ಬೆಂಬಲ.
- ಶಿಕ್ಷಣ ಮತ್ತು ಕೌಶಲ್ಯ ಅಭಿವೃದ್ಧಿ: ವಿದ್ಯಾರ್ಥಿಗಳು ಮತ್ತು ಉದ್ಯೋಗಿಗಳಿಗೆ ಎಐ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು.
- ಆರೋಗ್ಯ, ಕೃಷಿ, ನಗರ ಆಡಳಿತದಲ್ಲಿ ಎಐ: ಸರ್ಕಾರಿ ಯೋಜನೆಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸುವುದು.

ತಮಿಳುನಾಡಿನಲ್ಲೂ ಎಐ ಸಚಿವಾಲಯ?

ಚುನಾವಣಾ ಪ್ರಚಾರದ ವೇಳೆ, ನಮ್ಮ ಪಕ್ಷಕ್ಕೆ ಬಹುಮತ ನೀಡಿ ಗೆಲ್ಲಿಸಿದರೆ ಎಐ ಸಚಿವಾಲಯ ಅಥವಾ ಆಡಳಿತ ಚೌಕಟ್ಟಿನೊಳಗೆ ಎಐ ತರುವುದಾಗಿ ಸಿ.ಜೋಸೆಫ್ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಹೇಳಿಕೊಂಡಿತ್ತು. ದೈನಂದಿನ ಜೀವನದಲ್ಲಿ ಎಐ ಬಳಕೆ ಹೆಚ್ಚಾಗುತ್ತಿದ್ದು, ಕೇರಳದಂತೆ ತಮಿಳುನಾಡು ಸರ್ಕಾರವೂ ಪ್ರತ್ಯೇಕ ಎಐ ಸಚಿವಾಲಯ ಸೃಷ್ಟಿಸುವ ಸಾಧ್ಯತೆಯಿದೆ.

ವಿಜಯ್ ಗೆಲುವಿನಲ್ಲಿ ಎಐ ಪ್ರಮುಖ ಪಾತ್ರ!

ಇದಲ್ಲದೆ, ವಿಜಯ್ ಟಿವಿಕೆ ಗೆಲುವಿನಲ್ಲಿ ಎಐ ತಂತ್ರಜ್ಞಾನ, ಸೈಬರ್ ವಾರಿಯರ್ಸ್, ರೂಟ್ ಸಂಸ್ಥೆ ಪ್ರಮುಖ ಪಾತ್ರ ವಹಿಸಿವೆ. ವಿಜಯ್ ಅವರ ಪಕ್ಷದ ಪ್ರಚಾರದಲ್ಲಿ ಎಐ ಪ್ರಮುಖ ಪಾತ್ರ ವಹಿಸಿದೆ. ಹೀಗಾಗಿ ಮುಖ್ಯಮಂತ್ರಿ ವಿಜಯ್ ತಮ್ಮ ಸರ್ಕಾರದಲ್ಲಿ ಪ್ರತ್ಯೇಕ ಎಐ ಸಚಿವಾಲಯವನ್ನು ಸೃಷ್ಟಿಸುವ ಸಾಧ್ಯತೆಯಿದೆ. ವಿಜಯ್ ಬೆಂಬಲಿಗರ ಎಐ ಆಧಾರಿತ ಡಿಜಿಟಲ್ ಪ್ರಚಾರ ಪ್ರಮುಖ ಪಾತ್ರವನ್ನು ವಹಿಸಿದೆ. ಹಾಗೆಂದು ಎಐ ಮಾತ್ರವೇ ವಿಜಯ್ ಗೆಲ್ಲಿಸಿದ್ದು ಎನ್ನಲು ಸಾಧ್ಯವಿಲ್ಲ.

- ಎಐ ಆಧಾರಿತ ಫೋಟೋ, ವಿಡಿಯೋಗಳಿಂದ ಚುನಾವಣಾ ಪ್ರಚಾರ
- ದೊಡ್ಡ ಮಟ್ಟದಲ್ಲಿ ಟಿವಿಕೆ ಫ್ಯಾನ್ ಕ್ಲಬ್‌ಗಳ ಸಂಪರ್ಕಜಾಲ ಸೃಷ್ಟಿಸಿ, ತನ್ನ ಬೆಂಬಲಿಗರ ಮೂಲಕ ಎಐ ಆಧಾರಿತ ಡಿಜಿಟಲ್ ಪ್ರಚಾರ
- ಎಐ ಆಧಾರಿತ ಭಾವನಾತ್ಮಕ ಕಂಟೆಂಟ್ ಸೃಷ್ಟಿಸುವ ಮೂಲಕ ಜನಸಾಮಾನ್ಯರ ಮಧ್ಯೆ ವಿಜಯ್ ಪರವಾದ ಆಖ್ಯಾನ(ನರೇಟಿವ್) ನಿರ್ಮಾಣ



ಎಐ ಸಚಿವರ ನೇಮಿಸಿದ ಮೊದಲ ರಾಷ್ಟ್ರ ಯುಎಇ

ಯುನೈಟೆಡ್ ಅರಬ್ ಎಮಿರೇಟ್ಸ್(ಯುಎಇ) 2017ರಲ್ಲೇ ಎಐ ರಾಜ್ಯ ಸಚಿವರ ಹುದ್ದೆಯನ್ನು ರಚಿಸಿತ್ತು. ಇದರೊಂದಿಗೆ ಎಐ ಸಚಿವರನ್ನು ನೇಮಿಸಿದ ವಿಶ್ವದ ಮೊದಲ ರಾಷ್ಟ್ರವೆಂಬ ಗೌರವ ಪಡೆದಿತ್ತು. ಸರ್ಕಾರದ ಸೇವೆಗಳು ಮತ್ತು ಭವಿಷ್ಯದ ಆರ್ಥಿಕ ಬೆಳವಣಿಗೆಯಲ್ಲಿ ಎಐ ಪ್ರಮುಖ ಪಾತ್ರ ವಹಿಸಲಿದೆ ಎಂಬ ನಂಬಿಕೆಯಿಂದ ಯುಎಇ ಸರ್ಕಾರ ಎಐ ಸಚಿವಾಲಯ ರಚಿಸಿತ್ತು. ಪ್ರತ್ಯೇಕ ಸಚಿವಾಲಯ ಸೃಷ್ಟಿಸಿದ ನಂತರ ತನ್ನ ಆಡಳಿತ ಮತ್ತು ಸಾರ್ವಜನಿಕ ಸೇವೆಗಳಲ್ಲಿ ಎಐ ಬಳಕೆಯನ್ನು ವೇಗವಾಗಿ ಹೆಚ್ಚಿಸಿತ್ತು. ತನ್ನ ಕಾರ್ಯಕ್ಷಮತೆ ಹೆಚ್ಚಿಸುವ, ಜಾಗತಿಕ ಎಐ ಕಂಪನಿಗಳನ್ನು ತನ್ನತ್ತ ಆಕರ್ಷಿಸುವ ಮತ್ತು ಎಐ ಮೂಲಸೌಕರ್ಯ ನಿರ್ಮಿಸುವ ಗುರಿಯೊಂದಿಗೆ ಎಐ ನೀತಿಯನ್ನು ಜಾರಿಗೆ ತಂದಿತ್ತು. 2027ರ ವೇಳೆಗೆ ವಿಶ್ವದ ಮೊದಲ ಸಂಪೂರ್ಣ ಎಐ ಆಧಾರಿತ ಸರ್ಕಾರವಾಗಿ ಹೊರಹೊಮ್ಮಲು ಯುಎಇ ಸಿದ್ಧತೆ ನಡೆಸುತ್ತಿದೆ.

ಸೌದಿಯಲ್ಲಿ ಎಐಗೆ ಉತ್ತೇಜನ

ಸೌದಿ ಅರೇಬಿಯಾ ತನ್ನದೇ ಸೌದಿ ಮಾಹಿತಿ ಮತ್ತು ಕೃತಕ ಬುದ್ಧಿಮತ್ತೆ (ಎಐ) ಪ್ರಾಧಿಕಾರ ಅಥವಾ ಎಸ್‌ಡಿಎಐಎ ರಚಿಸಿದೆ. ಇದು ಎಐ ಕಾರ್ಯತಂತ್ರಗಳನ್ನು ಮುನ್ನಡೆಸುವ ಪ್ರತ್ಯೇಕ ಇಲಾಖೆಯಾಗಿದೆ. ಇದೊಂದು ಎಐ ಸಚಿವಾಲಯದಂತೆ ಕರ್ತವ್ಯ ನಿರ್ವಹಿಸಲಿದ್ದು, ರಾಷ್ಟ್ರೀಯ ಎಐ ಯೋಜನೆ, ನಿಯಂತ್ರಣ ಮತ್ತು ಅಳವಡಿಕೆಯ ಜವಾಬ್ದಾರಿ ವಹಿಸಿಕೊಳ್ಳಲಿದೆ. 2030ರ ವೇಳೆಗೆ ತೈಲ ಅವಲಂಬನೆ ಕಡಿಮೆಗೊಳಿಸಿ, ತಂತ್ರಜ್ಞಾನ ಆಧಾರಿತ ಆರ್ಥಿಕತೆ ನಿರ್ಮಾಣದ ಗುರಿಯನ್ನು ಸೌದಿ ಅರೇಬಿಯಾ ಹೊಂದಿದೆ.

ಬಲವಾದ ಎಐ ನಿಯಮ, ಸುರಕ್ಷತೆಗೆ ಸಿಂಗಾಪುರ ಒತ್ತು

ಉಳಿದ ರಾಷ್ಟ್ರಗಳಂತೆ ಎಐ ಮೂಲಸೌಕರ್ಯ ಅಥವಾ ಎಐ ಹೂಡಿಕೆಗಳ ಮೇಲೆ ಹೆಚ್ಚಿನ ಗಮನಹರಿಸುವ ಬದಲು ಪ್ರಬಲವಾದ ಎಐ ನಿಯಮಗಳನ್ನು ಮತ್ತು ಜವಾಬ್ದಾರಿಯುತ ಎಐ ಬಳಕೆ ಹಾಗೂ ಸುರಕ್ಷತೆಗೆ ಸಿಂಗಾಪುರ ಸರ್ಕಾರ ಮೊದಲ ಆದ್ಯತೆಯನ್ನು ನೀಡಿದೆ.

ಎಲ್ಲಾ ರಾಜ್ಯಗಳಲ್ಲಿ ಎಐ ಸಚಿವಾಲಯ?

ಭವಿಷ್ಯದಲ್ಲಿ ಎಲ್ಲಾ ರಾಜ್ಯಗಳಲ್ಲೂ ಪ್ರತ್ಯೇಕ ಎಐ ಸಚಿವಾಲಯ ರಚಿಸುವ ಸಾಧ್ಯತೆಯಿದೆ. ಎಐ ಕೇವಲ ಒಂದು ತಂತ್ರಜ್ಞಾನವಾಗಿ ಉಳಿಯದೆ ಆರ್ಥಿಕ, ರಾಜಕೀಯ ಮತ್ತು ಆಡಳಿತ ಸಮಸ್ಯೆಯಾಗಿ ಬೆಳೆದುಕೊಂಡಿದೆ. ಹೀಗಾಗಿ ಎಐ ನಿಯಂತ್ರಿಸಲು ನಾಯಕತ್ವದ ಅಗತ್ಯವಿರಲಿದೆ.

ಉ.ಪ್ರದೇಶ ಸರ್ಕಾರಿ ಕಾಲೇಜು, ವಿವಿಗಳಲ್ಲಿ ಸಮವಸ್ತ್ರ ಕಡ್ಡಾಯ

•ಲಖನೌ: ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿಬೇನ್ ಪಟೇಲ್ ಅವರು ಗುರುವಾರ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಸಮವಸ್ತ್ರ(ಯೂನಿಫಾರ್ಮ್) ಕಡ್ಡಾಯಗೊಳಿಸಲು ಆದೇಶಿಸಿದ್ದಾರೆ. ಕಾಲೇಜು ಕ್ಯಾಂಪಸ್‌ಗಳಲ್ಲಿ ಶಿಸ್ತು, ಏಕರೂಪತೆ ಹಾಗೂ ವಿದ್ಯಾರ್ಥಿ ಸುರಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ಈ ಕ್ರಮ ತೆಗೆದುಕೊಳ್ಳಲಾಗಿದೆ. ಆದರೆ ಯಾವುದೇ ಅಧಿಕೃತ ಆದೇಶ ಇನ್ನೂ ಜಾರಿಯಾಗಿಲ್ಲ.

ರಾಜಭವನದಲ್ಲಿ ನಡೆದ ಪರಿಶೀಲನಾ ಸಭೆಯಲ್ಲಿ ಈ ಸೂಚನೆ ನೀಡಲಾಗಿದ್ದು, ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಕಾಲೇಜುಗಳಲ್ಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ವ್ಯವಸ್ಥೆಗಳನ್ನೂ ಪರಿಶೀಲಿಸಲಾಗಿದೆ. ಇದರೊಂದಿಗೆ ವಿದ್ಯಾರ್ಥಿನಿಯರ ಸುರಕ್ಷತೆ, ವಸತಿ ನಿಲಯಗಳ ಪರಿಸ್ಥಿತಿ ಸುಧಾರಣೆ ಮತ್ತು ವಿದ್ಯಾರ್ಥಿಗಳ ಸಮಸ್ಯೆಗಳಿಗೆ ತ್ವರಿತ ಪರಿಹಾರಕ್ಕಾಗಿ ಸಮಿತಿಗಳ ರಚನೆಗೆ ಸೂಚಿಸಲಾಗಿದೆ. ಸಮವಸ್ತ್ರ ಕಡ್ಡಾಯ ಜಾರಿಯಾದರೆ ಉತ್ತರ ಪ್ರದೇಶದ ಸಾವಿರಾರು ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಕಾಲೇಜು ಮತ್ತು ವಿಶ್ವವಿದ್ಯಾಲಯ ವಿದ್ಯಾರ್ಥಿಗಳ ಮೇಲೆ ಅನ್ವಯಿಸಲಿದೆ.

ಉತ್ತರಪ್ರದೇಶದ ವಿತ್ತ ಸಚಿವ ಸುರೇಶ್ ಕುಮಾರ್ ಖನ್ನಾ ರಾಜ್ಯಪಾಲೆಯ ಈ ಕ್ರಮವನ್ನು ಸ್ವಾಗತಿಸಿದ್ದು, ರಾಜ್ಯಪಾಲರು ವಿದ್ಯಾರ್ಥಿಗಳ ಹಿತದೃಷ್ಟಿಯಿಂದಲೇ ವಿಶ್ವವಿದ್ಯಾಲಯಗಳಲ್ಲಿ ಶಿಸ್ತು ಕ್ರಮವನ್ನು ಜಾರಿಗೊಳಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ವರದಿಗಳ ಪ್ರಕಾರ, ಪರಿಶೀಲನಾ ಸಭೆಯಲ್ಲಿ ರಾಜ್ಯಪಾಲೆ ಶಿಕ್ಷಕರಿಗೂ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಿದ್ದಾರೆ. ಶಿಕ್ಷಕ ವೃತ್ತಿಯ ಗೌರವ ಮತ್ತು ಘನತೆಗೆ ಧಕ್ಕೆ ಉಂಟುಮಾಡುವ ಯಾವುದೇ ಕೃತ್ಯಗಳಲ್ಲಿ ಶಿಕ್ಷಕರು ತೊಡಗಬಾರದು ಎಂಬ ಸೂಚನೆ ನೀಡಿದ್ದಾರೆ.

ಕಿರುಸುದ್ದಿ

ರುದ್ರಪ್ರಯಾಗ ಭೂಕುಸಿತ: ಯಾತ್ರಾರ್ಥಿಗಳ ಸ್ಥಳಾಂತರ

•ಶಿಮ್ಲಾ: ಮುಂಕಟಿಯಾದಲ್ಲಿ ಹಠಾತ್ ಭೂಕುಸಿತ ಸಂಭವಿಸಿದೆ. ಉತ್ತರಾಖಂಡದ ರುದ್ರಪ್ರಯಾಗದ ಕೇದಾರನಾಥ ಮಾರ್ಗದಲ್ಲಿ ಸಿಲುಕಿಕೊಂಡಿದ್ದ 10,450 ಯಾತ್ರಾರ್ಥಿಗಳನ್ನು ಜಂಟಿ ರಕ್ಷಣಾ ತಂಡಗಳು ಸುರಕ್ಷಿತವಾಗಿ ಸ್ಥಳಾಂತರಿಸಿವೆ. ಅಧಿಕಾರಿಗಳ ಪ್ರಕಾರ, ಈ ಪ್ರದೇಶದಲ್ಲಿ ಭಾರೀ ಮಳೆಯಾದ ನಂತರ ಮಂಗಳವಾರ ತಡರಾತ್ರಿ ಸೋನ್‌ಪ್ರಯಾಗ್ ಮತ್ತು ಗೌರಿಕುಂಡ್ ನಡುವೆ ಭೂಕುಸಿತ ಸಂಭವಿಸಿದೆ. ಅವಶೇಷಗಳು ಮುಖ್ಯ ಹೆದ್ದಾರಿಯನ್ನು ನಿರ್ಬಂಧಿಸಿವೆ. ಭೂಕುಸಿತದಿಂದ ಹೆಚ್ಚಿನ ಸಂಖ್ಯೆಯ ಯಾತ್ರಾರ್ಥಿಗಳನ್ನು ಸಿಲುಕಿದ್ದಾರೆ.

ಫಾಲ್ಟಾ ಮರು ಚುನಾವಣೆ: ಶೇ.87.85ರಷ್ಟು ಮತದಾನ

•ಕೋಲ್ಕತ್ತಾ: ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ಟಾ ಕ್ಷೇತ್ರದಲ್ಲಿ ಗುರುವಾರ ನಡೆದ ಮತದಾನವು ಶೇ.87.85ರಷ್ಟು ಮತದಾನದೊಂದಿಗೆ ಮುಕ್ತಾಯಗೊಂಡಿತು. ಮತದಾನದ ವೇಳೆ ಇವಿಎಂ ಯಂತ್ರಗಳಲ್ಲಿ ಅಕ್ರಮ ಕಂಡುಬಂದ ಹಿನ್ನೆಲೆ 285 ಮತಗಟ್ಟೆಗಳಲ್ಲಿ ಮರುಮತದಾನ ನಡೆಸಲು ಭಾರತೀಯ ಚುನಾವಣಾ ಆಯೋಗ ಆದೇಶ ಮಾಡಿತ್ತು.ಈ ಮಧ್ಯೆ ಟಿಎಂಸಿ ಅಭ್ಯರ್ಥಿ ಜಹಾಂಗೀರ್ ಖಾನ್ ಫಾಲ್ಟಾ ಚುನಾವಣಾ ಕಣದಿಂದ ಹಿಂದೆಸರಿದಿದ್ದರು.

ಬಿಟಿಎ: ಮುಂದಿನ ವಾರ ಭಾರತಕ್ಕೆ ಅಮೆರಿಕ ತಂಡ

•ಹೊಸದಿಲ್ಲಿ: ವ್ಯಾಪಾರ ವ್ಯವಹಾರ ಸಂಬಂಧಿತ ಮಾತುಕತೆಗಳಿಗಾಗಿ ಅಮೆರಿಕದ ಪ್ರತಿನಿಧಿ ತಂಡವು ಮುಂದಿನ ತಿಂಗಳು ಭಾರತಕ್ಕೆ ಭೇಟಿ ನೀಡುವ ಸಾಧ್ಯತೆಯಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಉದ್ದಿಮೆ ಸಚಿವ ಪೀಯುಷ್ ಗೋಯಲ್ ಗುರುವಾರ ತಿಳಿಸಿದ್ದಾರೆ. ಮಧ್ಯಂತರ ಒಪ್ಪಂದದ ವಿವರಗಳನ್ನು ಅಂತಿಮಗೊಳಿಸುವುದು ಮತ್ತು ವಿಸ್ತೃತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ (ಬಿಟಿಎ)ದಡಿ ಮಾತುಕತೆಗಳ ಪ್ರಗತಿಗಾಗಿ, ನೇರ ಸರಣಿ ಸಭೆಗಳ ನಡೆಸುವುದಕ್ಕಾಗಿ ಭಾರತೀಯ ಪ್ರತಿನಿಧಿಗಳ ತಂಡ ಕಳೆದ ಏಪ್ರಿಲ್‌ನಲ್ಲಿ ಅಮೆರಿಕಗೆ ಭೇಟಿ ಕೊಟ್ಟಿತ್ತು. ಅಮೆರಿಕದ ಮುಖ್ಯ ಸಂಧಾನಕಾರರ ಜತೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಕೂಡ ಭಾರತಕ್ಕೆ ಭೇಟಿ ಕೊಡುವರೇ ಎಂಬ ಪ್ರಶ್ನೆಗೆ, ಇಲ್ಲವೆಂದ ಸಚಿವರು, ಅಮೆರಿಕನ್ ಪ್ರತಿನಿಧಿಗಳು ಬರುವ ತಿಂಗಳು ಭಾರತಕ್ಕೆ ಬರುವ ಪ್ಲ್ಯಾನ್ ಇದೆ ಎಂದು ಹೇಳಿದರು. ವ್ಯಾಪಾರ, ರಕ್ಷಣೆ, ಇಂಧನ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ವರ್ಧಿಸುವ ನಿಟ್ಟಿನಲ್ಲಿ, ರುಬಿಯೊ ಮೇ 23ರಂದ ನಾಲ್ಕು ದಿನಗಳ ಕಾಲ ಭಾರತಕ್ಕೆ ಭೇಟಿ ಕೊಡುವರು. ಭಾರತಕ್ಕೆ ಇದವರ ಪ್ರಥಮ ಭೇಟಿಯಾಗಿದೆ. ಮಧ್ಯಂತರ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿ ಚೌಕಟ್ಟೊಂದನ್ನು ಅಂತಿಮಗೊಳಿಸುವ ಬಗ್ಗೆ ಭಾರತ-ಅಮೆರಿಕಗಳು ಫೆ.7ರಂದು ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದವು. ಆದರೆ, ಪಾಲುದಾರ ರಾಷ್ಟ್ರಗಳೊಂದಿಗೆ ವ್ಯಾಪಾರ ಒಪ್ಪಂದ ಕುದುರಿಸಲು ಟ್ರಂಪ್ ಆಡಳಿತಕ್ಕೆ ಪ್ರಧಾನ ಮಾಧ್ಯಮವಾಗಿದ್ದ ದುಬಾರಿ ಸುಂಕಗಳೆಲ್ಲವನ್ನು ಅಮೆರಿಕದ ಸುಪ್ರೀಂಕೋರ್ಟ್ ರದ್ದುಪಡಿಸಿತ್ತು.

ಟಿವಿಕೆ ಸಂಪುಟ ವಿಸ್ತರಣೆ: ಕೈ ನಾಯಕರಿಬ್ಬರಿಗೆ ಸ್ಥಾನ

•ಚೆನ್ನೈ: ಮತ್ತೆ 23 ಶಾಸಕರನ್ನು ಸಚಿವರಾಗಿ ಸೇರ್ಪಡೆ ಮಾಡುವ ಮೂಲಕ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಗುರುವಾರ ತಮ್ಮ ಸಂಪುಟವನ್ನು ವಿಸ್ತರಿಸಿದ್ದಾರೆ. ಪುನಾರಚಿತ ಸಂಪುಟಕ್ಕೆ ಸೇರ್ಪಡೆಗೊಂಡ ಶಾಸಕರಲ್ಲಿ ಇಬ್ಬರು ಕಾಂಗ್ರೆಸಿಗರು ಸೇರಿದ್ದಾರೆ. ಲೋಕಭವನದಲ್ಲಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ ಅರ್ಲೇಕರ್ ನಿಯೋಜಿತ ಸಚಿವರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಕಾಂಗ್ರೆಸ್‌ನಿಂದ ಕಿಳಿಯೂರ್‌ನಿಂದ ವಿಜೇತ ಎಸ್.ರಾಜೇಶ್‌ಕುಮಾರ್ ಮತ್ತು ಮೇಲೂರ್ ಕ್ಷೇತ್ರದಿಂದ ವಿಜೇತ ಪಿ.ವಿಶ್ವನಾಥನ್ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಟಿವಿಕೆ ನೇತೃತ್ವದ ಸರಕಾರಕ್ಕೆ ಕಾಂಗ್ರೆಸಿಗರ ಸೇರ್ಪಡೆ ತಮಿಳುನಾಡಿನ ರಾಜಕೀಯ ಇತಿಹಾಸದಲ್ಲೊಂದು ತಿರುವೆಂದು ಹೇಳಿರುವ ಎಐಸಿಸಿ ತಮಿಳುನಾಡು ಉಸ್ತುವಾರಿ ಗಿರೀಶ್ ಚೋಡನ್ಕರ್, ಕಾಂಗ್ರೆಸ್ ತಮಿಳುನಾಡಲ್ಲಿ ಅಧಿಕಾರಕ್ಕೇರಲು ಕಾರ್ಯಕರ್ತರು ಕಳೆದ 59ವರ್ಷಗಳಿಂದ ಸತತ ಹೆಣಗಾಟ ನಡೆಸಿದ್ದರು. ಅವರ ಪ್ರಯತ್ನ ಕೊನೆಗೂ ಫಲಿಸಿದೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ. ಕಾಂಗ್ರೆಸ್ ನಾಯಕ ರಾಜೇಶ್‌ಕುಮಾರ್ ಲಿಖಿತ ಪ್ರತಿಜ್ಞಾವಿಧಿ ಓದುವ ಸಂದರ್ಭ , ಕಾಂಗ್ರೆಸ್ ನಾಯಕರಾದ ದಿ.ಕಾಮರಾಜ್, ದಿ.ರಾಜೀವ್‌ಗಾಂಧಿ ಮತ್ತು ರಾಹುಲ್ ಗಾಂಧಿಯನ್ನು ಹೊಗಳತೊಡಗಿದ್ದರು. ತಕ್ಷಣ ಮಧ್ಯಪ್ರವೇಶಿಸಿದ ರಾಜ್ಯಪಾಲ ಅರ್ಲೇಕರ್, ಇದು ತಮ್ಮ ಪ್ರತಿಜ್ಞಾವಿಧಿಯ ಭಾಗವಲ್ಲ, ತಮಗೆ ನೀಡಿರುವ ಲಿಖಿತ ಪ್ರತಿಜ್ಞಾವಿಧಿಯಲ್ಲೇನಿದೆಯೋ, ಅದನ್ನಷ್ಟೆ ಓದಿ ಎಂದು ವಾಸ್ತವವನ್ನು ಮನವರಿಕೆ ಮಾಡಿದ ಪ್ರಸಂಗವೂ ನಡೆಯಿತು. ಗುರುವಾರ ಪ್ರಮಾಣವಚನ ಸ್ವೀಕರಿಸಿದ 23ಶಾಸಕರಲ್ಲಿ ಮೂವರು ಮಹಿಳೆಯರು ಸೇರಿದ್ದಾರೆ.

ಆದಿವಾಸಿಗಳೇ ಭಾರತದ ಹೆಮ್ಮೆ: ಸತ್ಯೇಂದ್ರ ಸಿಂಗ್

•ಹೊಸದಿಲ್ಲಿ: ಬ್ರಿಟಿಷರು ಆದಿವಾಸಿ ಸಮುದಾಯವನ್ನು ಅಪರಾಧಿಗಳು, ಹಿಂದುಳಿದವರು ಎಂದು ತಪ್ಪಾಗಿ ಬಿಂಬಿಸಿದ್ದರು. ವಾಸ್ತವದಲ್ಲಿ ಅವರು ಭಾರತದ ಸಂಸ್ಕೃತಿ ಮತ್ತು ಪರಂಪರೆಯ ರಕ್ಷಕರು ಎಂದು ಅಖಿಲ ಭಾರತೀಯ ವನವಾಸಿ ಕಲ್ಯಾಣ ಆಶ್ರಮದ ಅಧ್ಯಕ್ಷ ಸತ್ಯೇಂದ್ರ ಸಿಂಗ್ ಹೇಳಿದ್ದಾರೆ. ದೇಶದ ನೈಜ ಇತಿಹಾಸದಲ್ಲಿ ಆದಿವಾಸಿಗಳ ಕೊಡುಗೆ ಅಪಾರವಾಗಿದ್ದು, ಅವರ ಬಗ್ಗೆ ರೂಪುಗೊಂಡಿರುವ ವಕ್ರ ನಿರೂಪಣೆಯನ್ನು ಸರಿಪಡಿಸುವ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು. ಭಾನುವಾರ ದೆಹಲಿಯ ಕೆಂಪುಕೋಟೆ ಮೈದಾನದಲ್ಲಿ ಜನಜಾತಿ ಸಾಂಸ್ಕೃತಿಕ ಸಮಾಗಮ ಆಯೋಜಿಸಲಾಗುತ್ತಿದ್ದು, ದೇಶದ ವಿವಿಧಭಾಗಗಳಿಂದ ಸುಮಾರು 500ಕ್ಕೂ ಹೆಚ್ಚು ಜನಜಾತಿ ಸಮುದಾಯಗಳು ಹಾಗೂ ಸುಮಾರು 1.5 ಲಕ್ಷ ಜನ ಭಾಗವಹಿಸುವ ನಿರೀಕ್ಷೆಯಿದೆ ಎಂದು ಸಿಂಗ್ ತಿಳಿಸಿದ್ದಾರೆ. ಈ ಸಮಾವೇಶವನ್ನು ಜನಜಾತಿ ಸುರಕ್ಷಾ ಮಂಚ್ ಆಯೋಜಿಸುತ್ತಿದ್ದು, ಇದು ವನವಾಸಿ ಕಲ್ಯಾಣ ಆಶ್ರಮದ ಅಂಗಸಂಸ್ಥೆಯಾಗಿದೆ. ಕಾರ್ಯಕ್ರಮದ ಮೂಲಕ ಜಗತ್ತಿಗೆ ಭಾರತದ ಆದಿವಾಸಿ ಸಮುದಾಯದ ನೈಜ ಚಿತ್ರಣ ತಲುಪಿಸುವ ಉದ್ದೇಶವಿದೆ ಎಂದು ಹೇಳಿದರು. ರಾಮಾಯಣ, ಮಹಾಭಾರತ ಕಾಲದಿಂದ ಹಿಡಿದು ಮೊಘಲ್ ಮತ್ತು ಬ್ರಿಟಿಷರ ಆಳ್ವಿಕೆವರೆಗೂ ಆದಿವಾಸಿ ಸಮುದಾಯಗಳು ತಮ್ಮ ಸಂಸ್ಕೃತಿ ಹಾಗೂ ಪರಂಪರೆಯನ್ನು ರಕ್ಷಿಸಲು ಹೋರಾಡಿವೆ. ಆದರೆ ಯಾವತ್ತೂ ಪರಾಧೀನತೆಯನ್ನು ಒಪ್ಪಿಕೊಂಡಿಲ್ಲ, ಇದೇ ಅವರ ಸ್ವಾಭಿಮಾನ ಎಂದು ಸಿಂಗ್ ಹೇಳಿದರು. ಆದಿವಾಸಿಗಳ ಜೀವನಶೈಲಿ, ಜನಪದ ಕಲೆ, ಸಂಸ್ಕೃತಿ ಇವೆಲ್ಲವೂ ದೇಶದ ಹೆಮ್ಮೆಯ ವಿಷಯ ಎಂದು ಅವರು ಹೇಳಿದರು.


ಪಶ್ಚಿಮ ಬಂಗಾಳ ಮದರಸಾಗಳಲ್ಲಿ ವಂದೇ ಮಾತರಂ ಕಡ್ಡಾಯ

•ಕೋಲ್ಕತ್ತಾ: ಶಾಲಾ ಕಾಲೇಜುಗಳ ಬಳಿಕ ಮದರಸಾ ಶಿಕ್ಷಣ ಸಂಸ್ಥೆಗಳಲ್ಲೂ ಬೆಳಗ್ಗಿನ ಅಸೆಂಬ್ಲಿ ವೇಳೆ ವಂದೇ ಮಾತರಂ ಹಾಡುವುದನ್ನು ಪಶ್ಚಿಮ ಬಂಗಾಳ ಸರ್ಕಾರ ಕಡ್ಡಾಯಗೊಳಿಸಿದೆ. ಅಲ್ಪಸಂಖ್ಯಾತ ವ್ಯವಹಾರ ಮತ್ತು ಮದರಸಾ ಶಿಕ್ಷಣ ಇಲಾಖೆಯ ಅನ್ವಯ ಎಲ್ಲಾ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಬೆಳಗ್ಗಿನ ಅಸೆಂಬ್ಲಿ ವೇಳೆ ರಾಷ್ಟ್ರೀಯ ಗೀತೆ ಹಾಡುವುದು ಕಡ್ಡಾಯಗೊಳಿಸಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಆದೇಶಿಸಿದ್ದಾರೆ. ವಾರದ ಹಿಂದೆಯಷ್ಟೇ ಸುವೇಂದು ನೇತೃತ್ವದ ಬಿಜೆಪಿ ಸರ್ಕಾರವು, ಪಶ್ಚಿಮ ಬಂಗಾಳದಾದ್ಯಂತ ಎಲ್ಲಾ ಶಾಲೆಗಳಲ್ಲಿ ವಂದೇ ಮಾತರಂ ಹಾಡುವುದನ್ನು ಕಡ್ಡಾಯಗೊಳಿಸಿತ್ತು. ಮದರಸಾಗಳಿಗೆ ಜಾರಿಗೊಳಿಸಿದ ಆದೇಶದ ಪ್ರಕಾರ, ಎಲ್ಲಾ ಪ್ರತಿಷ್ಠಿತ, ಅನುದಾನಿತ ಮತ್ತು ಅನುದಾನ ರಹಿತ ಮದರಸಾಗಳಲ್ಲಿ ಬೆಳಗ್ಗೆ ತರಗತಿ ಆರಂಭಿಸುವ ಮೊದಲು ರಾಷ್ಟ್ರೀಯ ಗೀತೆ ಕಡ್ಡಾಯವಾಗಿ ಹಾಡಬೇಕು. ಶಾಲಾ ಅಸೆಂಬ್ಲಿ ಅಥವಾ ಬೆಳಗ್ಗಿನ ಪ್ರಾರ್ಥನೆಗೆ ಮುನ್ನ ರಾಜ್ಯ ಶಿಕ್ಷಣ ಇಲಾಖೆ ಅನ್ವಯದಲ್ಲಿ ಬರುವ ಎಲ್ಲಾ ಶಾಲೆಗಳಲ್ಲಿ ರಾಷ್ಟ್ರೀಯ ಗೀತೆ ಕಡ್ಡಾಯಗೊಳಿಸಿದ್ದೇವೆ ಎಂದು ಸುವೇಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು.

ಎಬೋಲಾ: ಮಾರ್ಗಸೂಚಿ ಹೊರಡಿಸಿದ ಕೇಂದ್ರ

•ಹೊಸದಿಲ್ಲಿ: ಎಬೋಲಾ ವೈರಸ್ ತಡೆಗೆ ಭಾರತ ಸಜ್ಜಾಗಿದ್ದು, ಎಲ್ಲಾ ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು ಕೇಂದ್ರ ಸರ್ಕಾರ ಮಾರ್ಗಸೂಚಿ ಹೊರಡಿಸಿದೆ.

ಆಫ್ರಿಕಾದ ಕೆಲವು ಭಾಗಗಳಲ್ಲಿ ಎಬೋಲಾ ಹರಡುವಿಕೆಯನ್ನು ವಿಶ್ವ ಆರೋಗ್ಯ ಸಂಸ್ಥೆ ಅಂತಾರಾಷ್ಟ್ರೀಯ ಕಾಳಜಿ ಸಾರ್ವಜನಿಕ ಆರೋಗ್ಯ ತುರ್ತುಸ್ಥಿತಿ (ಪಿಎಚ್ಇಐಸಿ) ಎಂದು ಘೋಷಿಸಿದ ಬೆನ್ನಲ್ಲೇ, ಭಾರತವು ವಿಮಾನ ನಿಲ್ದಾಣ ಮತ್ತು ಬಂದರು ಎಬೋಲಾ ಕಣ್ಗಾವಲು ಮತ್ತು ಸ್ಕ್ರೀನಿಂಗ್ ಕ್ರಮಗಳನ್ನು ಹೆಚ್ಚಿಸಿದೆ. ಆರೋಗ್ಯ ಅಧಿಕಾರಿಗಳು ಪ್ರಯಾಣಿಕರಿಗೆ ಹೊಸ ಸಲಹೆಯನ್ನು ನೀಡಿದ್ದಾರೆ.



ಕೇಂದ್ರ ಆರೋಗ್ಯ ಸಚಿವಾಲಯದಲ್ಲಿರುವ ಆರೋಗ್ಯ ಸೇವೆಗಳ ಮಹಾ ನಿರ್ದೇಶನಾಲಯವು (ಡಿಜಿಎಚ್‌ಎಸ್) ಕಾಂಗೋ ಪ್ರಜಾಸತ್ತಾತ್ಮಕ ಗಣರಾಜ್ಯ, ಉಗಾಂಡಾ ಮತ್ತು ದಕ್ಷಿಣ ಸುಡಾನ್‌ನಿಂದ ಆಗಮಿಸುವ ಪ್ರಯಾಣಿಕರಲ್ಲಿ ಜ್ವರ, ವಾಂತಿ,

ಎಬೋಲಾ ವೈರಸ್ ಹೆಚ್ಚಳ: ಕಟ್ಟೆಚ್ಚರಕ್ಕೆ ಕ್ರಮ

ಅತಿಸಾರ, ತಲೆನೋವು, ಗಂಟಲು ನೋವು, ಸ್ನಾಯು ನೋವು ಅಥವಾ ರಕ್ತಸ್ರಾವದಂತಹ ರೋಗಲಕ್ಷಣಗಳನ್ನು ಕಂಡುಬಂದರೆ ತಕ್ಷಣ ವಿಮಾನ ನಿಲ್ದಾಣದ ಆರೋಗ್ಯ ಅಧಿಕಾರಿಗಳಿಗೆ ವರದಿ ಮಾಡುವಂತೆ ಕೇಳಿಕೊಂಡಿದೆ. ವಿಮಾನ ನಿಲ್ದಾಣ ಆರೋಗ್ಯ ಸಂಸ್ಥೆ (ಎಪಿಎಚ್‌ಒ) ಹೊರಡಿಸಿದ ಸಲಹೆ ಪ್ರಕಾರ , ಶಂಕಿತ ಅಥವಾ ದೃಢಪಡಿಸಿದ ಎಬೋಲಾ ರೋಗಿಯ ರಕ್ತ ಅಥವಾ ದೇಹದ ದ್ರವಗಳೊಂದಿಗೆ ನೇರ ಸಂಪರ್ಕವನ್ನು ಹೊಂದಿರುವ ಪ್ರಯಾಣಿಕರಿಗೆ ವಲಸೆ ಅನುಮತಿ ನೀಡುವ ಮೊದಲು ವಿಮಾನ ನಿಲ್ದಾಣದ ಆರೋಗ್ಯ ಕೇಂದ್ರಕ್ಕೆ ವರದಿ ಮಾಡಲು ನಿರ್ದೇಶಿಸಲಾಗಿದೆ. ಆಗಮಿಸಿದ 21 ದಿನಗಳಲ್ಲಿ ರೋಗಲಕ್ಷಣಗಳನ್ನು ಹೆಚ್ಚಾದ ಪ್ರಯಾಣಿಕರಿಗೆ ತಕ್ಷಣದ ವೈದ್ಯಕೀಯ ಆರೈಕೆಯನ್ನು ಪಡೆಯಲು ಮತ್ತು ಅವರ ಪ್ರಯಾಣದ ಇತಿಹಾಸದ ಬಗ್ಗೆ ಆರೋಗ್ಯ ಅಧಿಕಾರಿಗಳಿಗೆ ತಿಳಿಸಲು ಸೂಚಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆಫ್ರಿಕಾದಲ್ಲಿ ಎಬೋಲಾ ಹೆಚ್ಚಳ: ಶೃಂಗ ಮುಂದೂಡಿಕೆ

ಆಫ್ರಿಕಾದ ಕೆಲವು ಭಾಗಗಳಲ್ಲಿ ಹೆಚ್ಚುತ್ತಿರುವ ಎಬೋಲಾ ವೈರಸ್‌ನಿಂದಾಗಿ ದಿಲ್ಲಿಯಲ್ಲಿ ನಡೆಯಬೇಕಿದ್ದ ಆಫ್ರಿಕನ್ ಯೂನಿಯನ್ ಮತ್ತು ಭಾರತದ ಪ್ರಮುಖ ಶೃಂಗಸಭೆ ಮುಂದೂಡಲಾಗಿದೆ ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ. ಆಫ್ರಿಕಾದ ಹಲವಾರು ಭಾಗಗಳಲ್ಲಿ ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ ದಕ್ಷಿಣ ಕಿವು ಪ್ರಾಂತ್ಯದ ಇತ್ತೀಚಿನ ಮಾರಣಾಂತಿಕ ಎಬೋಲಾ ವೈರಸ್‌ನ ಪ್ರಕರಣಗಳು ವರದಿಯಾಗಿವೆ. ಭಾರತ ಮತ್ತು ಆಫ್ರಿಕನ್ ಒಕ್ಕೂಟವು ನಾಲ್ಕನೇ ಭಾರತ-ಆಫ್ರಿಕಾ ವೇದಿಕೆ ಶೃಂಗಸಭೆಯನ್ನು ನಡೆಸಲು ಸಿದ್ಧತೆ ನಡೆಸುತ್ತಿದ್ದು, ಉಭಯ ಕಡೆಯವರು, ಆಫ್ರಿಕಾದ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಈ ನಿರ್ಧಾರಕ್ಕೆ ಬಂದಿದೆ. ಆಫ್ರಿಕಾ ಸಿಡಿಸಿ ಮತ್ತು ಸಂಬಂಧಿತ ರಾಷ್ಟ್ರೀಯ ಸಂಸ್ಥೆಗಳಿಗೆ ಬೆಂಬಲ ನೀಡುವ ಮೂಲಕ ಖಂಡದಾದ್ಯಂತ ಸಾರ್ವಜನಿಕ ಆರೋಗ್ಯ ಸನ್ನದ್ಧತೆ ಮತ್ತು ಪ್ರತಿಕ್ರಿಯೆ ಸಾಮರ್ಥ್ಯಗಳನ್ನು ಬಲಪಡಿಸುವಲ್ಲಿ ನಿರಂತರ ಸಹಕಾರದ ಮಹತ್ವವನ್ನು ಪುನರುಚ್ಚರಿಸಿದರು ಎಂದು ಭಾರತವು ಹೇಳಿಕೆಯಲ್ಲಿ ತಿಳಿಸಿದೆ.

2034ರವರೆಗೂ ಬಿಜೆಪಿ ಪ್ರಬಲ ಶಕ್ತಿ

•ಹೊಸದಿಲ್ಲಿ: ದೇಶದರಾಜಕೀಯವಲಯದಲ್ಲಿ ಬಿಜೆಪಿ ಪ್ರಾಬಲ್ಯ ಇನ್ನೂ ದೀರ್ಘಕಾಲ ಮುಂದುವರಿಯುವ ಸಾಧ್ಯತೆಯಿದ್ದು, ಕನಿಷ್ಠ 2034ರವರೆಗೂ ಬಿಜೆಪಿ ನೇತೃತ್ವದ ರಾಜಕೀಯ ಪ್ರಭಾವ ಕಡಿಮೆಯಾಗುವುದಿಲ್ಲ ಎಂದು ಆ್ಯಕ್ಸಿಸ್ ಮೈ ಇಂಡಿಯಾ ಸಂಸ್ಥೆಯ ಮುಖ್ಯಸ್ಥ ಪ್ರದೀಪ್ ಗುಪ್ತಾ ಅಭಿಪ್ರಾಯಪಟ್ಟಿದ್ದಾರೆ. ಅಷ್ಟೇ ಅಲ್ಲ, ಇನ್ನೂ 20 ವರ್ಷ ಬಿಜೆಪಿ ಪ್ರಭಾವ ಹೀಗೆಯೇ ಮುಂದುವರಿಯಲಿದೆ ಎಂದೂ ಅವರು ಹೇಳಿದ್ದಾರೆ.

ಮಾಧ್ಯಮವೊಂದಕ್ಕೆ ಸಂದರ್ಶನ ನೀಡಿದ ಅವರು, ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ರಾಷ್ಟ್ರೀಯ ಪ್ರಜಾತಾಂತ್ರಿಕ ಮೈತ್ರಿಕೂಟ (ಎನ್‌ಡಿಎ) ಹಾಗೂ ವಿರೋಧ ಪಕ್ಷಗಳ ಭವಿಷ್ಯವು ಆಡಳಿತದ ಕಾರ್ಯಕ್ಷಮತೆಯ ಮೇಲೆ ಅವಲಂಬಿತವಾಗಿರುತ್ತದೆ ಎಂದು ಹೇಳಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕಳೆದ ಹಲವು ವರ್ಷಗಳಿಂದ ಚುನಾವಣಾ ಮಟ್ಟದಲ್ಲಿ ನಿರಂತರ ಮುನ್ನಡೆ ಕಾಯ್ದುಕೊಂಡಿರುವುದೇ ಬಿಜೆಪಿಯ ರಾಜಕೀಯ

ಆ್ಯಕ್ಸಿಸ್ ಮೈ ಇಂಡಿಯಾ ಮುಖ್ಯಸ್ಥ ಪ್ರದೀಪ್ ಗುಪ್ತಾ ಅಭಿಪ್ರಾಯ

ಬಲದ ಪ್ರಮುಖ ಕಾರಣ ಎಂದು ಅವರು ವಿಶ್ಲೇಷಿಸಿದ್ದಾರೆ.

ಪ್ರದೀಪ್ ಗುಪ್ತಾ ಅವರ ಪ್ರಕಾರ, ಬಿಜೆಪಿ ಕೇವಲ ಚುನಾವಣಾ ಯಂತ್ರವಾಗಿಲ್ಲ, ಅದು ಬಲಿಷ್ಠ ಸಂಘಟನೆ, ಕೇಂದ್ರಿತ ನಾಯಕತ್ವ ಮತ್ತು ನೆಲಮಟ್ಟದ ಕಾರ್ಯಕರ್ತರ ಜಾಲದ ಆಧಾರದ ಮೇಲೆ ತನ್ನ ಪ್ರಭಾವವನ್ನು ವಿಸ್ತರಿಸಿದೆ. ವಿಶೇಷವಾಗಿ ಯುವಕರು, ಮಹಿಳೆಯರು ಹಾಗೂ ಮಧ್ಯಮ ವರ್ಗದ ಮತದಾರರ ನಡುವೆ ಪಕ್ಷದ ಸ್ವೀಕಾರಾರ್ಹತೆ ಹೆಚ್ಚುತ್ತಿರುವುದು ಬಿಜೆಪಿಗೆ ದೊಡ್ಡ ಬಲವಾಗಿದೆ ಎಂದು ಅವರು ಹೇಳಿದ್ದಾರೆ.

ಇದೇ ವೇಳೆ, ವಿರೋಧ ಪಕ್ಷಗಳು ಇನ್ನೂ ಸಮಗ್ರ ಪರ್ಯಾಯ ರಾಜಕೀಯ ವೀಕ್ಷಣೆಯನ್ನು ದೇಶದ ಮುಂದೆ ಇಡಲು ವಿಫಲವಾಗಿವೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ. ವಿವಿಧ ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳ ಪ್ರಭಾವ ಇದ್ದರೂ, ರಾಷ್ಟ್ರಮಟ್ಟದಲ್ಲಿ ಬಿಜೆಪಿಗೆ ತಕ್ಕ ಸವಾಲು ನೀಡಬಲ್ಲ ಏಕೀಕೃತ ನಾಯಕತ್ವ ಕಾಣಿಸುತ್ತಿಲ್ಲ ಎಂದು ತಿಳಿಸಿದ್ದಾರೆ.

ಕಳೆದ ಕೆಲವು ಚುನಾವಣೆಗಳ ಉದಾಹರಣೆಗಳನ್ನು ಉಲ್ಲೇಖಿಸಿದ ಅವರು, ಮಹಾರಾಷ್ಟ್ರ, ದೆಹಲಿ, ಬಿಹಾರ ಸೇರಿದಂತೆ ಹಲವು ರಾಜ್ಯಗಳಲ್ಲಿ ಬಿಜೆಪಿ ಅಥವಾ ಎನ್‌ಡಿಎ ಉತ್ತಮ ಪ್ರದರ್ಶನ ನೀಡಿರುವುದನ್ನು ಗಮನಿಸಬಹುದು ಎಂದಿದ್ದಾರೆ. ಕೆಲವು ರಾಜ್ಯಗಳಲ್ಲಿ ಬಿಜೆಪಿ ಹೊಸ ರಾಜಕೀಯ ನೆಲೆಯನ್ನು ನಿರ್ಮಿಸಿಕೊಂಡಿರುವುದೂ ಗಮನಾರ್ಹ ಬೆಳವಣಿಗೆ ಎಂದು ಅವರು ಹೇಳಿದ್ದಾರೆ.

ಆದರೆ, ಆಡಳಿತದ ಕಾರ್ಯಕ್ಷಮತೆ ಕುಸಿದರೆ ರಾಜಕೀಯ ಸಮೀಕರಣಗಳು ಬದಲಾಗಬಹುದು ಎಂಬ ಎಚ್ಚರಿಕೆಯನ್ನು ಕೂಡ ಅವರು ನೀಡಿದ್ದಾರೆ. ಜನರ ನಿರೀಕ್ಷೆಗಳನ್ನು ಪೂರೈಸುವಲ್ಲಿ ವಿಫಲವಾದ ಯಾವುದೇ ಸರ್ಕಾರಕ್ಕೂ ದೀರ್ಘಕಾಲ ಅಧಿಕಾರ ಉಳಿಸಿಕೊಳ್ಳುವುದು ಕಷ್ಟಕರವಾಗುತ್ತದೆ ಎಂದು ಹೇಳಿದ್ದಾರೆ.

ಎಡಿಜಿಪಿ ಹಿತೇಂದ್ರ ನೇತೃತ್ವದಲ್ಲಿ ಸಭೆ



ಹುಬ್ಬಳ್ಳಿ: ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್. ಹಿತೇಂದ್ರ ಅವರು ಬುಧವಾರ ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತಾಲಯ ಘಟಕಕ್ಕೆ ಭೇಟಿ ನೀಡಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕಾನೂನು ಸುವ್ಯವಸ್ಥೆ ಕುರಿತು ಚರ್ಚೆ ನಡೆಸಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡಿದರು.

ನಂತರ ಹಳೇಹುಬ್ಬಳ್ಳಿ ಪೊಲೀಸ್ ಠಾಣೆ, ವಿದ್ಯಾನಗರ ಪೊಲೀಸ್ ಠಾಣೆ ಹಾಗೂ ಗ್ರಾಮೀಣ ಪೊಲೀಸ್ ಠಾಣೆಗಳಿಗೆ ಭೇಟಿ ಕೊಟ್ಟು ಕಡತಗಳನ್ನು ಪರಿಶೀಲಿಸಿ, ಅಪರಾಧ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ಹಾಗೂ ಕಾನೂನು ಸುವ್ಯವಸ್ಥೆ ಹತೋಟಿಗೆ ತರುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ಸೂಚಿಸಿದರು ಎಂದು ತಿಳಿದುಬಂದಿದೆ.

ಈ ಸಂದರ್ಭದಲ್ಲಿ ಹು-ಧಾ. ನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ಡಿಸಿಪಿಗಳಾದ ಶ್ರುತಿ ಎನ್.ಎಸ್., ರವೀಶ್ ಸಿ.ಆರ್., ಎಸ್.ಪಿ.ಗುಂಜನ್ ಆರ್ಯ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಇದ್ದರು.

ಕನಕಗಿರಿಯಲ್ಲಿ 20 ಕುರಿಗಳ ಕಳ್ಳತನ



ಕನಕಗಿರಿ: ಹಟ್ಟಿಯಲ್ಲಿದ್ದ 20 ಕುರಿಗಳನ್ನು ಕಳ್ಳರು ಕದ್ದೊಯ್ದಿರುವ ಘಟನೆ ಪಟ್ಟಣದ ನಿರಲೂಟಿ ರಸ್ತೆಯ ಲಾಲ್ ಸಿಂಗ್ ಲೇಔಟ್ ಬಳಿ ಇತ್ತೀಚೆಗೆ ನಡೆದಿದೆ.

ಗದಗ ಬೆಟಗೇರಿ ಮೂಲದ ನಿವಾಸಿ ಆನಂದ್ ಸಿಂಗ್ ಎಂಬಾತ ಕಳೆದ 8 ತಿಂಗಳಿಂದ ಕುರಿ ಮತ್ತು ಕೋಳಿ ಸಾಕಾಣಿಕೆ ಜೊತೆಗೆ ಆಟೋ ಓಡಿಸಿ ಜೀವನ ಸಾಗಿಸುತ್ತಿದ್ದು, ಮೇ 18ರ ಸೋಮವಾರ ರಾತ್ರಿ ವೇಳೆ ಶೆಡ್‌ನಲ್ಲಿದ್ದ 20 ಕುರಿಗಳನ್ನು ಸದ್ದಿಲ್ಲದೇ ಕಳ್ಳತನ ಮಾಡಿಕೊಂಡು ಪರಾರಿಯಾಗಿದ್ದಾರೆ.

ಮರುದಿನ ಬೆಳಗಿನ ಜಾವ ಮಾಲೀಕ ಆನಂದ್ ಸಿಂಗ್ ಬಂದು ನೋಡಿದಾಗ ಶೆಡ್‌ನಲ್ಲಿ ಕುರಿ ಕಳ್ಳರು ಕದ್ದೊಯ್ದಿರುವುದು ಕಂಡು ಬಂದಿದೆ. ಕುರಿಗಳನ್ನು ಸುತ್ತಮುತ್ತಲಿನ ಹೊಲ ತೋಟಗಳಿಗೆ ಹೋಗಿ ಹುಡುಕಾಡಿದರು ಸಿಕ್ಕಿರುವುದಿಲ್ಲ ಸುಮಾರು 2 ಲಕ್ಷ ಬೆಲೆ ಬಾಳುವ 20 ಕುರಿ ಕಳ್ಳತನವಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಈ ಪ್ರಕರಣ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ.

ರಾಜ್ಯಕ್ಕೆ 10ನೇ ರ್‍ಯಾಂಕ್



ಭಟ್ಕಳ: ತಾಲೂಕಿನ ಶಿರಾಲಿಯ ಕೋಟೆಬಾಗಿಲಿನ ಸೇಂಟ್ ಥಾಮಸ್ ಇಂಗ್ಲಿಷ್ ಮೀಡಿಯಂ ಶಾಲೆಯ ವಿದ್ಯಾರ್ಥಿನಿ ಶ್ರೀಶಾ ಶ್ರೀಧರ ಶೇಟ್ ಈ ಸಾಲಿನ ಎಸ್ ಎಸ್‌ಎಲ್‌ಸಿ ಪರೀಕ್ಷೆಯ ಮರುಮೌಲ್ಯಮಾಪನದ ನಂತರ ನಾಲ್ಕು ಅಂಕ ಹೆಚ್ಚು ಗಳಿಸಿ ರಾಜ್ಯಕ್ಕೆ 10ನೇ ರ್‍ಯಾಂಕ್ ಗಳಿಸಿದ್ದಾಳೆ. ಯಾವುದೇ ಕೋಚಿಂಗ್ ಅಥವಾ ಟ್ಯೂಶನ್‌ಗೆ ಹೋಗದೆ, ಗುರುಗಳು ಮತ್ತು ಪಾಲಕರು ಕಲಿಸಿದ್ದನ್ನು ಅಧ್ಯಯನ ಮಾಡಿ, ಈ ವರ್ಷದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625 ಅಂಕಗಳಿಗೆ 616 ಅಂಕಗಳನ್ನು(ಶೇ.98.56) ಗಳಿಸಿ ರಾಜ್ಯಕ್ಕೆ ಹತ್ತನೇ ಯಾರ್ಂಕ್ ಮತ್ತು ಶಿರಾಲಿಯ ಸೇಂಟ್ ಥಾಮಸ್ ಇಂಗ್ಲಿಷ್ ಮೀಡಿಯಂ ಶಾಲೆಗೆ ಪ್ರಥಮ ರ್‍ಯಾಂಕ್‌ನ್ನು ಗಳಿಸಿರುತ್ತಾಳೆ. ಬಹುಮುಖ ಪ್ರತಿಭೆಯ ವಿದ್ಯಾರ್ಥಿನಿಯಾಗಿರುವ ಈಕೆ,ಪಠ್ಯೇತರ ಚಟುವಟಿಕೆಗಳಲ್ಲೂ ಮುಂದಿದ್ದು, ಉತ್ತಮ ಚಿತ್ರ ಕಲಾವಿದೆಯೂ ಆಗಿ ಹೆಸರು ಮಾಡಿದ್ದಾಳೆ. ಈಕೆ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಹಾಗೂ ಸಾಹಿತಿ ಶ್ರೀಧರ ಶೇಟ್ ಶಿರಾಲಿ ಮತ್ತು ಶಿಕ್ಷಕಿ ಹೇಮಲತಾ ದಂಪತಿಗಳ ಸುಪುತ್ರಿ. ಈಕೆಯ ಈ ಸಾಧನೆಗೆ ಶಾಲಾ ಮುಖ್ಯೋಪಾಧ್ಯಾಯ ಸ್ಯಾಮ್ಯುಯೆಲ್ ವರ್ಗಿಸ್, ಶಿಕ್ಷಕ ವೃಂದ ಮತ್ತು ಸಂಘ ಸಂಸ್ಥೆಗಳ ಮುಖ್ಯಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಲವ್: ಮುರಿದು ಬಿದ್ದ ಮದುವೆ ಕಾರ್ಯ

ಸಿಂಧನೂರು: ತಾಲೂಕಿನ ಹಂಚಿನಾಳ ಕ್ಯಾಂಪ್ ಯುವತಿ ಹಾಗೂ ದೇವದುರ್ಗ ತಾಲೂಕಿನ ಜಾಗಟಗಲ್ ಗ್ರಾಮದ ಯುವಕನಿಗೆ ವಿವಾಹ (ಎಂಗೇಜ್ ಮೆಂಟ್) ನಿಶ್ಚಯವಾಗಿ ಮೇ 8ರಂದು ಮದುವೆ ಆಗಬೇಕಿತ್ತು. ವಧುವಿನ ಹಳೆ ಲವ್ ಮದುವೆಗೆ ಅಡ್ಡಿಯಾಗಿ ಮದುವೆ ಮುರಿದು ಬಿದ್ದ ಘಟನೆ ನಡೆದಿದೆ.

ಯುವಕನೊಂದಿಗೆ ಹಲವು ವರ್ಷಗಳಿಂದ ಲವ್‌ನಲ್ಲಿದ್ದ ಯುವತಿ ವಿವಾಹ ನಿಶ್ಚಯ ಮಾಡಿಕೊಂಡಿದ್ದ ಯುವತಿಗೆ ತನ್ನ ಪ್ರೀತಿಯ ಆಳ ಅಗಲ ಎಲ್ಲವನ್ನೂ ತಿಳಿಸಿದಾಗ ನಂಬದಿರುವ ಯುವತಿ ಕೊನೆಗೆ ಹಳೆಯ ಫೋಟೋ, ಕಾಲ್ ರೆಕಾರ್ಡ್ ಸೇರಿದಂತೆ ವಾಟ್ಸ್‌ಆ್ಯಪ್‌ಗಳಿಗೆ ಶೇರ್ ಮಾಡಿದಾಗ ಯುವಕನ ನೈಜ ಸ್ಥಿತಿ ಬಯಲಾಗಿದೆ.

ಮುಂದೆ ತಮ್ಮ ಮಗಳಿಗೆ ಮದುವೆಯಾದರೂ ಕಾಟ ತಪ್ಪಿದ್ದಲ್ಲ ಎಂದು ನಿರ್ಧರಿಸಿ ವಿವಾಹ ನಿಶ್ಚಯ ಮಾಡಿದ್ದ ಮಗಳ ಪಾಲಕರು ಸಿಂಧನೂರು ಗ್ರಾಮೀಣ ಪೋಲಿಸ್ ಠಾಣೆಗೆ ಹೋಗಿ ಯಾವುದೇ ಕೇಸ್ ದಾಖಲಿಸದೆ 3.50 ಲಕ್ಷ ರೂ.ಗೆ ಯುವಕನಿಗೆ ಕೊಡುವಂತೆ ಒಪ್ಪಂದ ಮಾಡಿಕೊಂಡು ಮದುವೆ ಮುರಿದುಕೊಂಡ ಘಟನೆ ಬೆಳಕಿಗೆ ಬಂದಿದೆ.

ಮೊಬೈಲ್‌ಗೆ ಚಾರ್ಜ್ ಹಾಕುವ ವಿಚಾರಕ್ಕೆ ಕೊಲೆ

ಹುಬ್ಬಳ್ಳಿ: ಮೊಬೈಲ್ ಫೋನ್‌ಗೆ ಚಾರ್ಜ್ ಹಾಕುವ ವಿಚಾರಕ್ಕೆ ನಡೆದ ಜಗಳ ವಿಕೋಪಕ್ಕೆ ಹೋಗಿ ಅಳಿಯ ಮಾವನಿಗೆ ಕಬ್ಬಿಣದ ರಾಡ್‌ನಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ ಘಟನೆ ಬುಧವಾರ ತಡರಾತ್ರಿ ತಾಲೂಕಿನ ರೇವಡಿಹಾಳ ಗ್ರಾಮದಲ್ಲಿ ನಡೆದಿದೆ.

ಛಬ್ಬಿ ಗ್ರಾಮದ ದಾದಾಪೀರ ಕೋಲಕಾರ (35) ಎಂಬುವರು ಹತ್ಯೆಯಾಗಿದ್ದು, ಅಳಿಯ ಅಜೀಮ್ ಜಮಖಾನೆ ಎಂಬಾತ ಕೊಲೆ ಮಾಡಿದ್ದಾನೆ. ಅಳಿಯ ಅಜೀಮ್ ರೆವಡಿಹಾಳದಲ್ಲಿರುವ ಮಾವನ ಮನೆಗೆ ಕೆಲಸ ವಿಚಾರಕ್ಕೆ ಹೋಗಿದ್ದಾನೆ. ಆಗ ಮೊಬೈಲ್ ಫೋನ್‌ಗೆ ಚಾರ್ಜ್ ಹಾಕುವ ವಿಚಾರಕ್ಕೆ ಜಗಳ ಆರಂಭವಾಗಿದೆ. ಮಾತು ಮಾತಿಗೆ ಬೆಳೆದು ಹಣಕಾಸಿನ ವಿಚಾರಕ್ಕೆ ಜಗಳ ವಿಕೋಪಕ್ಕೆ ಹೋಗಿದೆ. ಆಗ ಅಜೀಮ್ ಕುಡಿದ ಮತ್ತಿನಲ್ಲಿ ಕಬ್ಬಿಣ ರಾಡ್‌ನಿಂದ ಹಲ್ಲೆ ನಡೆಸಿ ಹತ್ಯೆ ಮಾಡಿದ್ದಾನೆ.

ಮಾವ ದಾದಾಪೀರ ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದು, ಅವನೊಂದಿಗೆ ಅಳಿಯ ಕೆಲಸಕ್ಕೆ ಬರುತ್ತಿದ್ದ. ಈ ವೇಳೆ ಅಳಿಯನಿಗೆ ಮುಂಚಿತವಾಗಿ ಹಣ ನೀಡಿದ್ದಾನೆ. ಇದೇ ವಿಚಾರಕ್ಕೆ ಜಗಳ ವಿಕೋಪಕ್ಕೆ ಹೋಗಿ ಕೊಲೆ ಮಾಡಿದ್ದಾನೆ ಎಂದು ಗ್ರಾಮೀಣ ಪೊಲೀಸರು ತಿಳಿಸಿದ್ದಾರೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣದಲ್ಲಿ ದಾಖಲಾಗಿದೆ.

ಕಾರು–ಲಾರಿ ನಡುವೆ ಅಪಘಾತ

ಓರ್ವ ಸಾವು, ಮೂವರಿಗೆ ಗಂಭೀರ ಗಾಯ

ಬೆಳಗಾವಿ/ ಸಂಕೇಶ್ವರ: ಜಿಲ್ಲೆಯ ಸಂಕೇಶ್ವರ ಪಟ್ಟಣದ ಬಳಿ ಪೂನಾ ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾರು ಹಾಗೂ ಲಾರಿ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಓರ್ವ ಸ್ಥಳದಲ್ಲಿಯೇ ಮೃತಪಟ್ಟು ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ಮಹಾರಾಷ್ಟ್ರದ ಪೂನಾ ಮೂಲದ ನಿವಾಸಿ ಹಣಮಂತ ಪಾಯಾಳ (55) ಮೃತ ದುರ್ದೈವಿ. ಮಹಾರಾಷ್ಟ್ರ ನೋಂದಣಿ ಹೊಂದಿರುವ ಈ ಕಾರು ಹಾಗೂ ಧಾರವಾಡ ಕಡೆಯಿಂದ ಬರುತ್ತಿದ್ದ ಲಾರಿ ನಡುವೆ ಭೀಕರ ಅಪಘಾತ ನಡೆದಿದೆ. ಕಾರಿನಲ್ಲಿ ಪ್ರಯಾಣಿಸುತ್ತಿದ್ದ ನಾಲ್ವರ ಪೈಕಿ ಓರ್ವ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮೂವರಿಗೆ ಗಂಭೀರವಾಗಿ ಗಾಯಗೊಂಡು ಸ್ಥಳೀಯ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದೆ. ಮೃತ ಹಾಗೂ ಗಾಯಗೊಂಡವರ ಹೆಸರು ಇನ್ನು ತಿಳಿದು ಬಂದಿಲ್ಲ, ಸಂಕೇಶ್ವರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಸ್ಥಳಕ್ಕೆ ಸಂಕೇಶ್ವರ ಪೊಲೀಸರು ಭೇಟಿ ಪರಿಶೀಲಿಸಿದ್ದಾರೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಅಲಸಂದೆ ಕಾಳು	2025	2200
ಕಡಲೆಕಾಳು	2011	6211
ಉದ್ದಿನಕಾಳು	2010	6811
ಒಣ ಮೆಣಸಿನಕಾಯಿ	5099	31000
ಹೆಸರುಕಾಳು	2699	7211
ನೆಲಗಡಲೆ (ಶೇಂಗಾ)	4050	8052
ಜೋಳ	1666	4352
ಮೆಕ್ಕೆಜೋಳ	1981	2021
ಈರುಳ್ಳಿ	500	1900
ಆಲೂಗಡ್ಡೆ	1200	1600
ಕುಸುಬೆ	5351	5421
ಸೋಯಾಬಿನ್	6971	7505
ಗೋಧಿ	1607	5340

ಕರೆಂಟ್ ಬಳಸಿ ಪ್ರಾಣಿಗಳ ಬಲಿ ಪಡೆಯುತ್ತಿದ್ದ ಇಬ್ಬರು ಬಂಧನ



ಕಲಬುರಗಿ: ತೆಲಂಗಾಣ ಗಡಿಭಾಗದ ಸಂಗಾಪೂರ ಅರಣ್ಯ ಪ್ರದೇಶದಲ್ಲಿ ಅಕ್ರಮವಾಗಿ ಕರೆಂಟ್ ಹರಿಸಿ ಪ್ರಾಣಿಗಳನ್ನು ಬಲಿ ಪಡೆಯುತ್ತಿದ್ದ ಇಬ್ಬರು ಆರೋಪಿಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಈ ಕುರಿತು ಕುಂಚಾವರಂ ವಲಯ ಅರಣ್ಯಾಧಿಕಾರಿ ಸಂಜೀವಕುಮಾರ ಚವ್ಹಾಣ ಮಾಹಿತಿ ನೀಡಿದ್ದು, ಸಂಗಾಪೂರ ಗ್ರಾಮದ ಮಾಣಿಕ ತಂದೆ ಹರಿಶ್ಚಂದ್ರ ಪವಾರ (40) ಹಾಗೂ ಸುನೀಲ ತಂದೆ ಧರ್ಮು ರಾಠೋಡ (30) ಬಂಧಿತ ಆರೋಪಿಗಳಾಗಿದ್ದಾರೆ ಎಂದು ತಿಳಿಸಿದ್ದಾರೆ.

ಆರೋಪಿತರು ಸಂಗಾಪೂರ ಅರಣ್ಯ ಪ್ರದೇಶದ ಸರ್ವೆ ನಂ. 3ರಲ್ಲಿ ಅಕ್ರಮವಾಗಿ ಪ್ರವೇಶಿಸಿ ಸುಮಾರು ಎರಡು ಕಿಲೋಮೀಟರ್‌ವರೆಗೆ ಬೈಂಡಿಂಗ್ ತಂತಿ ಎಳೆದು ಅದಕ್ಕೆ ವಿದ್ಯುತ್ ಸಂಪರ್ಕ ನೀಡಿ ಪ್ರಾಣಿಗಳನ್ನು ಬಲಿ ಪಡೆಯುತ್ತಿದ್ದ ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ದಾಳಿ ನಡೆಸಿ ಅವರನ್ನು ಬಂಧಿಸಿದ್ದಾರೆ.

ಬಂಧಿತರಿಂದ ಒಂದು ಮೊಲ ಹಾಗೂ ಎರಡು ಟಿಟ್ಟಿಬ ಪಕ್ಷಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ವಲಯ ಅರಣ್ಯಾಧಿಕಾರಿ ಸಂಜೀವಕುಮಾರ ಚವ್ಹಾಣ ತಿಳಿಸಿದ್ದಾರೆ.

ಹಲ್ಲೆ, ಜೀವಬೆದರಿಕೆ: ದೂರು ದಾಖಲು

ಭಟ್ಕಳ: ಪಟ್ಟಣದ ಮಾರುತಿನಗರದ ಬಳಿ ಕಂಟೇನರ್ ವಾಹನ ಹಿಂಬಾಲಿಸಿದ ವಿಚಾರಕ್ಕೆ ಸಂಬಂಧಿಸಿ ಯುವಕರ ನಡುವೆ ಗಲಾಟೆ ನಡೆದು, ಹಲ್ಲೆ ಹಾಗೂ ಜೀವ ಬೆದರಿಕೆ ಆರೋಪದಡಿ ನಗರ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿದೆ.

ತಲಗೋಡ ಕೋಟೆಮನೆ ನಿವಾಸಿ ಹರ್ಷ ಮಂಜುನಾಥ ನಾಯ್ಕ ನೀಡಿದ ದೂರಿನ ಮೇರೆಗೆ ಸುಲ್ತಾನ್ ಸ್ಟ್ರೀಟ್‌ನ ಇದ್ರಿಸ್ ಅಬ್ಬಾಸ್ ರೊಡ್ಡಾ, ಉಸ್ಮಾನ್ ಸ್ಟ್ರೀಟ್‌ನ ಅಮಾನ್ ಹಕೀಂ ಮೊತೇಶ್ಯಾಮ್ ವಿರುದ್ಧ ದೂರು ದಾಖಲಾಗಿದೆ.

ಬುಧವಾರ ಮಧ್ಯರಾತ್ರಿ ಹರ್ಷ ಅವರು ಸ್ನೇಹಿತರಾದ ಮಧುರ ಮಂಜುನಾಥ ನಾಯ್ಕ ಮತ್ತು ಸಚಿನ್ ಗೋವಿಂದ ನಾಯ್ಕ ಅವರೊಂದಿಗೆ ಬೈಕ್‌ನಲ್ಲಿ ಸಬ್ಬತ್ತಿಯಿಂದ ಭಟ್ಕಳದ ಕಡೆಗೆ ಕಂಟೇನರ್ ವಾಹನದ ಹಿಂದೆ ಸಾಗುತ್ತಿದ್ದ ವೇಳೆ ಮಾರುತಿನಗರದ ರಾಘವೇಂದ್ರ ಮಠದ ಸಮೀಪದ ಮಾರುತಿ ಸುಜುಕಿ ಶೋರೂಂ ಬಳಿ ಎರಡು ಬೈಕ್‌ಗಳಲ್ಲಿ ಬಂದ ಆರೋಪಿತರು ಇವರನ್ನು ತಡೆಹಿಡಿದು ಕಂಟೇನರ್ ಯಾಕೆ ಹಿಂಬಾಲಿಸುತ್ತಿದ್ದೀರಿ ಎಂದು ಪ್ರಶ್ನಿಸಿ ಅವಾಚ್ಯ ಶಬ್ದಗಳಿಂದ ನಿಂದನೆ ನಡೆಸಿ, ಹರ್ಷ ಹಾಗೂ ಅವರ ಸ್ನೇಹಿತರ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಲಸಲಾಗಿದೆ.

ಇವರ ಜೊತೆಯಲಿದ್ದ ಸಚಿನ್ ಗೋವಿಂದ ನಾಯ್ಕ ಅವರ ಶರ್ಟ್ ಹರಿದು ಹಾಕಿ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದೂ ದೂರಿನಲ್ಲಿ ನಮೂದಿಸಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಮೇ 23ರಿಂದ ಮಾವು ಮೇಳ

ಹುಬ್ಬಳ್ಳಿ: ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ತೋಟಗಾರಿಕೆ ಇಲಾಖೆ, ಕೃಷಿ ಮಾರಾಟ ಇಲಾಖೆ, ಜಿ.ಎಸ್ .ಫೌಂಡೇಶನ್ ಹಾಗೂ ಜಿಲ್ಲಾಡಳಿತ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಮಾವು ಮೇಳ ಹುಬ್ಬಳ್ಳಿ–2026 ಮೇ 23 ಹಾಗೂ 24 ರಂದು ಎಪಿಎಂಸಿಯ ವಿವಿದೋದ್ದೇಶ ವಸ್ತು ಪ್ರದರ್ಶನದ ಆವರಣದಲ್ಲಿ ನಡೆಯಲಿದೆ.

ಮೇ 23ರಂದು ಬೆಳಗ್ಗೆ 11.30ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹಾಗೂ ಕರ್ನಾಟಕ ವಿಧಾನ ಪರಿಷತ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಮಹೇಶ ಟೆಂಗಿನಕಾಯಿ ಅವರು ಅಧ್ಯಕ್ಷತೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್, ಕರ್ನಾಟಕ ವಿಧಾನ ಪರಿಷತನ ಸರ್ಕಾರಿ ಮುಖ್ಯಸಚೇತಕ ಸಲೀಂ ಅಹ್ಮದ್, ಶಾಸಕ ಅಬ್ಬಯ್ಯ ಪ್ರಸಾದ, ಶಾಸಕರಾದ ಅರವಿಂದ ಬೆಲ್ಲದ, ಎನ್.ಎಚ್.ಕೋನರಡ್ಡಿ, ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ ಅತಿಥಿಗಳಾಗಿ ಪಾಲ್ಗೊಳ್ಳುವರು.

ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಸ್ನೇಹಲ್ ಆರ್., ಕೃಷಿ ಮಾರುಕಟ್ಟೆ ಇಲಾಖೆಯ ನಿರ್ದೇಶಕ ಪ್ರಸನ್ನ ಎಚ್., ಜಿಪಂ ಸಿಇಒ ಭುವನೇಶ ಪಾಟೀಲ ಭಾಗವಹಿಸುವರು. ಮೇ 24ರಂದು ಬೆಳಗ್ಗೆ 11.30ರಿಂದ 1 ಗಂಟೆಯವರೆಗೆ ಮಾವು ಮೇಳದ ಸಮಾರೋಪ ಜರುಗಲಿದೆ ಎಂದು ಕೃಷಿ ಮಾರಾಟ ತರಬೇತಿ ಮಹಾವಿದ್ಯಾಲಯದ ಪ್ರಾಚಾರ್ಯರಾದ ಆಶಿಕ್ ಅಲಿ ಡಿ.ಎಂ. ತಿಳಿಸಿದ್ದಾರೆ.

ವೇದೆ ದುರ್ಮರಣ



ಲಾರಿ-ಬೈಕ್ ಮುಖಾಮುಖಿ ಡಿಕ್ಕಿ

ಕಲಬುರಗಿ: ಲಾರಿ ಹಾಗೂ ಬೈಕ್ ನಡುವೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಒಬ್ಬರು ಸ್ಥಳದಲ್ಲೇ ಮೃತಪಟ್ಟ ಘಟನೆ ನಗರದ ಹೊರವಲಯದ ಕೇಂದ್ರ ಕಾರಾಗೃಹದ ಮುಂಭಾಗ ನಡೆದಿದೆ.

ಯಾದಗಿರಿ ಜಿಲ್ಲೆಯ ವಡಗೇರಾ ಪೊಲೀಸ್ ಠಾಣೆಯ ಕಾನ್ಸ್‌ಟೇಬಲ್, ಕಲಬುರಗಿ ತಾಲೂಕಿನ ಹಾಗರಗುಂಡಿಗಿ ಗ್ರಾಮದ ನಿವಾಸಿ ಶ್ರೀಶೈಲ್ (35) ಮೃತಪಟ್ಟ ದುರ್ದೈವಿ.

ನಿನ್ನೆ ಜೇವರ್ಗಿ ತಾಲೂಕಿನಲ್ಲಿರುವ ಸಹೋದರಿ ಮನೆಗೆ ಹೋಗಿದ್ದ ಶ್ರೀಶೈಲ್, ರಾತ್ರಿ ಬೈಕ್‌ನಲ್ಲಿ ಸ್ವಗ್ರಾಮ ಹಾಗರಗುಂಡಿಗೆಗೆ ವಾಪಸಾಗುತ್ತಿದ್ದರು. ಈ ವೇಳೆ ಸೆಂಟ್ರಲ್ ಜೈಲ ಮುಂಭಾಗ ಟೈರ್ ತುಂಬಿಕೊಂಡು ಹೋಗುತ್ತಿದ್ದ ಲಾರಿಯೊಂದು ಇವರ ಬೈಕ್‌ಗೆ ಬಲವಾಗಿ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಶ್ರೀಶೈಲ್ ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ.

ಈ ಕುರಿತು ಕಲಬುರಗಿಯ ಸಂಚಾರಿ-1 ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಲಾರಿ ಚಾಲಕನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ.

5.22 ಲಕ್ಷ ರೂ. ವಂಚನೆ

ಹುಬ್ಬಳ್ಳಿ: ಫೇಸ್‌ಬುಕ್‌ನಲ್ಲಿ ವಿವೋ ಮೊಬೈಲ್ ಫೋನ್ ಜಾಹೀರಾತು ನೋಡಿ ಮೊಬೈಲ್ ಖರೀದಿಸಲು ಮುಂದಾಗಿದ್ದ ಶಿಕ್ಷಕರೊಬ್ಬರಿಗೆ ಅಪರಿಚಿತರು 5.22 ಲಕ್ಷ ರೂ. ವಂಚಿಸಿದ್ದಾರೆ. ಧಾರವಾಡ ಪ್ರಭಾಕರ್ ಎಂಬುವರಿಗೆ ಅಪರಿಚಿತರು ವಂಚಿಸಿದ್ದಾರೆ. ಫೇಸ್‌ಬುಕ್ ನೋಡುತ್ತಿದ್ದಾಗ ವಿವೋ ಮೊಬೈಲ್ 15,500 ರೂ.ಗೆ ಮಾರುವುದಾಗಿ ಜಾಹೀರಾತು ನೋಡಿದ್ದಾರೆ. ನಂತರ ವಾಟ್ಸ್‌ಆ್ಯಪ್ ನಂಬರೊಂದಕ್ಕೆ ಸಂಪರ್ಕಿಸಿದಾಗ ಬುಕ್ಕಿಂಗ್ ಹಣ ಎಂದು 2 ಸಾವಿರ ವರ್ಗಾವಣೆ ಮಾಡಿದ್ದು, ನಂತರ 5,22,174 ರೂ. ವರ್ಗಾಯಿಸಿಕೊಂಡು ಮೋಸ ಮಾಡಿದ್ದಾರೆ. ಈ ಕುರಿತು ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ಬೀಗ ಮುರಿದು ಕಳುವು: ಮನೆಯ ಬೀಗ ಮುರಿದು ಕಳ್ಳರು ಮನೆಯಲ್ಲಿದ್ದ 1,46 ಲಕ್ಷ ಮೌಲ್ಯದ 10 ಗ್ರಾಂ ಬಂಗಾರ, 40 ಗ್ರಾಂ ಬೆಳ್ಳಿ ಆಭರಣಗಳನ್ನು ಕಳುವು ಮಾಡಿದ ಪ್ರಕರಣ ತಾಲೂಕಿನ ಅಂಗಡಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಶಿವಾನಂದ ಮಠಪತಿ ಎಂಬುವರ ಮನೆಯ ಬೀಗ ಮುರಿದು ಕಳುವು ಮಾಡಲಾಗಿದೆ. ಈ ಕುರಿತು ಹುಬ್ಬಳ್ಳಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

16 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಕಳ್ಳನ ಬಂಧನ



ಚಿತ್ತಾಪುರ: ಕಳೆದ 16 ವರ್ಷಗಳಿಂದ ಪೊಲೀಸರ ಕಣ್ಣು ತಪ್ಪಿಸಿ ತಲೆಮರೆಸಿಕೊಂಡಿದ್ದ ಬೈಕ್ ಹಾಗೂ ನಗದು ಕಳ್ಳತನ ಪ್ರಕರಣದ ಆರೋಪಿಯನ್ನು ತಾಲೂಕಿನ ವಾಡಿ ಠಾಣೆಯ ಪೊಲೀಸರು ಯಶಸ್ವಿಯಾಗಿ ಬಂಧಿಸಿದ್ದಾರೆ.

ಲಾಲ್‌ಬಾಷಾ (ತಂದೆ ಸೈಯದ್ ಹುಸೇನ್) ಬಂಧಿತ ಆರೋಪಿಯಾಗಿದ್ದಾನೆ. 2008ರ ಫೆಬ್ರವರಿ 14ರಂದು ರಾತ್ರಿ ವಾಡಿ ಪಟ್ಟಣದ ಕುನ್ನೂರ ಚೌಕ್‌ದಲ್ಲಿರುವ ಲಕ್ಷ್ಮೀಕಾಂತ್ ಎಂಬುವವರ ಸಿಮೆಂಟ್ ಏಜೆನ್ಸಿ ಶಟರ್ ಅನ್ನು ಕಬ್ಬಿಣದ ರಾಡಿನಿಂದ ಮುರಿದು, ಗಲ್ಲಾಪೆಟ್ಟಿಗೆಯಲ್ಲಿದ್ದ 1,500 ರೂ. ನಗದು ಹಾಗೂ ಒಂದು ಬೈಕ್ ಅನ್ನು ಕಳವು ಮಾಡಲಾಗಿತ್ತು. ಈ ಕುರಿತು ವಾಡಿ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 457, 380 ರಡಿ ಪ್ರಕರಣ (ಮೊ.ಸಂ. 16/2008) ದಾಖಲಾಗಿತ್ತು. ಅಂದಿನಿಂದ ಆರೋಪಿ ತಲೆಮರೆಸಿಕೊಂಡಿದ್ದನು.

ತಲೆಮರೆಸಿಕೊಂಡಿದ್ದ ಆರೋಪಿಯ ಪತ್ತೆಗಾಗಿ ಪಿಎಸ್‌ಐ ತಿರುಮಲೇಶ್ ಹಾಗೂ ತನಿಖಾ ಪಿಎಸ್‌ಐ ರೇಣುಕಾ ಅವರ ನೇತೃತ್ವದಲ್ಲಿ ವಿಶೇಷ ತಂಡವನ್ನು ರಚಿಸಲಾಗಿತ್ತು. ಈ ತಂಡವು ಬೆಂಗಳೂರು, ಕಲಬುರಗಿ, ನಾಲವಾರ, ಕುಂಬಾರಹಳ್ಳಿ ಸೇರಿದಂತೆ ವಿವಿಧೆಡೆ ತೀವ್ರ ಹುಡುಕಾಟ ನಡೆಸಿತ್ತು. ಅಂತಿಮವಾಗಿ ಮೇ 19, 2026ರಂದು ವಾಡಿ ಪಟ್ಟಣದಲ್ಲೇ ಆರೋಪಿಯನ್ನು ವಶಕ್ಕೆ ಪಡೆಯುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಬಂಧಿತ ಆರೋಪಿಯನ್ನು ಚಿತ್ತಾಪುರದ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಯಶಸ್ವಿ ಕಾರ್ಯಾಚರಣೆ ನಡೆಸಿದ ಪೊಲೀಸ್ ತಂಡದ ಕಾರ್ಯಕ್ಕೆ ಕಲಬುರಗಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

ಮನೆ ಬೀಗ ಮುರಿದು ಹಣ, ಚಿನ್ನ ಕಳುವು

ಭಟ್ಕಳ: ತಾಲೂಕಿನ ಪುರವರ್ಗದ ಗಣೇಶನಗರದಲ್ಲಿ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಒಳಹೊಕ್ಕ ಕಳ್ಳರು ಬೀಗ ಮುರಿದು ನಗದು ಚಿನ್ನಾಭರಣ ದೋಚಿ ಪರಾರಿಯಾದ ಘಟನೆ ನಡೆದಿದೆ. ಪುರವರ್ಗ ನಿವಾಸಿ ಮನೆಯ ಯಜಮಾನಿ ಬಿಬಿ ಇನಶಿಯಾ ಮಹ್ಮದ ರೆಹಾನ್ ಸಾಬ್ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಮೇ 18ರ ಸಂಜೆಯಿಂದ ಮೇ 20 ಮುಂಜಾನೆ ಅವಧಿಯಲ್ಲಿ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಬೀಗ ಮುರಿದು ಒಳನುಗ್ಗಿದ ಕಳ್ಳರು ಕಪಾಟಿನಲ್ಲಿಟ್ಟಿದ್ದ ಅಂದಾಜು 3 ಲಕ್ಷ ಮೌಲ್ಯದ ಬಂಗಾರದ ನೆಕ್ಲೆಸ್ ಹಾಗೂ ಕಿವಿಯೋಲೆ ಜೊತೆಗೆ 37 ಸಾವಿರ ನಗದು ದೋಚಿ ಪರಾರಿಯಾಗಿದ್ದಾರೆ ತಿಳಿಸಿದ್ದಾರೆ. ಸ್ಥಳಕ್ಕೆ ಕಾರವಾರದಿಂದ ಬೆರಳಚ್ಚುಗಾರರು, ಶ್ವಾನದಳ ಬಂದು ಪರಿಶೀಲನೆ ನಡೆಸಿದ್ದು, ಕಳ್ಳರ ಪತ್ತೆಗಾಗಿ ತನಿಖೆ ಮುಂದುವರಿದಿದೆ.

9 ವರ್ಷದ ಬಾಲಕ ಸಾವು

ಹುಬ್ಬಳ್ಳಿ: ಆಟವಾಡಲು ಹೋಗಿದ್ದ 9 ವರ್ಷದ ಬಾಲಕ ಶವವಾಗಿ ಪತ್ತೆಯಾದ ಘಟನೆ ವಿಜಯನಗರದಲ್ಲಿ ನಡೆದಿದೆ. ಆಜಾದ್ ನಗರದ ಬಾಲಾಜಿ(9) ಎಂಬ ಬಾಲಕ ಮೃತಪಟ್ಟವನು. ಬಾಲಕ ತನ್ನ ಸ್ನೇಹಿತರೊಂದಿಗೆ ಆಟವಾಡಲು ವಿಜಯನಗರಕ್ಕೆ ಹೋಗಿದ್ದಾನೆ. ಆ ಸಮಯದಲ್ಲಿ ಮನೆಯೊಂದ ಕಪೌಂಡ್‌ವೊಳಗೆ ಬಿದಿದ್ದ ತೆಂಗಿನಕಾಯಿ ತೆಗೆದುಕೊಂಡು ಹೋಗಿದ್ದ. ಪಿಲ್ಲರ್ ಹಾಕಲು ತೆಗೆದಿದ್ದ ಗುಂಡಿಯಲ್ಲಿ ಬಿದಿದ್ದಾನೆ. ಆತನೊಂದಿಗಿದ್ದ ಇಬ್ಬರು ಬಾಲಕ ಭಯಗೊಂಡು ಓಡಿ ಹೋಗಿದ್ದಾರೆ. ಈ ವಿಷಯ ತಿಳಿಯದ ಪೋಷಕರು ಕಾಣೆಯಾಗಿರುವ ಕುರಿತು ದೂರು ದಾಖಲಿಸಿದ್ದರು. ಈಗ ಬಾಲಕ ಶವವಾಗಿ ಪತ್ತೆಯಾಗಿದ್ದಾನೆ. ಸಿಸಿ ಕ್ಯಾಮೆರಾ ದೃಶ್ಯಗಳನ್ನು ಆಧರಿಸಿ ಪೊಲೀಸರು ಶವ ಪತ್ತೆ ಹಚ್ಚಿದ್ದಾರೆ. ಅಶೋಕ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಸರ್ಕಾರ

ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರಸಂ: ಪಂರಾ.ಇಂ/ಕಾ/ಟಿಬಿ-1/2026-27/09 ದಿ: 20.05.2026

ಟೆಂಡರ್ ಪ್ರಕಟಣೆ-09/2026-27 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025-26ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) ವಿಶೇಷ ಘಟಕ ಯೋಜನೆಯಡಿ ಹೊನ್ನಾವರ ತಾಲೂಕಿನ ಕುದ್ರಿಗಿ ಪಂ.ದ ಶ್ರೀ ಪರಿವಾರ ನಾಗಯಕ್ಷಿ ಹಾಗೂ ನಾಗಚೌಡೇಶ್ವರಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ RDPR/2026-27/BD/WORK_INDENT26496. ಅಂದಾಜು ಮೊತ್ತ: ರೂ. 10.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(2) 2023-24 ಹಾಗೂ 2024-25 ನೇ ಸಾಲಿನ ಪಿ.ಎಂ ಶ್ರೀ ಅನುದಾನ (2ನೇ ಕಂತು) ಭಟ್ಕಳ ತಾಲೂಕಿನ ಕಾಯ್ಕಿಣಿ ಗ್ರಾ.ಪಂ ಕರ್ನಾಟಕ ಪಬ್ಲಿಕ್ ಶಾಲೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ತೆರ್ನಮಕ್ಕಿ ಶಾಲೆಗೆ ಹೆಚ್ಚುವರಿ ಕೊಠಡಿ ನಿರ್ಮಾಣ. RDPR/2026-27/BD/WORK_INDENT26785. ಅಂದಾಜು ಮೊತ್ತ: ರೂ. 17.70 ಲಕ್ಷ, ಮುಂಗಡ ಠೇವಣಿ: ರೂ. 44,250.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(3) 2024-25ನೇ ಸಾಲಿನ 4235-02-102-0-06-13 ಹಾಗೂ ನರೇಗಾ ಯೋಜನೆಯಡಿ ಕುಮಟಾ ತಾಲೂಕಿನ ತೊರ್ಕೆ ಪಂಚಾಯತ್ ತೊರೆಗಜನಿ ಅಂಗನವಾಡಿ ಕಟ್ಟಡ ನಿರ್ಮಾಣ. RDPR/2026-27/BD/WORK_INDENT26368/Call-2. ಅಂದಾಜು ಮೊತ್ತ: ರೂ. 12.00 ಲಕ್ಷ, ಮುಂಗಡ ಠೇವಣಿ: ರೂ. 30,000.00, ಕಾಲಮಿತಿ (ಮಳೆಗಾಲ ಸಹಿತ): 06 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು Technical Bid ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 04.06.2026 ರ ಮಧ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 05.06.2026 ಮಧ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜನೀಯರು,
ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/150/26-27 dt. 21.05.2026

CHANGE OF NAME

I, MANJULA D/o. MALLESHAPPA KARAGUDRI R/o.63, Maruti nagar Industrial Estate,Gokul Road, HUBBALLI-580 030. I have changed my Name after Marriage as **Smt. PAVANI W/o. BASAVRAJ BHARAMANNAVAR** as per my Aadhar Card, vide Affidavit sworn before Sri.I.G.Balannavar Notary Public, Government Of India,Hubballi on 13h May 2026

CHANGE OF NAME

I, **SANGEETA PATIL** (Old Name) Resident of H No: 115, Ward No: 08, Gode Kattar Oni, Sindhanur - 584128, have changed my name as **SANGEETHA METI** (New Name) henceforth I will be called and recognized by new name for all future purposes, dated: 21/05/2026.

CHANGE OF NAME OF MOTHER

I, **SHIVAKKA BANDIWADDAR**, Mother of No: 16134639Y, Rank: L NK, KRISHNA BANDIWADDAR, Residing At: Tulasigeri, Tq: Bagalkote & Dist: Bagalkote, State: Karnataka - 587204. That I have change of my name from **SHIVAKKA to SHIVAKKA BANDIWADDAR** (Proposed New Name of Mother) due to erroneously mentioned in service documents of my son. That the Both names **SHIVAKKA to SHIVAKKA BANDIWADDAR** pertain to one and the same person. for all purposes affidavit Dtd.: 09-05-2026 sworn before notary **Smt. S. S. Gavishettar**.

ಕರ್ನಾಟಕ ಸರ್ಕಾರ ಅರಣ್ಯ ಇಲಾಖೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ಉಪ-ವಿಭಾಗ, ಹೊಸಪೇಟೆ

ಇ-ಮೇಲ್ ಐಡಿ-acfsfhosapete@gmail.com

ಅರಣ್ಯೀಕರಣ ಕಾಮಗಾರಿಗಳನ್ನು ನಿರ್ವಹಿಸಲು ಸಂಕ್ಷಿಪ್ತ ಟೆಂಡರ್ ಪ್ರಕಟಣೆ. (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಉಪ-ವಿಭಾಗ, ಹೊಸಪೇಟೆ ಇವರ ಕಛೇರಿ ಅಧಿಸೂಚನೆ ಸಂಖ್ಯೆ:ಸಅಸಂ/ಸಾಅ/ಹೊಸಪೇಟೆ/ಟೆಂಡರ್/2026-27 ದಿನಾಂಕ:15.05.2026 ರ ಪ್ರಕಾರ 2026-27 ನೇ ಸಾಲಿನಲ್ಲಿ ಬಳ್ಳಾರಿ ಸಾಮಾಜಿಕ ಅರಣ್ಯ ವಿಭಾಗದ ಬಳ್ಳಾರಿ, ಸಂಡೂರು, ಸಿರುಗುಪ್ಪ, ಕೂಡ್ಲಿಗಿ, ಹೊಸಪೇಟೆ, ಹಡಗಲಿ ಮತ್ತು ಹರಪನಹಳ್ಳಿ ವಲಯಗಳಲ್ಲಿ ಮಾನ್ಸೂನ್ ರಸ್ತೆಬದಿ ನೆಡುತೋಪು ನಿರ್ಮಾಣ, ಮಾನ್ಸೂನ್ ಸಂಘ-ಸಂಸ್ಥೆಗಳ ಆವರಣಗಳಲ್ಲಿ ನೆಡುತೋಪು ನಿರ್ಮಾಣ, ಸಸಿಗಳನ್ನು ಬೆಳೆಸುವುದು, ಸಸಿಗಳ ನಿರ್ವಹಣೆ ಮಾಡುವ ಕಾಮಗಾರಿಗಳನ್ನು ನಿರ್ವಹಿಸಲು 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ಹೆಸರು ನೊಂದಾಯಿಸಿದ ಗುತ್ತಿಗೆದಾರರಿಂದ ನಿಗದಿತ ನಮೂನೆಯಲ್ಲಿ ದ್ವಿಲಕೋಟೆ (ತಾಂತ್ರಿಕ ಮತ್ತು ಆರ್ಥಿಕ) ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೊದಲನೇ ಬಾರಿ ಟೆಂಡರ್ ಜರುಗಿಸುವುದಕ್ಕೆ ದಿನಾಂಕ:27.05.2026 ರಂದು ಮಧ್ಯಾಹ್ನ 5.00 ಗಂಟೆಯವರೆಗೆ ಮತ್ತು ಎರಡನೇ ಬಾರಿ ಟೆಂಡರ್ ಜರುಗಿಸುವುದಕ್ಕೆ ದಿನಾಂಕ:09.06.2026 ರಂದು ಮಧ್ಯಾಹ್ನ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/-ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ-ವಿಭಾಗ, ಹೊಸಪೇಟೆ.

ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/84

ಕರ್ನಾಟಕ ಸರ್ಕಾರ

ಪಟ್ಟಣ ಪಂಚಾಯತ ಕಾರ್ಯಾಲಯ ಮುಳಗುಂದ

ತಾ॥ ಜಿ॥ ಗದಗ

ಸಂಪಪಂಮು/ತಾಂ.ವಿ./ಎಸ್.ಬಿ.ಎಂ/ಟೆಂಡರ್/ವಹಿ-/2026-27 ದಿನಾಂಕ:-21-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಮೂಲಕ

ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಮುಳಗುಂದ ಇವರಿಂದ ಮುಳಗುಂದ ಪಟ್ಟಣ ಪಂಚಾಯತ ವ್ಯಾಪ್ತಿಯಲ್ಲಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್" ಪದ್ಧತಿಯಲ್ಲಿ ಸ್ವಚ್ಛ ಭಾರತ ಮಿಷನ್ (ನಗರ) ಯೋಜನೆಯಡಿ ಇಂಡೆಂಟ್ ನಂಬರಗಳ ಸಂಖ್ಯೆಗಳು-DMA/2026-27/SE7843 ನೇದ್ದರ ಕಾಮಗಾರಿಗಳ ನಿರ್ವಹಣೆಗಾಗಿ ಕೆ.ಡಬ್ಲ್ಯೂ 1/23 ದಸ್ತಾವೇಜನಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಚಾಲ್ತಿ ಸಾಲಿನ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರಮೆಂಟ್ ದಾಖಲೆಗಳಿಗಾಗಿ http://kppp.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವದು.

1] ಇ-ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:	29-05-2026 ಸಂಜೆ 16.00 ಗಂಟೆಗೆ
2] ಇ-ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ:	30-05-2026 ಸಂಜೆ 16.30 ಗಂಟೆಗೆ

ನಿಗದಿ ಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವದು. ಯಾವುದೇ ತಿದ್ದುಪಡಿಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ ಕಾಮಗಾರಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ http://www.mulagundatown.mrc.gov.in ಹಾಗೂ ಕಚೇರಿ ವೇಳೆಯಲ್ಲಿ ಸಂಭಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರ ವ ನಾಮಂಜೂರ ಮಾಡುವ ಅಧಿಕಾರವನ್ನು ಪಟ್ಟಣ ಪಂಚಾಯತ ಕಾಯ್ದಿರಿಸಿಕೊಂಡಿದೆ.

ಸಹಿ/-
(ಶ್ರೀ.ಮಂಜುನಾಥ ಪಿ ಗುಳೇದ)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಮುಳಗುಂದ

ಸಹಿ/-
(ಶ್ರೀನಿವಾಸಮೂರ್ತಿ ಕುಲಕರ್ಣಿ)
ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಮುಳಗುಂದ
ತಹಶೀಲ್ದಾರ ಹಾಗೂ ತಾಲೂಕಾ ದಂಡಾಧಿಕಾರಿಗಳು ಗದಗ

ವಾ.ಸಾ.ಸಂ.ಇ/ಗದಗ/84/ದೇಶಪಾಂಡೆಪಬ್ಲಿಸಿಟಿ/2026-27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-5/2026-27/910 ದಿನಾಂಕ:18-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https://kppp.karnataka.gov.in/ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2026-27/RD/WORK_INDENT35935	300.00
2)	PWD/2026-27/BR/WORK_INDENT35979	105.00

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: 22-05-2026 ರಂದು 12.00 ಗಂಟೆಯ ವರೆಗೆ. ಆ)ಕೆಪಿಪಿ-ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 29-05-2026 ರಂದು 16.00 ಗಂಟೆಯ ವರೆಗೆ. ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: 30-05-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು

ಸಹಿ/-ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/161

ಕರ್ನಾಟಕ ಸರ್ಕಾರ

ಜಿಲ್ಲಾ ಶಸ್ತ್ರ ಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ, ಧಾರವಾಡ

ಸತ್ಯಮೇವ ಜಯತೇ — ಆರೋಗ್ಯವೇ ಭಾಗ್ಯ

ದೂರವಾಣಿ ಸಂ.: 0836-2741277, 0836-2748374, ಫ್ಯಾಕ್ಸ್ ಸಂ: 0836-2741277, ಇ-ಮೇಲ್: dsdharwad@gmail.com

ಕ್ರ.ಸಂ.: ಜಿಆಧಾ/ಎ.ಆರ್.ಎಸ್/02/2026-27 ದಿನಾಂಕ: 19.05.2026

ಟೆಂಡರ್ ಪ್ರಕಟಣೆ

2026-2027ನೇ ಸಾಲಿಗೆ ಧಾರವಾಡ ಜಿಲ್ಲಾ ಆಸ್ಪತ್ರೆಗೆ ಹಾಗೂ ತಾಯಿ ಮಕ್ಕಳ ಆಸ್ಪತ್ರೆಗೆ ಹೊರಗುತ್ತಿಗೆ ಆಧಾರದ ಮೇಲೆ 32-ಗ್ರೂಪ್ ಡಿ, 04-ಸ್ವೀಪರ್, 02-ಡಾಟಾ ಎಂಟ್ರಿ ಆಪರೇಟರ್, 01-ಲ್ಯಾಬ್ ಟೆಕ್ನೀಷಿಯನ್, 01-ಫಾರ್ಮಾಸಿಸ್ಟ್, 03-ಶುಶ್ರೂಷಾ ಅಧಿಕಾರಿಗಳ ಮಾನವ ಸಂಪನ್ಮೂಲವನ್ನು ಒದಗಿಸಲು ಇ-ಟೆಂಡರ್ ಮೂಲಕ ಅರ್ಹ ಮತ್ತು ಆಸಕ್ತ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000 ರ ಪ್ರಕಾರ ದ್ವೀ-ಬಿಡ್ (Technical and Financial) ಪದ್ಧತಿಯಲ್ಲಿ ಟೆಂಡರ್ (ಇ-ಟೆಂಡರ್) ಆಹ್ವಾನಿಸಲಾಗಿದೆ. Tender No.: DHFWS/2026-27/SE2192/CALL-2

1) ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ದಿನಾಂಕ: 19.05.2026 ರಿಂದ 26.05.2026ರ ಸಾಯಂಕಾಲ 4.00 ಘಂಟೆಯವರೆಗೆ, 2) ತಾಂತ್ರಿಕ್ ಬಿಡ್‌ನ್ನು ತೆರೆಯುವ ದಿನಾಂಕ: 27.05.2026 ರಂದು 4.30 ಘಂಟೆಗೆ, 3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 29.05.2026 ರಂದು 12.00 ಘಂಟೆಗೆ.

ಟೆಂಡರಿಗೆ ಸಂಬಂಧಪಟ್ಟ ಎಲ್ಲ ಮಾಹಿತಿಯನ್ನು ಇ-ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ (www.kppp.karnataka.gov.in) ದಿಂದ ಪಡೆಯಬಹುದು ಅಥವಾ ಕಚೇರಿ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಚೇರಿಯಿಂದ ಪಡೆಯಬಹುದಾಗಿದೆ.

ಸಹಿ/-
ಜಿಲ್ಲಾ ಶಸ್ತ್ರಚಿಕಿತ್ಸಕರು, ಜಿಲ್ಲಾ ಆಸ್ಪತ್ರೆ ಧಾರವಾಡ

DIPR/Dharwad/218/Adverto/2026-27

ಪುರಸಭಾ ಕಾರ್ಯಾಲಯ, ಸಕಲೇಶಪುರ

ದೂರವಾಣಿ ಸಂಖ್ಯೆ: 08173-244042 email: itstaff_ulb_sakleshpur@yahoo.com
Website: www.sakaleshpurtown.gov.in

ನಂ/ಮುನಿಸಿ/ಜೆ.ಇ/ಪಿಆರ್/01/2026-27 ದಿನಾಂಕ 19-05-2026

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸಕಲೇಶಪುರ ಪುರಸಭೆಯಿಂದ ಕೆ.ಟಿ.ಪಿ.ಪಿ ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ-1/2/3 ನಿಯಮದಂತೆ ಇ-ಪೋರ್ಟಲ್ ಮೂಲಕ ಐಂಟವಾರು ಟೆಂಡರ್ ಕರೆಯಲಾಗಿದ್ದು ಆಸಕ್ತಿಯುಳ್ಳ ಗುತ್ತಿಗೆದಾರರು http://Kppp.karnataka.gov.in ನಿಂದ ಟೆಂಡರ್ ಷರತ್ತು ಇಎಂಡಿ ಹಾಗೂ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ಮಾತ್ರ ಸಲ್ಲಿಸತಕ್ಕದ್ದು. ಟೆಂಡರ್‌ಅನ್ನು ಸಲ್ಲಿಸುವ ಮತ್ತು ತೆರೆಯುವ ದಿನಾಂಕವನ್ನು ಇ-ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಸಕಲೇಶಪುರ ಪುರಸಭೆಯ ತಾಂತ್ರಿಕ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕ್ರ.ಸಂ.ಇಂಡೆಂಟ್ ನಂ 1.DMA/2025-26/OW/WORK_INDENT 56666 ಅಂದಾಜು ಮೊತ್ತ (ಲಕ್ಷಗಳಲ್ಲಿ)10.00 ಮೀಸಲಾತಿ OTHERS 2.DMA/2025-26/OW/WORK_INDENT56656 ಅಂದಾಜು ಮೊತ್ತ (ಲಕ್ಷಗಳಲ್ಲಿ)10.00 ಮೀಸಲಾತಿ OTHERS 3.DMA/2025-26/OW/WORK_INDENT56650 ಅಂದಾಜು ಮೊತ್ತ (ಲಕ್ಷಗಳಲ್ಲಿ)69.00 ಮೀಸಲಾತಿ CAT-2a 4.DMA/2026-27/OW/WORK_INDENT57646 ಅಂದಾಜು ಮೊತ್ತ (ಲಕ್ಷಗಳಲ್ಲಿ)60.50 ಮೀಸಲಾತಿ SC 5.DMA/2026-27/OW/WORK_INDENT 57779 ಅಂದಾಜು ಮೊತ್ತ (ಲಕ್ಷಗಳಲ್ಲಿ)80.00 ಮೀಸಲಾತಿ OTHERS 6.DMA/2026-27/OW/WORK_INDENT57811 ಅಂದಾಜು ಮೊತ್ತ (ಲಕ್ಷಗಳಲ್ಲಿ)65.50 ಮೀಸಲಾತಿ OTHERS ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 03-06-2026 ಸಂಜೆ 5.30 ಗಂಟೆಗೆ ಸೂಚನೆ:- ಕಾರಣಾಂತರಗಳಿಂದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ. ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಸೂಚಿಸಲಾಗುವುದು. ಹೆಚ್ಚಿನ ವಿವರಗಳನ್ನು ಗುತ್ತಿಗೆದಾರರು http://Kppp.karnataka.gov.in ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/-ಆಡಳಿತಾಧಿಕಾರಿಗಳು ಹಾಗೂ ಉಪವಿಭಾಗಾಧಿಕಾರಿಗಳು, ಪುರಸಭೆ, ಸಕಲೇಶಪುರ

ಸಹಿ/-ಮುಖ್ಯಾಧಿಕಾರಿ, ಪುರಸಭೆ, ಸಕಲೇಶಪುರ

ವಾಸಾಸಂಇ/ಹಿಸನಿ/ಹಾಸನ/151/ಕೆಎಸ್‌ಎಂಸಿಎ/2026-27

ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ 580 025
0836-2956097, 2224195, 2224274, 2222161

ಕ್ರಸಂ.ಹು.ಧಾ.ನ.ಪ್ರಾ.ಸಂ:ಯೋ.ವಿ/ಭೂ.ಬ/13/2026-27/1149 ದಿ: 20/05/2026

ಪತ್ರಿಕಾ ಪ್ರಕಟಣೆ

ಹುಬ್ಬಳ್ಳಿ-ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ-IIರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನುಗಳನ್ನು ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಭೌತಿಕ ಮನವಿಗಳನ್ನು ಸಲ್ಲಿಸಿದ್ದು, ಜಮೀನುಗಳ ವಿವರಣೆ ಈ ಕೆಳಗಿನಂತೆ ಇರುತ್ತದೆ.

ಅ. ನಂ	ಅರ್ಜಿದಾರರ ಹೆಸರು	ಗ್ರಾಮ	ರಿ.ಸ.ನ/ ಬ್ಲಾಕ ನಂ.	ಕ್ಷೇತ್ರ	ಮ.ಯೋ.ಪ-II ರಂತೆ ಹಾಲಿ ಉಪಯೋಗ	ಭೂ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀ ಮೀರ ಖಾದರಅಲಿ ತಂದೆ ಇಬ್ರಾಹೀಂ ಜಮಾದಾರ ಹಾಗೂ ಇತರರು	ಮಾವನೂರ	90/3 90/4 93ಅ/2 93ಅ/3	1 ಎ 1 ಎ 2ಎ-26ಗುಂ-8ಆ 2ಎ-26ಗುಂ-8ಆ ಒಟ್ಟು ಕ್ಷೇತ್ರ 7ಎ-13ಗುಂ	ವ್ಯವಸಾಯ	ವಸತಿ	ವಸತಿ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು. ಎಂದು ತಿಳಿಸಿರುತ್ತಾರೆ

ಸದರಿ ಜಮೀನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14(ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆ ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ **ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ-580025** ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಆಯುಕ್ತರು
ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ

ವಾ.ಸಾ.ಸಂ.ಇ/ಧಾರವಾಡ/216/ದೇಶಪಾಂಡೆಪಬ್ಲಿಸಿಟಿ/2026-27

ಸಾರ್ವಜನಿಕ ತಿಳುವಳಿಕೆ ನೋಟೀಸು

ನನ್ನ ಪಕ್ಷಗಾರರಾದ ಶ್ರೀ ನೂರಅಹ್ಮದ ತಂದೆ. ಮೌಲಾಸಾಬ ದೊಡ್ಡಮನಿ ಸಾ॥ ಹುಬ್ಬಳ್ಳಿ ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ನಾನು ಅರುಣಕುಮಾರ ಎನ್. ಪಾಟೀಲ ವಕೀಲರು, ಹುಬ್ಬಳ್ಳಿ ಕೊಡುವ ಸಾರ್ವಜನಿಕ ತಿಳುವಳಿಕೆ ನೋಟಿಸು ಈ ಕೆಳಗಿನಂತಿದೆ.

ಧಾರವಾಡ ಜಿಲ್ಲಾ ಹುಬ್ಬಳ್ಳಿ ತಾಲೂಕ ಸರ ಹದ್ದಿಯ ಪೈಕಿ ಮತ್ತು ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಹದ್ದಿಯಲ್ಲಿರುವ ಹುಬ್ಬಳ್ಳಿ ಶಹರ ನವ ಅಯೋಧ್ಯಾನಗರದಲ್ಲಿರುವ ವಾಸಯೋಗ್ಯ ಮನೆ ವ ಖುಲ್ಲಾ ಜಾಗಾ ಇದರ ಇ-ಸ್ವತ್ತಿನ ಸಂ. 2585590397, ಹಳೇ ಸ್ವತ್ತಿನ ಸಂ. 62/1036, ನಿರ್ಧರಣಾ ಸಂ. 70/87/2 ಕ್ಷೇತ್ರ 147.99 ಚ. ಮೀ. ಇದರ ಪೈಕಿ 92 ಚ. ಮೀ. ಆರ್.ಸಿ.ಸಿ. ಮನೆ ಇದ್ದು, ಇದರ ಚಕಬಂದಿ : ಪೂರ್ವಕ್ಕೆ : ಸಿಟಿಎಸ್ ನಂ. 2923/40ಎ, ಪಶ್ಚಿಮಕ್ಕೆ : ಸಿಟಿಎಸ್ ನಂ. 2923/40ಎ ಮತ್ತು ಸಿಟಿಎಸ್ ನಂ. 2923/40ಬ2, ಉತ್ತರಕ್ಕೆ : ಸಿಟಿಎಸ್ ನಂ. 2923/40ಎ, ದಕ್ಷಿಣಕ್ಕೆ : ರಸ್ತೆ ಇರುತ್ತದೆ. ಹೀಗಿರುವ ಆಸ್ತಿಯನ್ನು ನನ್ನ ಪಕ್ಷಗಾರರು ಸದರ ಆಸ್ತಿಯ ಮಾಲೀಕರಾದ ಶ್ರೀ ರಿಯಾಜ ಅಹ್ಮದ ತಂದೆ ಶೌಕತಅಲಿ ಬಾಗವಾನ ಇವರಿಂದ ಖರೀದಿಗೆ ತೆಗೆದುಕೊಳ್ಳಲು ನಿರ್ಧರಿಸಿದ್ದು, ಆದ್ದರಿಂದ ಸದರ ಆಸ್ತಿಗೆ ಸಂಬಂಧಿಸಿ ಯಾವುದಾದರೂ ತಂಟೆ ವ ತಕರಾರು, ಹಕ್ಕು, ಹಿತಾಸಕ್ತಿ ಮಾಲೀಕತ್ವ ಇದ್ದಲ್ಲಿ ಈ ಕೆಳಗೆ ಹೇಳಲ್ಪಟ್ಟ ವಿಳಾಸಕ್ಕೆ ಸೂಕ್ತ ದಾಖಲೆಗಳೊಂದಿಗೆ ಈ ನೋಟಿಸು ಪ್ರಕಟಗೊಂಡ 7 ದಿವಸಗಳೊಳಗಾಗಿ ಸಂಪರ್ಕಿಸಬೇಕಾಗಿ ಈ ಮೂಲಕ ತಿಳಿಸಲಾಗಿದೆ.

ಅರುಣಕುಮಾರ ಎನ್. ಪಾಟೀಲ, ವಕೀಲರು
ಹುಬ್ಬಳ್ಳಿ, 21-05-2026 #201/ಎ, 1ನೇ ಮಹಡಿ, ಕುಂದಗೋಳ ಕಾಂಪ್ಲೆಕ್ಸ್, ಹಳೇ ಕೋರ್ಟ ಎದುರುಗಡೆ, ಹುಬ್ಬಳ್ಳಿ ಮೊ. 9743235274

CHANGE OF NAME

I, **TAHERAANJUM PATEL D/O SHEIKHABDUR RAHEEM PATEL** (Old Name) Resident of C/O ANWARHUSSAIN MUJAWAR, HORAPET GALLI, NEAR SANDAL MASJID, MUDDEBIHAL PIN - 586212, have changed my name as **TAHERAANJUM ANWARHUSSAIN MUJAWAR** (New Name) for all purposes, vide affidavit dated: 12/05/2026 before notary **M. A. MUDDEBIHAL** of Muddebihal.

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

equitas — Equitas Small Finance Bank

Regd. ಕಛೇರಿ: 4ನೇ Flr, ಹಂತ II, ಸ್ಪೆನ್ಸರ್ ಪ್ಲಾಜಾ, ನಂ.769, ಮೌಂಟ್ ರೋಡ್, ಅಣ್ಣಾ ಸಲೈ, ಚೆನ್ನೈ-2
ದೂರವಾಣಿ: 044-42995000 ಫ್ಯಾಕ್ಸ್: 044-42995050
ವೆಬ್‌ಸೈಟ್: www.equitas.bank.in

ಚಿನ್ನದ ಹರಾಜು ಸೂಚನೆ

ನಮ್ಮ ಪುನರಾವರ್ತಿತ ಸೂಚನೆಗಳ ಹೊರತಾಗಿಯೂ, ನಮ್ಮೊಂದಿಗೆ ಅಡವಿಟ್ಟ ಮತ್ತು ಈ ಕೆಳಗಿನ ಶಾಖೆಗಳ ಕೆಳಗೆ ನಮೂದಿಸಿದ ಸಾಲ ಖಾತೆ ಸಂಖ್ಯೆಗಳೊಂದಿಗೆ ಸಾಲಗಾರರಿಂದ ರಿಡೀಮ್ ಮಾಡದ ಚಿನ್ನದ ಆಭರಣಗಳನ್ನು ಸ್ಥಳದಲ್ಲಿ ಮತ್ತು ಕೆಳಗೆ ನೀಡಲಾದ ಸಮಯದಲ್ಲಿ ಹರಾಜು ಮಾಡಲಾಗುವುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ:

ದಿನಾಂಕ: **16.06.2026** | ಸಮಯ: ಬೆಳಗ್ಗೆ 10.00 ಗಂಟೆಯಿಂದ
ಹರಾಜಿನ ಸ್ಥಳ: ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ಸ್ಥಳ	ಶಾಖೆಯ ಹೆಸರು	ಲೋನ್ ನಂಬರ್
ಧಾರವಾಡ	ಧಾರವಾಡ	GI1001105829 / 700012633151

ಸೂಚನೆ: 1. ಬಾಕಿ ಇರುವುದನ್ನು ಪಾವತಿಸುವ ಮೂಲಕ ಆಭರಣವನ್ನು ಪಡೆದುಕೊಳ್ಳಲು ಆಸಕ್ತಿ ಹೊಂದಿರುವ ಗ್ರಾಹಕರು ಸಂಬಂಧಪಟ್ಟ ಶಾಖೆಗಳಲ್ಲಿ ಹರಾಜು ಪ್ರಾರಂಭವಾಗುವ ಮೊದಲು ಮಾಡಬಹುದು. 2. ಆಸಕ್ತ ಬಿಡ್‌ದಾರರು ತಮ್ಮ ಗುರುತಿನ ಚೀಟಿ/ಪ್ಯಾನ್ ಕಾರ್ಡ್ ಸಂಖ್ಯೆ/ಜಿಎಸ್‌ಟಿ ಸಂಖ್ಯೆ (ನೋಂದಾಯಿತ ಸಂಸ್ಥೆ/ಕಂಪನಿಯಾಗಿದ್ದಲ್ಲಿ) ಹಾಜರುಪಡಿಸಬೇಕು

ಸ್ಥಳ: ಧಾರವಾಡ
ದಿನಾಂಕ: ಮೇ 21, 2026

ಈಕ್ವಿಟಾಸ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್, ಅಧಿಕೃತ ಸಹಿ

ಮಂಗಳೂರು ಮಹಾನಗರಪಾಲಿಕೆ

MCC/EE1/TC1/2026-27 ದಿನಾಂಕ: 20-05-2026

ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ: DMA/2026-27/WORK INDENT NO.58456, 58458, 58461, 58418, 58428, 58432, 58462, 58469, 58434, 58527, 58437, 58528, 58470, 58483, 58484, 58413, 58415, 58471, 58477, 58478, 58443, 58465 ದಿನಾಂಕ 15.05.2026 ರಂದು ಟೆಂಡರ್ ಆಹ್ವಾನಿಸಲಾಗಿದ್ದು, ಸದ್ರಿ 22 ಕಾಮಗಾರಿಗಳ ಟೆಂಡರನ್ನು ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಂಗಳೂರು ಮಹಾನಗರಪಾಲಿಕೆ

DIPR/DK/KSMCA/253/26-27 dt. 21.05.2026

ಹೆಸರಿನಲ್ಲಿ ಬದಲಾವಣೆ

ನಾನು, ಶ್ರೀಮತಿ ಶಿವಬಸಮ್ಮ ತಂ: ಶಾಂತಗೌಡ ಪಾಟೀಲ, ಸಾ: ಜಾಲಿಹಾಳ ತಾ: ಬದಾಮಿ, ಜಿ: ಬಾಗಲಕೋಟ, ನನ್ನ ಆಧಾರ ಕಾರ್ಡನಲ್ಲಿ ನನ್ನ ಹೆಸರು **ಶ್ರೀಮತಿ ಶಿವಬಸಮ್ಮ ತಂ: ಶಾಂತಗೌಡ ಪಾಟೀಲ**, ಅಂತಾ ಇರುತ್ತದೆ. ಆದರೆ ನನ್ನ ಮದುವೆಯಾದ ನಂತರ ನನ್ನ ಹೆಸರು **ಎಸ್. ಎಸ್. ಶಿವಾನಿ** ಅಂತಾ ನಮೂದು ಇರುತ್ತದೆ. ಕಾರಣ ಆಧಾರ ಕಾರ್ಡಿನಲ್ಲಿರುವ **ಶಿವಬಸಮ್ಮ ತಂ: ಶಾಂತಗೌಡ ಪಾಟೀಲ** ಅಂತಾ ಇರುವುದನ್ನು ತಗೆದು ಹಾಕಿ ಆ ಸ್ಥಳದಲ್ಲಿ ನನ್ನ ನಿಜವಾದ / ಸರಿಯಾದ ಹೆಸರು **ಎಸ್. ಎಸ್. ಶಿವಾನಿ** ಅಂತಾ ದೃಢೀಕರಿಸುವ ಸಲುವಾಗಿ ನಾನು **ಶ್ರೀ. ಎಸ್. ಬಿ. ಮುತ್ತಗಿ**, ನೋಟರಿಯವರ ಸಮಕ್ಷಮದಲ್ಲಿ ದಿನಾಂಕ: 19-05-2026 ರಂದು ಪ್ರಮಾಣ ಪತ್ರ ಮಾಡಿರುತ್ತೇನೆ.

CHANGE OF NAME

I, **HEMAVATI RANGANAGOUDRA** (Old Name) Resident of Sudi Road, Shivapete, 11th Cross, Ron, Dist: Gadag - 582209, Karnataka, India, have changed my name as **HEMAVATHI RANGANAGOUDRA** (New Name) henceforth I will be called and recognized by new name for all future purposes, dated: 21/05/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **HEMAVATHI RANGANAGOUDRA** have changed my minor son name from **SUHAS BALANAGOUDRA** (Old Name) To **SUHAS BASANAGOUDA BALANAGOUDRA** (New Name) Resident of Sudi Road, Shivapete, 11th Cross, Ron, Dist: Gadag - 582209, Karnataka, India, henceforth I will be called and recognized by new name for all future purposes, dated: 21/05/2026.

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಲೋ. ಇಲಾಖೆ ವಿಭಾಗ, ತುಮಕೂರು. ದೂ : 0816-2272479.

ಸಂಖ್ಯೆ : ಕಾ.ಇಂ./ಲೋ.ಇ.ವಿ./ತುಮ./ಕಿ.ಇಂ.-3/ಟೆಂಡರ್ 15/2026-27
ದಿನಾಂಕ : 21-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : 15/2026-27 ದಿನಾಂಕ : 21-05-2026 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ (5054-80-190-0-01-132 ಕರ್ನಾಟಕ ರಸ್ತೆ, ಅಭಿವೃದ್ಧಿ ನಿಗಮ ನಿಯಮಿತ - ಬಂಡವಾಳ ವೆಚ್ಚ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 01 ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ. 199.39 ಲಕ್ಷಗಳು, ಇ.ಎಂ.ಡಿ. ಮೊತ್ತ : ರೂ. 2,99,072/-, ಅರ್ಹ ಗುತ್ತಿಗೆದಾರರು 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ : 09 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ವೇಳೆ : 27-05-2026 ರ ಸಂಜೆ 5.30 ಗಂಟೆಗೆ, ಕೆ.ಪಿ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್‌ನ್ನು ದಿನಾಂಕ : 21-05-2026 ರಿಂದ 29-05-2026 ರ ಸಂಜೆ 4.00 ಗಂಟೆವರೆಗೆ ಪಡೆಯಬಹುದಾಗಿದೆ. ಟೆಂಡರ್‌ನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ : 29-05-2026 ರ ಸಂಜೆ 4.00 ಗಂಟೆವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 30-05-2026 ರ ಸಂಜೆ 4.30 ಗಂಟೆಯವರೆಗೆ, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 01-06-2026 ರ ಸಂಜೆ 5.00 ಗಂಟೆಗೆ.

ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ : https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸೂಚನೆ : ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ. ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ. ಸದರಿ ಟೆಂಡರ್ ಪ್ರಕಟಣೆಯಲ್ಲಿ ಆಗುವಂತಹ ಮುಂದಿನ ಬದಲಾವಣೆಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ,
ತುಮಕೂರು.

ಡಿಐಪಿಆರ್/ತುಮಕೂರು/11/ಮಣಿಪಾಲ್/2026-27

ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆ

ಜಿಲ್ಲಾ ಪಂಚಾಯತ್ ಕೋಲಾರ

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಕೋಲಾರ

ಹೊರಗುತ್ತಿಗೆ ಆದಾರದ ಮೇಲೆ ವಿಭಾಗ ಮತ್ತು ಉಪವಿಭಾಗಗಳಿಗೆ ವಾಹನಗಳನ್ನು ಒದಗಿಸುವ ಟೆಂಡರ್ ಅಲ್ಪಾವಧಿ ಇ-ಪ್ರಕ್ಯೂರ್‌ಮೆಂಟ್ ಸೇವಾ ಟೆಂಡರ್ ಪ್ರಕಟಣೆ ಸಂಖ್ಯೆ: 01/2026-27 ದಿನಾಂಕ: 18.05.2026

ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ಇಂಜನಿಯರಿಂಗ್ ವಿಭಾಗ, ಕೋಲಾರ ಹಾಗೂ ಉಪವಿಭಾಗಗಳಾದ ಕೋಲಾರ, ಮಾಲೂರು, ಬಂಗಾರಪೇಟೆ, ಮುಳಬಾಗಿಲು ಮತ್ತು ಶ್ರೀನಿವಾಸಪುರ ಕಚೇರಿಗಳಿಗೆ ವಾಹನಗಳನ್ನು ಹೊರಗುತ್ತಿಗೆ ಆದಾರದ ಮೇಲೆ ಅಧಿಕೃತ ವಾಹನ ಸರಬರಾಜುದಾರರು/ವಾಹನ ಮಾಲೀಕರಿಂದ ವಾಹನಗಳನ್ನು ಪೂರೈಸುವುದು (RDPR/2026-27/SE3897) ಸೇವಾ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಕೆ.ಪಿ.ಪಿ.ಪೋರ್ಟಾಲ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಆರೋಹಿಸಿ ಸಲ್ಲಿಸಲು ಕೊನೆಯ **ದಿನಾಂಕ: 18.05.2026 ರಿಂದ 02.06.2026 ರ ಸಂಜೆ 4.00 ಗಂಟೆವರೆಗೆ** (2) ಟೆಂಡರಗಳನ್ನು ಕೆ.ಪಿ.ಪಿ.ಪೋರ್ಟಾಲ್‌ನಲ್ಲಿ ತೆರೆಯುವ **ದಿನಾಂಕ: 03.06.2026 ರಂದು ಸಂಜೆ 4.30 ಗಂಟೆಗೆಂದು ನಿಗದಿ ಪಡಿಸಲಾಗಿದೆ.** ಈ ಸೇವೆಯನ್ನು (ಷರತ್ತು ಮತ್ತು ನಿಬಂಧನೆಗಳಂತೆ ಹೆಚ್ಚಿನ ವಿವರಗಳಿಗೆ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಕೆ.ಪಿ.ಪಿ. ಪ್ರೋಟಾಲ್‌ನಲ್ಲಿ ಸಂಪರ್ಕಿಸಬಹುದಾಗಿದೆ. ಸದರಿ ಸೇವಾ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ ಸಹಾಯವಾಣಿ ದೂರವಾಣಿ ಸಂಖ್ಯೆ: +91-8046010000, +91-8068948777 ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು
ಪಂ.ರಾ.ಇಂ. ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:77/ಕೆಎಸ್‌ಎಂಸಿಎ/2026-27

ಕರ್ನಾಟಕ ಮೃಗಾಲಯ ಪ್ರಾಧಿಕಾರ

ZOO AUTHORITY OF KARNATAKA — GADAG ZOO

ಸಹಾಯಕ ನಿರ್ದೇಶಕರು ಗದಗ ಮೃಗಾಲಯ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ಉಪ ವಿಭಾಗ, ಗದಗ

ದೂರವಾಣಿ/ಫ್ಯಾಕ್ಸ : 08372-200289 ಇ-ಮೇಲ್ : acfgadag@gmail.com

ನಂ.ಎ3/ಝುಡ್‌ಎಕೆ/ಹೊರಗುತ್ತಿಗೆ ಸಿಬ್ಬಂದಿ/ಟೆಂಡರ/2026-27, ದಿನಾಂಕ: 16-05-2026

ಇ-ಟೆಂಡರ್ ಪ್ರಕಟಣೆ

ಗದಗ ಮೃಗಾಲಯಕ್ಕೆ 2026-27 ನೇ ಸಾಲಿಗೆ (ದಿನಾಂಕ : 01-07-2026 ರಿಂದ 31-03-2027 ರವರೆಗೆ) ಗದಗ ಮೃಗಾಲಯಕ್ಕೆ ಹೊರಗುತ್ತಿಗೆ ಆಧಾರದ ಮೇರೆಗೆ ಕಛೇರಿಗೆ ಕೆಲಸಗಳಿಗೆ ಡಾಟಾ ಎಂಟ್ರಿ ಆಪರೇಟರ್ ಮತ್ತು 'ಡಿ'-ಗ್ರೂಪ್ ಸಿಬ್ಬಂದಿ ಪೂರೈಕೆ ಕುರಿತು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿ ಪ್ರಕಾರ ಕಾರ್ಯನಿರ್ವಾಹಕ ನಿರ್ದೇಶಕರು ಗದಗ ಮೃಗಾಲಯ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಗದಗ ವಿಭಾಗ, ಗದಗ ಇವರಲ್ಲಿ ನೋಂದಾಯಿತ ಗುತ್ತಿಗೆದಾರರಾಗಿ ಹೆಸರನ್ನು ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರು ಮಾತ್ರ ಹಾಗೂ ಕರ್ನಾಟಕ ಸರ್ಕಾರ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೋಂದಾಯಿಸಿದ ಗುತ್ತಿಗೆದಾರರಿಂದ ಕರ್ನಾಟಕ ಸರ್ಕಾರದ https://kppp.karnataka.gov.in ಇ-ಪೋರ್ಟಲ್ ಮೂಲಕ ಇ-ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಯುನಿಟ್ ನಂ./ ಕ್ರ.ಸಂ.	ಇಂಡೆಂಟ್ ನಂ.	ವಿವರ	ಅಂದಾಜು ಮೊತ್ತ ರೂ. ಗಳಲ್ಲಿ	ಇ.ಎಂ.ಡಿ.ಮೊತ್ತ ರೂ. ಗಳಲ್ಲಿ (2.5%)
1		ಡಾಟಾ ಎಂಟ್ರಿ ಆಪರೇಟರ್ ಮತ್ತು 'ಡಿ'-ಗ್ರೂಪ್ ಸಿಬ್ಬಂದಿ ಪೂರೈಕೆ.	50,44,450.00	1,26,111.00

ಷರತ್ತುಗಳು : (1) ಇ-ಪೋರ್ಟಲ್‌ನಲ್ಲಿ ಟೆಂಡರ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ : 16-05-2026 (2) ಬಿಡ್‌ಗಳನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ : 30-05-2026 ರ ಅಪರಾಹ್ನ 4.00 ಘಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 01-06-2026 ರ ಮುಂಜಾನೆ 11.00 ಘಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 06-06-2026 ರ ಮುಂಜಾನೆ 11.00 ಘಂಟೆಗೆ ತೆರೆಯಲಾಗುವುದು. (5) ಇ.ಎಂ.ಡಿ.ಗಳು ಇ-ಪೋರ್ಟಲ್‌ನಲ್ಲಿ ತಿಳಿಸಿರುವ ಯಾವುದಾದರೂ ಒಂದು ರೀತಿಯಲ್ಲಿರತಕ್ಕದ್ದು. ಮತ್ತು ಅವುಗಳ ಚಲಾವಣೆ ಟೆಂಡರ್ ತೆರೆಯುವ ದಿನಾಂಕದಿಂದ ಕನಿಷ್ಠ 90 ದಿನಗಳವರೆಗೆ ಇರತಕ್ಕದ್ದು. (6) ಯಾವುದೇ ಟೆಂಡರಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಹಾಗೂ ಆಡಳಿತಾತ್ಮಕ ಕಾರಣಗಳಿಂದ ಷರತ್ತುಗಳನ್ನು ಸೇರಿಸುವ, ಪರಿಷ್ಕರಿಸುವ, ಕೈಬಿಡುವ ಅಧಿಕಾರ ಈ ಕೆಳ ಸಹಿದಾರರಿಗೆ ಇರುತ್ತದೆ. (7)ಹೆಚ್ಚಿನ ವಿವರಗಳನ್ನು https://kppp.karnataka.gov.in ಇ-ಪೋರ್ಟಲ್ ಮುಖಾಂತರ ಪಡೆಯಬಹುದು.

ಸಹಿ/- ಉಪ ನಿರ್ದೇಶಕರು ಗದಗ ಮೃಗಾಲಯ ಹಾಗೂ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಗದಗ ಉಪ ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/82/2026-27


ಸಾರ್ವಜನಿಕ ನೋಟಿಸು

ಈ ಮೂಲಕ ನಮ್ಮ ಪಕ್ಷಗಾರರಾದ, ಶ್ರೀ ಹರ್ಷಾ ಶಿರೋಳ, ತಂದೆ ಸುಭಾಷಚಂದ್ರ, ಆಧಾರ ನಂ. 4052 8115 8479 ಸಾ॥ #37, ಕೆ.ಇ.ಬಿ. ಹತ್ತಿರ, ಕುಸುಗಲ್ ರೋಡ್, ಕೇಶ್ವಾಪೂರ ಶಿವಗಂಗಾ ಲೇಔಟ್, ಹುಬ್ಬಳ್ಳಿ-580023 ಇವರು ಕೊಟ್ಟ ಮಾಹಿತಿ ವ ಅಧಿಕಾರದ ಮೇಲಿಂದ ಈ ಸಾರ್ವಜನಿಕ ನೋಟಿಸು ಮೂಲಕ ತಿಳಿಸುವುದೇನೆಂದರೆ,

ಅನಂತಪ್ಪ ತಂದೆ ಯಲ್ಲಪ್ಪ ದ್ಯಾಮಾಪೂರ, ಆಧಾರ ನಂ. 2551 4931 6868 ಸಾ॥ ಕಲಘಟಗಿ, ತಾ॥ ಕಲಘಟಗಿ, ಜಿ॥ ಧಾರವಾಡ ಇವರ ಮಾಲೀಕತ್ವದ ಕಲಘಟಗಿ ತಾಲೂಕ ತಬಕದಹೊನ್ನಿಹಳ್ಳಿ ಹೋಬಳಿಯ ದ್ಯಾಮಾಪೂರ ಗ್ರಾಮದ ಸರ್ಕಾರಿ ಯರಿ ಜಮೀನು ಸರ್ವೆ/ಬ್ಲಾಕ್ ನಂ. 4/1+2+3/ಅ ಕ್ಷೇತ್ರ 04 ಎಕರೆ 20 ಗುಂಟೆ 00 ಆಣೆ (ಪೋಟ ಖರಾಬ್ 00 ಎಕರೆ 05 ಗುಂಟೆ 00 ಆಣೆ) 04 ಎಕರೆ 15 ಗುಂಟೆ 00 ಆಣೆ ಆಕಾರ 10-78 ಪೈಸೆ ನೇ ಜಮೀನನ್ನು ನಮ್ಮ ಪಕ್ಷಗಾರರು ಖರೀದಿ ಮಾಡಿಕೊಳ್ಳುವವರಿದ್ದು, ಸದರ ಜಮೀನಿಗೆ ಸಂಬಂಧಪಟ್ಟಂತೆ ಯಾರದೇ ಆಗಲೀ ಯಾವುದೇ ರೀತಿಯ ತಂಟೆ ವ ತಕರಾರುಗಳು ಇದ್ದಲ್ಲಿ, ಈ ಸಾರ್ವಜನಿಕ ನೋಟಿಸು ಪ್ರಕಟವಾದ 7 ದಿನಗಳ ಒಳಗಾಗಿ ಈ ಕೆಳಗೆ ಕಾಣಿಸಿದ ನ್ಯಾಯವಾದಿಗಳಿಗೆ ಆಗಲೀ ಅಥವಾ ನಮ್ಮ ಪಕ್ಷಗಾರರಿಗೆ ಆಗಲಿ ತಮ್ಮ ತಂಟೆ ವ ತಕರಾರುಗಳು ಇದ್ದಲ್ಲಿ ಸಲ್ಲಿಸತಕ್ಕದ್ದು. ಒಂದು ವೇಳೆ 7 ದಿನಗಳ ಒಳಗಾಗಿ ಯಾವುದೇ ರೀತಿಯ ತಂಟೆ ವ ತಕರಾರುಗಳು ಬರದೇ ಇದ್ದಲ್ಲಿ, ಮೇಲ್ಕಾಣಿಸಿದ ಆಸ್ತಿಗೆ ಸಂಬಂಧಿಸಿದಂತೆ ಖರೀದಿ ವ್ಯವಹಾರ ಮಾಡಲು ಯಾರದೂ ಯಾವುದೇ ರೀತಿಯ ತಂಟೆ ವ ತಕರಾರು ಇಲ್ಲವೆಂದು ಪರಿಗಣಿಸಿ, ಮಾನ್ಯ ಸಬ್‌ರಜಿಸ್ಟರ್ ಕಲಘಟಗಿ ರವರಲ್ಲಿ ನಮ್ಮ ಪಕ್ಷಗಾರರು ಸದರ ಆಸ್ತಿಯ ಕುರಿತು ಪಕ್ಕಾ ಖರೀದಿ ಪತ್ರ ನೋಂದಾಯಿಸಿಕೊಳ್ಳುವವರಿರುತ್ತಾರೆ ಅಂತಾ ಹೊಸದಿಗಂತ ಕರ್ನಾಟಕ ದಿನಪತ್ರಿಕೆಯಲ್ಲಿ ನೀಡಿದ ಸಾರ್ವಜನಿಕ ನೋಟಿಸು.

ದಿನಾಂಕ : 21/05/2026

ಸಹಿ/- **(ಶ್ರೀ ಎಸ್. ಟಿ. ತೆಗ್ಗಿಹಳ್ಳಿ)** ವಕೀಲರು, ಸಾ॥ ಕಲಘಟಗಿ, ತಾ॥ ಕಲಘಟಗಿ, ಜಿ॥ ಧಾರವಾಡ. ಮೊ. ನಂ. 9449419972



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ (Q)	13	9	4	0	18	+1.065
ಗುಜರಾತ್ (Q)	13	8	5	0	16	+0.400
ಹೈದರಾಬಾದ್(Q)	13	8	5	0	16	+0.350
ರಾಜಸ್ಥಾನ	13	7	6	0	14	+0.083
ಪಂಜಾಬ್	13	6	6	1	13	+0.227
ಕೆಕೆಆರ್	13	6	6	1	13	+0.011
ಚೆನ್ನೈ	13	6	7	0	12	+0.016
ದಿಲ್ಲಿ	13	6	7	0	12	-0.871
ಮುಂಬೈ	13	4	9	0	8	-0.510
ಲಖನೌ	13	4	9	0	8	-0.702

ಕಿರುಸುದ್ದಿ

ಭಾರತ ಎ ತಂಡಕ್ಕೆ ಅನುಕುಲ್ ರಾಯ್ ಆಯ್ಕೆ

ಮುಂಬೈ: ಶ್ರೀಲಂಕಾದಲ್ಲಿ ನಡೆಯಲಿರುವ ತ್ರಿಕೋನ ಸರಣಿಗಾಗಿ ಭಾರತ ಎ' ತಂಡಕ್ಕೆ ಸ್ಪಿನ್ ಆಲ್‌ರೌಂಡರ್ ಅನುಕುಲ್ ರಾಯ್ ಅವರನ್ನು ಸೇರ್ಪಡೆಗೊಳಿಸಲಾಗಿದೆ ಎಂದು ಬಿಸಿಸಿಐ ಗುರುವಾರ ಪ್ರಕಟಿಸಿದೆ. ಅನುಕುಲ್ ರಾಯ್, ಹರ್ಷ ದುಬೆ ಅವರ ಬದಲಿಗೆ ತಂಡಕ್ಕೆ ಆಯ್ಕೆಯಾಗಿದ್ದಾರೆ. ಹರ್ಷ ದುಬೆ ಅವರಿಗೆ ಅಫ್ಘಾನಿಸ್ತಾನ ವಿರುದ್ಧದ ತವರಿನ ಟೆಸ್ಟ್ ಹಾಗೂ ಏಕದಿನ ಸರಣಿಗೆ ಮೊದಲ ಬಾರಿಗೆ ಭಾರತ ಹಿರಿಯ ತಂಡದಿಂದ ಕರೆ ಬಂದಿದೆ. ಶ್ರೀಲಂಕಾ ಎ', ಭಾರತ ಎ' ಮತ್ತು ಅಫ್ಘಾನಿಸ್ತಾನ ಎ' ತಂಡಗಳು ಭಾಗವಹಿಸುವ ಈ ತ್ರಿಕೋನ ಸರಣಿ ಜೂನ್ 9ರಿಂದ ಜೂನ್ 21ರವರೆಗೆ ದಂಬುಲ್ಲಾದಲ್ಲಿ ನಡೆಯಲಿದೆ. ಇದರ ಮಧ್ಯೆ, ಅಫ್ಘಾನಿಸ್ತಾನ ವಿರುದ್ಧದ ಸರಣಿ ಜೂನ್ 6ರಿಂದ ನ್ಯೂ ಚಂಡೀಗಢದಲ್ಲಿ ನಡೆಯುವ ಏಕೈಕ ಟೆಸ್ಟ್ ಪಂದ್ಯದಿಂದ ಆರಂಭವಾಗಲಿದೆ. ಬಳಿಕ ಜೂನ್ 14ರಿಂದ 20ರವರೆಗೆ ಮೂರು ಏಕದಿನ ಪಂದ್ಯಗಳು ನಡೆಯಲಿವೆ. ನವೀಕರಿಸಿದ ಭಾರತ ಎ' ತಂಡ: ತಿಲಕ್ ವರ್ಮಾ (ನಾಯಕ), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ (ಉಪನಾಯಕ), ಆಯುಷ್ ಬದೋನಿ, ನಿಶಾಂತ್ ಸಿಂಧು, ಸೂರ್ಯಾಂಶ್ ಶೆಡ್ಗೆ, ಪ್ರಭ್‌ಸಿಮ್ರನ್ ಸಿಂಗ್, ಕುಮಾರ್ ಕುಶಾಗ್ರ, ವಿಪ್ರಜ್ ನಿಗಮ್, ಯಶ್ ಠಾಕೂರ್, ಯುದ್ಧವೀರ್ ಸಿಂಗ್, ಅಂಶುಲ್ ಕಾಂಬೋಜ್, ಅರ್ಷದ್ ಖಾನ್ ಮತ್ತು ಅನುಕುಲ್ ರಾಯ್.

ಫ್ರಾನ್ಸ್‌ಗೆ ಇ-ಸ್ಪೋರ್ಟ್ಸ್ ಸ್ಥಳಾಂತರ

ಹೊಸದಿಲ್ಲಿ: ಈ ಬಾರಿಯ ಇ-ಸ್ಪೋರ್ಟ್ಸ್ ವಿಶ್ವಕಪ್ ಸೌದಿ ಅರೇಬಿಯಾದ ರಿಯಾದ್ ಬದಲಿಗೆ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆಯಲಿದೆ ಎಂದು ಇ-ಸ್ಪೋರ್ಟ್ಸ್ ಫೌಂಡೇಶನ್ ಗುರುವಾರ ಪ್ರಕಟಿಸಿದೆ. ಇಡಬ್ಲ್ಯೂಸಿ 2026 ಜುಲೈ 6 ಮತ್ತು ಆಗಸ್ಟ್ 23 ರ ನಡುವೆ ನಡೆಯಲಿದ್ದು, 100 ಕ್ಕೂ ಹೆಚ್ಚು ದೇಶಗಳಿಂದ 2,000 ಕ್ಕೂ ಹೆಚ್ಚು ಆಟಗಾರರು ಮತ್ತು 200 ಕ್ಲಬ್‌ಗಳು 25 ಪಂದ್ಯಾವಳಿಗಳ 24 ಪಂದ್ಯಗಳಲ್ಲಿ ಸ್ಪರ್ಧಿಸುತ್ತಿದ್ದು, ದಾಖಲೆಯ 75 ಮಿಲಿಯನ್ + ಡಾಲರ್ ಬಹುಮಾನ ಪಡೆಯುತ್ತವೆ. ಇಡಬ್ಲ್ಯೂಸಿ 2024 ರಲ್ಲಿ ಪ್ರಾರಂಭವಾಯಿತು, ಪಂದ್ಯಾವಳಿಯ ಮೊದಲ ಎರಡು ಆವೃತ್ತಿಗಳು ಸೌದಿ ಅರೇಬಿಯಾದ ರಿಯಾದ್‌ನಲ್ಲಿ ನಡೆದವು. ಆದಾಗ್ಯೂ, ಪಶ್ಚಿಮ ಏಷ್ಯಾದಲ್ಲಿನ ರಾಜಕೀಯ ಪ್ರಕ್ಷುಬ್ಧತೆ - ಇಸ್ರೇಲ್ ಮತ್ತು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಇರಾನ್ ಮೇಲೆ ನಡೆಸಿದ ವಾಯುದಾಳಿಗಳ ನಂತರ ಪಂದ್ಯಾವಳಿಯನ್ನು ಸೌದಿ ಅರೇಬಿಯಾದಿಂದ ಸ್ಥಳಾಂತರಿಸುವ ನಿರ್ಧಾರದ ಮೇಲೆ ಪ್ರಭಾವ ಬೀರಿದೆ. ವಿಸ್ತೃತ ಮೌಲ್ಯಮಾಪನ ಪ್ರಕ್ರಿಯೆ ನಂತರ ಮತ್ತು ಪ್ರಸ್ತುತ ಪ್ರಾದೇಶಿಕ ಪರಿಸ್ಥಿತಿಯ ಬೆಳಕಿನಲ್ಲಿ, ಇ-ಸ್ಪೋಟ್ಸ್ ಫೌಂಡೇಶನ್ ಆವೃತ್ತಿಗಾಗಿ ಅಂತಾರಾಷ್ಟ್ರೀಯ ಮಹತ್ವಾಕಾಂಕ್ಷೆಯನ್ನು ಬಲಪಡಿಸಲು ನಿರ್ಧರಿಸಿದೆ, ಆಟಗಾರರು, ಕ್ಲಬ್‌ಗಳು, ಪಾಲುದಾರರು ಮತ್ತು ವಿಶ್ವಾದ್ಯಂತ ಅಭಿಮಾನಿಗಳಿಗೆ ಸ್ಪಷ್ಟತೆ ಮತ್ತು ಸ್ಥಿರತೆಯನ್ನು ನೀಡುತ್ತದೆ, ಆದರೆ ಪಂದ್ಯಾವಳಿಯ ಪ್ರಮಾಣ, ರಚನೆ ಮತ್ತು ಸ್ಪರ್ಧಾತ್ಮಕ ಸಮಗ್ರತೆಯನ್ನು ಕಾಪಾಡುತ್ತದೆ ಎಂದು ಫೌಂಡೇಶನ್‌ನ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆರ್ಚರಿ: ಕಾಂಪೌಂಡ್ ತಂಡಕ್ಕೆ ಕಸಿನ್ಸ್ ಕೋಚ್

ಹೊಸದಿಲ್ಲಿ: ಲಾಸ್ ಏಂಜಲೀಸ್ ಒಲಿಂಪಿಕ್ಸ್ ಕಾಂಪೌಂಡ್ ವಿಭಾಗದ ಆರ್ಚರಿಗೆ ಭಾರತ ತನ್ನ ಸಿದ್ಧತೆಗಳನ್ನು ಆರಂಭಿಸಿದ್ದು, ಮಾಜಿ ವಿಶ್ವ ಚಾಂಪಿಯನ್ ಡೇವ್ ಕಸಿನ್ಸ್ ಅವರನ್ನು ಮುಖ್ಯ ಕಾಂಪೌಂಡ್ ಕೋಚ್ ಆಗಿ ನೇಮಿಸಿದೆ. ಮುಂದಿನ ತಿಂಗಳು ಅಂಟಲ್ಯದಲ್ಲಿ ನಡೆಯಲಿರುವ ಸ್ಟೇಜ್ 3 ವಿಶ್ವಕಪ್‌ಗೆ ಎರಡು ವಾರಗಳಲ್ಲಿ ಅಮೆರಿಕನ್ ಡೇವ್ ಕಸಿನ್ಸ್ ಭಾರತಕ್ಕೆ ಬರಲಿದ್ದಾರೆ. 49 ವರ್ಷದ ಡೇವ್ ಕಸಿನ್ಸ್ ಅವರಿಗೆ ಇದು ಮೊದಲ ಅಂತಾರಾಷ್ಟ್ರೀಯ ಕೋಚಿಂಗ್ ಹುದ್ದೆಯಾಗಿದ್ದು, ಅವರು ಈ ಹಿಂದೆ ಯುಎಸ್‌ಎಯಲ್ಲಿ ಕ್ಲಬ್‌ಗಳು ಮತ್ತು ರಾಜ್ಯ ತಂಡಗಳಿಗೆ ತರಬೇತಿ ನೀಡಿದ್ದು, ಎರಡು ದಶಕಗಳಿಗೂ ಹೆಚ್ಚು ಕಾಲದ ಸ್ಪರ್ಧಾತ್ಮಕ ವೃತ್ತಿಜೀವನವನ್ನು ಅನುಭವಿಸಿದ್ದಾರೆ. ಕಾಂಪೌಂಡ್ ಬಿಲ್ಲುಗಾರಿಕೆ 2028 ರಲ್ಲಿ ಮಿಶ್ರ ತಂಡ ಸ್ಪರ್ಧೆಯೊಂದಿಗೆ ಬಹುನಿರೀಕ್ಷಿತ ಒಲಿಂಪಿಕ್ ಚೊಚ್ಚಲ ಪ್ರವೇಶ ಮಾಡಲಿದೆ.

ಇಂದು ಹೈದರಾಬಾದ್ ವಿರುದ್ಧ ಕೊನೆ ಲೀಗ್ ಪಂದ್ಯ

ಆರ್‌ಸಿಬಿ ನಂ.1 ಫೈಟ್

ಹೈದರಾಬಾದ್: ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ನಂಬರ್ 1 ಸ್ಥಾನ ಬಿಟ್ಟುಕೊಡದಿರಲು ಶುಕ್ರವಾರದಂದು ಪಂದ್ಯದಲ್ಲಿ ಸೆಣಸಾಟ ನಡೆಸಲಿದೆ. ಐಪಿಎಲ್ ಕೂಟದ ರಾಜನಾಗಿ, ಗೆಲುವಿನ ಸರ್ದಾರನಾಗಿ ಮಿಂಚಿರುವ ಆರ್‌ಸಿಬಿಗೆ ತನ್ನ ಸ್ಥಾನ ಭದ್ರವಾಗಿ ಉಳಿಸಿಕೊಳ್ಳುವ ಸವಾಲು ಎದುರಾಗಿದೆ. ಶುಕ್ರವಾರದ ಐಪಿಎಲ್ ಪಂದ್ಯದಲ್ಲಿ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಲಿವೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಕಳೆದ ಬಾರಿಯಿಂದಲೂ ಲೀಗ್ ಮೇಲೆ ಪ್ರಬಲ್ಯ ಸಾಧಿಸುತ್ತಿದೆ. ಸದ್ಯ 18 ಅಂಕಗಳನ್ನು ಹೊಂದಿರುವ ತಂಡವು ಮೊದಲನೇ ಸ್ಥಾನದಲ್ಲಿದೆ. ಪಂದ್ಯಾವಳಿಯಲ್ಲಿ ಮೂರು ತಂಡಗಳು ಮಾತ್ರ 18 ಅಂಕ ಗಳಿಸುವ ಅವಕಾಶಗಳನ್ನು ಹೊಂದಿವೆ. ರಾಜಸ್ಥಾನ ತನ್ನ ಸ್ಥಾನ ಭದ್ರವಾಗಿರಿಸಿದರೂ ಮೊದಲೆರಡು ಸ್ಥಾನಕ್ಕೆ ಹೋಗಲಾಗಲ್ಲ, ಈ ನಡುವೆ ಆರ್ ಸಿಬಿಯೊಂದೇ 20 ಅಂಕ ಗಳಿಸುವ ಅವಕಾಶವನ್ನು ಹೊಂದಿದೆ. ಸನ್‌ರೈಸರ್ಸ್ ಹೈದರಾಬಾದ್ ಈ ಪಂದ್ಯದಲ್ಲಿ ಗೆದ್ದರೆ ಟಾಪ್ 2ರಲ್ಲಿ ಉಳಿಯುವ ಅವಕಾಶ ಹೊಂದಿದ್ದು ಪೈಪೋಟಿಗೆ ಕುತೂಹಲ ಹೆಚ್ಚಿದೆ.

ಅಂಕಪಟ್ಟಿ ಲೆಕ್ಕಾಚಾರ: ಎರಡೂ ತಂಡಗಳ ಅಂಕಪಟ್ಟಿ ಭವಿಷ್ಯ ಈ ಪಂದ್ಯದಲ್ಲಿ ನಿರ್ಧಾರವಾಗಲಿದೆ. ಐಪಿಎಲ್‌ನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳಿಗೆ ಪ್ಲೇಆಫ್‌ನಲ್ಲಿ ಎರಡು ಅವಕಾಶಗಳು ಸಿಗುತ್ತವೆ. ಹೀಗಿರುವಾಗ ಟಾಪ್ ಸ್ಥಾನಗಳಿಗಾಗಿ ದೊಡ್ಡ ಪೈಪೋಟಿ ನಡೆಯುತ್ತದೆ. ಸದ್ಯ ಆರ್‌ಸಿಬಿ-ಗುಜರಾತ್ ಮೊದಲೆರಡು ಸ್ಥಾನಗಳಲ್ಲಿವೆ. ಚೆನ್ನೈ ವಿರುದ್ಧ ನಡೆಯಲಿರುವ ಗುಜರಾತ್ ಪಂದ್ಯ ಕೂಡ ಇದರಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಈ ಪಂದ್ಯದಲ್ಲಿ ಆರ್‌ಸಿಬಿ ಗೆದ್ದರೆ ಖಚಿತ ಮೊದಲ ಸ್ಥಾನ. ಇತ್ತ ಹೈದರಾಬಾದ್‌ಗೂ ಅವಕಾಶವಿದ್ದು, ಚೆನ್ನೈ ಗೆದ್ದರೆ, ಉತ್ತಮ ರನ್‌ರೇಟ್‌ನೊಂದಿಗೆ ಮೊದಲೆರಡು ಸ್ಥಾನಗಳಲ್ಲಿ ಕಾಣಿಸಬಹುದಾದ ಅವಕಾಶ ಹೊಂದಿದೆ.

ಆತ್ಮವಿಶ್ವಾಸದಲ್ಲಿ ಬೆಂಗಳೂರು: ಈ ಆವೃತ್ತಿಯಲ್ಲಿ ಆರ್‌ಸಿಬಿ ಗೆಲುವಲ್ಲೇ ತೇಲಾಡಿದ ತಂಡ ಅನಿಸಿಕೊಂಡಿದೆ. ಬ್ಯಾಟಿಂಗ್, ಬೌಲಿಂಗ್ ಮತ್ತು ಫೀಲ್ಡಿಂಗ್ ಮೂರರಲ್ಲೂ ಭರ್ಜರಿ ಪ್ರದರ್ಶನ ನೀಡಿದೆ. ಗೆಲುವಿನ ಹಿಂದಿರುವ ಪ್ರಮುಖ ಶಕ್ತಿಯಾಗಿ ಭುವನೇಶ್ವರ್ ಕುಮಾರ್ ಕಾಣಿಸಿಕೊಂಡಿದ್ದಾರೆ. ಪ್ರತಿ ಪಂದ್ಯದಲ್ಲಿ ಬೌಲಿಂಗ್ ಮೂಲಕ ಎದುರಾಳಿಗೆ ಕಾಡುವ ಅವರು, ಪ್ರತಿಯೊಂದು ಗೆಲುವಿನಲ್ಲಿ ಮಿಂಚುತ್ತಿದ್ದಾರೆ. ದೊಡ್ಡ ದೊಡ್ಡ ಬ್ಯಾಟರ್‌ಗಳನ್ನು ಆರಂಭದಲ್ಲೇ ಕಟ್ಟಿಹಾಕಿರುವ ಅವರು, ಆರಂಭಿಕ ಓವರ್‌ಗಳಲ್ಲೇ ಪಂದ್ಯ ಜೇಬಿಗೆ ಹಾಕುತ್ತಾರೆ. 13 ಪಂದ್ಯಗಳಲ್ಲಿ ಬರೋಬ್ಬರಿ 23 ವಿಕೆಟ್ ಪಡೆದು ಪರ್ಪಲ್ ಕ್ಯಾಪ್ ಪಡೆದವರಾಗಿದ್ದಾರೆ. ಇತ್ತ ಅವರಿಗೆ ಜೋಶ್ ಹ್ಯಾಜೆಲ್ವುಡ್ ಜೋಶ್ ತುಂಬುತ್ತಿದ್ದರೆ, ತಂಡದಲ್ಲಿ ಡಫಿ ಅವರನ್ನು ಸೇರಿಸಿಕೊಂಡಿರುವುದು ವೇಗಕ್ಕೆ ಬಲ ತಂದಿದೆ.

ಪಿಚ್ ರಿಪೋರ್ಟ್: ಹೈದರಾಬಾದ್‌ನ ರಾಜೀವ್ ಗಾಂಧಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬ್ಯಾಟಿಗರಿಗೂ ಮತ್ತು ಬೌಲರ್‌ಗಳಿಗೆ ಸಮಾನ ಲಾಭ ಸಿಗಲಿದೆ. ಆದಾಗ್ಯೂ ಸ್ಫೋಟಕ ಬ್ಯಾಟರ್‌ಗಳಿಗೆ ಹೇಳಿ ಮಾಡಿಸಿದ ಪಿಚ್ ಅನ್ನಬಹುದು. ಸ್ಪಿನ್‌ಗೂ ಅಲ್ಪ ಬಲ ತುಂಬಲಿದೆ. ಮೊದಲು ಬೌಲಿಂಗ್ ಮಾಡಿದವರೇ ಗೆದ್ದಿರುವುದು ಹೆಚ್ಚು

ಯಾವಾಗ: ಶುಕ್ರವಾರ, ಎಲ್ಲಿ: ಹೈದರಾಬಾದ್, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಜಿಯೋ ಹಾಟ್‌ಸ್ಟಾರ್



ಕೊಹ್ಲಿ ಮಿಂಚಿನಾಟ, ಆರ್‌ಸಿಬಿಗೆ ಭರವಸೆ

ವಿರಾಟ್ ಕೊಹ್ಲಿ ಶತಕ ಬಾರಿಸಿದ್ದಲ್ಲದೆ ಲಯಕ್ಕೆ ಮರಳಿರುವುದು ವಿಶ್ವಾಸ ಹೆಚ್ಚಿಸಿದೆ. ಸಾಲ್ಟ್ ಬದಲಿ ಆಟಗಾರರಾಗಿ ಕಣಕ್ಕಿಳಿದಿರುವ ಜೇಕಬ್ ಬೆಥೆಲ್ ಹೇಳಿಕೊಳ್ಳುವ ಪ್ರದರ್ಶನ ನೀಡಿಲ್ಲ, ಇತ್ತ ಮೂರನೇ ಕ್ರಮಾಂಕದಲ್ಲಿ ಬ್ಯಾಟ್ ಬೀಸುವ ಪಡಿಕ್ಕಲ್ ಪ್ರಭಾವ ಮೂಡಿಸಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ನಾಯಕ ಪಾಟಿದಾರ್ ಮರಳುವ ಸಾಧ್ಯತೆ ಇದೆ ಎನ್ನಲಾಗಿದೆ. ಅವರ ಬದಲಿಗೆ ಆಡಿದ ವೆಂಕಟೇಶ್ ಅಯ್ಯರ್ ಕೂಡ ತಕ್ಕ ಪ್ರದರ್ಶನದೊಂದಿಗೆ ಮಿಂಚಿದ್ದಾರೆ. ಆದರೆ ಕೆಳಕ್ರಮಾಂಕದಲ್ಲಿ ಡೇವಿಡ್ ಮಿಂಚಿದರೂ, ಜಿತೇಶ್ ಶರ್ಮ ಪರದಾಡುತ್ತಿದ್ದಾರೆ. ಆಲ್‌ರೌಂಡರ್ ಕೃಣಾಲ್ ಪಾಂಡ್ಯ ಹೆಚ್ಚುವರಿ ಬ್ಯಾಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು, ತಂಡಕ್ಕೆ ಆನೆ ಬಲ ತಂದಿದೆ.

ಸನ್‌ಗೆ ಗೆಲುವಿನ ಹಂಬಲ

ಸನ್‌ರೈಸರ್ಸ್ ಹೈದರಾಬಾದ್ ಗೆಲುವಿನ ಹಳಿಗೆ ಮರಳಿದ್ದು, ಗೆಲುವಿನ ಆಟವನ್ನು ಆರ್ ಸಿಬಿ ಪಂದ್ಯಕ್ಕೆ ವಿಸ್ತರಿಸುವ ತವಕದಲ್ಲಿದೆ. ಹಿಂದಿನ ಪಂದ್ಯಗಳಲ್ಲಿ ಗುಜರಾತ್ ವಿರುದ್ಧ ಭಾರೀ ಸೋಲನುಭವಿಸಿದ್ದ ಸನ್‌ರೈಸರ್ಸ್ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಲಯದಲ್ಲಿ ಕಾಣಿಸಿಕೊಂಡಿತು. ಇಶಾನ್ ಕಿಶನ್, ಅಭಿಷೇಕ್ ಶರ್ಮ ಲಯದಲ್ಲಿದ್ದಾರೆ. ಕ್ಲಾಸೆನ್ ಸ್ಫೋಟಕ ಬ್ಯಾಟಿಂಗ್ ಎಲ್ಲಿಲ್ಲದ ಭರವಸೆ ಹೆಚ್ಚಿಸಿದೆ. ಮಧ್ಯಮ ಕ್ರಮಾಂಕದಲ್ಲಿ ನಿತಿಶ್ ಕುಮಾರ್ ರೆಡ್ಡಿ ಕೂಡ ಅಲ್ಪ ರನ್ ಜೋಡಿಸಿರುವುದು ಕೆಳಕ್ರಮಾಂಕದ ಬದ್ಧತೆ ತೋರಿಸಿದೆ. ಬೌಲಿಂಗ್ ವಿಭಾಗವನ್ನು ನಾಯಕ ಪ್ಯಾಟ್ ಕಮ್ಮಿನ್ಸ್ ಗಟ್ಟಿಗೊಳಿಸಿದ್ದಾರೆ. ಅಲ್ಲದೆ, ಪಂದ್ಯಾವಳಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಸಾಕಿಬ್ ಹುಸೈನ್ ಕೂಡ ಮಿಂಚಿರುವುದು ತಂಡಕ್ಕೆ ಸಿಕ್ಕ ದೊಡ್ಡ ಬಲ. ಸ್ಪಿನ್ ವಿಭಾಗದಲ್ಲಿ ಹರ್ಷ ದುಬೆ ಹಾಗೂ ಶಿವಾಂಗ್ ವಿಕೆಟ್ ಕಿತ್ತಿದ್ದಾರೆ.

ಚೆನ್ನೈಗೆ 230 ರನ್ ಗುರಿ!

ಅಹಮದಾಬಾದ್: ಗುಜರಾತ್ ಟೈಟಾನ್ಸ್ ತಂಡದ ಅಗ್ರ ಮೂರು ಬ್ಯಾಟರ್‌ಗಳಾದ ಶುಭಮನ್ ಗಿಲ್(64), ಸಾಯಿ ಸುದರ್ಶನ್(84) ಮತ್ತು ಜಾಸ್ ಬಟ್ಲರ್(57) ಚೆನ್ನೈ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ್ದು, ಸೂಪರ್ ಕಿಂಗ್ಸ್ ತನ್ನ ಕೊನೆಯ ಪಂದ್ಯದಲ್ಲಿ ಕಠಿಣ ಗುರಿ ಪಡೆಯಿತು. ಪಂದ್ಯದ ಪ್ರತಿಯೊಂದು ಓವರ್‌ಗಳಲ್ಲಿ ಒಂದಾದರೂ ಬೌಂಡರಿ ಬಾರಿಸಿದ ಗುಜರಾತ್ ಕೊನೆ ಓವರ್‌ವರೆಗೂ ಪಂದ್ಯದ ಮೇಲೆ ಹಿಡಿತ ಸಾಧಿಸಿತು. ಇದರೊಂದಿಗೆ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ ಗುಜರಾತ್ 229 ರನ್ ಗಳಿಸಿದೆ.

ಗಿಲ್-ಸುದರ್ಶನ್ ಅಬ್ಬರ: ಟಾಸ್ ಗೆದ್ದ ಚೆನ್ನೈ ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಗಿಲ್ ಹಾಗೂ ಸುದರ್ಶನ ಈ ನಿರ್ಧಾರವನ್ನು ತಪ್ಪು ಸಾಬೀತು ಮಾಡಿದರು. ಮೊದಲನೇ ಎಸೆತದಿಂದಲೂ ಬೌಂಡರಿಗಳ ಮೂಲಕ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ನಾಯಕ ಶುಭಮನ್ ಗಿಲ್ 23 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಇದು ಅವರ ಸ್ವಾಭಾವಿಕ ಆಟಕ್ಕೂ ಮಿಗಿಲಾಗಿತ್ತು. ಅತ್ತ ಸುದರ್ಶನ್ ಮೊದಲಿಗೆ ಸಿಂಗಲ್‌ಗಳ ಮೂಲಕ ಸೆಟ್ ಆದರು. 6 ಓವರ್ ಮುಕ್ತಾಯಕ್ಕೆ ಗುಜರಾತ್ 62 ರನ್ ಗಳಿಸಿತು. ಮಧ್ಯಮ ಓವರ್‌ಗಳಲ್ಲಿ ಗಿಲ್ ಇನ್ನಷ್ಟು ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. 37 ಬಾಲ್‌ಗಳನ್ನು ಎದುರಿಸಿದ ಗಿಲ್ 3 ಸಿಕ್ಸರ್, 7 ಭರ್ಜರಿ ಬೌಂಡರಿಗಳೊಂದಿಗೆ ಬರೋಬ್ಬರಿ 64 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಅವರು ವಿಕೆಟ್ ಒಪ್ಪಿಸಿದ್ದೆ ತಡ ಅತ್ತ ಸುದರ್ಶನ್ ಸ್ಫೋಟಕ ಬ್ಯಾಟಿಂಗ್‌ಗೆ ಅಣಿಯಾದರು. ಜಾಸ್ ಬಟ್ಲರ್ ಬರುತ್ತಲೇ ಸಿಕ್ಸರ್‌ಗಳ ಅಬ್ಬರ ಶುರು ಮಾಡಿದರು.

ಮಧ್ಯಮ ಓವರ್‌ಗಳ ವರೆಗೂ ಈ ಜೋಡಿ ಚೆನ್ನೈ ಬೌಲರ್‌ಗಳನ್ನು ದಂಡಿಸಿತು. ಪ್ರತಿ ಓವರ್‌ನಲ್ಲೂ ಒಂದಾದರೂ ಸಿಕ್ಸರ್-ಬೌಂಡರಿ ಬಾರಿಸುತ್ತಾ ಮಿಂಚಿತು. ಮಧ್ಯಮ ಓವರ್‌ಗಳ ಮುಕ್ತಾಯಕ್ಕೆ ಗುಜರಾತ್ 111 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಬಟ್ಲರ್ ಇನ್ನಷ್ಟು ಆಕ್ರಮಣಕಾರಿಯಾಗಿ ದಂಡಿಸಿದರು. ಸ್ಫೋಟಕ ಬ್ಯಾಟಿಂಗ್ ಅಬ್ಬರಕ್ಕೆ ಚೆನ್ನೈ ಬೌಲರ್‌ಗಳು ತತ್ತರಿಸಿದರು. 19ನೇ ಓವರ್ ವೇಳೆ ಸುದರ್ಶನ್ ವಿಕೆಟ್ ಒಪ್ಪಿಸಿದರು. 53 ಬಾಲ್‌ಗಳನ್ನು ಎದುರಿಸಿದ್ದ ಸುದರ್ಶನ್ 7 ಬೌಂಡರಿ, 4 ಸಿಕ್ಸರ್‌ಗಳೊಂದಿಗೆ 84 ರನ್ ಬಾರಿಸಿದರು. 23 ಬಾಲ್ ಮಾತ್ರದಲ್ಲಿ ಬಟ್ಲರ್ ಕೂಡ ಅರ್ಧಶತಕ ಬಾರಿಸಿದರು. 27 ಬಾಲ್‌ಗಳಲ್ಲಿ ಅವರು 57★ ರನ್ ಗಳಿಸಿದರು.



ಕೋಲ್ಕತ್ತಾಗೆ ಭರ್ಜರಿ ಜಯ | ಪ್ಲೇ ಆಫ್ ಕನಸು ಜೀವಂತ

ಮನೀಶ್ ಆಟಕ್ಕೆ ಮುಂಬೈ ತತ್ತರ

ಕೋಲ್ಕತ್ತಾ: ತಂಡ ಸಂಕಷ್ಟದಲ್ಲಿದ್ದಾಗ ಬಂದು ಹೋರಾಡಿ ಮಿಂಚಿದ ಕನ್ನಡಿಗ ಮನೀಶ್ ಪಾಂಡೆ ಕೆಕೆಆರ್ ಪ್ಲೇಆಫ್ ಕನಸನ್ನು ಜೀವಂತವಾಗಿರಿಸಿದ್ದಲ್ಲದೆ, ದೊಡ್ಡ ಕಂಬ್ಯಾಕ್ ಸೂಚನೆ ಈ ಮೂಲಕ ನೀಡಿದರು. ಪ್ಲೇಆಫ್‌ಗೆ ನಾಲ್ಕನೇ ತಂಡದ ಆಯ್ಕೆಯಾಗಬೇಕಿದೆ. ಹೀಗಿರುವಾಗ ಪ್ರತಿಯೊಂದು ಪಂದ್ಯ ಪ್ರಮುಖ ಪಾತ್ರ ವಹಿಸುತ್ತಿದೆ. ಮೊದಲಿನ ಆರು ಪಂದ್ಯಗಳಲ್ಲಿ ಎಲ್ಲವನ್ನೂ ಸೋತಿದ್ದ ಕೆಕೆಆರ್ ನಂತರದ ಪಂದ್ಯಗಳಲ್ಲಿ ಗೆಲುವಿನ ಹಾದಿಗೆ ಮರಳಿದೆ.

ಮುಂಬೈ ವಿರುದ್ಧದ ಪಂದ್ಯದಲ್ಲಿ ಕೆಕೆಆರ್ ಟಾಸ್ ಗೆದ್ದು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಗ್ರೀನ್, ತ್ಯಾಗಿ, ದುಬೆ ದಾಳಿಗೆ ಮುಂಬೈ ಇಂಡಿಯನ್ಸ್ ತತ್ತರಿಸಿತು. ಕೊನೆಯಲ್ಲಿ ಅಲ್ಪ ಹಾರ್ದಿಕ್, ಅಲ್ಪ ಕಾರ್ಬಿನ್ ಬಾಷ್ ಮಿಂಚಿದ ನಂತರ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿತು ಮುಂಬೈ. ಮನೀಶ್ ಪಾಂಡೆ ಮತ್ತು ರೋವ್‌ಮನ್ ಪೋವೆಲ್ ಆಟದ ನೆರವಿನೊಂದಿಗೆ ಮಿಂಚಿದ ಕೆಕೆಆರ್ 18.5 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿ ಪಂದ್ಯ ಗೆದ್ದಿತು.

ಮನೀಶ್ ಪಾಂಡೆ ಗೆಲುವಿನಾಟ: ಗುರಿ ಬೆನ್ನತ್ತುವಾಗ ಕೆಕೆಆರ್‌ಗೆ ಆರಂಭಿಕ ಆಘಾತ. ಮೊದಲೇ ಫೀಲ್ಡಿಂಗ್ ಮಾಡುವ ವೇಳೆ ತಂಡದ ಶಕ್ತಿಯಾಗಿದ್ದ ಅಂಗ್ರಿಶ್ ರಘುವಂಶಿ ಗಾಯಗೊಂಡು ಹೊರನಡೆದಿದ್ದರು. ಫಿನ್ ಅಲೆನ್ ಬೇಗನೇ ವಿಕೆಟ್ ಒಪ್ಪಿಸಿದರು. ಕೆಕೆಆರ್ ಪರ ಲಯದಲ್ಲಿದ್ದವರೇ ಹೊರನಡೆದರು. ತಂಡ ಸಂಕಷ್ಟದಲ್ಲಿ ಸಿಲುಕಿಕೊಂಡಿತು. ಈ ಸಮಯದಲ್ಲಿ ಬಂದವರೇ ಮನೀಶ್ ಪಾಂಡೆ. ಕಳೆದ ಕೆಲವು ಪಂದ್ಯಗಳಲ್ಲಿ ತಂಡದಲ್ಲಿದ್ದರು. ಆಡುವ ಅವಕಾಶ ಹೊಂದಿರದ ಅವರು, ಈ ಬಾರಿ ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಲಿಳಿದರು. ಪೋವೆಲ್ ಅವರೊಂದಿಗೆ ನಿಂತುಕೊಂಡರೆ, ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪೋವೆಲ್ ಪಂದ್ಯವನ್ನು ಕೆಕೆಆರ್ ನತ್ತ ಜಗ್ಗಿದರು. ಮನೀಶ್ ಕೂಡ ಮನಮೋಹಕ ಬೌಂಡರಿಗಳನ್ನು ಬಾರಿಸಿದರು. ಈ ಮೂಲಕ ಈ ಜೋಡಿ ಕೆಕೆಆರ್ ಜೇಬಿಗೆ ಎರಡು ಅಂಕಗಳನ್ನು ಹಾಕಿತು. 33 ಬಾಲ್ ಎದುರಿಸಿದ ಮನೀಶ್ 45 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು. ಉಳಿದ ಔಪಚಾರಿಕತೆ ಮುಗಿಸಲು ರಿಂಕು ಸಿಂಗ್ ಬರಬೇಕಾಯಿತು. ತೇಜಸ್ವಿ 11, ಪೋವೆಲ್ 40 ರನ್‌ಗೆ ವಿಕೆಟ್ ಒಪ್ಪಿಸಿದರು. ಅನುಕುಲ್ 4 ರನ್ ಗಳಿಸಿದರು. ಕೆಕೆಆರ್ 18.5 ಓವರ್‌ಗಳಲ್ಲಿ 148 ರನ್ ಗಳಿಸಿ ಪಂದ್ಯ ಗೆದ್ದಿತು.

ಸಂಕ್ಷಿಪ್ತ ಸ್ಕೋರ್

- **ಮುಂಬೈ 20 ಓವರ್‌ಗಳಲ್ಲಿ 147/8:** ಬಾಷ್ 32★, ಪಾಂಡ್ಯ 26; ಗ್ರೀನ್ 23/2, ಸೌರಭ್ ದುಬೆ 34/2
- **ಕೆಕೆಆರ್ 18.5 ಓವರ್‌ಗಳಲ್ಲಿ 148/6:** ಮನೀಶ್ 45, ಪೋವೆಲ್ 40; ಬಾಷ್ 30/3, ಚಾಹರ್ 23/1



ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ | ಸೇನ್‌ಗೆ ನಿರಾಸೆ

ಮಾಳವಿಕಾ, ಅಶ್ಮಿತಾಗೆ ಜಯ

ಹೊಸದಿಲ್ಲಿ: ಬ್ಯಾಡ್ಮಿಂಟನ್ ಕ್ಷೇತ್ರದಲ್ಲಿ ಭಾರತದ ಪ್ರಾಬಲ್ಯ ಸೂಪರ್ 500 ಮಲೇಷ್ಯಾ ಓಪನ್ ಪಂದ್ಯಾವಳಿಗೂ ವಿಸ್ತರಿಸಿದ್ದು, ಭಾರತದ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಮಾಳವಿಕಾ ಬನ್ಸೋಡ್, ಅಶ್ಮಿತಾ ಚಾಲಿಹಾ ಮತ್ತು ದೇವಿಕಾ ಸಿಹಾಗ್ ಎರಡನೇ ಸುತ್ತಿಗೆ ಪ್ರವೇಶಿಸಿ ಮಿಂಚಿದರು.

ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಮಿಂಚಿದ್ದ ಅಶ್ಮಿತಾ ತಮ್ಮ ಸಮಯೋಚಿತ ಪ್ರದರ್ಶನ ಮುಂದುವರಿಸಿದ್ದಾರೆ. ಗಂಭೀರ ಮೊಣಕಾಲು ಗಾಯದಿಂದ ಶಸ್ತ್ರಚಿಕಿತ್ಸೆಗೊಂಡ ಬಳಿಕ ಮರಳಿರುವ ಮಾಲವಿಕಾ ಬನ್ಸೋಡ್, ಜರ್ಮನಿಯ ವಿಶ್ವ ನಂ. 52 ಇವೊನ್ ಲೀ ವಿರುದ್ಧ ಹೋರಾಟಮಯ ಜಯ ಸಾಧಿಸಿದರು. ಮೊದಲ ಗೇಮ್ ಗೆದ್ದ ಬಳಿಕ ಎರಡನೇ ಗೇಮ್ ಕಳೆದುಕೊಂಡರೂ, ಮೂರನೇ ಗೇಮ್‌ನಲ್ಲಿ ಅದ್ಭುತ ಆಟ ಪ್ರದರ್ಶಿಸಿದ ಮಾಲವಿಕಾ 21-17, 16-21, 21-9 ಅಂತರದಲ್ಲಿ ಪಂದ್ಯ ಗೆದ್ದರು. ಮುಂದಿನ ಸುತ್ತಿನಲ್ಲಿ ಅವರು ಡೆನ್ಮಾರ್ಕ್‌ನ ಎಂಟನೇ ಶ್ರೇಯಾಂಕಿತ ಲೈನ್ ಹೋಯ್ ಮಾರ್ಕ್ ಕ್ಯಾಯರ್ಸ್‌ಫೆಲ್ಟ್ ಅವರನ್ನು ಎದುರಿಸಲಿದ್ದಾರೆ. ಅಶ್ಮಿತಾ ಚಾಲಿಹಾ ಇಂಡೋನೇಷ್ಯಾದ ತಲಿತಾ ರಾಮಧಾನಿ ವಿರುದ್ಧ 21-16, 21-13 ಅಂತರದಲ್ಲಿ ಸುಲಭ ಜಯ ದಾಖಲಿಸಿದರು. ಮುಂದಿನ ಸುತ್ತಿನಲ್ಲಿ ಮಲೇಶಿಯಾದ ಗೋ ಜಿನ್ ವೆಯ್ ಸವಾಲಾಗಲಿದ್ದಾರೆ.

ದೇವಿಕಾ ಸಿಂಗ್ ಮಿಂಚು: ದೇವಿಕಾ ಸಿಹಾಗ್ ಕೂಡ ಒಂದು ಗೇಮ್ ಹಿನ್ನಡೆಯಿಂದ ಮರಳಿ ಬಂದು ದಕ್ಷಿಣ ಕೊರಿಯಾದ ಪಾರ್ಕ್ ಗಾ ಯೂನ್ ವಿರುದ್ಧ 19-21, 21-18, 21-19 ಅಂತರದಲ್ಲಿ ಗೆಲುವು ಸಾಧಿಸಿದರು.



ಇದೀಗ ಅವರು ಚೀನಾದ ಅಗ್ರ ಶ್ರೇಯಾಂಕಿತ ಚೆನ್ ಯು ಫೆಯ್ ಅವರನ್ನು ಎದುರಿಸಲಿದ್ದಾರೆ. ಮಿಶ್ರ ಡಬಲ್ಸ್ ವಿಭಾಗದಲ್ಲಿ ರಾಧಿಕಾ ಶರ್ಮಾ ಮತ್ತು ಸಾತ್ವಿಕ್ ರೆಡ್ಡಿ ಕನಪುರಂ ಜೋಡಿ ಸ್ಕಾಟ್ಲೆಂಡ್‌ನ ಜೂಲಿ ಮ್ಯಾಕ್‌ಫರ್ಸನ್ ಮತ್ತು ಅಲೆಕ್ಸಾಂಡರ್ ಡನ್ ವಿರುದ್ಧ 16-21, 21-14, 21-18 ಅಂತರದಲ್ಲಿ ಗೆದ್ದು ಎರಡನೇ ಸುತ್ತು ತಲುಪಿತು.

ಪುರುಷರ ವಿಭಾಗದಲ್ಲಿ ನಿರಾಸೆ: ಆದರೆ ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಪ್ರಮುಖ ಭರವಸೆಯಾಗಿದ್ದ ಲಕ್ಷ್ಯ ಸೇನ್ ಆಘಾತಕಾರಿ ಸೋಲು ಅನುಭವಿಸಿದರು. ಇಂಡೋನೇಷ್ಯಾದ ಮೊಹಮ್ಮದ್ ಝೂಕಿ ಉಬೈದಿಲ್ಲಾ ವಿರುದ್ಧ 17-21, 11-21 ಅಂತರದಲ್ಲಿ ಸೋತು ಮೊದಲ ಸುತ್ತಿನಲ್ಲೇ ಹೊರಬಿದ್ದರು. ಎಚ್.ಎಸ್. ಪ್ರಣಯ್ ಕೂಡ ಜಪಾನ್‌ನ ಕೊಡೈ ನರಾಓಕಾ ವಿರುದ್ಧದ 80 ನಿಮಿಷಗಳ ಮ್ಯಾರಥಾನ್ ಹೋರಾಟದಲ್ಲಿ 17-21, 22-20, 22-24 ಅಂತರದಲ್ಲಿ ಸೋತರು. ಕಿರಣ್ ಜಾರ್ಜ್ ಗಾಯದ ಕಾರಣ ಪಂದ್ಯ ಮಧ್ಯದಲ್ಲೇ ನಿವೃತ್ತರಾದರೆ, ತರುಣ್ ಮನ್ನೆಪಲ್ಲಿ ಮೊದಲ ಗೇಮ್ ಗೆದ್ದ ಬಳಿಕ ಸೋಲು ಕಂಡರು.

ಫ್ರೆಂಚ್ ಓಪನ್: ಸಿನ್ನರ್‌ಗೆ ಕ್ಲೆಮೆಂಟ್ ಎದುರಾಳಿ

ಪ್ಯಾರಿಸ್: ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ಪ್ರತಿಷ್ಠಿತ ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಪಂದ್ಯಾವಳಿಯ ಮೊದಲ ಪಂದ್ಯದಲ್ಲಿ ಸ್ಥಳೀಯ ಟೆನಿಸ್ ಆಟಗಾರ ಕ್ಲೆಮೆಂಟ್ ಟಾಬುರ್ ಅವರನ್ನು ಎದುರಿಸಲಿದ್ದಾರೆ. ರೋಲ್ಯಾಂಡ್ ಗ್ಯಾರೋಸ್ ಕೂಟ ಭಾನುವಾರದಿಂದ ಶುರುವಾಗಲಿದೆ. ಅರ್ಹತಾ ಸುತ್ತಿನ ಪಂದ್ಯಗಳು ಗುರುವಾರ ನಡೆದವು. ಇದೇ ವೇಳೆ ಮುಖ್ಯ ಡ್ರಾ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಅಲ್ಕರಾಜ್ ಅವರು ಪಂದ್ಯಾವಳಿಯಿಂದ ಹೊರಗುಳಿದಿದ್ದಾರೆ. ಅಲೆಕ್ಸಾಂಡರ್ ಜ್ವೆರೆವ್ ಫ್ರೆಂಚ್‌ನ ಬೆಂಜಾಮಿನ್ ಬೋಂಜಿ ಅವರನ್ನು ಎದುರಿಸಲಿದ್ದರೆ, ನೊವಾಕ್ ಜೋಕೊವಿಚ್ ಗಿಯೊವಾನ್ನಿ ಪೆರ್ರಿಕಾರ್ಡ್ ಅವರನ್ನು ಎದುರಿಸಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಕೊಕೊ ಗೌಫ್ ಅಮೆರಿಕದ ಟೇಲರ್ ಅವರನ್ನು ಎದುರಿಸಲಿದ್ದಾರೆ. ಅರ್ನಾ ಸಬಲೆಂಕಾ ಈಗಾ ಸ್ವೇಟೆಕ್ ಇಮರ್ಸನ್ ಜೋನ್ಸ್ ಅವರೊಂದಿಗೆ ಆಡಲಿದ್ದಾರೆ.

ಎಸ್.ಎಂ. ಕೃಷ್ಣ ಸ್ಮರಣಾರ್ಥ ಓಪನ್ | ಸಿಂಗಲ್ಸ್ ವಿಭಾಗದಲ್ಲಿ ಶಶಿಗೆ ಸೋಲು

ಟೆನಿಸ್: ಭಾರತ ಅಭಿಯಾನ ಅಂತ್ಯ

ಬೆಂಗಳೂರು: ಎಸ್.ಎಂ. ಕೃಷ್ಣ ಮೆಮೋರಿಯಲ್ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತದ ಸಿಂಗಲ್ಸ್ ಅಭಿಯಾನ ಅಂತ್ಯಗೊಂಡಿದೆ. ಆದರೆ ಕ್ವಾರ್ಟರ್ ಫೈನಲ್‌ನಲ್ಲಿ ಮುಕುಂದ್ ಶಶಿಕುಮಾರ್ ಬ್ರಿಟನ್‌ನ ಎರಡನೇ ಶ್ರೇಯಾಂಕಿತ ಅಲಾಸ್ಟೇರ್ ಗ್ರೇ ವಿರುದ್ಧ ನೀಡಿದ ಹೋರಾಟ ಪ್ರೇಕ್ಷಕರ ಮನಗೆದ್ದಿತು.



ಬೆಂಗಳೂರು ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ ಎರಡು ಗಂಟೆ 40 ನಿಮಿಷಗಳ ಕಾದಾಟದಲ್ಲಿ ಚೆನ್ನೈನ 29 ವರ್ಷದ ಮುಕುಂದ್, ವಿಶ್ವ ನಂ. 287 ಆಟಗಾರ ಗ್ರೇ ವಿರುದ್ಧ ಅಂತಿಮ ಕ್ಷಣದವರೆಗೂ ಪೈಪೋಟಿ ನೀಡಿದರೂ 2-6, 7-5, 7-6(3) ಅಂತರದಲ್ಲಿ ಸೋಲು ಅನುಭವಿಸಿದರು. ಮೊದಲ ಸೆಟ್‌ನಲ್ಲಿ ಗ್ರೇ ಮೂರು ಬಾರಿ ಸರ್ವ್ ಬ್ರೇಕ್ ಸಾಧಿಸಿ ಸುಲಭವಾಗಿ 6-2 ಅಂತರದಲ್ಲಿ ಗೆದ್ದರು. ಆದರೆ ಎರಡನೇ ಸೆಟ್‌ನಲ್ಲಿ ಮುಕುಂದ್ ಅದ್ಭುತ ಮರಳಾಟ ನೀಡಿದರು. ನಾಲ್ಕನೇ ಗೇಮ್‌ನಲ್ಲಿ ಬ್ರೇಕ್ ಪಡೆದ ಭಾರತೀಯ ಆಟಗಾರ, ನಿರ್ಣಾಯಕ 12ನೇ ಗೇಮ್‌ನಲ್ಲಿ ಮತ್ತೊಮ್ಮೆ ಗ್ರೇ ಸರ್ವ್ ಮುರಿದು 7-5 ಅಂತರದಲ್ಲಿ ಸೆಟ್ ಗೆದ್ದರು.


ನಿರ್ಣಾಯಕ ಮೂರನೇ ಸೆಟ್ ತೀವ್ರ ರೋಚಕವಾಗಿತ್ತು. ಒಂಬತ್ತನೇ ಗೇಮ್‌ನಲ್ಲಿ ಬ್ರೇಕ್ ಪಡೆದ ಗ್ರೇ ಪಂದ್ಯ ಗೆಲ್ಲುವ ಹಂತಕ್ಕೆ ಬಂದರೂ, ಮುಕುಂದ್ ಮ್ಯಾಚ್ ಪಾಯಿಂಟ್ ಉಳಿಸಿಕೊಂಡು ಹೋರಾಟ ಮುಂದುವರಿಸಿದರು. ಬಳಿಕ ಅವರು ಬ್ರೇಕ್ ಬ್ಯಾಕ್ ಮಾಡಿ ಪಂದ್ಯವನ್ನು ಟೈಬ್ರೇಕ್‌ಗೆ ಕೊಂಡೊಯ್ದರು. ಆದರೆ ಟೈಬ್ರೇಕ್‌ನಲ್ಲಿ ಆರಂಭದಲ್ಲೇ ಮುನ್ನಡೆ ಪಡೆದ ಗ್ರೇ ಗೆಲುವು ಖಚಿತಪಡಿಸಿಕೊಂಡರು. ಪಂದ್ಯದಲ್ಲಿ ಮುಕುಂದ್ 14 ಏಸ್‌ಗಳನ್ನು ಸಿಡಿಸಿದ್ದು, ಗ್ರೇಗಿಂತ ಐದು ಹೆಚ್ಚು, ಜೊತೆಗೆ ಕಡಿಮೆ ಡಬಲ್ ಫಾಲ್ಟ್ ಮಾಡಿದ್ದು ಅವರ ಆಕ್ರಮಣಾತ್ಮಕ ಆಟಕ್ಕೆ ಸಾಕ್ಷಿಯಾಯಿತು.

ಸೆಮಿಗೆ ಇಲ್ಯಾ

ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಮಾಜಿ ವಿಶ್ವ ನಂ. 40 ಇಲ್ಯಾ ಇವಾಶ್ಕಾ, ಮೆಕ್ಸಿಕೋದ ಅಲೆಕ್ಸ್ ಹೆರ್ನಾಂಡೇಜ್ ಅವರನ್ನು 6-1, 6-2 ಅಂತರದಲ್ಲಿ ಸೋಲಿಸಿ ಸೆಮಿಫೈನಲ್ ಪ್ರವೇಶಿಸಿದರು. ಬ್ರಿಟನ್‌ನ ಮೂರನೇ ಶ್ರೇಯಾಂಕಿತ ಹ್ಯಾಮಿಷ್ ಸ್ಟುವರ್ಟ್, ಸರ್ಬಿಯಾದ ಒಗ್ನೆನ್ ಮಿಲಿಕ್ ವಿರುದ್ಧ 6-2, 6-1 ಅಂತರದಲ್ಲಿ ಸುಲಭ ಜಯ ಸಾಧಿಸಿದರು. ನಾಲ್ಕನೇ ಶ್ರೇಯಾಂಕಿತ ಪೆಟರ್ ಬಾರ್ ಬಿರಿಯುಕೊವ್, ಮಲೇಶಿಯಾದ ಮಿತ್ಸುಕಿ ವೇಯ್ ಕಾಂಗ್ ಲಿಯಾಂಗ್ ವಿರುದ್ಧ 6-2, 5-7, 6-3 ಅಂತರದಲ್ಲಿ ಗೆದ್ದರು.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5991

ಎಡದಿಂದ ಬಲಕ್ಕೆ
2.ಸಣ್ಣ-ಸಣ್ಣ ಹನಿಗಳಿಂದ ಕೂಡಿದ ವೃಷ್ಟಿ (5)
6.ಬೆಟ್ಟವೂ ಹೌದು-ಆಭರಣವೂ ಹೌದು (2)
8.ಸೇವಕ-ಕೂಲಿಗಾಗಿ ದುಡಿಯುವವನು (2)
9.ಇದು ತೂತುಗಳಿರುವ ಕಿಟಕಿ (3)
11.ಶಹನಾಯಿಯ ಇನ್ನೊಂದು ಹೆಸರು (3)
13.ಹಾರದೊಂದಿಗೆ ಇರುವ ಹೂವಿನ ಗುಚ್ಛ (3)
14.ಅತ್ತಿತ್ತ ತೂಗಾಡುವ ವಸ್ತು (3)
16.ಸ್ವರ್ಗ-ಯಮಪುರಿ ಕೂಡಿ ಕಾಣುತ್ತಿವೆ (5)
17.ಮಾವನಿಗೆ ಈ ಧರೆಯ ಮೇಲೆ ಕಂಡ ವಿಷ್ಣು (4)
18.ಒಂದು ನಿರ್ಣಯಕ್ಕೆ ಬರು ಎಂಬರ್ಥದ ಶಬ್ದ (4)

ಮೇಲಿನಿಂದ ಕೆಳಕ್ಕೆ
1.ತಕ್ಕಡಿಯಲ್ಲಿ ತೂಗುವುದು-ತಾಳೆ ನೋಡುವುದು (3)
3.ವಿರಸ ಹೆಚ್ಚಾಗುವಂತೆ ಮಾಡು ಎಂಬರ್ಥದ ನುಡಿಗಟ್ಟು (4)
4.ಹರ್ಷ-ಪ್ರಫುಲ್ಲತೆ ಎಂಬರ್ಥದ ಶಬ್ದ (4)
5.ಅಂತಃಕರಣ ಮಿಡಿವ ಪಚನಾಂಗ (3)
7.ಸ್ಥಳವಿಲ್ಲಿ ತಲೆಕೆಳಗಾಗಿದೆ (2)
8.ಮೊದಲು-ಪ್ರಾರಂಭ ಎಂಬರ್ಥದ ಶಬ್ದ (2)
10.ಎಂದೆಂದೂ ನೆಟ್ಟಗಾಗದ್ದು ತಲೆಕೆಳಗಾಗಿದೆ (4)
12.ಇದು ಸರ್ಪಗಳ ಪ್ರಪಂಚ (4)
13.ದನಗಳನ್ನು ಕಾಯುವವನು-ಗೊಲ್ಲ (4)
15.ದಯಪಾಲಿಸು ಎಂಬರ್ಥದ ಶಬ್ದ (4)

5990 ಉತ್ತರ

ಎಡದಿಂದ ಬಲಕ್ಕೆ:
2.ಲೋಚನವಾರಿ
6.ಯಮ 8.ಮನು
9.ತವಕ 10.ಕ್ಷಣಿಕ
11.ಮರ 12.ಹಲ್ಲು
14.ತಿಳಿವಳಿಕೆ 16.ಮಿತ್ರಪಕ್ಷ
17.ಚಿಂದಿಚಿಂದಿ

ಮೇಲಿನಿಂದ ಕೆಳಕ್ಕೆ
: 1.ತೃತೀಯ
3.ಚಕ್ರವಾಕ 4.ವಾರಿಜಾಕ್ಷ
5.ದಾಸ್ತಾನು 7.ಮತದಾರ
8.ಮಕಮಲ್ಲು
11.ಮರುಭೂಮಿ
13.ಹಠವಾದಿ 14.ಪದ್ಧತಿ
15.ಕೆಳದಿ

ಕಿರುಸುದ್ದಿ

ಪೂರ್ವಭಾವಿ ಸಭೆ ನಾಳೆ



ಶಿರಹಟ್ಟಿ: ಮೇ 31ರಂದು ಗದಗ ನಗರದಲ್ಲಿ ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಬಸವಾದಿ ಶಿವ ಶರಣರ ಬೃಹತ್ ಹಿಂದೂ ಸಮಾವೇಶದ ಪೂರ್ವಭಾವಿ ಸಭೆಯನ್ನು ಪಟ್ಟಣದ ಶಿಕ್ಷಕರ ಸಭಾಭವನದಲ್ಲಿ ಮೇ 23ರಂದು ಸಂಜೆ 5 ಗಂಟೆಗೆ ನಡೆಸಲಾಗುತ್ತಿದೆ. ಜಿಲ್ಲೆಯ ಸಮಸ್ತ ಹಿಂದೂ ಬಾಂಧವರು, ಹಿಂದೂಪರ ಸಂಘಟನೆಗಳ ಮುಖಂಡರು ಭಾಗವಹಿಸಿ ತಮ್ಮ ಸಲಹೆ ಸೂಚನೆ ನೀಡುವುದರ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಕೈಜೋಡಿಸಬೇಕೆಂದು ಹಿಂದೂಪರ ಸಂಘಟನೆಗಳ ಒಕ್ಕೂಟದ ಜಿಲ್ಲಾಧ್ಯಕ್ಷ ಸಂತೋಷ ಕುರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷಮೆಯಾಚನೆಗೆ ಆಗ್ರಹ



ಗಜೇಂದ್ರಗಡ / ನರೇಗಲ್ಲ: ಉತ್ತರ ಪ್ರದೇಶದ ರಾಯಬರೇಲಿ ಲೋಕಸಭಾ ಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇಶದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ದೇಶದ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರನ್ನು ದೇಶದ್ರೋಹಿಗಳು ಎಂದು ಕರೆದಿರುವುದು ಅತ್ಯಂತ ದುರ್ಭಾಗ್ಯಕರ ಹಾಗೂ ಖಂಡನೀಯವಾಗಿದೆ ಎಂದು ಯುವ ಮೋರ್ಚಾ ಬಿಜೆಪಿ ರೋಣ ಮಂಡಲದ ನಿಕಟಪೂರ್ವ ಅಧ್ಯಕ್ಷ ಉಮೇಶ ಚನ್ನು ಪಾಟೀಲ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದ ಜನರ ಆಶೀರ್ವಾದದಿಂದ, ಸಂವಿಧಾನಾತ್ಮಕವಾಗಿ ಆಯ್ಕೆಯಾದ ಹಾಗೂ ವಿಶ್ವದ ಹಲವು ರಾಷ್ಟ್ರಗಳಿಂದ ಗೌರವಿಸಲ್ಪಟ್ಟ ಪ್ರಧಾನಮಂತ್ರಿಗಳನ್ನು ಇಂತಹ ಶಬ್ದಗಳಿಂದ ಅವಮಾನಿಸುವುದು ಖಂಡನೀಯ. ಲೋಕಸಭೆ ಹಾಗೂ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸತತವಾಗಿ ಸೋಲನ್ನು ಅನುಭವಿಸುತ್ತಿದೆ. ಅಧಿಕಾರ ಕಳೆದುಕೊಂಡಿರುವ ಹತಾಶೆಯಿಂದ ರಾಹುಲ್ ಗಾಂಧಿಯವರು ಅಸಂಯಮಿತ ಹೇಳಿಕೆಗಳನ್ನು ನೀಡುವ ಮೂಲಕ ಕೀಳುಮಟ್ಟದ ರಾಜಕಾರಣ ಮಾಡುತ್ತಿದ್ದಾರೆ ಎಂದು ದೂರಿದ್ದಾರೆ. ಇತ್ತೀಚಿನ ಲೋಕಸಭಾ ಹಾಗೂ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ನಿರಂತರ ಸೋಲು ಕಂಡ ಹತಾಶೆಯಿಂದ ಈ ರೀತಿಯ ಅಸಂಯಮಿತ ಹೇಳಿಕೆಗಳನ್ನು ನೀಡುತ್ತಿರುವುದು ಸ್ಪಷ್ಟವಾಗಿದೆ. ಆದ್ದರಿಂದ ರಾಹುಲ್ ಗಾಂಧಿ ಅವರು ತಕ್ಷಣವೇ ತಮ್ಮ ಹೇಳಿಕೆಯನ್ನು ಹಿಂಪಡೆದು ದೇಶದ ಜನತೆ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರಲ್ಲಿ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಮೇ 31ಕ್ಕೆ ಹಿಂದೂ ಸಮಾವೇಶ



ಲಕ್ಷ್ಮೇಶ್ವರ: ಗದಗದಲ್ಲಿ ಮೇ 31ರಂದು ಕನ್ನೇರಿ ಮಠದ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಬಸವಾದಿ ಶಿವಶರಣರ ಬೃಹತ್ ಹಿಂದೂ ಸಮಾವೇಶ ನಡೆಯಲಿದೆ.

ಈ ವಿಷಯದ ಬಗ್ಗೆ ಪಟ್ಟಣದ ಶ್ರೀ ರಂಭಾಪುರಿ ವೀರಗಂಗಾಧರ ಸಮುದಾಯ ಭವನದಲ್ಲಿ ಮೇ 23ರ ಸಂಜೆ 6ಕ್ಕೆ ಸರ್ವ ಹಿಂದೂ ಸಮಾಜದ ಪೂರ್ವಭಾವಿ ಕರೆಯಲಾಗಿದ್ದು ಸನಾತನ ಹಿಂದೂ ಸಮಾಜದ ಸಂಘಟನೆಗೆ ತೊಡಗಿಸಿಕೊಂಡು ಸಭೆಯನ್ನು ಯಶಸ್ವಿಗೊಳಿಸಬೇಕು ಎಂದು ಯುವ ಹಿಂದೂ ಮುಖಂಡ ಈರಣ್ಣ ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷಾ ಶಿಬಿರ ನಾಳೆ

ಗದಗ: ಭಾವಸಾರ ವಿಜನ್ ಇಂಡಿಯಾ ಹಾಗೂ ಲಯನ್ಸ್ ಕ್ಲಬ್ ಆಫ್ ಸಹಯೋಗದಲ್ಲಿ ಗದಗ-ಬೆಟಗೇರಿ ಭಾವಸಾರ ಕುಟುಂಬ ಮತ್ತು ಅವಲಂಬಿತ ಕುಟುಂಬದವರಿಗೆ ಉಚಿತವಾಗಿ ಲಿವರ್ ಫೈಬ್ರೊ ಸ್ಕ್ಯಾನಿಂಗ್ ಪರೀಕ್ಷಾ ಶಿಬಿರ ಮೇ 23ರಂದು ಹಳೇ ಕೋರ್ಟ್ ಹತ್ತಿರ ಇರುವ ಲಯನ್ಸ್ ಕ್ಲಬ್ ಹಾಲ್‌ದಲ್ಲಿ ಬೆಳಗ್ಗೆ 9.30 ರಿಂದ ಸಂಜೆ 6 ಗಂಟೆಯವರೆಗೆ ಜರುಗಲಿದೆ. 50 ವರ್ಷ ಮೇಲ್ಪಟ್ಟ ಸದಸ್ಯರಿಗೆ ಪ್ರಥಮ ಆದ್ಯತೆ. ಜೊತೆಗೆ ಹಿರಿಯ ನಾಗರಿಕರು ಮತ್ತು ಈಗಾಗಲೇ ರೋಗ ನಿರ್ಣಯದ ದಾಖಲೆ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು ಎಂದು ಭಾವಸಾರ ವಿಜನ್ ಇಂಡಿಯಾ ಕಾರ್ಯದರ್ಶಿ ಸುಧಾ ವೈಕುಂಠೆ ತಿಳಿಸಿದ್ದಾರೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಶೇಂಗಾ	5051-8069
ಅಜವಾನ	10181-10371
ಅಲಸಂದಿ	3044-6689
ಕಡಲೆ	1009-6331
ಉದ್ದು	4009-5079
ಹೆಸರು	1901-6809
ಜೋಳ	1244-4369
ಗೋವಿನಜೋಳ	1479-1479
ಸಾಸವಿ	4969-4969
ಕುಸಬಿ	4589-5313
ಸೂರ್ಯಕಾಂತಿ	6806-6959
ತೊಗರಿ	3644-4659
ಗೋಧಿ	1864-5512



ಗದಗ: ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಅಧ್ಯಕ್ಷತೆಯಲ್ಲಿ ಭಯೋತ್ಪಾದನಾ ವಿರೋಧಿ ದಿನಾಚರಣೆಯ ಅಂಗವಾಗಿ ಹಿಂಸೆ ಮತ್ತು ಭಯೋತ್ಪಾದನೆ ಮೆಟ್ಟಿ ಶಾಂತಿ, ಸೌಹಾರ್ದತೆ ಕಾಪಾಡುವ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಜರುಗಿತು.

ಸಾಗುವಳಿದಾರರಿಗೆ ಜಮೀನಿನ ಮಾಲೀಕತ್ವ ನೀಡಿ

ನರಗುಂದ: ತಾಲೂಕಿನ ಕುರಗೋವಿನಕೊಪ್ಪ ಗ್ರಾಮದ 538 ಎಕರೆ ಜಮೀನಿನ ಪಹಣಿಗಳಲ್ಲಿ ಸನ್ 2022-23 ನೇ ಸಾಲಿನಿಂದ ಸರ್ಕಾರ ಎಂದು ನಮೂದಾಗಿದೆ. ಜಮೀನಿನ ಮಾಲೀಕತ್ವದ ಹಕ್ಕನ್ನು ಪಡೆಯಲು ಸರ್ಕಾರವು ರಿಗ್ರ್ಯಾಂಟ್ ಅರ್ಜಿ ಸಲ್ಲಿಸುವಂತೆ ಆದೇಶಿಸಿತ್ತು. ಅರ್ಜಿ ಸಲ್ಲಿಸಿ ವರ್ಷ ಗತಿಸಿದರೂ ರೈತರಿಗೆ ನ್ಯಾಯ ಸಿಕ್ಕಿಲ್ಲ. ಆದ್ದರಿಂದ ಸರ್ಕಾರವು ಜಮೀನಿನ ಮಾಲೀಕತ್ವದ ಹಕ್ಕನ್ನು ಪಡೆಯಲು ಆದೇಶ ಮಾಡಬೇಕೆಂದು ರೈತ ಜಿ.ಎಸ್. ನೀಲರಡ್ಡಿ ಅವರು ಆಗ್ರಹಿಸಿದರು.

ತಾಲೂಕು ದಂಡಾಧಿಕಾರಿಗಳ ಕಾರ್ಯಾಲಯದಲ್ಲಿ ತಾಲೂಕಿನ ಕುರಗೋವಿನಕೊಪ್ಪ ಗ್ರಾಮದ ರೈತರು ತಹಶೀಲ್ದಾರ್ ಶ್ರೀಶೈಲ ತಳವಾರ ಅವರಿಗೆ ಮನವಿ ಅರ್ಪಿಸಿ ಮಾತನಾಡಿದರು. ಪಹಣಿಗಳಲ್ಲಿ 2022-23ನೇ ಸಾಲಿನ ಮೊದಲು 156 ರೈತರ 538 ಎಕರೆ ಜಮೀನುಗಳ ಪಹಣಿಗಳಲ್ಲಿ ಪರಿಶಿಷ್ಟ ಬಾವುದ್ದೀನ ಇನಾಂ ಎಂದಿತ್ತು, ಪಹಣಿ ಪತ್ರದಲ್ಲಿ ಸಾಗುವಳಿದಾರರ ಹೆಸರು ನಮೂದಾಗುತ್ತಿತ್ತು, ಸರ್ಕಾರ ಎಂದು ನಮೂದಾಗಿದೆ. ಕಾರಣ ಉಳುಮೆದಾರರಿಗೆ ಸರ್ಕಾರದಿಂದ ಬರುವಂತಹ ಬೆಳೆ ಪರಿಹಾರ, ಬೆಳೆ ವಿಮಾ, ಬ್ಯಾಂಕಿನಿಂದ ಕೃಷಿ ಸಾಲಗಳು, ಕೃಷಿ ಇಲಾಖೆಯ ಸೌಲಭ್ಯಗಳು ದೊರೆಯುತ್ತಿಲ್ಲ ಒಂದೂವರೆ ದಶಕದಿಂದ ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸುತ್ತಾ ಬರಲಾಗಿದೆ. ಕೃಷಿ ಜಮೀನಿನ ಪಹಣಿಗಳಲ್ಲಿ ಸರ್ಕಾರ ಹೆಸರನ್ನು ಬದಲಿಸಿ ನೇರವಾಗಿ ಸಾಗುವಳಿದಾರರಿಗೆ ಜಮೀನಿನ ಮಾಲೀಕತ್ವದ ಹಕ್ಕು ನೀಡಲು ಸರ್ಕಾರದಿಂದ ಆದೇಶ ಮಾಡಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೆ.ವೈ. ಸಜ್ಜರಡ್ಡಿ, ಎ.ಜಿ. ನೀಲರಡ್ಡಿ, ಟಿ.ಎಚ್. ನೀಲರಡ್ಡಿ, ಕೆ.ಪಿ. ನೀಲರಡ್ಡಿ, ವಿ.ಕೆ. ಬಾಲರಡ್ಡಿ, ವಿಜಯ ಕೋತಿನ ಇತರರಿದ್ದರು.



ನರಗುಂದ: ತಾಲೂಕಿನ ಕುರಗೋವಿನಕೊಪ್ಪ ಗ್ರಾಮದ 538 ಎಕರೆ ಜಮೀನಿನ ಪಹಣಿಗಳಲ್ಲಿ ಸನ್ 2022-23 ನೇ ಸಾಲಿನಿಂದ ಸರ್ಕಾರ ಎಂದು ನಮೂದಾಗಿದೆ. ಜಮೀನಿನ ಮಾಲೀಕತ್ವದ ಹಕ್ಕನ್ನು ಪಡೆಯಲು ಸರ್ಕಾರವು ರಿಗ್ರ್ಯಾಂಟ್ ಅರ್ಜಿ ಸಲ್ಲಿಸುವಂತೆ ಆದೇಶಿಸಿತ್ತು. ಅರ್ಜಿ ಸಲ್ಲಿಸಿ ವರ್ಷ ಗತಿಸಿದರೂ ರೈತರಿಗೆ ನ್ಯಾಯ ಸಿಕ್ಕಿಲ್ಲ. ಆದ್ದರಿಂದ ಸರ್ಕಾರವು ಜಮೀನಿನ ಮಾಲೀಕತ್ವದ ಹಕ್ಕನ್ನು ಪಡೆಯಲು ಆದೇಶ ಮಾಡಬೇಕೆಂದು ರೈತ ಜಿ.ಎಸ್. ನೀಲರಡ್ಡಿ ಅವರು ಆಗ್ರಹಿಸಿದರು.

ಇಳಿ ವಯಸ್ಸಿನಲ್ಲೂ ಕುಗ್ಗದ ದುಡಿಮೆಯ ಉತ್ಸಾಹ | 20 ವರ್ಷಗಳಿಂದ ಕೆಲಸ

ಉದ್ಯೋಗ ಖಾತ್ರಿ ಯೋಜನೆ ಆಸರೆ

ಶೀತಲ್ ಓಲೇಕಾರ

ದಿಗಂತ ವಿಶೇಷ

ಗಜೇಂದ್ರಗಡ: ವಯಸ್ಸು 80 ದಾಟಿದರೂ ಕೆಲಸ ಮಾಡುವ ಹುಮ್ಮಸ್ಸು ಮಾತ್ರ ಕುಗ್ಗಿಲ್ಲ. ಇಳಿ ವಯಸ್ಸಿನಲ್ಲೂ ದುಡಿದು ತಿನ್ನಬೇಕು ಎನ್ನುವ ಛಲಕ್ಕೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಆಸರೆಯಾಗಿದೆ.

ತಾಲೂಕಿನ ರಾಂಪುರ ಗ್ರಾಮ ಪಂಚಾಯತಿ ವ್ಯಾಪ್ತಿಯ ವೀರಾಪೂರ ಗ್ರಾಮದ ನಿವಾಸಿಯಾದ 80 ವರ್ಷದ ಹನಮವ್ವ ಹನಮಪ್ಪ ಮೋಹಿತೆ ಅವರು ದುಡಿಮೆಯಲ್ಲಿ ನರೇಗಾ ವರದಾನವಾಗಿದೆ. ಈ ಹನಮವ್ವನಿಗೆ ಪತಿ ಇಲ್ಲ, ಇಬ್ಬರು ಗಂಡು ಮಕ್ಕಳು ಇದ್ದು ಒಬ್ಬ ಮಗ ಬೇರೆ ಮನೆ ಮಾಡಿದ್ದಾರೆ. ಇನ್ನೊಬ್ಬನ ಮಗನ ಜೊತೆಗೆ ಇದ್ದರೂ ಕಳೆದ 8 ವರ್ಷಗಳಿಂದ ಮಗ ದುಡಿಯಲು ಹೊರಡಲು ಮನೆ ಮನೆಗೆ ಬಂದಿಲ್ಲ. ಈಗ ಸೊಸೆಯೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ತಮ್ಮ 2 ಎಕರೆ ಜಮೀನಿದ್ದು ಅದು ಒಣ ಬೇಸಾಯವಾಗಿದೆ. ಜಮೀನಿನಲ್ಲಿ ಇಷ್ಟು ಸಾಕಾಗುವುದಿಲ್ಲ ಎಂಬುದು ಅರಿತು ಸೊಸೆ ಹೊರಗಡೆ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದಾರೆ. ಬೇಸಿಗೆಯಲ್ಲಿ ಕೆಲಸವಿಲ್ಲದೆ ಜೀವನ ನಡೆಸುವುದು ಕಷ್ಟ ಎನ್ನುವುದನ್ನು ಅರಿತು ಸೊಸೆಯ ಜೊತೆಗೆ ನರೇಗಾ ಯೋಜನೆಯಲ್ಲಿ ಹನಮವ್ವ ಹನಮಪ್ಪ ಮೋಹಿತೆ ಅವರು ಸುಮಾರು 20 ವರ್ಷಗಳಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಮನರೇಗಾ ಕಾಮಗಾರಿಯಲ್ಲಿ ಉತ್ಸಾಹದಿಂದ ಕೂಲಿ ಕೆಲಸ ಮಾಡುತ್ತಿದ್ದಾರೆ.

ಹನಮವ್ವ ಯಲ್ಲಪ್ಪ ಮೋಹಿತೆ ಅವರು 78 ವರ್ಷ ವಯಸ್ಸಾದರೂ ದುಡಿಯುವ ಹುಮ್ಮಸ್ಸು ಕುಗ್ಗಿಲ್ಲ, ನರೇಗಾ ಕೆಲಸ ಪ್ರಾರಂಭವಾದರೆ ಸಾಕು ನಾನು ಕೆಲಸಕ್ಕೆ ಬರುತ್ತೇನೆ ಎಂದು ಉತ್ಸಾಹದಿಂದ ನಮೂನೆ 6 ರಲ್ಲಿ ಹೆಸರು ಬರೆಯಿಸಿ ಮುಂಚಿತವಾಗಿ ಕೆಲಸಕ್ಕೆ ಬರುತ್ತಿದ್ದಾರೆ. ಹನಮವ್ವನಿಗೆ ಪತಿ ಇಲ್ಲ, ಇಬ್ಬರು ಪುತ್ರರು. ಹಿರಿಯ ಮಗನೊಂದಿಗೆ ಜೀವನ ಸಾಗಿಸುತ್ತಿದ್ದಾರೆ. ಮನೆಯಲ್ಲಿ ಕುಳಿತುಕೊಳ್ಳದೆ ಮಕ್ಕಳಿಗೆ ಸಹಾಯ ಮಾಡಬೇಕು ಎನ್ನುವ ಹಂಬಲಕ್ಕೆ ಮಕ್ಕಳು ಹಾಗೂ ಸೊಸೆಯಂದಿರ ಜೊತೆಗೆ ನರೇಗಾ ಯೋಜನೆಯಡಿ ದುಡಿಯುತ್ತಿದ್ದಾರೆ. ನರೇಗಾ ಯೋಜನೆಯಲ್ಲಿ ಹನಮವ್ವ ಯಲ್ಲಪ್ಪ ಮೋಹಿತೆ ಅವರು ಸುಮಾರು 20 ವರ್ಷಗಳಿಂದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡುತ್ತಿದ್ದಾರೆ.



ಪ್ರತಿವರ್ಷ ಬೇಸಿಗೆ ಅವಧಿಯಲ್ಲಿ ಊರಲ್ಲಿ ಕೆಲಸ ಇರಲ್ಲ, ಇಂತ ಸಮಯದಲ್ಲಿ ಹನಮವ್ವ ಹನಮಪ್ಪ ಮೋಹಿತೆ, ಹನಮವ್ವ ಯಲ್ಲಪ್ಪ ಮೋಹಿತೆ ಅವರ ಕುಟುಂಬಕ್ಕೆ ದುಡಿಯಲು ನೆರವಾದ ನರೇಗಾ

ಕೆಲಸದಲ್ಲಿ ರಿಯಾಯಿತಿ

ಗ್ರಾಮೀಣ ಪ್ರದೇಶದಲ್ಲಿ ನರೇಗಾ ಜಾಬ್ ಕಾರ್ಡ್ ಹೊಂದಿರುವ ಪ್ರತಿಯೊಬ್ಬ ಕೂಲಿಕಾರರು ನರೇಗಾ ಯೋಜನೆಯಡಿ ಕೆಲಸ ಮಾಡಬಹುದು. ಇದರಲ್ಲಿ ಯಾವುದೇ ವಯಸ್ಸಿನ ಮಿತಿ ಇಲ್ಲ, ದುಡಿಯುವ ಶಕ್ತಿ ಇದ್ದವರು ಎಲ್ಲರೂ ಕೆಲಸ ಮಾಡಬಹುದು. ವಯೋವೃದ್ಧರಿಗೆ ಹಾಗೂ ವಿಶಿಷ್ಟಚೇತನರಿಗೆ ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡಲಾಗುತ್ತಿದೆ ಎಂದು ಗಜೇಂದ್ರಗಡ ತಾ.ಪಂ ಸಹಾಯಕ ನಿರ್ದೇಶಕ (ಗ್ರಾ.ಉ) ವಿಶ್ವನಾಥ ರಾಠೋಡ ತಿಳಿಸಿದ್ದಾರೆ.

> ಬೇಸಿಗೆಯಲ್ಲಿ ಹಳ್ಳಿಯೊಳಗೆ ಕೆಲಸ ಇರಲ್ಲರೀ.. ಉದ್ಯೋಗ ಖಾತ್ರಿ ಕೆಲಸ ಪ್ರಾರಂಭವಾದರೆ ಎಲ್ಲರೂ ಕೆಲಸಕ್ಕೆ ಬರುತ್ತಾರೇ ರೀ ಅದರಲ್ಲಿ ನಾವು ಕೆಲಸಕ್ಕೆ ಬಂದು ನಾಲ್ಕು ರೂಪಾಯಿ ದುಡಿತಿವಿರೀ.. ದೇಹದಲ್ಲಿ ಇನ್ನೂ ದುಡಿಯುವ ಶಕ್ತಿ ಇದೆ. ಮನೆಯಲ್ಲಿ ಖಾಲಿ ಕುಳಿತ್ತುಕೊಳ್ಳುವ ಬದಲು ಉದ್ಯೋಗ ಖಾತ್ರಿ ಕೆಲಸಕ್ಕೆ ಬರುತ್ತೇವೆ. ನಾಲ್ಕು ರೂಪಾಯಿ ಬಂದರೆ ಉಪಜೀವನಕ್ಕೆ ಅನುಕೂಲವಾಗುತ್ತದೆ.
>
> ■ **ಹನಮವ್ವ ಮೋಹಿತೆ,** ಕೂಲಿಕಾರರು, ವೀರಾಪೂರ ಗ್ರಾಮ

ಕೂಲಿಕಾರರಿಗೆ ನರೇಗಾ ವರದಾನ

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಭಾಗದ ವಯೋವೃದ್ಧರು ಮತ್ತು ವಿಶಿಷ್ಟಚೇತನರಿಗೆ ಕೆಲಸದ ಪ್ರಮಾಣದಲ್ಲಿ ಶೇ.50 ರಷ್ಟು ರಿಯಾಯಿತಿ ನೀಡುವುದರ ಮೂಲಕ ಸಾಕಷ್ಟು ಕೂಲಿಕಾರರಿಗೆ ನರೇಗಾ ವರದಾನವಾಗಿದೆ. ಬೇಸಿಗೆಯಲ್ಲಿ ಗ್ರಾಮೀಣ ಭಾಗದ ಜನರಿಗೆ ಕೆಲಸವಿಲ್ಲದೆ ಗುಳೆ ಹೋಗುವುದನ್ನು ತಪ್ಪಿಸಲು ಇದ್ದೂರಲ್ಲೇ ಕೆಲಸ ಕೊಟ್ಟು ಆರ್ಥಿಕವಾಗಿ ಸಬಲರನ್ನಾಗಿ ಮಾಡಲಾಗುತ್ತದೆ. ಗ್ರಾಮೀಣ ಭಾಗದ ಪ್ರತಿಯೊಬ್ಬ ಕೂಲಿಕಾರರು ನರೇಗಾ ಯೋಜನೆಯ ಲಾಭ ಪಡೆದುಕೊಳ್ಳಬೇಕು ಎಂದು ಗಜೇಂದ್ರಗಡ ತಾ.ಪಂ ಇಒ ಚಂದ್ರಶೇಖರ ಬಿ ಕಂದಕೂರ ಹೇಳಿದ್ದಾರೆ.

ಕಸಾಯಿಖಾನೆಯವರ ಮೇಲೆ ಕ್ರಮಕ್ಕೆ ಆಗ್ರಹ

ಲಕ್ಷ್ಮೇಶ್ವರ: ಪಟ್ಟಣದ ಹಳೆ ಆಸಾರ ಓಣಿ ದರ್ಗಾ ಸಮೀಪ ಪುರಸಭೆಯ ಜಾಗದಲ್ಲಿ ಪರವಾನಗಿ ಇಲ್ಲದೇ ಕಸಾಯಿಖಾನೆ ನಡೆಸಲಾಗುತ್ತಿದ್ದು, ಕಸಾಯಿಖಾನೆಯಲ್ಲಿ ಗೋವುಗಳನ್ನು ಕಡಿಯಲಾಗುತ್ತಿದೆ ಎಂದು ಆರೋಪಿಸಿ ಹಿಂದೂ ಸಂಘಟನೆಗಳ ನೂರಾರು ಯುವಕರು ಕಸಾಯಿಖಾನೆಯ ಹತ್ತಿರ ಜಮಾಯಿಸಿ ಕಸಾಯಿಖಾನೆಯವರ ಮೇಲೆ ಕ್ರಮ ಜರುಗಿಸಬೇಕು ಮತ್ತು ಕಸಾಯಿಖಾನೆ ಬಂದ್ ಮಾಡಿಸುವಂತೆ ಆಗ್ರಹಿಸಿ ನಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಘಟನೆ ಗುರುವಾರ ನಡೆದಿದೆ.

ಪಟ್ಟಣದ ಹಳೆ ಆಸಾರ ಹತ್ತಿರ ಹಿಂದೂಪರ ಸಂಘಟನೆಯ ಮುಖಂಡ ಈರಣ್ಣ ಪೂಜಾರ ಗೆಳೆಯರೊಂದಿಗೆ ಹೋಗುತ್ತಿರುವಾಗ ಮಾಂಸದ ವಾಸನೆ ಕಂಡು ಬಂದಿದ್ದರಿಂದ ಸ್ನೇಹಿತರೊಂದಿಗೆ ಅಂಗಡಿಗೆ ತೆರಳಿ ವಿಚಾರ ಮಾಡಿದಾಗ ಅಲ್ಲಿ ಸುಮಾರು 8-10 ಆಕಳುಗಳನ್ನು ಕಡಿಯುತ್ತಿರುವ ದೃಶ್ಯ ಕಂಡು ಬಂದಿತು. ಇದನ್ನು ಪ್ರಶ್ನಿಸಲು ಹೋದಾಗ ಯುವಕರ ಮೇಲೆ ಕಸಾಯಿಖಾನೆಯವರು ಹಲ್ಲೆಗೆ ಯತ್ನಿಸಿದ್ದಾರೆ ಎಂದು ಹಿಂದೂ ಕಾರ್ಯಕರ್ತರು ದೂರಿದ್ದಾರೆ. ಅಲ್ಲಿಂದ ಯುವಕರು ನೇರವಾಗಿ ಪೊಲೀಸರಿಗೆ ವಿಷಯ ತಿಳಿಸಿ ಪೊಲೀಸರೊಂದಿಗೆ ಅಂಗಡಿಗಳಿಗೆ ತೆರಳಿ ಅಲ್ಲಿ ನಡೆಯುತ್ತಿರುವ ಅಕ್ರಮ ಮಾಂಸದ ದಂದೆಯನ್ನು ನೋಡಿ ಬೆರಗಾಗಿದ್ದಾರೆ. ಈ ವೇಳೆ ಓರ್ವ ಕಸಾಯಿಖಾನೆಯವ ಅಂಗಡಿ ಬಂದ್ ಮಾಡಿ ಅಲ್ಲಿಂದ ಕಾಲ್ಕಿತ್ತಿದ್ದು, ಸಿಪಿಐ ಬಿ.ವೈ.ನ್ಯಾಮಗೌಡ ಮತ್ತು ಪಿಎಸ್ಐ ನಾಗರಾಜ ಗಡದ ಸ್ಥಳಕ್ಕೆ ಆಗಮಿಸಿ ಯುವಕರನ್ನು ಶಾಂತ ಪಡಿಸಲು ಪ್ರಯತ್ನಿಸಿದ್ದಾರೆ. ಆಗ ಕೆಲ ಕಾಲ ಸ್ಥಳದಲ್ಲಿ ಉದ್ವಿಘ್ನ ವಾತಾವರಣ ಸೃಷ್ಟಿಯಾಗಿತ್ತು. ಹಿಂದೂಪರ ಸಂಘಟನೆಗಳ ಯುವಕರು ಪೊಲೀಸರನ್ನು ಕಸಾಯಿಖಾನೆಯ ಎಲ್ಲ ಕಡೆಗಳಲ್ಲಿ ಕರೆದುಕೊಂಡು ಹೋಗಿ ಆಕಳು, ಎತ್ತು, ಎಮ್ಮೆಗಳನ್ನು ಕಡಿಯಲಾಗಿರುವ ದೃಶ್ಯಗಳನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದಾರೆ. ಅದನ್ನು ಪೊಲೀಸರಿಗೆ ತೋರಿಸಿ ಇವರ ಮೇಲೆ ತಕ್ಷಣ ಕ್ರಮ ಕೈಗೊಳ್ಳಿ, ಸಂಬಂಧಿಸಿದವರನ್ನು ವಶಕ್ಕೆ ಪಡೆದು ಇಲ್ಲಿನ ಎಲ್ಲ ಅಂಗಡಿಗಳನ್ನು ಕೂಡಲೇ ಬಂದ್ ಮಾಡಿಸಿ ಎಂದು ಆಗ್ರಹಿಸಿದರು. ಇಲಾಖೆಯವರು ಹಿಂದೂ ಯುವಕರನ್ನು ಸಮಾಧಾನ ಪಡಿಸಿ ಆಗಿರುವ ಘಟನೆಗೆ ಸಂಬಂಧಿಸಿದಂತೆ ಕಟ್ಟು ನಿಟ್ಟಿನ ಕ್ರಮ ಕೈಗೊಳ್ಳುತ್ತೇವೆ. ಆಕಳು, ಕರು, ಎಮ್ಮೆ, ಎತ್ತುಗಳನ್ನು ಇಲ್ಲಿಂದ ಸಾಗಿಸಲಾಗುತ್ತದೆ ಎಂದು ಭರವಸೆ ನೀಡಿದರು. ಜಿಲ್ಲಾ ಡಿವೈಎಸ್‌ಪಿ ಮುರ್ತೂಜಾ ಖಾದ್ರಿ ಸ್ಥಳವನ್ನು ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಪೊಲೀಸ್ ಠಾಣೆಗೆ ತೆರಳಿದ ಹಿಂದೂ ಪರ ಸಂಘಟನೆಯ ಯುವಕರು ಪುರಸಭೆ ಜಾಗದಲ್ಲಿ ಅಕ್ರಮವಾಗಿ ಕಸಾಯಿಖಾನೆ ನಡೆಸುತ್ತಿದ್ದು, ಅಲ್ಲಿ ಗೋವುಗಳನ್ನು ಕಡಿದು ಗೋಮಾಂಸವನ್ನು ಮಾರಾಟ ಮಾಡುತ್ತಿರುವುದನ್ನು ಕಣ್ಣಾರೆ ಕಂಡ ನಾವು ಅದನ್ನು ಪ್ರಶ್ನಿಸಲು ಹೋದಾಗ ನಮ್ಮ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆಗೆ ಪ್ರಯತ್ನಿಸಿದ್ದಾರೆ, ಕೂಡಲೇ ಅಕ್ರಮ ಕಸಾಯಿ ಖಾನೆ ಬಂದ್ ಮಾಡಿಸಿ ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ದೂರು ಸಲ್ಲಿಸಿದ್ದಾರೆ. ಶ್ರೀರಾಮಸೇನಾ ಮುಖಂಡ ಈರಣ್ಣ ಪೂಜಾರ, ಬಸವರಾಜ ಚಕ್ರಸಾಲಿ, ಮುತ್ತು ಕರ್ಜೆಕಣ್ಣವರ, ಅಮರೀಶ ಗಾಂಜಿ, ಪ್ರತಾಪ ಅಂಕಲಿ, ನವೀನ ಹಿರೇಮಠ, ಪ್ರವೀಣ ಬೋಮಲೆ, ವಿಜಯ ಕುಂಬಾರ, ಚಿನ್ನು ಹಾಳದೋಳದ, ವಾಸು ಗೋಸಾವಿ ಭೀಮಣ್ಣ ಯಂಗಾಡಿ ಪ್ರಾಣೇಶ ವ್ಯಾಪಾರಿ, ಹನುಮಂತ ರಾಮಗೇರಿ ಇತರರಿದ್ದರು.

ಮಕ್ಕಳ ದಾಖಲಾತಿ ಹೆಚ್ಚಿಸಲು ಮಾದರಿ ಕಾರ್ಯ

ಸಿ.ಎಸ್.ಅರಸನಾಳ

ಮುಂಡರಗಿ: ಶಾಲೆಗಳು ಪ್ರಾರಂಭವಾಗಲು ಇನ್ನೂ ಒಂದು ವಾರ ಇರುವುದರಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಲು ಹಲವೆಡೆ ನಾನಾ ಪ್ರಯತ್ನಗಳು ನಡೆಯುತ್ತಿವೆ. ಪಟ್ಟಣದ ತುಂಬಾ ಪ್ರವೇಶಗಳು ಪ್ರಾರಂಭವಾಗಿವೆ ಎನ್ನುವ ಬ್ಯಾನರ್‌ಗಳು ರಾರಾಜಿಸುತ್ತಿವೆ.





ಈ ಹಿನ್ನೆಲೆಯಲ್ಲಿ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರು ಕೆಲೂರ ಸರ್ಕಾರಿ ಶಾಲೆಗೆ ದಾಖಲಾಗುವ ಪ್ರತಿ ಮಗುವಿನ ಹೆಸರಿನಲ್ಲಿ ರೂ. 1000 ಎಫ್‌ಡಿ ಇಡುತ್ತಿದ್ದಾರೆ. ಈ ಶೈಕ್ಷಣಿಕ ವರ್ಷದಲ್ಲಿ ಕೆಲೂರಿನ ಸರ್ಕಾರಿ ಶಾಲೆಯಲ್ಲಿ 1ನೇ ತರಗತಿಗೆ ದಾಖಲಾಗುವ ಪ್ರತಿ ಮಗುವಿಗೆ 1 ಸಾವಿರ ಫಿಕ್ಸ್ ಡೆಪಾಸಿಟ್ (5 ವರ್ಷ) ಇಡಲು ಶಾಲೆಯ ಮುಖ್ಯೋಪಾಧ್ಯಾಯ ಎಸ್.ಎಂ. ಪಾಟೀಲ ಅವರು 10,000 ದೇಣಿಗೆಯನ್ನು ಎಸ್‌ಡಿಎಂಸಿ ಸದಸ್ಯರ ಸಮ್ಮುಖದಲ್ಲಿ ಶಾಲೆಗೆ ನೀಡಿದ್ದಾರೆ. ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಳಕ್ಕೆ ತಕ್ಕಂತೆ ಹಣ ನೀಡುವುದಾಗಿ ತಿಳಿಸಿದ್ದಾರೆ.

ಪಟ್ಟಣದ ಎಸ್.ಎಸ್.ಪಾಟೀಲ ನಗರದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹ ಶಿಕ್ಷಕಿ ಗೀತಾ ಕಣವಿ ಅವರೂ ಸಹ ತಮ್ಮ ಶಾಲೆಗೆ ಈ ವರ್ಷ 1 ನೇ ತರಗತಿಗೆ ದಾಖಲಾಗುವ ಪ್ರತಿ ಮಗುವಿಗೆ ರೂ. 1000 ಪೋಸ್ಟ್ ಆಫೀಸ್‌ನಲ್ಲಿ ಡಿಪಾಜಿಟ್ ಮಾಡುವುದಾಗಿ ಘೋಷಣೆಮಾಡಿ ಕಾರ್ಯಪ್ರವರ್ತರಾಗಿದ್ದಾರೆ. ಈಗಾಗಲೇ ಈ ವಿಷಯವನ್ನು ಡಿಡಿಪಿಐ ಅವರ ಗಮನಕ್ಕೆ ಒಂದು ತಿಂಗಳ ಹಿಂದೆಯೇ ತರಲಾಗಿದೆ. ಅದರಂತೆ ಇವರು ವಿಷಯವನ್ನು ಜಾರಿಗೆ ತಂದಿದ್ದಾರೆ. ಕಳೆದ ಶೈಕ್ಷಣಿಕ ವರ್ಷದಲ್ಲಿ ಕೇವಲ 6 ಮಕ್ಕಳು ದಾಖಲಾಗಿದ್ದರು. ಈ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ಹಾಕಿಕೊಂಡು ಮನೊಲಿಸುವುದರ ಜೊತೆಗೆ ಪ್ರತಿ ಮಗುವಿನ ಹೆಸರಿಗೆ 1000 ರೂ. ಠೇವಣಿ ಇಡುವುದಾಗಿ ಹೇಳಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯತ್ನಿಸುತ್ತಿರುವುದು ಅವರ ಶೈಕ್ಷಣಿಕ ಕಾಳಜಿಗೆ ಉದಾಹರಣೆಯಾಗಿದೆ.

> ಮುಂಡರಗಿ ತಾಲೂಕಿನ ಇಬ್ಬರು ಶಿಕ್ಷಕರು ಶಾಲೆಯ ದಾಖಲಾತಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಒಂದನೇಯ ತರಗತಿಗೆ ದಾಖಲಾಗುವ ಪ್ರತಿ ಮಗುವಿಗೆ 1000 ರೂ. ಡಿಪಾಜಿಟ್ ಇಡುವುದಾಗಿ ಹೇಳಿ ಕಾರ್ಯಪ್ರವರ್ತರಾಗಿರುವುದು ಸಂತೊಷ ತಂದಿದೆ. ಇದು ಇತರರಿಗೆ ಮಾದರಿಯಾಗಿದೆ. ಸರ್ಕಾರಿ ಶಾಲೆಯ ದಾಖಲಾತಿ ಹೆಚ್ಚಿಸಲು ಎಲ್ಲ ಶಿಕ್ಷಕರು ಪ್ರಯತ್ನ ಮಾಡುವುದು ಅವಶ್ಯವಾಗಿದೆ. ಈ ಹಣ ಮಕ್ಕಳ ಮುಂದಿನ ಶಿಕ್ಷಣಕ್ಕೆ ಅನಕೂಲವಾಗುತ್ತದೆ.
>
> ■ **ಆರ್.ಎಸ್.ಬುರಡಿ,** ಡಿಡಿಪಿಐ, ಗದಗ

ರಕ್ತದಾನದಿಂದ ಆರೋಗ್ಯ ವೃದ್ಧಿ: ಹುಲ್ಲೂರ



ಗಜೇಂದ್ರಗಡ: ರಕ್ತದಾನದಿಂದ ರಕ್ತದೊತ್ತಡ, ಮಧುಮೇಹದಂತಹ ರೋಗಗಳು ನಿಯಂತ್ರಣಕ್ಕೆ ಬರುವುದರ ಜೊತೆಗೆ ಆತ್ಮತೃಪ್ತಿ ಸಿಗುತ್ತದೆ ಎಂದು ಬಿ.ಎಸ್.ಎಸ್.ಸರ್ಕಾರಿ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಬಸವಂತಪ್ಪ ಹುಲ್ಲೂರ ಹೇಳಿದರು.

ನಗರದ ಕುಷ್ಟಗಿ ರಸ್ತೆಯಲ್ಲಿನ ಬಿ.ಎಸ್.ಎಸ್.ಸರ್ಕಾರಿ ಪದವಿ ಮಹಾವಿದ್ಯಾಲಯದಲ್ಲಿ ಯುವ ರೆಡ್ ಕ್ರಾಸ್ ಘಟಕ, ಸ್ಕೌಟ್ಸ್ ಮತ್ತು ಗೈಡ್ಸ್, ಎನ್‌ಎಸ್‌ಎಸ್ ಘಟಕ ಮತ್ತು ಜಿಲ್ಲಾ ರಕ್ತನಿಧಿ ಕೇಂದ್ರ ಗದಗ ಸಹಯೋಗದಲ್ಲಿ ವಿಶ್ವ ರೆಡ್ ಕ್ರಾಸ್ ದಿನದ ಅಂಗವಾಗಿ ರಕ್ತದಾನ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರಕ್ತದಾನ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಕರಾತ್ಮಕ ಪರಿಣಾಮ ಬೀರುತ್ತದೆ. ದೇಶದಲ್ಲಿ ಪ್ರತಿವರ್ಷ ಸುಮಾರು 41 ದಶಲಕ್ಷ ಯುನಿಟ್ ರಕ್ತದ ಕೊರತೆ ಎದುರಾಗುತ್ತಿದೆ. ಸಮಯಕ್ಕೆ ಸರಿಯಾಗಿ ರಕ್ತ ಸಿಗದೆ ವಿವಿಧ ಕಾಯಿಲೆಗಳಿಂದ ಬಳುತ್ತಿರುವ ರೋಗಿಗಳು, ಅಪಘಾತದ ಗಾಯಾಳುಗಳು ಮೃತಪಡುತ್ತಿದ್ದಾರೆ. ಅಮೂಲ್ಯವಾದ ಜೀವಗಳನ್ನು ಉಳಿಸಲು ರಕ್ತದಾನ ಮಾಡುವುದು ಅತಿ ಅಗತ್ಯವಾಗಿದ್ದು, ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬೇಕು ಎಂದರು.

ಜಿಲ್ಲಾ ರಕ್ತದಾನ ಕೇಂದ್ರದ ರಕ್ತನಿಧಿ ಸಂಚಾಲಕ ಎಸ್.ಬಿ.ಪಾಟೀಲ ಮಾತನಾಡಿ, ಬಿ.ಎಸ್.ಎಸ್. ಕಾಲೇಜಿನಲ್ಲಿ ಒಟ್ಟು 46 ಯೂನಿಟ್‌ಗಳನ್ನು ದಾನಿಗಳಿಂದ ಸಂಗ್ರಿಸಲಾಗಿದ್ದು, ಜನಸಾಮಾನ್ಯರಲ್ಲಿ ರಕ್ತದಾನದ ಬಗ್ಗೆ ತಪ್ಪು ಕಲ್ಪನೆಗಳಿದ್ದು ಹೋಗಲಾಡಿಸಬೇಕು. ಹೆಚ್ಚು ಯುವ ಜನರು ಸೇರುವ ಇಂತಹ ಕಾಲೇಜುಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಿದರೆ ದೇಶದಲ್ಲಿನ ರಕ್ತದ ಕೊರತೆಯನ್ನು ನೀಗಿಸಬಹುದು ಎಂದರು.

ಕಾಲೇಜಿನ ಸಂಚಾಲಕರು ಡಾ. ಪ್ರಶಾಂತ ಹುಲಕುಂದ, ವಿಶ್ವನಾಥ ಕೆ.ಎಸ್, ಎಂ.ವೈ., ಜಟ್ಟಣ್ಣನವರ, ವಿನಾಯಕ ಜಾಧವ, ಹನಮೇಶ ನಾಯಕ, ಅಜಿತಕುಮಾರ ಪೂಜಾರ, ಉಮಾಕಾಂತ ಲಮಾಣಿ, ಸುನೀತಾ ಎನ್., ಸಿದ್ದೇಶ ಕೆ., ಹಿತೇಶ ಬಿ,ಮಂಜುನಾಥ ಹೊಸಮನಿ, ಜಗದೀಶ ಬಿ., ಶೋಭಾ ಕಡಿ, ಅರುಣ ಅಂಗಡಿ, ಶರಣಪ್ಪ ದುಗ್ಗಲದ, ಆರ್.ವಿ.ಸುಂಕದ ಸೇರಿದಂತೆ ಅನೇಕರು ಇದ್ದರು.

ಬೃಹತ್ ಜಲಾಗಾರ ಕಾಮಗಾರಿ ಸ್ಥಗಿತಗೊಳಿಸಿ

ಲಕ್ಷ್ಮೇಶ್ವರ: ಪಟ್ಟಣದ ಪುರಸಭೆ ಕಲಾ ಮಹಾವಿದ್ಯಾಲಯ ಕ್ಯಾಂಪಸ್‌ನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನಿರ್ಮಾಣ ಮಾಡುತ್ತಿರುವ ಬೃಹತ್ ಜಲಾಗಾರ ಕಾಮಗಾರಿಯನ್ನು ಸ್ಥಗಿತಗೊಳಿಸಿ ಸ್ಥಳಾಂತರಿಸಬೇಕು ಎಂದು ಕಾಲೇಜಿನ ಹಳೇ ವಿದ್ಯಾರ್ಥಿಗಳು ಮತ್ತು ಪುರಸಭೆ ಮಾಜಿ ಸದಸ್ಯ ಮಹೇಶ ಹೊಗೆಸೊಪ್ಪಿನ, ವಕೀಲ ಬಸವರಾಜ ಬಾಳೇಶ್ವರಮಠ, ಪುರಸಭೆ ಮಾಜಿ ಅಧ್ಯಕ್ಷ ಎಂ.ಆರ್ ಪಾಟೀಲ ಒತ್ತಾಯಿಸಿದರು.

ಅವರು ಪಟ್ಟಣದ ಪತ್ರಿಕಾ ಕಾರ್ಯಾಲಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಕುಡಿಯುವ ನೀರಿನ ಯೋಜನೆ ಮತ್ತು ಜಲಾಗಾರ ನಿರ್ಮಾಣಕ್ಕೆ ನಮ್ಮ ವಿರೋಧವಿಲ್ಲ ಇಲ್ಲಿ ಬೃಹತ್ ಜಲಾಗಾರ ನಿರ್ಮಾಣದಿಂದ ಭವಿಷ್ಯದಲ್ಲಿ ಶೈಕ್ಷಣಿಕ ಚಟುವಟಿಕೆಗಳು, ಕ್ರೀಡೆ ಇತರೇ ಪಠ್ಯೇತರ ಚಟುವಟಿಕೆಗಳಿಗೆ ಜಾಗವೇ ಇಲ್ಲದಂತಾಗುತ್ತದೆ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಇದು ಅಪಾಯಕಾರಿಯೂ ಆಗಿದೆ. ಅಭಿವೃದ್ಧಿ ಕಾರ್ಯಗಳಿಗೆ ಸಾಕಷ್ಟು ಅಡಚಣೆಯಾಗಲಿದೆ. ಈ ಪದವಿ ಕಾಲೇಜು ಸರ್ಕಾರಕ್ಕೆ ಹಸ್ತಾಂತರಗೊಳ್ಳಲಿದೆ. ಮುಖ್ಯವಾಗಿ ಕಾಲೇಜು ನಿರ್ಮಾಣ, ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಈ ಭೂಮಿಯನ್ನು ದಾನ ಮಾಡಿದ್ದಾರೆ ಎಂದರು.

ಟಿಪಿಸಿಎಂಎಸ್ ನ ಅಧ್ಯಕ್ಷ ಸೋಮೇಶ ಉಪನಾಳ, ಕರವೇ ಸ್ವಾಭಿಮಾನಿ ಸೇನೆ ಜಿಲ್ಲಾಧ್ಯಕ್ಷ ಶರಣು ಗೋಡಿ ಮಾತನಾಡಿ, ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಸಾಕಷ್ಟು ಖಾಲಿ ನಿವೇಶನಗಳಿದ್ದು ಅಲ್ಲಿ ಜಲಾಗಾರ ನಿರ್ಮಾಣ ಮಾಡಿ. ಈಗಾಗಲೇ ಪಟ್ಟಣದಲ್ಲಿ ಲಕ್ಷಾಂತರ ವೆಚ್ಚದಲ್ಲಿ ಹತ್ತಾರು ವರ್ಷಗಳ ಹಿಂದೇಯೇ ನಿರ್ಮಾಣಗೊಂಡ 4-5 ಜಲಾಗಾರಗಳು ನಿರುಪಯುಕ್ತವಾಗಿದ್ದು ಇವುಗಳನ್ನೂ ಸಹ ಬಳಸಬಹುದು. ಒಂದು ವೇಳೆ ಕಾಮಗಾರಿ ಸ್ಥಳಾಂತರಿಸದಿದ್ದರೆ ಕಾಲೇಜಿನ ಹಳೇ ವಿದ್ಯಾರ್ಥಿಗಳೆಲ್ಲರೂಡಗೂಡಿ ಕಾಮಗಾರಿ ಸ್ಥಳದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸುತ್ತೇವೆ ಎಂದು ಎಚ್ಚರಿಸಿದರು.

ತಿಪ್ಪಣ್ಣ ಸಂಶಿ, ಡಿ.ಬಿ ಫಕೀರಪ್ಪ ಮಾತನಾಡಿದರು. ರಾಮಣ್ಣ ಲಮಾಣಿ(ಶಿಗ್ಲಿ) ಪ್ರಕಾಶ ಕೊಂಚಿಗೇರಿಮಠ, ಮುತ್ತಣ್ಣ ಗಡೆಪ್ಪನವರ, ಮಾಂತೇಶ ಉಮಚಗಿ, ಖಾಸಾಬ ಸೂರಣಗಿ, ನೀಲಪ್ಪ ಪಡಗೇರಿ ಸೇರಿ ಅನೇಕರಿದ್ದರು.



ಕುಡಿಯುವ ನೀರು ಒದಗಿಸಲು ಆಗ್ರಹ



ಲಕ್ಷ್ಮೇಶ್ವರ: ಪಟ್ಟಣದ ಗಡ್ಡದೇವರಮಠ ಆಶ್ರಯ ಬಡಾವಣೆಯ ನಿವಾಸಿಗಳು ಕುಡಿಯುವ ನೀರು, ರಸ್ತೆ, ಚರಂಡಿ, ಸ್ವಚ್ಛತೆ ಸೇರಿದಂತೆ ಮೂಲಭೂತ ಸೌಲಭ್ಯಗಳಿಗೆ ಆಗ್ರಹಿಸಿ ದಿಢೀರ್ ಪುರಸಭೆಗೆ ದೌಡಾಯಿಸಿ ಅಸಮಾಧಾನವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ನಿವಾಸಿಗಳು, ನದಿ ನೀರು ಪೂರೈಕೆಯ ಪೈಪ್‌ಲೈನ್ ನಮ್ಮ ಭಾಗದಲ್ಲಿಯೇ ಹಾದು ಹೋಗಿದ್ದರೂ 20 ದಿನಗಳಿಗೊಮ್ಮೆ ನೀರು ಬರುತ್ತದೆ. ಇರುವ ಬೋರ್‌ವೆಲ್‌ನಿಂದ ಸಮರ್ಪಕ ನೀರು ಪೂರೈಕೆಯಾಗುತ್ತಿಲ್ಲ, ನೀರು ಹುಡುಕಿಕೊಂಡು ಅಲೆಯುವುದು ತಪ್ಪದಂತಾಗಿದೆ. ಮಳೆ ಬಂದಾಗೊಮ್ಮೆ ಬಡಾವಣೆಯಿಂದ ಪಟ್ಟಣ ಸಂಪರ್ಕಿಸುವ ರಸ್ತೆಯಲ್ಲಿ ಎದೆಯತ್ತರ ನೀರು ನಿಂತು ಸಂಚಾರಕ್ಕೆ ಅಡ್ಡಿಯಾಗುತ್ತಿದೆ. ರಸ್ತೆಗಳಲ್ಲಿ ನೀರು ನಿಂತು ಕೆಸರುಮಯ ವಾತಾವರಣ ನಿರ್ಮಾಣವಾಗುತ್ತಿದೆ. ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮನೆಗಳ ಮುಂದೆ ನೀರು ಹರಿದು ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದೆ ಎಂದರು.

ನಿವಾಸಿಗಳ ಸಮಸ್ಯೆ ಆಲಿಸಿದ ಪುರಸಭೆಯ ಅಧಿಕಾರಿಗಳು ನೀರು ಸರಬರಾಜು ಇಲಾಖೆ ಮೇಲ್ವಿಚಾರಕ ಪರಶುರಾಮ ಮುಳಗುಂದ ಸಮಸ್ಯೆ ಬಗೆಹರಿಸಲಾಗುವುದೆಂದು ಹೇಳಿದರು. ನಿವಾಸಿಗಳಾದ ವಿರೂಪಾಕ್ಷ ಹಡಪದ, ಮಂಜುನಾಥ ಬಳಗಾನೂರ, ಭಾಷಾಸಾಬ ಬೂದಿಹಾಳ, ಕಿರಣ ಬಳಗಾನೂರ, ಎಚ್.ಎ ಬಹದ್ದೂರ, ವೈ.ಎಂ. ನಾಲಬಂದ, ಚನ್ನವ್ವ ಕಮತದ, ನಿರ್ಮಲ ಹೊಸಮನಿ, ದಾವಲಬಿ ಬಾಗಲಕೋಟ, ಸಾಹೇರಾ ಗುಡಗೇರಿ, ಮಲ್ಲವ್ವ ಗಡದವರ, ಜೈತುನಬಿ ದೊಡ್ಡಮನಿ, ನೀಲವ್ವ ಮಾವನೂರ, ವಿನೋದಾ ಬೋರೆ, ನಿಂಗವ್ವ ಟಿ. ಮತ್ತಿತರರಿದ್ದರು.

ಯೂರಿಯಾ ಗೊಬ್ಬರ ವಿತರಣಾ ತರಬೇತಿ

ನರಗುಂದ: ತಾಲೂಕಿನ ಸಹಕಾರಿ ಸಂಘಗಳು ಮತ್ತು ಖಾಸಗಿ ರಸಗೊಬ್ಬರ ಮಾರಾಟಗಾರರು ಕೆ-ಕಿಸಾನ್ ಆ್ಯಪ್ ಮೂಲಕವೇ ಎಫ್.ಐ.ಡಿ ಆಧಾರದ ಮೇಲೆ ಯುರಿಯಾ ಗೊಬ್ಬರವನ್ನು ಮಾರಾಟ ಮಾಡಬೇಕೆಂದು ಜಿಲ್ಲಾ ಜಂಟಿ ಕೃಷಿ ನಿರ್ದೇಶಕಿ ಚೇತನಾ ಪಾಟೀಲ ತಿಳಿಸಿದರು.

ಗುರುವಾರ ಪಟ್ಟಣದ ಶ್ರೀ ಸಿದ್ದೇಶ್ವರ ಪ್ರಥಮ ದರ್ಜೆ ಮಹಾವಿದ್ಯಾಲಯದ ಸಭಾಭವನದಲ್ಲಿ ಕೃಷಿ ಇಲಾಖೆ ವತಿಯಿಂದ 2026-27ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಸಹಕಾರಿ ಸಂಘಗಳ ಮತ್ತು ಖಾಸಗಿ ರಸಗೊಬ್ಬರ ಮಾರಾಟಗಾರರು ಕೆ ಕಿಸಾನ ತಂತ್ರಾಂಶದಡಿ ಯೂರಿಯಾ ಗೊಬ್ಬರ ವಿತರಣಾ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಿತ ಯುರಿಯಾ ಬಳಕೆ ಬಗ್ಗೆ, ಬೆಳೆಗಳಿಗೆ ಅನುಗುಣವಾಗಿ ಬೇಡಿಕೆ ತಕ್ಕಂತೆ ಮಾತ್ರ ಯುರಿಯಾ ಬಳಸಲು ಮತ್ತು ಕಾಂಪ್ಲೆಕ್ಸ್ ರಸಗೊಬ್ಬರ, ಕಾಂಪೋಸ್ಟ್ ಗೊಬ್ಬರ, ಸಾವಯವ ಗೊಬ್ಬರಗಳನ್ನು ಬಳಸುವಂತೆ ರೈತರಲ್ಲಿ ಮನವರಿಕೆ ಮಾಡಲು ತಿಳಿಸಿದರು. ವಿಷಯ ತಜ್ಞೆ, ಸಹಾಯಕ ನಿರ್ದೇಶಕಿ ಮೇಘನಾ ನಾಡಿಗೇರ ಮಾತನಾಡಿ, ಮಾರಾಟಗಾರರು ಲಭ್ಯವಿರುವ ಗೊಬ್ಬರಗಳ ದಾಸ್ತಾನು ವಿವರ ಮತ್ತು ದರ ಪಟ್ಟಿಯನ್ನು ಕಡ್ಡಾಯವಾಗಿ ಪ್ರದರ್ಶಿಸಬೇಕು ಎಂದರು. ಈ ಸಂದರ್ಭದಲ್ಲಿ ಕೃಷಿ ಅಧಿಕಾರಿಗಳಾದ ರಮೇಶ ನಾಯಕ ಹಾಗೂ ಎಂ.ಎಸ್. ಕುಲಕರ್ಣಿ, ಪ್ರೊ. ಜಗದೀಶ ತಳವಾರ ಹಾಗೂ ತಾಲೂಕಿನ ಸಹಕಾರಿ ಸಂಘಗಳು ಮತ್ತು ಖಾಸಗಿ ರಸಗೊಬ್ಬರ ಮಾರಾಟಗಾರರು ಮತ್ತು ಆತ್ಮ ಯೋಜನೆ ಸಿಬ್ಬಂದಿ ಇದ್ದರು.



ಮಹಿಳಾ ಸಾಹಿತ್ಯ ಸಮ್ಮೇಳನ ನಾಳೆ

ಮುಂಡರಗಿ: ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕದ ಆಶ್ರಯದಲ್ಲಿ ಮೇ 23ರಂದು ಬೆಳಗ್ಗೆ 9.30 ರಿಂದ ಮುಂಡರಗಿ ತಾಲೂಕು ಮಹಿಳಾ ಸಾಹಿತ್ಯ ಸಮಾವೇಶವನ್ನು ಶ್ರೀ ಜ.ಅನ್ನದಾನೀಶ್ವರ ಕನ್ನಡ ಸಾಹಿತ್ಯಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಘಟಕದ ಅಧ್ಯಕ್ಷ ಎಂ.ಜಿ.ಗಚ್ಚಣ್ಣವರ ಹೇಳಿದರು.

ಅವರು ಈ ಕುರಿತು ಮಾಹಿತಿ ನೀಡಿ, ಮೇ 23ರಂದು ಬೆಳಗ್ಗೆ 9.30ಕ್ಕೆ ಜಗದ್ಗುರು ನಾಡೋಜ ಡಾ.ಅನ್ನದಾನೀಶ್ವರ ಮಹಾಶಿವಯೋಗಿಗಳ ಸಾನ್ನಿಧ್ಯದಲ್ಲಿ ಉದ್ಘಾಟನಾ ಸಮಾರಂಭ ಜರಗುವುದು. ಕಸಾಪ ಗದಗ ಜಿಲ್ಲಾ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ಅಧ್ಯಕ್ಷತೆ ವಹಿಸುವರು. ಶಾಸಕ ಡಾ.ಚಂದ್ರು ಲಮಾಣಿ ಸಮಾವೇಶ ಉದ್ಘಾಟಿಸುವರು. ಪ್ರೊ. ಆರ್. ಎಲ್.ಪೋಲೀಸಪಾಟೀಲ ರಚಿಸಿದ ಜೇಂಗೊಡ ಪುಸ್ತಕವನ್ನು ಶಾಸಕ ಜಿ.ಎಸ್.ಪಾಟೀಲ ಬಿಡುಗಡೆಗೊಳಿಸುವರು. ಮುಖ್ಯ ಅಥಿತಿಗಳಾಗಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಚೇತನಾ ಪಾಟೀಲ, ತಿ ಗಿರಿಜಾ ಹಿರೇಮಠ ಭಾಗವಹಿಸುವರು. ವೀಣಾ ಪಾಟೀಲ ಆಶಯ ನುಡಿಗಳನ್ನಾಡುವರು. ಒಟ್ಟು ಎರಡು ಗೋಷ್ಠಿಗಳು ಮತ್ತು ಕವಿಗೋಷ್ಠಿ ನಡೆಯುವುದು. ನಂತರ ನಡೆಯುವ ಸಮಾರೋಪ ಸಮಾರಂಭವು ಮಾಜಿ ಸಚಿವ ಎಸ್.ಎಸ್.ಪಾಟೀಲ ಅಧ್ಯಕ್ಷತೆಯಲ್ಲಿ ಜರಗುವುದು. ಮುಖ್ಯ ಅಥಿತಿಗಳಾಗಿ ರಾಮಕೃಷ್ಣ ದೊಡ್ಡಮನಿ, ಕೆ.ವಿ.ಹಂಚಿನಾಳ, ಆನಂದಗೌಡ ಪಾಟೀಲ, ಡಾ.ಅನಸೂಯಾ ಅಂಗಡಿ, ವೆಂಕಟಪ್ಪ ನಾಯಕ್ ಆಗಮಿಸುವರು. ಈ ವೇಳೆ ಮಹಿಳಾ ಸಾಧಕರನ್ನು ಸನ್ಮಾನಿಸಲಾಗುವುದು.

ಕಸವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಿ

ಗದಗ: ಕೇಂದ್ರ ಸರ್ಕಾರದಿಂದ ಜಾರಿಗೆ ಬಂದಿರುವ ಹೊಸ ಘನ ತ್ಯಾಜ್ಯ ನಿರ್ವಹಣಾ ನಿಯಮಗಳು 2026 ನಿಯಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹಾಗೂ ಪರಿಸರ ಸಂರಕ್ಷಣೆಗೆ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳ ಸಹಭಾಗಿತ್ವ ಹಾಗೂ ಕಾರ್ಯತತ್ಪರತೆ ಮುಖ್ಯವಾಗಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ತಿಳಿಸಿದರು.



ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಘನತ್ಯಾಜ್ಯ ನಿರ್ವಹಣೆ ನಿಯಮಗಳು 2026 ರ ಅನುಷ್ಠಾನದ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯ ಎಲ್ಲ ಸಾರ್ವಜನಿಕರು, ಮನೆಗಳು ಹಾಗೂ ವ್ಯಾಪಾರೋದ್ಯಮಿಗಳು ತಮ್ಮ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಸವನ್ನು ಕಡ್ಡಾಯವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಿ ನಗರಸಭೆಯ ಕಸ ಸಂಗ್ರಹಣಾ ವಾಹನಗಳಿಗೆ ನೀಡಬೇಕು. ಕಸವನ್ನು ಹಸಿ ತ್ಯಾಜ್ಯ, ಒಣ ತ್ಯಾಜ್ಯ, ಸ್ಯಾನಿಟರಿ ತ್ಯಾಜ್ಯ, ವಿಶೇಷ ಕಾಳಜಿ ತ್ಯಾಜ್ಯ ಎಂದು ಪ್ರತ್ಯೇಕಿಸಬೇಕಾಗುತ್ತದೆ.

ಅಡುಗೆ ಮನೆಯ ತ್ಯಾಜ್ಯ, ತರಕಾರಿ, ಮಾಂಸದ ತ್ಯಾಜ್ಯ, ಹಣ್ಣು ಹೂವು, ಹಾಗೂ ಕೊಳೆಯುವ ವಸ್ತುಗಳನ್ನು ಹಸಿ ತ್ಯಾಜ್ಯದ ವಿಭಾಗದಲ್ಲೂ, ಪ್ಲಾಸ್ಟಿಕ್, ಬಟ್ಟೆ, ಕಬ್ಬಿಣ, ರಬ್ಬರ್ ಮತ್ತು ಮರದ ವಸ್ತುಗಳನ್ನು ಒಣ ತ್ಯಾಜ್ಯದ ವಿಭಾಗದಲ್ಲೂ ನೀಡಬೇಕು. ಡೈಪರ್ಸ್, ಸ್ಯಾನಿಟರಿ ನ್ಯಾಪಕಿನ್ ಗಳಂತಹ ವಸ್ತುಗಳನ್ನು ಸ್ಯಾನಿಟರಿ ತ್ಯಾಜ್ಯ ಎಂದು ಪ್ರತ್ಯೇಕಿಸಬೇಕು. ಇನ್ನುಳಿದಂತೆ ಪೇಂಟ್ ಡಬ್ಬಗಳು, ಔಷಧ ಬಾಟಲಿಗಳು, ಇ ವೇಸ್ಟ್, ಬಲ್ಬ್, ಹಳೆಯ ಬ್ಯಾಟರಿ ಹಾಗೂ ಬಳಸಿದ ಸಿರಿಂಜ್ ಮತು ಬ್ಯಾಂಡೇಜ್‌ಗಳನ್ನು ವಿಶೇಷ ತ್ಯಾಜ್ಯದ ಅಡಿಯಲ್ಲಿ ನೀಡಲು ಸೂಚಿಸಲಾಗಿದೆ ಎಂದರು.

ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೋಟೂರ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ಚಳಗೇರಿ, ಕ.ರಾ.ಮಾ.ನ.ಮಂ.ಪರಿಸರ ಅಧಿಕಾರಿ ಲೋಹಿತ್‌ಕುಮಾರ್ ಪಿ.ಜೆ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್. ಎಸ್.ಬುರುಡಿ, ನಗರಸಭೆಯ ಕಾರ್ಯಕಾರಿ ಅಭಿಯಂತರರು(ಪರಿಸರ) ಆನಂದ ಬದಿ, ಕೊಟ್ರೇಶ್ ಇದ್ದರು.

ಕಿರುಸುದ್ದಿ

ಪತಿ ಕಿರುಕುಳಕ್ಕೆ ಬೇಸತ್ತು ಗರ್ಭಿಣಿ ಆತ್ಮಹತ್ಯೆ



ಕಲಬುರಗಿ: ಪ್ರೀತಿಸಿ ಮದುವೆಯಾದ ಪತಿಯ ನಿರಂತರ ಕಿರುಕುಳಕ್ಕೆ ಬೇಸತ್ತು 4 ತಿಂಗಳ ಗರ್ಭಿಣಿಯೊಬ್ಬರು ತವರು ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕಲಬುರಗಿ ತಾಲೂಕಿನ ಔರಾದ್ (ಬಿ) ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಶೃತಿ (22) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿ. ಎರಡು ವರ್ಷಗಳ ಹಿಂದೆ ಈಕೆ ಗೋಪಾಲ್ ಎಂಬಾತನನ್ನು ಪ್ರೀತಿಸಿ ಮದುವೆಯಾಗಿದ್ದರು. ಆದರೆ, ವಿವಾಹದ ಬಳಿಕ ಕುಡಿತ, ಜೂಜಾಟ ಹಾಗೂ ದುಶ್ಚಟಗಳಿಗೆ ದಾಸನಾಗಿದ್ದ ಗೋಪಾಲ್, ಸಾಲ ತೀರಿಸಲು ಮನೆ ಮಾರಲು ಮುಂದಾಗಿದ್ದ. ಇದಕ್ಕೆ ಶೃತಿ ಸಹಿ ಹಾಕದಿದ್ದಾಗ ಆಕೆಗೆ ಮನಬಂದಂತೆ ಥಳಿಸಿ, ತಾಳಿ ಕಿತ್ತುಕೊಂಡು ದೌರ್ಜನ್ಯ ಎಸಗಿದ್ದ. ಗಂಡನ ಕಾಟ ತಾಳಲಾರದೆ 15 ದಿನಗಳ ಹಿಂದೆ ಶೃತಿ ತವರು ಮನೆ ಸೇರಿದ್ದರು. ಆದರೆ ನಿನ್ನೆ ಅಲ್ಲಿಗೂ ಬಂದ ಗೋಪಾಲ್, ಮತ್ತೆ ಗಲಾಟೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಇದರಿಂದ ತೀವ್ರ ಮನನೊಂದ ಶೃತಿ ತವರು ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ. ಹೊಟ್ಟೆಯಲ್ಲಿದ್ದ ಕಂದಮ್ಮನೊಂದಿಗೆ ಗೃಹಿಣಿ ಆತ್ಮಹತ್ಯೆ ಮಾಡಿಕೊಂಡಿರುವುದು ಗ್ರಾಮದಲ್ಲಿ ಶೋಕದ ವಾತಾವರಣ ಮೂಡಿಸಿದೆ. ಸದ್ಯ ಕಲಬುರಗಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಕಲ್ಲೂರ ದಂಪತಿ ಸ್ಮರಣೋತ್ಸವ, ಮೂರ್ತಿ ಅನಾವರಣ ಸಮಾರಂಭ

ದಿ.ಆರ್.ಆರ್.ಕಲ್ಲೂರ ಶ್ರೇಷ್ಠ ಜನ ಸೇವಕ: ಸುತ್ತೂರ ಶ್ರೀ

ವಿಜಯಪುರ: ಸೇವೆಯೇ ಪರಮಧರ್ಮ ಎಂಬ ತತ್ವನ್ನು ಪ್ರತಿ ಹಂತದಲ್ಲಿಯೂ ಪಾಲಿಸಿದ ದಿ.ಆರ್.ಆರ್. ಕಲ್ಲೂರ ಓರ್ವ ಶ್ರೇಷ್ಠ ಜನ ಸೇವಕ ಎಂದು ಸುತ್ತೂರ ಮಠದ ಡಾ.ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಹೇಳಿದರು.

ನಗರದ ಕಿತ್ತೂರ ರಾಣಿ ಚನ್ನಮ್ಮ ಮಂಗಲ ಕಾರ್ಯಾಲಯದಲ್ಲಿ ಗುರುವಾರ ಹಮ್ಮಿಕೊಂಡ ದಿ.ಆರ್.ಆರ್. ಕಲ್ಲೂರ ದಂಪತಿ ಸ್ಮರಣೋತ್ಸವ, ಮೂರ್ತಿ ಅನಾವರಣ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಅವರು ಮಾತನಾಡಿದರು.

ಸದಾ ಹಾಸ್ಯ ಪ್ರಜ್ಞೆ, ಸರಳ ವ್ಯಕ್ತಿತ್ವದ ಕಾರಣದಿಂದ ಜನಸಾಮಾನ್ಯರು ಅವರ ಬಗ್ಗೆ ಅಪಾರವಾದ ಅಭಿಮಾನ ಹೊಂದಿದ್ದರು, ಒಳ್ಳೆಯ ಕೆಲಸಗಳಿಗೆ ಸದಾ ಪ್ರೋತ್ಸಾಹ ನೀಡುತ್ತಿದ್ದ. ದಿ.ಆರ್.ಆರ್. ಕಲ್ಲೂರ ನಾಡಿನಾದ್ಯಂತ ಪ್ರಸಿದ್ಧಿ ಹಾಗೂ ರಾಜ್ಯದ ದಿಗ್ಗಜ ನಾಯಕರ ಜೊತೆ ಉತ್ತಮ ಒಡನಾಟ ಹೊಂದಿದ್ದರು ಎಂದರು.

ರೈತರ ಪಂಪ್‌ಸೆಟ್ ವಿದ್ಯುತ್ ಶುಲ್ಕ ವಿನಾಯ್ತಿ ಸಂಬಂಧಿಸಿದಂತೆ ನಿರ್ಧಾರ ಕೈಗೊಂಡ ಅಂದಿನ ಮುಖ್ಯಮಂತ್ರಿ ದಿ.ಆರ್.ಗುಂಡೂರಾವ್ ಅವರಿಗೆ ರೈತರ ಪರವಾಗಿ ಅಭಿನಂದನೆ ಸಲ್ಲಿಸಲು ಬೆಳ್ಳಿಯ ಪಂಪ್‌ಸೆಟ್ ಕೊಡುಗೆಯಾಗಿ ನೀಡಿದರು. ಇದು ಕಲ್ಲೂರ ಅವರ ರೈತಪರ ಕಾಳಜಿಗೆ ಒಂದು ನಿದರ್ಶನ, ನಂತರ ದಿ.ಕಲ್ಲೂರ ಪಂಪಸೆಟ್ ಕಲ್ಲೂರ ಎಂದೇ ಜನಜನಿತರಾದರು ಎಂದರು.

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಅಜಯಸಿಂಗ್ ಮಾತನಾಡಿ, ನಾವು ಮಾಡುವ ಸತ್ಕಾರ್ಯಗಳಿಂದ ಜನರು ನಮ್ಮನ್ನು ನೆನಪಿಸಿಕೊಳ್ಳುತ್ತಾರೆ, ದಿ.ಆರ್.ಆರ್.ಕಲ್ಲೂರ ನಮ್ಮ ಕುಟುಂಬದ ಸದಸ್ಯರು, ಅವರಲ್ಲಿದ್ದ ಸರಳತೆ, ಆತ್ಮೀಯತೆಯನ್ನು ಬಾಲ್ಯದಲ್ಲಿಯೇ ಕಂಡ ನಾನು ಕಲ್ಲೂರ ಅವರು ಶಾಸಕರು ಎಂಬುದೇ ಗೊತ್ತಿರಲಿಲ್ಲ, ಅಧಿಕಾರದ ಅಹಂಕಾರ, ದರ್ಪ ಅವರಲ್ಲಿ ಇರಲೇ ಇಲ್ಲ, ಬೆಂಗಳೂರಿಗೆ ಬಂದ ಅವರು ಮೊದಲು ನಮ್ಮ ಮನೆಗೆ ಬರುತ್ತಿದ್ದರು ಎಂದರು.



> ನನ್ನ ತಂದೆ ಧರ್ಮಸಿಂಗ್, ಸಮಾಜ ಕಲ್ಯಾಣ ಸಚಿವರಾಗಿದ್ದರು, ಆಗ ದಿ.ಕಲ್ಲೂರ ಅವರು ಗಾಣಿಗ ಸಮಾಜವನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರ್ಪಡೆ ಮಾಡುವ ನಿಟ್ಟಿನಲ್ಲಿ ದಿ.ಕಲ್ಲೂರ ಅಪಾರವಾಗಿ ಶ್ರಮ ವಹಿಸಿ ಯಶಸ್ವಿಯಾದರು.
> ■ ಡಾ.ಅಜಯಸಿಂಗ್, ಶಾಸಕ, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ

ಶಾಸಕ ಯಶವಂತರಾಯಗೌಡ ಪಾಟೀಲ ಅಧ್ಯಕ್ಷತೆ ಮಾತನಾಡಿ, ಕಲ್ಲೂರ ಅವರು ಜಿಲ್ಲೆಯ ಭಾವನಾತ್ಮಕ ಜೀವಿಯಾಗಿದ್ದರು. ಅವರು ಸಾರ್ಥಕವಾದ ಜೀವನ ಸಾಗಿಸಿದರು. ಖರ್ಗೆ, ಧರ್ಮಸಿಂಗ್ ಅವರೊಂದಿಗೆ ಒಡನಾಟ ಹೊಂದಿದ್ದರು. ಗಟ್ಟಿ ರಾಜಕಾರಣ ಮಾಡಿದರು ಎಂದರು.

ಚಿತ್ತರಗಿ ಮಠದ ವಿಜಯ ಮಹಾಂತೇಶ ಮಹಾಸ್ವಾಮೀಜಿ, ವೇಮನಾನಂದ ಮಹಾಸ್ವಾಮಿಜಿ, ಜ್ಞಾನ ಯೋಗಾಶ್ರಮದ ಅಧ್ಯಕ್ಷ ಗುರು ಬಸವಲಿಂಗ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಂಸದ ರಮೇಶ ಜಿಗಜಿಣಗಿ, ಬಾಗಲಕೋಟೆ ಸಂಸದ ಪಿ.ಸಿ. ಗದ್ದಿಗೌಡರ, ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಿಧಾನ ಪರಿಷತ್ ಸದಸ್ಯ ಸುನೀಲಗೌಡ ಪಾಟೀಲ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಶಾಸಕ ರಮೇಶ ಭೂಸನೂರ, ಬಿ.ಜಿ.ಪಾಟೀಲ ಹಲಸಂಗಿ, ಆನಂದ ನ್ಯಾಮಗೌಡ, ಡಾ.ಮಲ್ಲಿಕಾರ್ಜುನ ಕಲ್ಲೂರ, ಡಾ.ಸುನೀಲ್ ಕಲ್ಲೂರ, ರವಿ ಕಲ್ಲೂರ, ಸೌಮ್ಯಾ ಕಲ್ಲೂರ ಇತರರು ಇದ್ದರು.

ಬ್ಯಾಡ್ಮಿಂಟನ್ ಪಂದ್ಯಾವಳಿ: ಯಶವರ್ಧನ್‌ಗೆ ಜಯ

ವಿಜಯಪುರ: ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಒಳಾಂಗಣ ಕ್ರೀಡಾಂಗಣದಲ್ಲಿ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಯೋನೆಕ್ಸ್ ಆಶ್ರಯದಲ್ಲಿ ಗುರುವಾರ ನಡೆದ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ ತುರುಸಿನಿಂದ ನಡೆದವು.

15 ವರ್ಷದೊಳಗಿನ ಸಿಂಗಲ್ಸ್ ಬಾಲಕರ ರೌಂಡಪ್ ವಿಭಾಗದಲ್ಲಿ ಬೆಂಗಳೂರು ಗ್ರಾಮಾಂತರದ ಯಶವರ್ಧನ್ ಎಸ್.ಆರ್. ಅವರು ಬೆಂಗಳೂರಿನ ಸಿದ್ಧಾರ್ಥ ನಾಯರ್ ವಿರುದ್ಧ 21-15, 21-19 ಅಂತರದಿಂದ ಗೆಲುವಿನ ನಗೆ ಬೀರಿದ್ದಾರೆ.

ರಾಯಚೂರಿನ ರೋಹನ್ ಕರತುರಿ ಅವರು ಮೈಸೂರಿನ ಗೌರವ ಎಸ್. ವಿರುದ್ಧ 21-16, 21-17 ಅಂತರದಲ್ಲಿ ಜಯಗಳಿಸಿದ್ದಾರೆ. ಬೆಂಗಳೂರಿನ ಇಶಾನ್ ಪಾಟಕ್ ಅವರು ಬೆಂಗಳೂರಿನ ಹೆಶಾನ್ ಹರಿಶ ವಿರುದ್ಧ 21-17, 14-21, 21-13 ಅಂತರದಿಂದ ಜಯಗಳಿಸಿದ್ದಾರೆ.

15 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ರೌಂಡಪ್ ವಿಭಾಗದಲ್ಲಿ ಬೆಂಗಳೂರಿನ ಮೈತ್ರಾ ನಾಯ್ಡು ಸುರಿ ಶೆಟ್ಟಿ ಅವರು ಬೆಂಗಳೂರಿನ ಅರ್ಶಿಯಾ ಬಾಬು ವಿರುದ್ಧ 21-11, 21-11 ಅಂತರದಲ್ಲಿ ಜಯಗಳಿಸಿದ್ದಾರೆ. ಬೆಂಗಳೂರಿನ ಲಿಸಾ ವಿ. ಅವರು ಬೆಂಗಳೂರು ಗ್ರಾಮಾಂತರದ ಮಾನ್ಯ ಎಂ. 21-19, 12-21, 21-19 ಅಂತರದಿಂದ ಜಯಗಳಿಸಿದ್ದಾರೆ.

15 ವರ್ಷದೊಳಗಿನ ಬಾಲಕರ ಡಬಲ್ಸ್ ರೌಂಡಪ್ ವಿಭಾಗದಲ್ಲಿ ಬೆಂಗಳೂರಿನ ಗೌತಮ್ ಎಸ್. ನಾಯರ್, ಸಿದ್ಧಾರ್ಥ ಎಸ್. ನಾಯರ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಕಿಯಾನ್ ಅಬ್ದುಲ್ ನಿಶಾರ್, ಬೆಂಗಳೂರು ಗ್ರಾಮಾಂತರದ ಶ್ರವಣ ವಿರುದ್ಧ 21-11, 21-5 ಅಂತರದಲ್ಲಿ ಜಯಗಳಿಸಿದ್ದಾರೆ. ಬೆಂಗಳೂರಿನ ಓಂಕಾರ್ ಭಟ್, ಸಾಯಿ ಸಮರ್ಥ ಪಿ. ಅವರು ಬೆಂಗಳೂರಿನ ಕೆ.ಎಸ್. ಶ್ರೇಯಸ್ ಕಣ್ಣೆ, ಕೃಷ್ಣಾ ಪ್ರದ್ಯುತ್ ವಿರುದ್ಧ 21-15, 21-11 ಅಂತರದಲ್ಲಿ ಜಯಗಳಿಸಿದ್ದಾರೆ.

14 ವರ್ಷದ ಬಾಲಕಿಯರ ಡಬಲ್ಸ್ ರೌಂಡಪ್ ವಿಭಾಗದಲ್ಲಿ ಬೆಂಗಳೂರಿನ ಸಿರಿ ಟಿ.ಆರ್., ಸ್ಮ?ತಿ ಎಸ್. ಅವರು ಬೆಂಗಳೂರು ನಗರದ ಗಾರ್ಗಿ ಕಾಮತ್, ಋದ್ಧಿಕಾ ಪಾತ್ರ ವಿರುದ್ಧ 21-9, 21-11 ಅಂತರದಲ್ಲಿ ಜಯಗಳಿಸಿದ್ದಾರೆ. ಬೆಂಗಳೂರಿನ ಆಧ್ಯಾ ಯು. ಶೆಟ್ಟಿ, ರುಸ್ತಿ ಕಾವೇರಮ್ಮ ಅವರು ದಕ್ಷಿಣ ಕನ್ನಡ ಅನ್ವಿಕಾ ರಾಜ್, ದಿಯಾ ಸುನೀಲ್ ಶಣೈ ವಿರುದ್ಧ 21-11, 21-14 ಅಂತರದಲ್ಲಿ ಜಯಗಳಿಸಿದ್ದಾರೆ.



ಬೃಹನ್ ಮುಂಬೈ ಮಹಾನಗರ ಪಾಲಿಕೆಗೆ ಭೇಟಿ

ಹುಬ್ಬಳ್ಳಿ: ಅವಳಿನಗರಕ್ಕೆ ಆಧುನಿಕ ಸ್ಪರ್ಶದೊಂದಿಗೆ ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಪಾಲಿಕೆಯ ನಿಯೋಗವು ಮುಂಬೈನ ಬೃಹನ್ ಮುಂಬೈ ಮಹಾನಗರ ಪಾಲಿಕೆಯ (ಬಿಎಂಸಿ) ಪ್ರಧಾನ ಕಚೇರಿಗೆ ಗುರುವಾರ ಭೇಟಿ ನೀಡಿ ವಿವಿಧ ವಿಷಯಗಳ ಕುರಿತು ಚರ್ಚಿಸಿತು.

ಮೇಯರ್ ಜ್ಯೋತಿ ಪಾಟೀಲ ನೇತೃತ್ವದಲ್ಲಿ ಉಪಮೇಯರ್ ಸಂತೋಷ ಚವ್ಹಾಣ, ವಿರೋಧ ಪಕ್ಷದ ನಾಯಕ ಇಮ್ರಾನ್ ಯಲಿಗಾರ ಪಾಲಿಕೆಯ ಸಭಾನಾಯಕ ಈರೇಶ ಅಂಚಟಗೇರಿ, ಪಾಲಿಕೆಯ ಉಪ ಆಯುಕ್ತ (ಅಭಿವೃದ್ಧಿ) ವಿಜಯಕುಮಾರ್ ಭಾಗವಹಿಸಿದ್ದಾರೆ.

ಮುಂಬೈನಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಅತ್ಯಾಧುನಿಕ ಯೋಜನೆಗಳು, ತಂತ್ರಜ್ಞಾನಗಳು, ಅಲ್ಲಿನ ಸಚಿವಾಲಯ, ವ್ಯವಹಾರ ಅಭಿವೃದ್ಧಿ ಇಲಾಖೆ, ಪರಿಸರ ಮತ್ತು ಹವಾಮಾನ ಬದಲಾವಣೆ ಹಾಗೂ ಮೂಲಸೌಕರ್ಯ ಇಲಾಖೆಗಳು ಕುರಿತು ಸಭೆಯಲ್ಲಿ ನಿಯೋಗವು ಮಾಹಿತಿ ಪಡೆಯಿತು.

ಬಿಎಂಸಿ ಬಜೆಟ್ 85 ಸಾವಿರ ಕೋಟಿ ಇದ್ದು, ಒಂದು ಕೋಟಿಗೂ ಹೆಚ್ಚು ಜನಸಂಖ್ಯೆ ಇದೆ. ಆದರೂ ಉತ್ತಮವಾಗಿ ನಿರ್ವಹಣೆ ಮಾಡುತ್ತಿದ್ದಾರೆ. ಅಲ್ಲಿನ ಯೋಜನೆಗಳನ್ನು ಇಲ್ಲಿಯೂ ಅನುಷ್ಠಾನಗೊಳಿಸಿ ಅಭಿವೃದ್ಧಿ ಮಾಡುವ ಉದ್ದೇಶ ಇದೆ. ಅಲ್ಲಿ ಮುನ್ಸಿಪಲ್ ಬಾಂಡ್ ಅನ್ನು ಈಗಾಗಲೇ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ನಮ್ಮಲ್ಲಿ ಜಿಐಎಸ್ ಸರ್ವೆ ಪ್ರಗತಿಯಲ್ಲಿದೆ. ಆದರೆ, ಅಲ್ಲಿ ಈಗಾಗಲೇ ಸರ್ವೆ ಮುಗಿದಿದ್ದು, ಅದರಿಂದ ಆದಾಯ ಪಡೆಯುತ್ತಿದ್ದಾರೆ ಎಂದು ಮೇಯರ್ ಜ್ಯೋತಿ ಪಾಟೀಲ ತಿಳಿಸಿದರು.

ಮುಂಬೈ ಮಹಾನಗರ ಪಾಲಿಕೆಯಲ್ಲಿ ಆಡಳಿತ ಅನುಕೂಲಕ್ಕಾಗಿ ಸಾಕಷ್ಟು ವಿಭಾಗಗಳನ್ನು ರಚನೆ ಮಾಡಲಾಗಿದೆ. ಅಲ್ಲಿ, ಮೇಯರ್ ಅವಧಿ ಎರಡೂವರೆ ವರ್ಷವಾಗಿದ್ದು, ಅವರ ಅಡಿ ಐವರು ಐಎಎಸ್ ಅಧಿಕಾರಿಗಳು ಕರ್ತವ್ಯ ನಿರ್ವಹಿಸುತ್ತಾರೆ. ಯಾವ ರೀತಿ ಬಜೆಟ್ ಸಿದ್ಧಪಡಿಸುತ್ತಾರೆ, ವಿಪತ್ತು ನಿರ್ವಹಣೆ, ಘನತ್ಯಾಜ್ಯ ನಿರ್ವಹಣೆ ಬಗ್ಗೆ ಮಾಹಿತಿ ಪಡೆಯಲಾಯಿತು ಎಂದರು.

ಸೂರತ್ ಮಹಾನಗರ ಪಾಲಿಕೆಯಲ್ಲಿ ಕೇಂದ್ರ ಸರ್ಕಾರದ ಅರ್ಬನ್ ಚಾಲೆಂಜ್ ಫಂಡ್ (ಯುಸಿಎಫ್) ಅನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಶುಕ್ರವಾರ ಸೂರತ್ ಪಾಲಿಕೆಗೆ ಭೇಟಿ ನೀಡಿ ಯುಸಿಎಫ್ ಬಗ್ಗೆ ಮಾಹಿತಿ ಪಡೆಯಲಾಗುವುದು ಎಂದು ಹೇಳಿದರು. ಪಾಲಿಕೆಯ ವಿರೋಧ ಪಕ್ಷದ ನಾಯಕ ಇಮ್ರಾನ್ ಯಲಿಗಾರ ಮಾತನಾಡಿದರು.



ಅತ್ಯುತ್ತಮ ಆಡಳಿತ ಪದ್ಧತಿ ಉದ್ದೇಶ

ದೇಶದ ಪ್ರಮುಖ ಮಹಾನಗರದ ಅತ್ಯುತ್ತಮ ಆಡಳಿತಾತ್ಮಕ ಪದ್ಧತಿಗಳು, ನವೀನ ತಂತ್ರಜ್ಞಾನಗಳು ಹಾಗೂ ಸ್ಮಾರ್ಟ್ ನಗರಾಭಿವೃದ್ಧಿ ಯೋಜನೆಗಳನ್ನು ನಮ್ಮ ಅವಳಿ ನಗರದ ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳುವ ಮೂಲಕ, ಹುಬ್ಬಳ್ಳಿ-ಧಾರವಾಡವನ್ನು ಪ್ರಗತಿಯತ್ತ ತೆಗೆದುಕೊಂಡು ಹೋಗುವುದು ಈ ಭೇಟಿಯ ಉದ್ದೇಶ ಎಂದು ಮೇಯರ್ ಜ್ಯೋತಿ ಪಾಟೀಲ ತಿಳಿಸಿದರು.

ಮನೆಯ ಮೇಲ್ಛಾವಣಿ ಕುಸಿದು ಮಹಿಳೆ ಸಾವು



ನಿಡಗುಂದಿ: ಪಟ್ಟಣದ ಗೌರೀಶ್ವರ ದೇವಸ್ಥಾನ ಬಳಿ ಮನೆಯ ಮಣ್ಣಿನ ಮೇಲ್ಛಾವಣಿ ಕುಸಿದು ಬಿದ್ದು ಮಹಿಳೆ ಮೃತಪಟ್ಟ ಘಟನೆ ಗುರುವಾರ ನಸುಕಿನ ಜಾವ ಜರುಗಿದೆ.ಮಹಾದೇವಿ ಶಿವಾನಂದ ವಾರದ(56) ಮೃತ ದುರ್ದೈವಿ. ಈಚೆಗೆ ಸುರಿದ ಮಳೆಗೆ ನೆನೆದಿದ್ದ ಹಳೆ ಮನೆಯು ಮಣ್ಣಿನ ಚಾವಣಿ ಗುರುವಾರ ನಸುಕಿನಲ್ಲಿ ಕುಸಿದು ಬಿದ್ದ ಪರಿಣಾಮ ನಿದ್ರೆಯಲ್ಲಿದ್ದ ಮಹಾದೇವಿ ಮೃತಪಟ್ಟಿದ್ದಾರೆ.

ಮನೆಯ ಹೊರಗೆ ಮಲಗಿದ್ದ ಮೃತ ಮಹಾದೇವಿಯ ಪತಿ ಶಿವಾನಂದ ಸಾವಿನ ದವಡೆಯಿಂದ ಪಾರಾಗಿದ್ದಾರೆ. ಮೃತರು ಪತಿ, ಪುತ್ರ, ಪುತ್ರಿ ಸೇರಿದಂತೆ ಬಂಧುಗನ್ನು ಆಗಲಿದ್ದಾರೆ.ತಹಶೀಲ್ದಾರ್ ವೈ.ಎಸ್.ಸೋಮನಕಟ್ಟಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಪ್ರತಾಪ ಕೊಡುಗೆ, ಪಿಎಸ್ಐ ಶಿವಾನಂದ ಪಾಟೀಲ, ಕಂದಾಯ ನಿರೀಕ್ಷಕ ಸಲೀಂ ಯಲಗೋಡ, ಗ್ರಾಮ ಆಡಳಿತಾಕಾರಿ ನಾನಾಗೌಡ ಪಾಟೀಲ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ನೆಲಗುಡ್ಡ ಗ್ರಾಮಸ್ಥರಲ್ಲಿ ಆತಂಕ

ಮುಸುಕುಧಾರಿ ವ್ಯಕ್ತಿಗಳಿಂದ ಬಾಲಕನಿಗೆ ಇಂಜೆಕ್ಷನ್!

ಕುಂದಗೋಳ: ತಾಲೂಕಿನ ತರ್ಲಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲಗುಡ್ಡ ಗ್ರಾಮದಲ್ಲಿ ಬಾಲಕನೊಬ್ಬನಿಗೆ ಅಪರಿಚಿತ ಮುಸುಕುಧಾರಿ ವ್ಯಕ್ತಿಗಳು ಇಂಜೆಕ್ಷನ್ ನೀಡಿದರೆಂಬ ಆರೋಪ ಕೇಳಿ ಬಂದಿದ್ದು, ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.



ನೆಲಗುಡ್ಡ ಗ್ರಾಮದ ಮಣಿಕಂಠ ಗಾಣಗೇರ ಎಂಬ ಬಾಲಕ ಗುರುವಾರ ಮಧ್ಯಾಹ್ನ ಮನೆಯ ಬಳಿ ಆಟವಾಡುತ್ತಿದ್ದ ವೇಳೆ ಇಬ್ಬರು ಅಪರಿಚಿತರು ಬಂದು ಇಂಜೆಕ್ಷನ್ ನೀಡಿ ತೆರಳಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಬಾಲಕನ ಹೇಳಿಕೆಯ ಪ್ರಕಾರ, ಮನೆಯಲ್ಲಿ ಪಾಲಕರು ಹೊಲಕ್ಕೆ ತೆರಳಿದ್ದ ಸಂದರ್ಭದಲ್ಲಿ ಆತ ಮನೆಯ ಬಾಗಿಲ ಬಳಿ ಆಟವಾಡುತ್ತಿದ್ದಾಗ ಮಾಸ್ಕ್ ಧರಿಸಿದ್ದ ಇಬ್ಬರು ವ್ಯಕ್ತಿಗಳು ಬಂದು, ನಿಮ್ಮ ಅಪ್ಪ-ಅಮ್ಮ ಎಲ್ಲಿದ್ದಾರೆ? ಎಂದು ವಿಚಾರಿಸಿದ್ದಾರೆ. ಬಳಿಕ ಅವರು ಇಂಜೆಕ್ಷನ್ ನೀಡಿ ತೆರಳಿದ್ದಾರೆ ಎನ್ನಲಾಗಿದೆ.ಹೊಲಕ್ಕೆ ಹೋಗಿದ್ದ ತಾಯಿ ಮರಳಿ ಮನೆಗೆ ಬಂದ ತಾಯಿಗೆ ಬಾಲಕ ವಿಷಯ ತಿಳಿಸಿದ್ದಾನೆ. ಇದರಿಂದ ಆತಂಕಗೊಂಡ ಪಾಲಕರು ತಕ್ಷಣವೇ ಮಗನನ್ನು ಕುಂದಗೋಳ ತಾಲೂಕು ಆಸ್ಪತ್ರೆಗೆ ಕರೆತಂದಿದ್ದಾರೆ.

ಬಾಲಕನ ತಂದೆ ಸುಭಾಷ ಗಾಣಗೇರ ಮಾತನಾಡಿ, ಮಗನಿಗೆ ಅಪರಿಚಿತರು ಇಂಜೆಕ್ಷನ್ ನೀಡಿದರೆಂದು ತಿಳಿದ ತಕ್ಷಣ ಭಯವಾಯಿತು. ಯಾವ ಔಷಧ ನೀಡಲಾಗಿದೆ. ಏಕೆ ನೀಡಲಾಗಿದೆ ಎಂಬ ಆತಂಕದಿಂದ ಆಸ್ಪತ್ರೆಗೆ ಬಂದಿದ್ದೇವೆ. ವೈದ್ಯರು ಹೆಚ್ಚಿನ ಚಿಕಿತ್ಸೆಗೆ ಕಿಮ್ಸ್‌ಗೆ ತೆರಳುವಂತೆ ಸೂಚಿಸಿದ್ದಾರೆ ಎಂದು ಹೇಳಿದರು.

ತಾಲೂಕು ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ತಿಮ್ಮಯ್ಯ ಪ್ರತಿಕ್ರಿಯಿಸಿ, ಇಂತಹ ಪ್ರಕರಣದ ನಿಖರ ಪರೀಕ್ಷೆಗೆ ಅಗತ್ಯ ಸೌಲಭ್ಯ ಇಲ್ಲ. ಮುನ್ನೆಚ್ಚರಿಕಾ ಕ್ರಮವಾಗಿ ಬಾಲಕನನ್ನು ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಲಾಗಿದೆ ಎಂದು ತಿಳಿಸಿದರು. ಘಟನೆಗೆ ಪ್ರತಿಕ್ರಿಯಿಸಿದ ತಾಲೂಕು ಕನ್ನಡ ರಕ್ಷಣಾ ವೇದಿಕೆ ಉಪಾಧ್ಯಕ್ಷ ಅಡಿವೆಪ್ಪ ಹೆಬಸೂರ, ಇಂತಹ ಘಟನೆಗಳು ಸಾರ್ವಜನಿಕರಲ್ಲಿ ಭಯದ ವಾತಾವರಣ ಉಂಟು ಮಾಡುತ್ತವೆ. ವಿಷಯವನ್ನು ಗುಡಗೇರಿ ಪೊಲೀಸ್ ಠಾಣೆಗೆ ತಿಳಿಸಿದ್ದೇವೆ. ತಾಲೂಕು ಆಡಳಿತ, ಜಿಲ್ಲಾಡಳಿತ ಹಾಗೂ ಆರೋಗ್ಯ ಇಲಾಖೆ ಎಚ್ಚೆತ್ತುಕೊಂಡು ಅಗತ್ಯ ಜಾಗೃತಿ ವಹಿಸಬೇಕು. ಪೊಲೀಸ್ ಇಲಾಖೆ ಗ್ರಾಮೀಣ ಭಾಗದಲ್ಲಿ ಸಮರ್ಪಕ ಬೀಟ್ ವ್ಯವಸ್ಥೆ ಬಲಪಡಿಸಬೇಕು ಎಂದು ಒತ್ತಾಯಿಸಿದರು.

ಅಕ್ರಮ ಸಾಗಾಟ ಮಾಡುತ್ತಿದ್ದ ಜಾನುವಾರುಗಳ ವಶ



ಭಟ್ಕಳ: ಈಚರ್ ಇನ್ಸುಲೇಟರ್ ವಾಹನದಲ್ಲಿ ಯಾವುದೇ ಪರವಾನಿಗೆ ಇಲ್ಲದೇ ಅಕ್ರಮವಾಗಿ ಹಿಂಸಾತ್ಮಕ ರೀತಿಯಲ್ಲಿ ಸಾಗಾಟ ಮಾಡುತ್ತಿದ್ದ 11 ಜಾನುವಾರುಗಳನ್ನು ನಗರ ಠಾಣೆಯ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಗುರುವಾರ ಬೆಳಗಿನ ಜಾವ 40.50ರ ಸುಮಾರಿಗೆ ಪಟ್ಟಣದ ಜಾಲಿ ಕ್ರಾಸ್ ಬಳಿ ಪೊಲೀಸರು ವಾಹನ ತಡೆಯಲು ಯತ್ನಿಸಿದರೂ ಚಾಲಕ ವಾಹನ ನಿಲ್ಲಸದೇ ಪರಾರಿಯಾಗಲು ಯತ್ನಿಸಿದ್ದಾನೆ. ನಂತರ ಡೊಂಗರಪಳ್ಳಿ ಸಮೀಪದ ಖಾಲಿ ಜಾಗದಲ್ಲಿ ವಾಹನ ಬಿಟ್ಟು ಆರೋಪಿತರು ಪರಾರಿಯಾಗಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.ವಾಹನದಲ್ಲಿದ್ದ ಜಾನುವಾರುಗಳಲ್ಲಿ ಒಂದು ಕೋಣ, ಒಂದು ಎಮ್ಮೆ ಹಾಗೂ ಒಂದು ಎತ್ತು ಉಸಿರುಗಟ್ಟಿ ಮೃತಪಟ್ಟಿದ್ದು, ಉಳಿದ 11 ಜಾನುವಾರುಗಳನ್ನು ಪೊಲೀಸರು ರಕ್ಷಿಸಿದ್ದಾರೆ. ನಗರ ಠಾಣೆ ಪಿಎಸ್ಐ ತಿಮ್ಮಪ್ಪ ಎಸ್. ದೂರು ನೀಡಿದ್ದು, ಪಿಎಸ್ಐ ನವೀನ್ ನಾಯ್ಕ ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕೆ ಶೋಧ ನಡೆಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat



ಮುಂಡಗೋಡ: ಪೊಲೀಸ್ ಠಾಣೆಯ ನೂತನ ಸಿಪಿಐ ರಮೇಶ ಹಾನಪುರ ಮತ್ತು ಪಿಎಸ್ ಐ ಮಂಜುನಾಥ ಗೌಡರ ಅವರನ್ನು ತಾಲೂಕು ಕುರುಬ ಸಮಾಜದ ವತಿಯಿಂದ ಬುಧವಾರ ಸನ್ಮಾನಿಸಲಾಯಿತು. ಸಮಾಜದ ತಾಲೂಕು ಅಧ್ಯಕ್ಷ ಶಿವಾನಂದ ಕುರುಬರ, ರಾಜು ಗುಬ್ಬಕ್ಕನವರ, ಎಸ್.ಎಸ್.ಪಾಟೀಲ, ಮಂಜು ಕೋಣನಕೇರಿ, ಪೀರಜ್ಜ ಸಾಗರ, ಯಲ್ಲಪ್ಪ ಕುರುಬರ, ಬಸವರಾಜ ಟನಕೇದಾರ, ಪ್ರವೀಣ ಹುಲಗೂರ, ಮಂಜು ಕುರ್ತಕೋಟಿ, ರವಿ ಮಲ್ಲೂರ ಉಪಸ್ಥಿತರಿದ್ದರು.

ಅತಿಕ್ರಮಣ ಅಂಗಡಿಗಳ ತೆರವಿಗೆ ಆಗ್ರಹ

ಗೋಕರ್ಣ: ಇಲ್ಲಿನ ಪ್ರಮುಖ ರಸ್ತೆಗಳ ಚರಂಡಿ ಆಕ್ರಮಿಸಿ ಅಂಗಡಿ ಮುಂಗಟ್ಟುಗಳು ಮುಂದೆ ತಂದಿರುವುದು ಒಂದೆಡೆಯಾದರೆ ಇನ್ನೊಂದೆಡೆ ರಸ್ತೆ ಮೇಲೆ ಕುಳಿತು ವ್ಯಾಪಾರ ನಡೆಸುತ್ತಿದ್ದು, ಇವೆಲ್ಲವನ್ನ ತೆರವುಗೊಳಿಸುವುದು ಯಾವ ಇಲಾಖೆ ಎಂಬದನ್ನ ಗ್ರಾಪಂ ಅಧಿಕಾರಿ ಸ್ಪಷ್ಟನೆ ನೀಡುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಇಕ್ಕಟ್ಟಾದ ರಸ್ತೆಯಲ್ಲಿ ಅಂಗಡಿ ಮುಂಗಟ್ಟು ರಸ್ತೆ ಆವರಿಸಿರುವುದರಿಂದ ಸಂಚಾರ ದಟ್ಟಣೆ ಉಂಟಾಗಿ ಸಂಚಾರಕ್ಕೆ ತೊಡಕಾಗುತ್ತಿದೆ. ಪಾದಾಚಾರಿಗಳು ನಡೆದು ಹೋಗಲು ತೊಂದರೆಯಾಗುತ್ತಿದೆ. ಸಮಸ್ಯೆ ವಿವರಿಸಿದಾಗ ಗ್ರಾಪಂ ಅಭಿವೃದ್ಧಿ ಅಧಿಕಾರಿ ಪ್ರತಿಕ್ರಿಯಿಸಿ, ಆಯಾ ರಸ್ತೆ ನಿರ್ವಹಣೆ ಮಾಡುವ ಇಲಾಖೆಯೇ ಅಕ್ರಮ ತೆರವು ಮಾಡಬೇಕು ಗ್ರಾಮ ಪಂಚಾಯತಕ್ಕೆ ಸಂಬಂಧವಿಲ್ಲ ಎಂದಿದ್ದರು. ಇದರಿಂದ ಮಾರ್ಗಗಳ ಅತಿಕ್ರಮಿಸಿ ವಹಿವಾಟು ನಡೆಸುವುದು ಮುಂದುವರಿದೆ. ತಕ್ಷಣ ಈ ಬಗ್ಗೆ ಇದೇ ಅಧಿಕಾರಿಯವರು ಯಾವ, ಯಾವ ರಸ್ತೆ ಯಾವ ಇಲಾಖೆಗೆ ಬರುತ್ತದೆ ಎಂಬುದನ್ನ ತಿಳಿಸಬೇಕಿದ್ದು, ನಂತರ ಜನರು ಆಯಾ ಇಲಾಖೆಗೆ ಮನವಿ ಸಲ್ಲಿಸಲು ಸಜ್ಜಾಗಿದ್ದಾರೆ.

ಸಂಗಮ ನಾಲಾ ಸೇತುವೆಯ ಮೇಲೆ ಅಂಗಡಿಗಳ ಸಾಲು: ಮುಖ್ಯ ಕಡಲತೀರಕ್ಕೆ ಸಾಗುವ ಮಾರ್ಗದ ಸಂಗಮನಾಲಾದ ಸೇತುವೆಯ ಮೇಲೆ ಪೇಡೆ, ಮಸಾಲೆ ಮತ್ತಿತರ ಅಂಗಡಿಗಳು ಹಾಕಲಾಗಿದ್ದು, ಕಳೆದ ಎರಡು ದಿನಗಳಿಂದ ಮತ್ತಷ್ಟು ಹೆಚ್ಚಾಗಿದೆ. ರಸ್ತೆಯ ಮೇಲೆ ಕಲ್ಲು, ಖಾಲಿ ಡಬ್ಬಿ ಮತ್ತಿತರ ವಸ್ತುಗಳನ್ನ ಇಟ್ಟು ಹಗ್ಗ ಕಟ್ಟುತ್ತಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ.



ಗೋಕರ್ಣ: ಮುಖ್ಯ ಕಡಲತೀರಕ್ಕೆ ಸಾಗುವ ಮಾರ್ಗದ ಸಂಗಮನಾಲಾದ ಸೇತುವೆಯ ಮೇಲೆ ಪೇಡೆ, ಮಸಾಲೆ ಮತ್ತಿತರ ಅಂಗಡಿಗಳು ಹಾಕಲಾಗಿದ್ದು, ಕಳೆದ ಎರಡು ದಿನಗಳಿಂದ ಮತ್ತಷ್ಟು ಹೆಚ್ಚಾಗಿದೆ. ರಸ್ತೆಯ ಮೇಲೆ ಕಲ್ಲು, ಖಾಲಿ ಡಬ್ಬಿ ಮತ್ತಿತರ ವಸ್ತುಗಳನ್ನ ಇಟ್ಟು ಹಗ್ಗ ಕಟ್ಟುತ್ತಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವ ದೃಶ್ಯ

ಕಿರುಸುದ್ದಿ

ಮೇ 24ರಂದು ನಾಮಧಾರಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಅಂಕೋಲಾ: ರಾಷ್ಟ್ರೀಯ ಈಡಿಗ ಮಹಾಮಂಡಳಿ ಅಂಕೋಲಾ ಹಾಗೂ ಶ್ರೀ ನಾರಾಯಣಗುರು ವೇದಿಕೆ ಅಂಕೋಲಾ ಇವರ ಆಶ್ರಯದಲ್ಲಿ ಮೇ 24ರಂದು ಭಾನುವಾರ 3 ಗಂಟೆಗೆ ಪಟ್ಟಣದ ಪಿ.ಎಂ. ಹೈಸ್ಕೂಲ್ ರೈತಭವನದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

ರಾಷ್ಟ್ರೀಯ ಈಡಿಗ ಮಹಾಮಂಡಳಿ ಅಂಕೋಲಾ ಹಾಗೂ ಶ್ರೀ ನಾರಾಯಣಗುರು ವೇದಿಕೆ ಅಂಕೋಲಾ ಇವರ ಆಶ್ರಯದಲ್ಲಿ ಪ್ರತಿಭಾ ಪುರಸ್ಕಾರ

ಎಸ್‌ಎಸ್‌ಎಲ್‌ಸಿ: ನೇಸರ ರಾಜೇಶ ನಾಯ್ಕ ಶೇ.97.12, ಸ್ವೀಕಾರ ಅರುಣ ನಾಯ್ಕ ಶೇ.97.6, ಭೂಮಿಕಾ ನಿರಂಜನ್ ನಾಯ್ಕ ಶೇ. 96.48, ಪ್ರೀತಿ ಮಾರುತಿ ನಾಯ್ಕ ಶೇ. 95.68, ಸಿಂಚನಾ ಸತೀಶ ನಾಯ್ಕ ಶೇ.93.6, ಸ್ವಾತಿ ಈಶ್ವರ ನಾಯ್ಕ ಶೇ.93.6, ನಿಹಾರ ರಾಜೇಶ ನಾಯ್ಕ ಶೇ. 92.64, ತನಯ್ ರವೀಂದ್ರ ನಾಯ್ಕ ಶೇ.92.48, ಶ್ರೇಯಾ ಮನೋಜ ನಾಯ್ಕ ಶೇ. 90.8, ಮಾನ್ಸಿ ರಾಮಚಂದ್ರ ನಾಯ್ಕ ಶೇ.88.96, ಶಿವಾನಿ ರವಿ ನಾಯ್ಕ ಶೇ. 86.24 ಅಂಕ ಪಡೆದಿದ್ದಾರೆ.

ಪಿಯುಸಿ: ಅಮೂಲ್ಯ ಉದಯ ನಾಯ್ಕ ಶೇ. 94.83, ಸಿಂಚನಾ ಪ್ರಕಾಶ ನಾಯ್ಕ ಶೇ.93.33, ಸ್ಮಿತಾ ಉದಯ ನಾಯ್ಕ ಶೇ. 93.17, ಐಶ್ವರ್ಯ ಪ್ರಕಾಶ ನಾಯ್ಕ ಶೇ. 92.83, ರಜತ ಗೋವಿಂದ ನಾಯ್ಕ ಶೇ. 92, ಎ.ಜೆ. ಸ್ಪಂದನ ಶೇ. 91.83, ನಂದನ ಉದಯ ನಾಯ್ಕ ಶೇ. 91, ಸರ್ವೇಶ ಮಹಾಬಲೇಶ್ವರ ನಾಯ್ಕ ಶೇ. 90.33, ಕವನ ಮಹಾಬಲೇಶ್ವರ ನಾಯ್ಕ ಶೇ. 90, ಆದಿತ್ಯ ಮಂಜುನಾಥ ನಾಯ್ಕ ಶೇ. 88.33 ಅಂಕಪಡೆದಿದ್ದು ಇವರಿಗೆ ಪ್ರತಿಭಾ ಪುರಸ್ಕಾರ ನಡೆಯಲಿದೆ.

24ರಂದು ಹಳೆ ವಿದ್ಯಾರ್ಥಿಗಳ ಸಂಪರ್ಕ ಅಭಿಯಾನಕ್ಕೆ ಚಾಲನೆ

ಹೊನ್ನಾವರ: ಶತಮಾನವನ್ನು ಪೂರೈಸಿರುವ ತಾಲೂಕಿನ ಮಾಳ್ಕೋಡ-ಕೆಳಗಿನ ಇಡಗುಂಜಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳೆ ವಿದ್ಯಾರ್ಥಿಗಳ ಸಂಪರ್ಕ ಅಭಿಯಾನದ ಉದ್ಘಾಟನೆ ಮೇ.24 ರಂದು ಮಧ್ಯಾಹ್ನ 4 ಗಂಟೆಗೆ ಮಾಳ್ಕೋಡಿನ ಮಂಕಿಮನೆ ಮಹಾಬಲ ಹೆಗಡೆರ ಮನೆಯಂಗಳಳದಲ್ಲಿ ನಡೆಯಲಿದೆ.

ಸಂಪರ್ಕ ಅಭಿಯಾನವನ್ನು ವಿವಿಧ ಗಣ್ಯರ ಉಪಸ್ಥಿತಿಯಲ್ಲಿ ಉಜಿರೆ ಎಸ್.ಡಿ.ಎಂ ಕಾಲೇಜಿನ ನಿವೃತ ಮುಖ್ಯ ಪ್ರಾಧ್ಯಾಪಕ ಭಾಸ್ಕರ ಹೆಗಡೆ ಚಾಲನೆ ನೀಡಲಿದ್ದಾರೆ.ಶತಮಾನೋತ್ಸವ ಸಮಿತಿಯ ಅಧ್ಯಕ್ಷ ನಾಗರಾಜ ನಾಯ್ಕ ಮಾಳ್ಕೋಡ ಅಧ್ಯಕ್ಷತೆ ವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಎಸ್.ಡಿ.ಎಂ.ಸಿ ಹಾಗೂ ಶತಮಾನೋತ್ಸವ ಸಮಿತಿ ಮತ್ತು ಹಳೆ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳು ಭಾಗವಹಿಸುವರು.

ಈ ಸಂದರ್ಭದಲ್ಲಿ ಶಾಲೆಯ ಪೂರ್ವ ವಿದ್ಯಾರ್ಥಿಗಳು, ಪಾಲಕರು ಹಾಗೂ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಎಸ್.ಡಿ.ಎಂ.ಸಿ ಅಧ್ಯಕ್ಷ ರಾಜೇಶ ಎಂ.ಶೆಟ್ಟಿ ಹಾಗೂ ಶಾಲಾ ಶತಮಾನೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಸುರೇಶ ಜಿ.ಹೆಗಡೆ ಪ್ರಕಟಣೆಯಲ್ಲಿ ಕೋರಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	62099	68899
ಬಿಳಿಗೋಟು	21999	35899
ಕೆಂಪುಗೋಟು	26019	37699
ಬೆಟ್ಟೆ	42309	50099
ರಾಶಿ	50000	52999
ಚಾಲಿ	43600	47191

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	58821	58821
ರಾಶಿ	50000	57609
ಬೆಟ್ಟೆ	37506	50199
ಕೆಂಪುಗೋಟು	17369	37569
ಬಿಳಿಗೋಟು	17612	36969
ಚಾಲಿ	37369	47599
ಕೋಕಾ	12900	35969
ಕಾಳುಮೆಣಸು	51649	68869

ಆರೋಗ್ಯ ರಕ್ಷಾ ಸಮಿತಿಯ ಸಭೆ | ಶಾಸಕ ಸತೀಶ ಸೈಲ್ ಸೂಚನೆ

ಜನಸಾಮಾನ್ಯರಿಗೆ ಔಷಧಿ ಕೊರತೆಯಾಗದಿರಲಿ

ಅಂಕೋಲಾ: ತಾಲೂಕು ಆಸ್ಪತ್ರೆಯಲ್ಲಿ ಔಷಧಿಗಳ ನಿರ್ವಹಣೆಗೆ ಸಂಬಂಧಿಸಿದಂತೆ ಸರಿಯಾದ ದಾಖಲೆಗಳನ್ನು ಇಟ್ಟು ಜನಸಾಮಾನ್ಯರಿಗೆ ಯಾವುದೇ ರೀತಿಯ ಔಷಧಿ ಕೊರತೆ ಆಗದಂತೆ ಗಮನಹರಿಸಿ ಎಂದು ಕಾರವಾರ ಅಂಕೋಲಾ ಶಾಸಕ ಸತೀಶ ಸೈಲ್ ಹೇಳಿದರು.

ತಾಲೂಕು ಆಸ್ಪತ್ರೆಯಲ್ಲಿ ಮೇಲ್ದರ್ಜೆಯ ಪ್ರಯೋಗಾಲಯ ಉದ್ಘಾಟಿಸಿ ಆರೋಗ್ಯ ರಕ್ಷಾ ಸಮಿತಿಯ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜನಸಾಮಾನ್ಯರ ಆರೋಗ್ಯ ಸೇವೆಗಾಗಿ ಇರುವ ಆಸ್ಪತ್ರೆಯ ವಿಷಯದಲ್ಲಿ ಯಾವುದೇ ರೀತಿಯ ಸಮಸ್ಯೆ ಇದ್ದರೆ ಕೂಡಲೇ ತಮ್ಮ ಗಮನಕ್ಕೆ ತರುವಂತೆ ಆಡಳಿತ ವೈದ್ಯಾಧಿಕಾರಿಗಳಿಗೆ ಸೂಚಿಸಿದರು.

ತಾಲೂಕು ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ಕೊರತೆ ಕುರಿತಂತೆ ಸಭೆಯಲ್ಲಿ ಪ್ರಮುಖವಾಗಿ ಚರ್ಚೆ ನಡೆಯಿತು, ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞ ವೈದ್ಯರು ಇಲ್ಲದೇ ಬಡವರಿಗೆ ತುಂಬಾ ಕಷ್ಟವಾಗಿದೆ ಎಂದು ಸಮಿತಿಯ ಸದಸ್ಯರು ಸಭೆಯ ಗಮನಕ್ಕೆ ತಂದರು.

ಅರವಳಿಕೆ ತಜ್ಞರು, ಮೂಳೆ ತಜ್ಞರು, ನೇತ್ರ ತಜ್ಞ ವೈದ್ಯರ ಅಗತ್ಯತೆ ಇದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ತಾಲೂಕು ಆಸ್ಪತ್ರೆಯ ಇಬ್ಬರು ನರ್ಸ್ ಗಳನ್ನು ಕುಮಟಾದಲ್ಲಿ ಟ್ರಾಮಾ ಸೆಂಟರ್ ಕರ್ತವ್ಯಕ್ಕೆ ನಿಯೋಜಿಸಲಾಗಿದ್ದು ಅಲ್ಲಿ ಟ್ರಾಮಾ ಸೆಂಟರ್ ಆಗದೇ ಇರುವುದರಿಂದ ಅವರು ಅಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ಮಾಡುವಂತಾಗಿದೆ ಅವರನ್ನು ಮರಳಿ ಅಂಕೋಲಾ ಆಸ್ಪತ್ರೆಯ ಸೇವೆಗೆ ಅವಕಾಶ ಕಲ್ಪಿಸುವಂತೆ ವೈದ್ಯಾಧಿಕಾರಿಗಳು ಶಾಸಕರಲ್ಲಿ ಕೋರಿದರು,

ಈ ಕುರಿತು ಜಿಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ ಚರ್ಚಿಸಿದ ಶಾಸಕ ಸೈಲ್ ಇಬ್ಬರನ್ನು ಅಂಕೋಲಾ ಆಸ್ಪತ್ರೆಯ ಸೇವೆಗೆ ಮರುಕಳಿಸುವಂತೆ ತಿಳಿಸಿದರು.



- ತಾಲೂಕು ಆಸ್ಪತ್ರೆಯಲ್ಲಿ ಮೇಲ್ದರ್ಜೆಯ ಪ್ರಯೋಗಾಲಯ ಉದ್ಘಾಟನೆ
- ತಾಲೂಕು ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ಕೊರತೆ ಕುರಿತಂತೆ ಸಭೆಯಲ್ಲಿ ಪ್ರಮುಖವಾಗಿ ಚರ್ಚೆ ನಡೆಯಿತು.

ಆಸ್ಪತ್ರೆಯಲ್ಲಿ ಡಯಾಲಿಸಿಸ್ ರೋಗಿಗಳಿಗಾಗಿ ಇರುವ ಕಾಯುವ ಕೊಠಡಿ ಮೇಲ್ಚಾವಣಿ ಮಳೆ ನೀರು ಸುರಿಯುವಂತಿದೆ ಎಂದು ಪುರಸಭೆ ಮಾಜಿ ಸದಸ್ಯ ಜಯಪ್ರಕಾಶ ನಾಯ್ಕ ಶಾಸಕರ ಗಮನಕ್ಕೆ ತಂದಿದ್ದು ಮೇಲ್ಚಾವಣಿಯನ್ನು ಸುಸಜ್ಜಿತವಾಗಿಸಲು ತಗಲುವ ವೆಚ್ಚದ ಕುರಿತಂತೆ ತಮಗೆ ವರದಿ ನೀಡುವಂತೆ ಶಾಸಕ ಸೈಲ್ ಸೂಚಿಸಿದರು.

ಅಂಕೋಲಾ ತಾಲೂಕು ಆಸ್ಪತ್ರೆಯಲ್ಲಿ ಹೊರ ರೋಗಿಗಳ ನೋಂದಣಿ ಶುಲ್ಕ 5 ರೂಪಾಯಿ ತೆಗೆದುಕೊಳ್ಳಲಾಗುತ್ತಿದ್ದು ಉಳಿದ ಕಡೆ ಇರುವಂತೆ ಅದನ್ನು 10 ರೂಪಾಯಿಗಳಿಗೆ ಏರಿಸುವ ಕುರಿತು ಶಾಸಕರಲ್ಲಿ ಆಡಳಿತಾಧಿಕಾರಿಗಳು ಮನವಿ ಮಾಡಿದ್ದು ಸದ್ಯ ಯಾವುದೇ ರೀತಿಯ ಶುಲ್ಕ ಏರಿಕೆ ಬೇಡ ಎಂದು ಶಾಸಕರು ತಿಳಿಸಿದರು.

ಅಂಕೋಲಾ ತಾಲೂಕು ಆಸ್ಪತ್ರೆಯಲ್ಲಿ ರೋಗಿಯೊಬ್ಬರ ಶಸ್ತ್ರ ಚಿಕಿತ್ಸೆಗೆ ವೈದ್ಯರೊಬ್ಬರು 11 ಸಾವಿರ ರೂಪಾಯಿ ಹಣ ಬೇಡಿಕೆಯಿಟ್ಟ ಕುರಿತಂತೆ ಸಭೆಯಲ್ಲಿ ದೂರು ಕೇಳಿ ಬಂತು, ಮುಂದಿನ ದಿನಗಳಲ್ಲಿ ಇಂಥ ದೂರುಗಳಿಗೆ ಅವಕಾಶ ಇರಬಾರದು ಎಂದು ಶಾಸಕ ಸತೀಶ ಸೈಲ್ ಹೇಳಿದರು.

ಆಡಳಿತಾಧಿಕಾರಿ ಹಾಗೂ ವೈದ್ಯಾಧಿಕಾರಿ ಡಾ.ಜಗದೀಶ ನಾಯ್ಕ,ತಾಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ರಾಮುಗುನಗಿ, ಪುರಸಭೆ ಮುಖ್ಯಾಧಿಕಾರಿ ಏಸು ಬೆಂಗಳೂರು, ಪೊಲೀಸ್ ನಿರೀಕ್ಷಕ ಚಂದ್ರಶೇಖರ ಮಠಪತಿ, ವೈದ್ಯಾಧಿಕಾರಿ ಡಾ.ಅನುಪಮಾ ನಾಯ್ಕ, ಡಾ.ಶರದ ನಾಯಕ, ಗ್ಯಾರಂಟಿ ಯೋಜನೆ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಪಾಂಡುರಂಗ ಗೌಡ ಪ್ರಮುಖರುಗಳಾದ ಸುಜಾತ ಗಾಂವಕರ, ಮಂಜೇಶ್ವರ ನಾಯಕ ಮತ್ತಿತರರು ಉಪಸ್ಥಿತರಿದ್ದರು.

ಗ್ರಾಮ ದೇವರುಗಳ ಬಂಡಿಹಬ್ಬ ಸಂಪನ್ನ

ಅಂಕೋಲಾ: ತಾಲೂಕಿನ ಹೊನ್ನೆಬೈಲ್ ಗ್ರಾಮದ ಗ್ರಾಮ ದೇವರುಗಳ ಬಂಡಿಹಬ್ಬ ಮೂರು ಕಳಸಗಳ ಮೆರವಣಿಗೆಯೊಂದಿಗೆ ಗ್ರಾಮ ದೇವರುಗಳಿಗೆ ಹರಕೆಗಳನ್ನು ಸಲ್ಲಿಸುವ ಮೂಲಕ ಸಂಪನ್ನಗೊಂಡಿತು.

ತಾಲೂಕಿನ ವೈಶಿಷ್ಟ್ಯಪೂರ್ಣ ಬಂಡಿಹಬ್ಬಗಳಲ್ಲಿ ಒಂದಾಗಿರುವ ಹೊನ್ನೆಬೈಲ್ ಬಂಡಿಹಬ್ಬದಲ್ಲಿ ಶ್ರೀಬೊಮ್ಮಯ್ಯ ದೇವರು, ಶ್ರೀಕುಸ್ಲೆ ದೇವರು ಮತ್ತು ಮಾಣಿಬೀರ ದೇವರುಗಳ ಕಳಸಗಳು ಭಂಡಾರ ದೇವಾಲಯದಿಂದ ಕುಸ್ಲೆ ದೇವಾಲಯಕ್ಕೆ ಸುಮಾರು ಎರಡು ಕಿಲೋಮೀಟರುಗಳಿಗಿಂತ ಹೆಚ್ಚು ದೂರ ಕ್ರಮಿಸಿ ಭಕ್ತಾದಿಗಳಿಂದ ಪೂಜೆ ಸ್ವೀಕರಿಸಿದವು.

ಸಾಂಪ್ರದಾಯಿಕ ಪಂಚವಾದ್ಯ, ಛತ್ರ, ಚಾಮರ, ಪತಾಕೆಗಳೊಂದಿಗೆ ಓಡುತ್ತಲೇ ಸಾಗುವ ಕಳಸಗಳ ದರ್ಶನ ಪಡೆಯಲು ಭಂಡಾರ ದೇವಾಲಯ ಮತ್ತು ಕುಸ್ಲೆ ದೇವಾಲಯಗಳ ಬಳಿ ಸಾವಿರಾರು ಜನ ಭಕ್ತರು ಜಮಾಯಿಸಿದ್ದರು.

ಸಾಮಾನ್ಯವಾಗಿ ಕೃಷಿಕರು, ಮೀನುಗಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವ ಹೊನ್ನೆಬೈಲ್ ಗ್ರಾಮದಲ್ಲಿ ಬಂಡಿಹಬ್ಬದಲ್ಲಿ ಮುಂದಿನ ಸಾಲಿನಲ್ಲಿ ಉತ್ತಮ ಮಳೆ,ಬೆಳೆ,ಸಮೃದ್ಧಿಗಾಗಿ ಪ್ರಾರ್ಥಿಸಿ ದೇವರುಗಳ ವಿಶೇಷ ಪೂಜೆ ಸಲ್ಲಿಸಲಾಯಿತು.

ಹೊನ್ನೆಬೈಲ್ ದೇವಾಲಯಗಳ ಟ್ರಸ್ಟಿನ ಅಧ್ಯಕ್ಷ ಹನುಮಂತ ಗೌಡ ಅವರು ಈ ಸಂದರ್ಭದಲ್ಲಿ ಮಾತನಾಡಿ ಹೊನ್ನೆಬೈಲ್ ಗ್ರಾಮ ದೇವರುಗಳ ಬಂಡಿಹಬ್ಬಕ್ಕೆ ಸುಮಾರು ಐದು ನೂರು ವರ್ಷಗಳಿಗಿಂತ ಹೆಚ್ಚಿನ ಇತಿಹಾಸವಿದ್ದು ತಮ್ಮ ಪ್ರತಿ ಕೆಲಸ ಕಾರ್ಯಗಳನ್ನು ಗ್ರಾಮದೇವರುಗಳ ಸೂಚನೆಯಂತೆ ನಡೆಸುವ ಈ ಭಾಗದ ಜನರು ಪ್ರತಿವರ್ಷ ಬಂಡಿಹಬ್ಬದಲ್ಲಿ ಪಾಲ್ಗೊಂಡು ತಮ್ಮ ಹರಕೆಗಳನ್ನು ಸಲ್ಲಿಸುತ್ತಾರೆ ಎಂದರು.

ದೇವರ ಗುನಗರು, ಕಟಗಿದಾರರು, ಊರ ಗೌಡರು, ಅರ್ಚಕರು, ವಿವಿಧ ದೇವಾವಯಗಳ ಪ್ರಮುಖರು, ಭಕ್ತಾಧಿಗಳು ಪಾಲ್ಗೊಂಡಿದ್ದರು.

ಹೊನ್ನೆಬೈಲ್ ಬಂಡಿಹಬ್ಬದೊಂದಿಗೆ ತಾಲೂಕಿನ ಬಹುತೇಕ ಎಲ್ಲ ಗ್ರಾಮಗಳ ಬಂಡಿಹಬ್ಬದ ಈ ವರ್ಷದ ಆಚರಣೆ ಮುಗಿದಿದೆ.



ವಿವಿಧ ಗ್ರಾಪಂಗಳಿಗೆ ಜಿಪಂ ಸಿಇಒ ಭೇಟಿ

ಮುಂಡಗೋಡ: ಜಿಪಂ ಸಿಇಒ ಡಾ. ದಿಲೀಷ್ ಶಶಿ ರವರು ಗುರುವಾರ ತಾಲೂಕಿನಲ್ಲಿ ವಿವಿಧ ಗ್ರಾಮ ಪಂಚಾಯತ, ಸರ್ಕಾರಿ ಕಟ್ಟಡ ಹಾಗೂ ಕಾಮಗಾರಿ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ತಾಲೂಕಿನ ಮಳಗಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಸ್ಮಶಾನಕಟ್ಟೆ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳ ಪರಿಶೀಲಿಸಿ, ಕೂಲಿಕಾರರೊಂದಿಗೆ ಸಂವಾದ ನಡೆಸಿದರು. ಸ್ಥಳೀಯವಾಗಿ ಖಾಸಗಿ ಕೆಲಸಗಳಲ್ಲಿ ನರೇಗಾ ಯೋಜನೆಗಿಂತಲೂ ಕೂಲಿ ದರ ಹೆಚ್ಚಿದ್ದು, ಯೋಜನೆಯಡಿ ಕೂಲಿ ದರವನ್ನು ಇನ್ನೂ ಹೆಚ್ಚಿಸಬೇಕು ಮತ್ತು ಬೇಸಿಗೆಯಲ್ಲಿ ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ನೀಡಬೇಕೆಂಬ ಕೂಲಿಕಾರರ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಆಯುಕ್ತಾಲಯದ ಗಮನಕ್ಕೆ ತರುವುದಾಗಿ ತಿಳಿಸಿದರು.

ಬಳಿಕ ಮಳಗಿ ಹಾಗೂ ಪಾಳಾ ಗ್ರಾಮ ಪಂಚಾಯತಿ ಕಛೇರಿಗಳಿಗೆ ಭೇಟಿ ನೀಡಿ, ವಿವಿಧ ಯೋಜನೆಗಳ ಪ್ರಗತಿ ಮತ್ತು ಪ್ರಮುಖ ಕಡತಗಳನ್ನು ಪರಿಶೀಲಿಸಿ, ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಇದೇ ವೇಳೆ ಗ್ರಂಥಾಲಯ, ಕೂಸಿನ ಮನೆಗಳನ್ನು ಪರಿವೀಕ್ಷಣೆ ಮಾಡಿದರು.

ಪಾಳಾ ಐಟಿಐ ಕಾಲೇಜಿಗೆ ಭೇಟಿ ನೀಡಿ, ಆಡಳಿತ ಕಛೇರಿ, ಲ್ಯಾಬ್, ಬೋಧನಾ ಕೊಠಡಿ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿದರು. ತದನಂತರ ಇಂದೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಕೊಪ್ಪ ಗ್ರಾಮದಲ್ಲಿ ಬೂದು ನೀರು ನಿರ್ವಹಣೆಗಾಗಿ ಸಮುದಾಯ ಮಟ್ಟದಲ್ಲಿ ಚರಂಡಿಯಲ್ಲಿ ನೀರು ಸಂಸ್ಕರಣಾ ಘಟಕ ವೀಕ್ಷಣೆ ಮಾಡಿ, ಉತ್ತಮ ರೀತಿಯಲ್ಲಿ ನಿರ್ವಹಿಸುವಂತೆ ಸೂಚನೆ ನೀಡಿದರು.

ತಾಲೂಕು ಪಂಚಾಯತಿಯ ಇಒ ಟಿ.ವಾಯ್. ದಾಸನಕೊಪ್ಪ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಅಭಿಯಂತರರಾದ ದೀಪಾ ಎಸ್ ಶೆಡಗೇರಿ, ಕಿರಿಯ ಅಭಿಯಂತರ ಪ್ರದೀಪ್ ಭಟ್, ಗ್ರಾಪಂ ಪಿಡಿಒ ಉಪಸ್ಥಿತರಿದ್ದರು.




ಪ್ರಿಪೇಡ್ ಮೀಟರ್ ಅವ್ಯವಸ್ಥೆ: ರೀಚಾರ್ಜ್ ಆದರೂ ಕರೆಂಟ್ ಇಲ್ಲ!

ಯಲ್ಲಾಪುರ: ತಾಲೂಕಿನ ಮಾವಿನಕಟ್ಟಾ ಗ್ರಾಮದ ಶ್ರೀಕಾಂತ್ ವಿ .ನಾಯ್ಕ್ ಅವರ ಬಟ್ಟೆ ಅಂಗಡಿಯಲ್ಲಿ ಅಳವಡಿಸಿರುವ ಪ್ರಿಪೇಡ್ ಮೀಟರ್ ಗೆ ಮೇ 19ರಂದು 500ರೂ. ರೀಚಾರ್ಜ್ ಮಾಡಿದ್ದರೂ ಇಂದಿಗೂ ವಿದ್ಯುತ್ ಸಂಪರ್ಕ ಕಲ್ಪಿಸಿಲ್ಲ ಎಂದು ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು 1912 ಸಹಾಯವಾಣಿ ಸಂಖ್ಯೆಗೂ ಕರೆ ಮಾಡಲಾಗಿದೆ. ಯಲ್ಲಾಪುರ ಸೆಕ್ಷನ್ ಆಫೀಸರ್, ಹೆಸ್ಕಾಂ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಸಿಬ್ಬಂದಿಗೆ ಅನೇಕ ಬಾರಿ ಕರೆ ಮಾಡಿದರೂ ಸರಿಯಾದ ಸ್ಪಂದನೆ ಸಿಕ್ಕಿಲ್ಲ ಎಂದು ಅವರು ದೂರಿದ್ದಾರೆ. ಹಣವನ್ನು ತಕ್ಷಣ ಪಡೆದುಕೊಳ್ಳುತ್ತಾರೆ. ಆದರೆ ಸಾರ್ವಜನಿಕರಿಗೆ ಅಗತ್ಯವಾದ ವಿದ್ಯುತ್ ಸಂಪರ್ಕ ನೀಡಲು ದಿನಗಳ ಕಾಲ ಕಾಯಿಸುತ್ತಿದ್ದಾರೆ. ಅಂಗಡಿ ವ್ಯಾಪಾರ ಸಂಪೂರ್ಣವಾಗಿ ಹಾಳಾಗುತ್ತಿದೆ. ಕುಟುಂಬ ಹಾಗೂ ದಿನನಿತ್ಯದ ಜೀವನಕ್ಕೂ ದೊಡ್ಡ ತೊಂದರೆ ಆಗುತ್ತಿದೆ ಎಂದು ಶ್ರೀಕಾಂತ್ ವಿ. ನಾಯ್ಕ್ ತಮ್ಮ ಅಳಲು ತೋಡಿಕೊಂಡಿದ್ದಾರೆ.



ಮಳೆ, ಗಾಳಿಹಾಗೂ ಗುಡುಗು ನಡುವೆ ಈಗಾಗಲೇ ಗ್ರಾಮೀಣ ಭಾಗದ ಜನರು ಸಂಕಷ್ಟ ಅನುಭವಿಸುತ್ತಿದ್ದು, ಇಂತಹ ಪ್ರಿಪೇಡ್ ಮೀಟರ್ ಸಮಸ್ಯೆಗಳು ಜನರ ಕಷ್ಟವನ್ನು ಇನ್ನಷ್ಟು ಹೆಚ್ಚಿಸುತ್ತಿವೆ. ಸಂಬಂಧಪಟ್ಟ ಹೆಸ್ಕಾಂ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ವಿದ್ಯುತ್ ಸಂಪರ್ಕ ಕಲ್ಪಿಸಿ ಸಾರ್ವಜನಿಕರಿಗೆ ನ್ಯಾಯ ಒದಗಿಸಬೇಕೆಂದು ಅವರು ಮನವಿ ಮಾಡಿದ್ದಾರೆ.



ಡಾ. ಆರ್.ವಿ. ಸರಾಫ್ ನಿಧನಕ್ಕೆ ಕಾನಿಪ ಸಂಘದಿಂದ ಸಂತಾಪ

ಭಟ್ಕಳ: ಅಗಲಿದ ಸಾಹಿತಿ, ಹಿರಿಯ ಪತ್ರಕರ್ತ, ಖ್ಯಾತ ವೈದ್ಯ ಶಿರಾಲಿಯ ಡಾ. ಆರ್.ವಿ. ಸರಾಫ್ ಅವರಿಗೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಸಂತಾಪ ಸೂಚಿಸಲಾಯಿತು.

ಸಂತಾಪ ಸಭೆಯಲ್ಲಿ ಉಪಸ್ಥಿತರಿದ್ದ ಹಿರಿಯ ಪತ್ರಕರ್ತರ ರಾಧಾಕೃಷ್ಣ ಭಟ್ಟ ಅವರು ಮಾತನಾಡಿ, ಆರ್ ವಿ ಸರಾಫ್ ಅವರು ಒಬ್ಬ ವೈದ್ಯರಾಗಿದ್ದರೂ ಕೂಡ ಸಮಾಜಮುಖಿ ಕೆಲಸ ಮಾಡಿದ್ದಾರೆ. ಇವರು ಎಲ್ಲಾ ರಂಗಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡು ಮಾರ್ಗದರ್ಶನ ಮಾಡಿದ್ದರು. ಎಲ್ಲರ ಜತೆ ಉತ್ತಮ ಬಾಂಧವ್ಯ ಹೊಂದಿದ್ದ ಅವರು ಸದಾ ಕ್ರಿಯಾಶೀಲರಾಗಿದ್ದರು. ಪತ್ರಕರ್ತರು ಸೇರಿದಂತೆ ಎಲ್ಲರಿಗೂ ಮಾರ್ಗದರ್ಶಕರಾಗಿದ್ದರು. ಇಂತಹ ಸಮಾಜಮುಖಿ ವ್ಯಕ್ತಿಯನ್ನು ಕಳೆದುಕೊಂಡಿರುವುದು ನೋವು ತಂದಿದೆ ಎಂದರು. ಹಿರಿಯ ಪತ್ರಕರ್ತರಾದ ಸತೀಶಕುಮಾರ ನಾಯ್ಕ, ವಿಷ್ಣು ದೇವಡಿಗ, ರಾಘವೇಂದ್ರ ಹೆಬ್ಬಾರ ಅಗಲಿದ ಆರ್.ವಿ. ಸರಾಫ್‌ರ ಬಗ್ಗೆ ಮಾತನಾಡಿದರು. ಇದೇ ಸಂದರ್ಭದಲ್ಲಿ ಸಂಘದಿಂದ ಈ ಹಿಂದೆ ಅವರಿಗೆ ಗೌರವಿಸಿ ಸನ್ಮಾನಿಸಿದ್ದನ್ನು ಸ್ಮರಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ಮೋಹನ ನಾಯ್ಕ ಮಾತನಾಡಿದರು. ಪತ್ರಕರ್ತ ಈಶ್ವರ ನಾಯ್ಕ ವಂದಿಸಿದರು.



ಯುವತಿ ಕೊಲೆಗೆ ಯತ್ನಿಸಿದ ಮಹಿಳೆ ಪೊಲೀಸ್ ವಶಕ್ಕೆ

ಅಂಕೋಲಾ: ಉದ್ಯೋಗ ನಿಮಿತ್ತ ಬೇರೆ ಊರುಗಳಲ್ಲಿ ನೆಲೆಸಿ ಸಣ್ಣ ಪುಟ್ಟ ಕೆಲಸಗಳಲ್ಲಿ ತೊಡಗಿಕೊಂಡು ಕುಟುಂಬ ನಿರ್ವಹಣೆಗೆ ಸಹಾಯ ಮಾಡುವ ಯುವಜನರ ಪೋಷಕರನ್ನು ಬೆಚ್ಚಿಬೀಳಿಸುವಂತ ಘಟನೆಯೊಂದು ಉಡುಪಿ ಜಿಲ್ಲೆಯ ಮಣಿಪಾಲ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದು ಬಂಗಾರದ ಆಭರಣದ ಮೇಲೆ ಕಣ್ಣಿಟ್ಟು ಯುವತಿಯ ಮೇಲೆ ಸಿಮೆಂಟ್ ಬ್ಲಾಕ್‌ನಿಂದ ಹಲ್ಲೆ ನಡೆಸಿ ಕೊಲೆಯ ಯತ್ನ ನಡೆಸಿದ್ದ ಮಹಿಳೆಯೋರ್ವಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.



ಹಲ್ಲೆಗೊಳಗಾಗಿರುವ ಯುವತಿ ಮತ್ತು ಹಲ್ಲೆ ನಡೆಸಿರುವ ಮಹಿಳೆ ಇಬ್ಬರೂ ಅಂಕೋಲಾ ತಾಲೂಕಿನವರಾಗಿರುವುದು ವಿಶೇಷವಾಗಿದ್ದು ಮಣಿಪಾಲದ ಶಾಂತಿನಗರದಲ್ಲಿ ಅಕ್ಕ ಪಕ್ಕದ ಕೊಠಡಿಗಳಲ್ಲಿ ವಾಸವಾಗಿದ್ದರು.

ಮಣಿಪಾಲದ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅಂಕೋಲಾ ಕೇಣಿ ಮೂಲದ ಸುಷ್ಮಾ ನಾಯ್ಕ(30) ಬಂಧಿತ ಆರೋಪಿಯಾಗಿದ್ದು ಘಟನೆಯ ಕುರಿತಂತೆ ತಾಲೂಕಿನ ಜನತೆ ಮೂಗಿನ ಮೇಲೆ ಬೆರಳಿಡುವಂತಾಗಿದೆ.

ಘಟನೆಯ ವಿವರ: ಅಂಕೋಲಾ ತಾಲೂಕಿನ ಮೂವರು ಸ್ನೇಹಿತೆಯರಾದ ಯೋಗಿತಾ ಯಾನೆ ಯೋಗೇಶ್ವರಿ,ನಾಗರತ್ನಾ ಮತ್ತು ಗಗನಾ ಎನ್ನುವವರು ಮಣಿಪಾಲದ ಕೈಗಾರಿಕಾ ವಲಯದ ಪ್ರೆಸ್ ಒಂದರಲ್ಲಿ ಬೈಂಡಿಂಗ್ ಕೆಲಸ ಮಾಡುತ್ತಿದ್ದು ಶಾಂತಿನಗರ ಬಳಿ ಸುದರ್ಶನ ಕಾಂಪ್ಲೆಕ್ಸ್ ಬಾಡಿಗೆಯ ಕೊಠಡಿಯೊಂದರಲ್ಲಿ ವಾಸವಾಗಿದ್ದರು.

ಮೇ 12ರಂದು ಸಂಜೆ ನಾಗರತ್ನ ಮತ್ತು ಗಗನಾ ರಾತ್ರಿಯ ಕರ್ತವ್ಯದ ಮೇಲೆ ಕೆಲಸಕ್ಕೆ ಹೋಗಿದ್ದು ಯೋಗಿತಾ ಒಬ್ಬಳೇ ರೂಮಿನಲ್ಲಿದ್ದಳು ಮೇ 13ರಂದು ಬೆಳಿಗ್ಗೆ ಮರಳಿ ಬಂದಾಗ ರೂಮಿನ ಬಾಗಿಲು ತೆರೆದ ಸ್ಥಿತಿಯಲ್ಲಿದ್ದು ಒಳಗೆ ಹೋಗಿ ನೋಡಿದಾಗ ಯೋಗಿತಾ ನೆಲದ ಮೇಲೆ ಬಿದ್ದ ಸ್ಥಿತಿಯಲ್ಲಿರುವುದು ಕಂಡು ಬಂದಿದ್ದು ತಲೆಗೆ ಪೆಟ್ಟಾಗಿ ರಕ್ತ ಸುರಿಯುತ್ತಿರುವುದು ಕಂಡಿದೆ.ಪಕ್ಕದಲ್ಲಿ ತುಂಡಾಗಿರುವ ಸಿಮೆಂಟ್ ಕಲ್ಲು ಕಂಡು ಬಂದಿದ್ದು ಅವಳ ಕುತ್ತಿಗೆಯಲ್ಲಿ ಬಂಗಾರದ ಸರ ಇಲ್ಲದಿರುವುದು ಗಮನಕ್ಕೆ ಬಂದಿತ್ತು.

ಪ್ರಜ್ಞಾಹೀನ ಸ್ಥಿತಿಯಲ್ಲಿರುವ ಯೋಗಿತಾಳನ್ನು ಮಣಿಪಾಲದ ಕಸ್ತೂರ್ಬಾ ಆಸ್ಪತ್ರೆಗೆ ದಾಖಲಿಸಿದ ಸ್ನೇಹಿತೆಯರು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಒಡವೆಗಾಗಿ ಕೃತ್ಯ ದೂರಿನನ್ವಯ ತನಿಖೆ ಆರಂಭಿಸಿದ ಪೊಲೀಸರು ಘಟನೆ ನಡೆದ ಪಕ್ಕದ ಕೊಠಡಿಯಲ್ಲಿ ವಾಸವಿದ್ದ ಅಂಕೋಲಾ ಮೂಲದ ಸುಷ್ಮಾ ನಾಯ್ಕ ಎಂಬಾಕೆಯ ವಿಚಾರಣೆ ನಡೆಸಿದ್ದು ಯೋಗಿತಾಳ ಜೊತೆ ಪರಿಚಯ ಇದ್ದ ಆಕೆ ಯೋಗಿತಾಳ ಕಿವಿಯೋಲೆ ಮತ್ತು ಬಂಗಾರದ ಸರದ ಮೇಲೆ ಕಣ್ಣಿಟ್ಟಿದ್ದು ಮೇ 12ರಂದು ಯೋಗಿತಾಳ ಗೆಳತಿಯರು ಉದ್ಯೋಗಕ್ಕೆ ತೆರಳಿದ ನಂತರ ರೂಮಿಗೆ ಬಂದ ಸುಷ್ಮಾ ನಾಯ್ಕ ರಾತ್ರಿ ಯೋಗಿತಾಳ ರೂಮಿನಲ್ಲಿ ಉಳಿದುಕೊಂಡಿದ್ದು ಬೆಳಗಿನ ಜಾವ ನಿದ್ರೆಯಲ್ಲಿದ್ದ ಯೋಗಿತಾಳ ತಲೆಗೆ ಸಿಮೆಂಟ್ ಇಟ್ಟಿಗೆಯಿಂದ ಹೊಡೆದು ಬಂಗಾರದ ಸರವನ್ನು ದೋಚಿದ್ದಳು.

ಆರೋಪಿ ಸುಷ್ಮಾಳನ್ನು ಬಂಧಿಸಿರುವ ಪೊಲೀಸರು ಕಳುವು ಮಾಡಿದ 8 ಗ್ರಾಂ ತೂಕದ ಬಂಗಾರದ ಸರ ವಶಕ್ಕೆ ಪಡೆದುಕೊಂಡಿದ್ದಾರೆ.

ವಿಚ್ಛೇದಿತೆಯಾಗಿರುವ ಆರೋಪಿ ಸುಷ್ಮಾ ನಾಯ್ಕ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದ್ದು ಆಭರಣಗಳ ಕಳ್ಳತನಕ್ಕೆ ಹಲವು ದಿನಗಳಿಂದ ಸಂಚು ನಡೆಸಿದ್ದಳು ಎಂದು ತಿಳಿದು ಬಂದಿದ್ದು ಮಣಿಪಾಲದಲ್ಲಿ ನಡೆದ ಈ ಘಟನೆ ಇದೀಗ ತಾಲೂಕಿನಲ್ಲಿ ಚರ್ಚೆಗೆ ಗ್ರಾಸವಾಗಿದ್ದು ಮನೆಯಿಂದ ದೂರ ಕೆಲಸದಲ್ಲಿದ್ದವರ ಪೋಷಕರು ತಮ್ಮ ಮಕ್ಕಳ ಸುರಕ್ಷತೆಯ ಕುರಿತಂತೆ ಚಿಂತಿಸುವಂತಾಗಿದೆ.

ಮೇ 27ರಂದು ಅಪ್ಪೇಮಿಡಿ ಪ್ರದೇಶ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ

ಸಿದ್ದಾಪುರ: ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯಿಂದ ಮಾರಿಗದ್ದೆ ಸೇತುವೆ ಬಳಿ ಅಘನಾಶಿನಿ ಸಮಿತಿ ಪ್ರಮುಖರ ಸಭೆ ನಡೆಯಿತು.

ಗ್ರಾಮ ಪಂಚಾಯತ ಮಾಜಿ ಅಧ್ಯಕ್ಷೆ ಮಮತಾ ಭಟ್ಟ ಶಮೇಮನೆ ಮಾತನಾಡಿ, ಇತ್ತೀಚೆಗೆ ಆರು ದಿನಗಳ ಕಾಲ ನಡೆದ ಅಪ್ಪೇಮಿಡಿ ಪಾದಯಾತ್ರೆ ನದಿ ಜೀವ ವೈವಿಧ್ಯ ಪಾದಯಾತ್ರೆ ಎನಿಸಿಕೊಂಡಿದೆ. ಪಾದಯಾತ್ರೆಯ ಮಂಗಲದಲ್ಲಿ ಹೊಳೆ ಊಟ ಕಾರ್ಯಕ್ರಮ ಸಹ ಏರ್ಪಡಿಸಿದ್ದು ಒಂದು ವಿಶೇಷ. ಇಂದು ಮಲೆನಾಡಿನ ನದೀ ತೀರಗಳಲ್ಲಿ ಹಳ್ಳಿಗಳ ಜನ ಸೇರಿ ಅಲ್ಲೇ ಅಡಿಗೆ ಮಾಡಿ ಊಟ ಮಾಡುವ ಪದ್ಧತಿ ಮಾಯವಾಗುತ್ತಿದೆ. ಇದು ನಿಸರ್ಗದ ಮಧ್ಯೆ ಮಾನವನ ಒಡನಾಟ ಹೆಚ್ಚಿಸುವ ಕಾರ್ಯಕ್ರಮ ಎಂದು ಅಭಿಪ್ರಾಯಪಟ್ಟರು.

ಸೀಮಾ ಅಧ್ಯಕ್ಷ ಆಯ್.ಎಸ್ .ಭಟ್ಟ ಮಾತನಾಡಿ, ಜನಪ್ರತಿನಿಧಿಗಳು ಬೇಡ್ತಿ-ಅಘನಾಶಿನಿ ನದಿ ತಿರುವು ಯೋಜನೆ ನಿಲ್ಲಿಸಲು ಒತ್ತಡ ಹೇರಬೇಕು ಎಂದರು.



- ಬೇಡ್ತಿ ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿಯಿಂದ ಮಾರಿಗದ್ದೆ ಸೇತುವೆ ಬಳಿ ಅಘನಾಶಿನಿ ಸಮಿತಿ ಪ್ರಮುಖರ ಸಭೆ
- ಜೂನ್ 5ರಿಂದ ನದಿ ತೀರಗಳಲ್ಲಿ ವೃಕ್ಷಾರೋಪಣ.

ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿದ್ದ ವೃಕ್ಷಲಕ್ಷ ಆಂದೋಲನದ ಪ್ರಮುಖ ಅನಂತ ಹೆಗಡೆ ಆಶೀಸರ ಅವರು ಜೂನ್ 5 ರಿಂದ ನದೀ ತೀರಗಳಲ್ಲಿ ವೃಕ್ಷಾರೋಪಣ ಮಾಡುವ ಮೂಲಕ ನದಿ ಉಳಿಸಿ ಚಳವಳಿ ನಡೆಸೋಣ ಎಂದು ಕರೆ ನೀಡಿದರು.

ಸಂಚಾಲಕ ಬಾಲಚಂದ್ರ ಸಾಯಿಮನೆ ಯಲ್ಲಾಪುರದಲ್ಲಿ ಮೇ 27 ರಂದು ನಡೆಯಲಿರುವ ಜೀವವೈವಿಧ್ಯ ಸಮಾರಂಭದಲ್ಲಿ ಅಪ್ಪೇಮಿಡಿ ಸಂರಕ್ಷಿತ ಪ್ರದೇಶ ಪ್ರಸ್ತಾವನೆಯನ್ನು ಅರಣ್ಯ ಇಲಾಖೆಗೆ ಸಲ್ಲಿಸಲಿದ್ದೇವೆ ಎಂದರು.

ಸಂಧ್ಯಾ ಶಾಸ್ತ್ರೀ ಮಾತನಾಡಿ, ನದಿ ಪಾದಯಾತ್ರೆ ಅಧ್ಯಯನಕಾರರಿಗೆ ಅಪಾರ ಅನುಭವ ನೀಡಿದೆ ಎಂದರು.

ನಾಗೇಂದ್ರ ಮುತ್ಮುರ್ಡು ಮಾರಿಗದ್ದೆ ಹೊಳೆಯಲ್ಲಿ ನೀರು ಹರಿಯುವುದು ನಿಂತಿದೆ. ಶಿರಸಿಗೆ ಸಾಗಿಸುವ ನೀರಿನ ಯೋಜನೆಯಿಂದ ಈ ಪರಿಸ್ಥಿತಿ ಬಂದಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸಂಚಾಲಕ ಗೋಪಾಲಕೃಷ್ಣ ತಂಗಾರ್ಮನೆ ಸಿದ್ದಾಪುರ ತಾಲೂಕಿನ ತ್ಯಾಗಲಿ, ಹಾರ್ಸಿಕಟ್ಟಾ, ಹೆಗ್ಗರಣಿ, ಹೇರೂರು, ಕ್ಯಾದಗಿ, ತಟ್ಟೀಕೈ ಮುಂತಾದ ಸ್ಥಳಗಳಲ್ಲಿ ಪರಿಸರ ದಿನಾಚರಣೆ ಜಾಗೃತಿ ಸಭೆಗಳು ನಡೆಯಲಿವೆ ಎಂದು ಪ್ರಕಟಿಸಿದರು.

ವಿ.ಎಮ್.ಹೆಗಡೆ, ಎಸ್.ಆರ್. ಹೆಗಡೆ ಕುಂಬಾರಕುಳಿ, ಸರೋಜಾ ಪ್ರಕಾಶ, ರಘುಪತಿ, ಮಹೇಶ, ಕುಸುಮಾ ಸಾಯಿಮನೆ, ಭಾರ್ಗವ ಶೀಗೇಹಳ್ಳಿ, ಶ್ರೀಪಾದ ಬಕ್ಕೇಮನೆ ಅಪ್ಪೇಮಿಡಿ ಪಾದಯಾತ್ರೆ ಅನುಭವ ಹಂಚಿಕೊಂಡರು.

ಕಿರುಸುದ್ದಿ

ಅನಾರೋಗ್ಯ: ಆತ್ಮಹತ್ಯೆ

ಹಾವೇರಿ: ಹೊಟ್ಟೆ ಹಾಗೂ ಮೊಣಕಾಲು ನೋವಿನಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರು ವಿಷಸೇವಿಸಿ ಅಸ್ವಸ್ಥಗೊಂಡು, ನಂತರ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಿದಾಗ್ಯೂ ಚಿಕಿತ್ಸೆ ಫಲಿಸದೆ ಸಾವನ್ನಪ್ಪಿದ ಘಟನೆ ನಡೆದಿದೆ.

ಹಾವೇರಿ ತಾಲೂಕು ಯಲಗಚ್ಚ ಗ್ರಾಮದ ಗುಡ್ಡಪ್ಪ ನೀಲಪ್ಪ ಯಲ್ಲಣ್ಣನವರ (47) ಎಂಬುವವರೆ ಮೃತರು. ತುಂಬಾ ದಿನಗಳಿಂದ ಮೊಣಕಾಲು ನೋವು ಹಾಗೂ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಇವರು, ಗುತ್ತಲ, ಹೊಸರಿತ್ತಿ, ಹಾವೇರಿ ಹೀಗೆ ಅನೇಕ ಕಡೆಗಳಲ್ಲಿ ತೋರಿಸಿದರೂ ಗುಣಮುಖರಾಗಿರಲಿಲ್ಲ, ಇದನ್ನೆ ಮನಸ್ಸಿಗೆ ಹಚ್ಚಿಕೊಂಡು ಮದ್ಯವ್ಯಸನಕ್ಕೆ ತುತ್ತಾಗಿದ್ದು, ಮನೆಯಲ್ಲಿ ಯಾರೂ ಇಲ್ಲದಿರುವಾಗ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದಾರೆ. ಕೂಡಲೇ ಅವರನ್ನು ಸ್ಥಳೀಯರು ಚಿಕಿತ್ಸೆಗೆಂದು ಹಾವೇರಿ ಜಿಲ್ಲಾಸ್ಪತ್ರೆಗೆ ಕರೆದೊಯ್ದು ದಾಖಲಿಸಿದ್ದಾಗ್ಯೂ, ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತನ ಮಗ ಶಿವರಾಜ ಯಲ್ಲಣ್ಣನವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತ: ಬೈಕ್ ಸವಾರ ಸಾವು

ಹಾವೇರಿ: ಟೂರ್ ಟ್ರಾವೆಲ್ಸ್ ವಾಹನವೊಂದು ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದರಿಂದ ಗಂಭೀರ ಗಾಯಗೊಂಡಿದ್ದ ಬೈಕ್ ಸವಾರ ಉಪಚಾರ ಫಲಿಸದೆ ಸಾನ್ನಪ್ಪಿರುವ ಘಟನೆ ನಡೆದಿದೆ. ತಾಲೂಕಿನ ಗುತ್ತಲ ಪಟ್ಟಣದ ನಿವಾಸಿ ಸಿದ್ಲಿಂಗಪ್ಪ ಕಾಗಿನೆಲ್ಲಿ (26) ಮೃತಪಟ್ಟ ಬೈಕ್ ಸವಾರ. ಈತ ಹರಳಹಳ್ಳಿ ಕಡೆಯಿಂದ ಗುತ್ತಲ ಕಡೆಗೆ ಹೋಗುವಾಗ ಗದಗ ಕಡೆಯಿಂದ ವೇಗವಾಗಿ ಬಂದ ಟಿಟಿ ವಾಹನ ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಶಿದ್ಲಿಂಗಪ್ಪರನ್ನು ಗುತ್ತಲ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ಹೆಚ್ಚಿನ ಚಿಕಿತ್ಸೆಗೆಂದು ಹುಬ್ಬಳ್ಳಿ ಕಿಮ್ಸ್‌ಗೆ ದಾಖಲಿಸಿದ್ದಾಗ ಉಪಚಾರ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತನ ತಂದೆ ಮಲ್ಲಪ್ಪ ಕಾಗಿನೆಲ್ಲಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಗುತ್ತಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸ್ ಹತ್ತುವಾಗ ಮಾಂಗಲ್ಯ ಸರ ಕಳ್ಳತನ

ಹಾವೇರಿ: ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಮಹಿಳಾ ಪ್ರಯಾಣಿಕರೊಬ್ಬರು ಬಸ್ ಹತ್ತುವಾಗ ಬ್ಯಾಗ್‌ನಲ್ಲಿದ್ದ ಮಾಂಗಲ್ಯ ಸರವನ್ನು ಕಳ್ಳರು ಕಳ್ಳತನ ಮಾಡಿರುವ ಘಟನೆ ನಡೆದಿದೆ. ತಾಲೂಕಿನ ಕೋಣನತಂಬಿಗಿ ಗ್ರಾಮದ ನಿರ್ಮಲಾ ಯಲ್ಲಪ್ಪ ಕಳ್ಳಿಮನಿ ಎಂಬುವವರಿಗೆ ಸೇರಿದ ಸುಮಾರು 3.15 ಲಕ್ಷ ರೂ. ಬೆಲೆ ಬಾಳುವ ಮಾಂಗಲ್ಯ ಸರ ಇದಾಗಿದೆ. ಹಾವೇರಿ ಬಸ್ ನಿಲ್ದಾಣದಲ್ಲಿ ಹುಬ್ಬಳ್ಳಿ ಕಡೆಗೆ ಹೋಗುವ ಅಂಕಣದಲ್ಲಿ ನಿಂತಿದ್ದ ಬಸ್‌ನ್ನು ಮಹಿಳಾ ಪ್ರಯಾಣಿಕರು ಹತ್ತುವಾಗ ಕಳ್ಳರು ಈ ಕೃತ್ಯವನ್ನು ಎಸಗಿದ್ದಾರೆ ಎಂದು ಪೊಲೀಸರ ದೂರಿನಲ್ಲಿ ತಿಳಿಸಿದೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಸ್ಕಿಡ್: ಗಾಯಾಳು ಸಾವು

ಹಾವೇರಿ: ರಾಣೇಬೆನ್ನೂರ ತಾಲೂಕು ತುಮ್ಮಿನಕಟ್ಟಿ-ಹಲಗೇರಿ ರಸ್ತೆಯಲ್ಲಿರುವ ಯಲಬಡಗಿ ಕ್ರಾಸ್ ಬಳಿ ಎಕ್ಸೆಲ್ ಬೈಕ್ ಸ್ಕಿಡ್ ಆಗಿ ಬಿದ್ದಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದ ಮಹಿಳೆ ಚಿಕಿತ್ಸೆ ಫಲಿಸದೆ ಮೃತಪಟ್ಟಿರುವ ಘಟನೆ ನಡೆದಿದೆ.ರಾಣೇಬೆನ್ನೂರ ತಾಲೂಕು ಕೋಣನತೇಲಿ ಗ್ರಾಮದ ಶಾಂತವ್ವ ತಿರಕಪ್ಪನವರ ಮೃತ ಮಹಿಳೆಯಾಗಿದ್ದಾರೆ. ಗಂಡ ಚಂದ್ರಪ್ಪ ತಿರಕಪ್ಪನವರ ಜತೆಗೆ ಎಕ್ಸೆಲ್ ಬೈಕ್‌ನಲ್ಲಿ ಹೋಗುವಾಗ ಸ್ಕಿಡ್ ಆಗಿ ಬಿದ್ದಿದ್ದಾರೆ. ಅಪಘಾತದಲ್ಲಿ ಗಾಯಗೊಂಡ ಇಬ್ಬರನ್ನೂ ತಾಲೂಕಾಸ್ಪತ್ರೆಗೆ ದಾಖಲಿಸಿ, ಶಾಂತವ್ವಳನ್ನು ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ದಾಗ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ ಎಂದು ಮೃತರ ಮಗ ಸಂತೋಷ ತಿರಕಪ್ಪನವರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಹಲಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ ಸುದ್ದಿ

ಸುರೇಶ ಫೊಡ್ಕೆ

ರಾಣೇಬೆನ್ನೂರ: ಇಲ್ಲಿಯ ಮಾಗೋಡ ರಸ್ತೆಯ ಶಿವಾಜಿ ನಗರದ ಹಿಂಭಾಗದ ಕೆಎಚ್ ಬಿ ಕಾಲನಿ ನಿವಾಸಿ, ಶಿಕ್ಷಣ ಇಲಾಖೆಯ ನಿವೃತ್ತ ನೌಕರ ಹಾಗೂ ಪತ್ರಿಕೆ ಹಿರಿಯ ಪತ್ರಿಕಾ ವಿತರಕರಾದ ಸುರೇಶ ಯಲ್ಲಪ್ಪ ಫೊಡ್ಕೆ (79) ಗುರುವಾರ ನಿಧನ ಹೊಂದಿದರು. ಮೃತರಿಗೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಹೊಂದಿದ್ದರು.





ಹಾವೇರಿ: ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾ ಸರ್ವೇಕ್ಷಣ ಘಟಕದಿಂದ ರಾಷ್ಟ್ರೀಯ ಡೆಂಘೀ ದಿನದ ಅಂಗವಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಹಿನ್ನೆಲೆಯಲ್ಲಿ ಡೆಂಘೀ ಜಾಗೃತಿ ವಸ್ತುಪ್ರದರ್ಶನ ಜಿಲ್ಲಾ ಆಸ್ಪತ್ರೆಯ ಪ್ರಯೋಗಾಲಯದ (ಐಪಿಹೆಚ್‌ಎಲ್) ಆವರಣದಲ್ಲಿ ನಡೆಯಿತು. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಗದೀಶ ಪಾಟೀಲ ಇತರರು ಇದ್ದರು.

ದೇಶದ ಅಭಿವೃದ್ಧಿಗೆ ವಿಶ್ವಕರ್ಮರ ಪಾತ್ರ ಪ್ರಮುಖ: ಶ್ರೀಗಳು

ರಾಣೇಬೆನ್ನೂರ: ವಿಶ್ವಕರ್ಮದಲ್ಲಿರುವ ಬಡಗಿತನದವರು, ಕಮ್ಮಾರರು, ಅಕ್ಕಸಾಲಿಗರು ಪತ್ತಾರರು ಇವರೆಲ್ಲರೂ ದೇಶದ ಬೆನ್ನೆಲುಬು. ರೈತ ದೇಶಕ್ಕಾಗಿ ಅನ್ನ ಕೊಡುತ್ತಿದ್ದರೆ, ಅದೇ ರೀತಿ ವಿಶ್ವಕರ್ಮರು ರೈತರಿಗೆ ಬೆನ್ನೆಲುಬಾಗಿದ್ದಾರೆ. ರೈತರು ಮತ್ತು ವಿಶ್ವಕರ್ಮರು ದೇಶದ ಅಭಿವೃದ್ಧಿಗೆ ಪ್ರಮುಖ ಪಾತ್ರವಹಿಸುತ್ತಾರೆ ಎಂದು ವಿಶ್ವಕರ್ಮ ಮಹಾಸಂಸ್ಥಾನ ಮಠದ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ ಹೇಳಿದರು.

ತಾಲೂಕಿನ ಚಳಗೇರಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ಕಾಳಿಕಾದೇವಿ, ವಿಶ್ವಕರ್ಮ ಮೌನೇಶ್ವರ ದೇವರ ದೇವಸ್ಥಾನದ ಪ್ರಾಣಪ್ರತಿಷ್ಠಾಪನೆ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ನವಲಗುಂದದ ಅಜಾತ ನಾಗಲಿಂಗ ಸ್ವಾಮಿ ಮಠದ ವೀರೇಂದ್ರ ಸ್ವಾಮೀಜಿ, ಹುಲಗೂರಿನ ಮೌನೇಶ್ವರ ಮಠದ ಮೌನೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ಸಮಾರಂಭ ಉದ್ಘಾಟಿಸಿದರು.

ಮಾಜಿ ಶಾಸಕ ಅರುಣಕುಮಾರ ಪೂಜಾರ, ಜಿಪಂ ಮಾಜಿ ಸದಸ್ಯ ಸಂತೋಷಕುಮಾರ ಪಾಟೀಲ, ಬಸಪ್ಪ ಎತ್ತಿನಮನಿ, ಕುಮಾರ ತೋಟದ, ಮೌನೇಶ ಕಮ್ಮಾರ, ಗಂಗಾಧರ ಮನೋಚಾರಿ ಮತ್ತಿತರರು ಉಪಸ್ಥಿತರಿದ್ದರು.



ರಾಣೇಬೆನ್ನೂರ: ತಾಲೂಕಿನ ಚಳಗೇರಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ಕಾಳಿಕಾದೇವಿ, ವಿಶ್ವಕರ್ಮ ಮೌನೇಶ್ವರ ದೇವರ ದೇವಸ್ಥಾನದ ಪ್ರಾಣಪ್ರತಿಷ್ಠಾಪನೆ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ವಿಶ್ವಕರ್ಮ ಮಹಾಸಂಸ್ಥಾನ ಮಠದ ಶಂಕರಾತ್ಮಾನಂದ ಸರಸ್ವತಿ ಸ್ವಾಮೀಜಿ, ನವಲಗುಂದದ ಅಜಾತ ನಾಗಲಿಂಗ ಸ್ವಾಮಿ ಮಠದ ವೀರೇಂದ್ರ ಸ್ವಾಮೀಜಿ, ಹುಲಗೂರಿನ ಮೌನೇಶ್ವರ ಮಠದ ಮೌನೇಶ್ವರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಜಿಪಂ ಸಿಇಒ ದಲ್ಮೀತ್ ಕುಮಾರ ಸೂಚನೆ

ಗ್ರಾಪಂ ಆಡಳಿತ, ಅಭಿವೃದ್ಧಿಗೆ ಒತ್ತು ನೀಡಿ

ಹಾವೇರಿ: ಗ್ರಾಮ ಪಂಚಾಯತಿಗಳು ಗ್ರಾಮೀಣಾಭಿವೃದ್ಧಿಯ ಪ್ರಮುಖ ಕೇಂದ್ರಗಳಾಗಿದ್ದು, ಗ್ರಾಮಸ್ಥರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವುದು ಆಡಳಿತಾಧಿಕಾರಿಗಳ ಮುಖ್ಯ ಕರ್ತವ್ಯ. ಗ್ರಾಪಂ ಆಡಳಿತ ಹಾಗೂ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು ಎಂದು ಅಧಿಕಾರಿಗಳಿಗೆ ಜಿಪಂ ಸಿಇಒ ದಲ್ಮೀತ್ ಕುಮಾರ ಅವರು ಸೂಚನೆ ನೀಡಿದರು.

ಜಿಪಂ ವಿಡಿಯೋ ಕಾನ್ಫರೆನ್ಸ್ ಹಾಲ್‌ನಲ್ಲಿ ಗುರುವಾರ ಜಿಲ್ಲೆಯ ಎಲ್ಲಾ ತಾಲೂಕುಗಳ ಇಒಗಳು ಹಾಗೂ ಪಿಡಿಒಗಳೊಂದಿಗೆ ವಿಡಿಯೋ ಸಂವಾದದ ಮೂಲಕ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಗ್ರಾಪಂ ಆಡಳಿತಾತ್ಮಕ ಕಾರ್ಯಗಳು, ಸಾರ್ವಜನಿಕ ಸೇವೆಗಳ ಅನುಷ್ಠಾನ, ಸರ್ಕಾರದ ಯೋಜನೆಗಳ ಪ್ರಗತಿ ಹಾಗೂ ಗ್ರಾಮ ಮಟ್ಟದಲ್ಲಿ ಜನರಿಗೆ ಸೌಲಭ್ಯ ಒದಗಿಸುವ ಕುರಿತು ಸವಿಸ್ತಾರವಾಗಿ ಪರಿಶೀಲನೆ ನೀಡಿದರು.

ಪಿಡಿಒ ಜವಾಬ್ದಾರಿ, ಕರ್ತವ್ಯಗಳು: ಪಂಚಾಯತಿ ಕಚೇರಿಯ ಆಡಳಿತ ನಿರ್ವಹಣೆ, ಕಡತ, ದಾಖಲೆ ಮತ್ತು ನೋಂದಣಿ ಪುಸ್ತಕಗಳ ಸಂರಕ್ಷಣೆ, ಸಭಾ ಕಾರ್ಯಸೂಚಿ ಸಿದ್ಧತೆ ಮತ್ತು ನಿರ್ಣಯ ಜಾರಿ, ಸರ್ಕಾರದ ಆದೇಶ ಮತ್ತು ಸುತ್ತೋಲೆಗಳ ಅನುಷ್ಠಾನ, ಪಂಚಾಯತಿ ಆಸ್ತಿ ದಾಖಲೆಗಳ ನಿರ್ವಹಣೆ, ಗ್ರಾಮಸಭೆ ಸಭೆಗಳ ಆಯೋಜನೆ, ಸಾರ್ವಜನಿಕ ಅಹವಾಲು ಮತ್ತು ಸಲಹೆಗಳ ಸ್ವೀಕಾರ, ಗ್ರಾಮ ಸಭೆ ನಿರ್ಣಯಗಳ ಜಾರಿ, ಸಮಿತಿಗಳ ಕಾರ್ಯಗಳಿಗೆ ಸಹಕಾರ ನೀಡಬೇಕು ಎಂದರು.

ಬ್ಯಾಂಕ್ ಖಾತೆ ನಿರ್ವಹಣೆ, ತೆರಿಗೆ ಮತ್ತು ಶುಲ್ಕ ವಸೂಲಿ, ಆದಾಯ-ವೆಚ್ಚ ಲೆಕ್ಕಪತ್ರ ಮತ್ತು ಬಜೆಟ್ ತಯಾರಿ, ಅನುದಾನ ಬಳಕೆ ಮತ್ತು ಆಡಿಟ್ ಅನುಸರಣೆ, ರಸ್ತೆ, ನೀರು, ಚರಂಡಿ, ಬೀದಿ ದೀಪ ಕಾಮಗಾರಿಗಳ ಮೇಲ್ವಿಚಾರಣೆ, ಕಾಮಗಾರಿಗಳ ಗುಣಮಟ್ಟ ಪರಿಶೀಲನೆ, ವಸತಿ, ಪಿಂಚಣಿ, ಸ್ವಚ್ಛ ಭಾರತ್, ಜಲ ಜೀವನ್



ಗೈರಾದ ಅಧಿಕಾರಿಗಳಿಗೆ ನೋಟಿಸ್

ಸಭೆಯ ಆರಂಭದಲ್ಲೇ ಹಲವು ಆಡಳಿತಾಧಿಕಾರಿಗಳು ಗೈರಾಗಿರುವುದು ಗಮನಕ್ಕೆ ಬಂದ ಹಿನ್ನೆಲೆ, ಅಂಥವರಿಗೆ ತಕ್ಷಣ ನೋಟಿಸ್ ಜಾರಿ ಮಾಡಲು ಸೂಚಿಸಿದರು. ಸರ್ಕಾರಿ ಕರ್ತವ್ಯಗಳ ನಿರ್ವಹಣೆಯಲ್ಲಿ ಶಿಸ್ತು ಮತ್ತು ಹೊಣೆಗಾರಿಕೆ ಅತ್ಯಂತ ಮುಖ್ಯ. ಸಭೆಗಳಿಗೆ ಗೈರಾಗುವುದನ್ನು ಗಂಭೀರವಾಗಿ ಪರಿಗಣಿಸಲಾಗುವುದು ಎಂದು ಎಚ್ಚರಿಸಿದರು.

ಯೋಜನೆಗಳ ಜಾರಿ, ಮಹಿಳಾ, ಮಕ್ಕಳ ಮತ್ತು ರೈತರ ಕಲ್ಯಾಣ ಯೋಜನೆ ಅನುಷ್ಠಾನ, ಚುನಾವಣೆ ಮತ್ತು ಸಮೀಕ್ಷೆಯಡಿ ಮತದಾರರ ಪಟ್ಟಿ ಪರಿಷ್ಕರಣೆ ಸಹಕಾರ, ಚುನಾವಣಾ ಕರ್ತವ್ಯ ನಿರ್ವಹಣೆ, ಜನಗಣತಿ ಮತ್ತು ಸಮೀಕ್ಷಾ ಕಾರ್ಯಗಳಲ್ಲಿ ಸಹಾಯ ಹಾಗೂ ಪಂಚಾಯತ್ ರಾಜ್ ಅಧಿನಿಯಮ ಪಾಲನೆಗೆ ಸೂಚನೆ ನೀಡಿದರು.

ಡಿಜಿಟಲ್ ಮತ್ತು ಇ-ಆಡಳಿತ: ಇ-ಸ್ವತ್ತು, ಪಂಚತಂತ್ರ, ಸೇವಾಸಿಂಧು ಬಳಕೆ, ಆನ್‌ಲೈನ್ ದಾಖಲೆ ನಿರ್ವಹಣೆ, ಡಿಬಿಟಿ ಮತ್ತು ಎಫ್‌ಎಫ್‌ಎಂಎಸ್ ಅನುಸರಣೆ ಜೊತೆಗೆ ಗ್ರಾಪಂನನ್ನು ಪಾರದರ್ಶಕ, ಜನಪರ ಆಡಳಿತ ಮತ್ತು ಅಭಿವೃದ್ಧಿ ಪಡಿಸುವುದು ಮುಖ್ಯ ಉದ್ದೇಶವಾಗಬೇಕು. ಪ್ರತಿ ಆಡಳಿತಾಧಿಕಾರಿಯು ತಮಗೆ ವಹಿಸಲಾದ ಗ್ರಾಪಂಗಳಿಗೆ ನಿಯಮಿತವಾಗಿ ಭೇಟಿ ನೀಡಬೇಕು. ವಿಶೇಷವಾಗಿ ಪ್ರತಿ ಮಂಗಳವಾರ ಹಾಗೂ ಗುರುವಾರ ಕಡ್ಡಾಯವಾಗಿ ಗ್ರಾಪಂಗಳಿಗೆ ಭೇಟಿ ನೀಡಿ, ಕುಂದು ಕೊರತೆ ಸಭೆ ನಡೆಸಬೇಕು ಹಾಗೂ ಸಭೆಯ ಕುರಿತು ಗ್ರಾಮಸ್ಥರಿಗೆ ಮುಂಚಿತವಾಗಿ ಡಂಗೂರ ಮತ್ತು ಇತರೆ ಜಾಗೃತಿ ವಿಧಾನಗಳ ಮೂಲಕ ಮಾಹಿತಿ ನೀಡಲು ತಿಳಿಸಿದ್ದಾರೆ. ಭೇಟಿ ನೀಡದೇ ಇರುವ ಅಧಿಕಾರಿಗಳ ವಿರುದ್ಧ ಕಾರ್ಯನಿರ್ವಾಹಕ ಅಧಿಕಾರಿಗಳು ವರದಿ ಸಲ್ಲಿಸುವಂತೆ ಸೂಚನೆ ನೀಡಿದರು.

ಮೂಲಭೂತ ಸೌಕರ್ಯಕ್ಕೆ ಆದ್ಯತೆ ನೀಡಿ: ಗ್ರಾಪಂಗಳಲ್ಲಿ ಕುಡಿಯುವ ನೀರಿನ ಸಮರ್ಪಕ ವ್ಯವಸ್ಥೆ, ಗ್ರಾಮ ಸ್ವಚ್ಛತೆ, ಬೀದಿ ದೀಪಗಳ ನಿರ್ವಹಣೆ, ತೆರಿಗೆ ವಸೂಲಾತಿ, ಸಾರ್ವಜನಿಕ ಆರೋಗ್ಯ ಮತ್ತು ಮೂಲಭೂತ ಸೌಲಭ್ಯಗಳ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (ನರೇಗಾ) ಅಡಿಯಲ್ಲಿ ಗ್ರಾಮಸ್ಥರಿಗೆ ಗರಿಷ್ಠ ಪ್ರಮಾಣದಲ್ಲಿ ಉದ್ಯೋಗ ಒದಗಿಸಿ, ಗ್ರಾಮೀಣ ಕುಟುಂಬಗಳಿಗೆ ಆರ್ಥಿಕ ನೆರವು ನೀಡುವ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಕೇಂದ್ರದಿಂದ ಗ್ರಾಪಂಗಳ ಕಾರ್ಯವೈಖರಿ ಕುರಿತು ನಿಯಮಿತವಾಗಿ ಪ್ರಗತಿ ಪರಿಶೀಲನಾ ಸಭೆಗಳನ್ನು ನಡೆಸಲಾಗುವುದು. ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಗ್ರಾಮೀಣ ಜನರಿಗೆ ಉತ್ತಮ ಸೇವೆ ಒದಗಿಸುವುದು ಪ್ರತಿಯೊಬ್ಬ ಅಧಿಕಾರಿಯ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಜಿಪಂ ಉಪಕಾರ್ಯದರ್ಶಿ ಡಾ.ಪುನಿತ್ ಉಪಸ್ಥಿತರಿದ್ದರು.

ಹೆಡಿಗೊಂಡನಲ್ಲಿ ರೋಜಗಾರ್ ದಿನಾಚರಣೆ

ಬ್ಯಾಡಗಿ: ಬ್ಯಾಡಗಿ ತಾಲೂಕಿನ ಹೆಡಿಗೊಂಡ ಗ್ರಾಪಂ ವ್ಯಾಪ್ತಿಯ ಹೆಡಿಗೊಂಡ ಗ್ರಾಮದಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ತಮ್ಮಣ್ಣನ ಕೆರೆ ಹೂಳೆತ್ತುವ ಮೂಲಕ ರೋಜಗಾರ ದಿನಾಚರಣೆ ಮಾಡಿದರು.

ಈ ವೇಳೆ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಾದ ಹನುಮಂತಪ್ಪ ಯರೇಶಿಮಿ ರೋಜಗಾರ್ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿ, ನರೇಗಾ ಯೋಜನೆಯ ಕೂಲಿಕಾರರು ಗೂಳೆ ಹೋಗದಂತೆ ತಡೆದು ಕೆಲಸ ನೀಡಲಾಗಿದೆ . ಗ್ರಾಮದ 250 ಜನ ಅಕುಶಲ ಕೂಲಿಕಾರರ ಎನ್ ಎಂಆರ್ ತೆಗೆದು ಕೆಲಸದ ಹಂಚಿಕೆ ಮಾಡಲಾಗಿದೆ. ಕಳೆದ 2 ವಾರಗಳಿಂದ ನಿರಂತರ ಕೆಲಸ ಮಾಡುತ್ತಿದ್ದು, ದುಡಿಯುವ ಕೈಗಳಿಗೆ ಕೆಲಸ ನೀಡಲಾಗಿದೆ ಜೊತೆಗೆ ಕೂಲಿ ದರವನ್ನು 370 ರೂ.ಗಳಿಗೆ ಹೆಚ್ಚಿಸಲಾಗಿದೆ. ಎಲ್ಲರೂ ನಿಗದಿಪಡಿಸಿದ ಅಳತೆಗನುಗುಣವಾಗಿ ಕೆಲಸ ನಿರ್ವಹಿಸಬೇಕು ಎಂದು ತಿಳಿಸಿದರು.

ತದನಂತರ ಐಈಸಿ ಸಂಯೋಜಕರಾದ ಅಕ್ಷಯ್ ದೇಶಪಾಂಡೆ ಮಾತನಾಡಿ, ಕಾಮಗಾರಿ ಸ್ಥಳದಲ್ಲಿ ಫೇಸ್ ಅಥೆಂಟಿಕೇಶನ್ ಆಧಾರಿತವಾಗಿ ಹಾಜರಾತಿ ಹಾಕಲಾಗಿದೆ. ಕೂಲಿಕಾರ್ಮಿಕರ ಮುಖ ಗುರುತಿಸುವಿಕೆ ತಂತ್ರಜ್ಞಾನ ಬಳಸಿ ಕಾರ್ಮಿಕರ ನಿಖರವಾದ ಹಾಜರಾತಿಯನ್ನು ಪಡೆಯಬೇಕೆಂದರು .

ತದನಂತರ ಬ್ಯಾಡಗಿಯ ಕೆನರಾ ಬ್ಯಾಂಕ ಆರ್ಥಿಕ ಸಾಕ್ಷರತಾ ಸಲಹೆಗಾರರಾದ ಉಪ್ಪಾರ ಅವರು ಮಾತನಾಡಿ, ಪ್ರಧಾನ ಮಂತ್ರಿ ಭೀಮಾ ಸುರಕ್ಷಾ ಯೋಜನೆ ಮತ್ತು ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಯೋಜನೆ ಬಗ್ಗೆ ಮಾಹಿತಿಯನ್ನು ನೀಡಿ ಕೂಲಿ ಕಾರ್ಮಿಕರಿಗೆ ನೊಂದಣಿ ಮಾಡಿಕೊಳ್ಳುವಂತೆ ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಪಂ ಸಿಬ್ಬಂದಿ, ಕೂಲಿಕಾರರು ಹಾಜರಿದ್ದರು.



'ಲಾಕ್ಡ್-ಹೌಸ್ ಬೀಟ್ ಸಿಸ್ಟಮ್' ಪೊಲೀಸ್ ಇಲಾಖೆಯಿಂದ ವಿನೂತನ ಪ್ರಯೋಗ

ಹಾವೇರಿ: ಇತ್ತೀಚಿನ ದಿನಗಳಲ್ಲಿ ಹಾವೇರಿ ನಗರ ಸೇರಿದಂತೆ ಜಿಲ್ಲೆಯಾದ್ಯಂತ ಮನೆಗಳ್ಳತನ ದಂತಹ ಪ್ರಕರಣಗಳು ಹೆಚ್ಚಾಗುತ್ತಿದ್ದು, ಮನೆಗಳ ಸುರಕ್ಷತೆಗಾಗಿ ಹಾವೇರಿ ಜಿಲ್ಲಾ ಪೊಲೀಸ್ ''ಲಾಕ್ಡ್-ಹೌಸ್ ಬೀಟ್ ಸಿಸ್ಟಮ್'' (ಣಓಕ್ಕ) ವ್ಯವಸ್ಥೆ ಜಾರಿ ಗೊಳಿಸಲು ಮುಂದಾಗಿದೆ. ಮನೆ ಕಳ್ಳತನ ದಂತಹ ಪ್ರಕರಣಗಳನ್ನು ನಿಯಂತ್ರಿಸಲು ಪೊಲೀಸ್ ಇಲಾಖೆ ವಿನೂತನ ಪ್ರಯೋಗಕ್ಕೆ ಮುಂದಾಗಿದ್ದು, ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ.

ಹಾವೇರಿ ಜಿಲ್ಲೆಯು ಎರಡು ನಗರಸಭೆ, ನಾಲ್ಕು ಪುರಸಭೆ, ನಾಲ್ಕು ಪಟ್ಟಣ ಪಂಚಾಯಿತಿ, 223 ಗ್ರಾಪಂ, 700 ಹಳ್ಳಿಗಳನ್ನು ಹೊಂದಿದ್ದು, ಸುಮಾರು 18ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಜಿಲ್ಲೆಯಲ್ಲಿ ಹತ್ತಾರು ಪೊಲೀಸ್ ಠಾಣೆಗಳು ಇದ್ದರೂ ಕೂಡ ಮನೆ ಕಳ್ಳತನ ಪ್ರಕರಣಗಳಿಗೆ ಮುಕ್ತಿ ನೀಡಲು ಸಾಧ್ಯವಾಗುತ್ತಿಲ್ಲ. ಇತ್ತೀಚಿಗೆ ಜಿಲ್ಲೆಯಲ್ಲಿ ಮನೆಗಳ್ಳತನ ದಿನೇ ದಿನೇ ಹೆಚ್ಚಾಗುತ್ತಿದ್ದು, ಕಳ್ಳರಿಗೆ ಭಯವೇ ಇಲ್ಲದಂತಾಗಿದೆ. ಇಂಥಹ ಕಳ್ಳರು ಹಣ್ಣು, ತರಕಾರಿ ಹಾಗೂ ಬಟ್ಟೆ ಮಾರುವವರ ವೇಷದಲ್ಲಿ ವಿವಿಧ ಗ್ರಾಮ, ನಗರ ಮತ್ತು ಬಡಾವಣೆಗಳಲ್ಲಿ ಸಂಚರಿಸಿ ಬೀಗ ಹಾಕಿರುವ ಮನೆಗಳನ್ನು ಗುರುತಿಸಿ ಕಳ್ಳತನ ನಡೆಸುತ್ತಿರುವುದು ಪೊಲೀಸ್ ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಆದರಲ್ಲೂ ರಾಜ್ಯ ಮತ್ತು ಹೊರ ರಾಜ್ಯದಿಂದ ಆಗಮಿಸುವ ಕಳ್ಳರಿಂದಲೇ ಇಂತಹ ಕೃತ್ಯಗಳು ನಡೆಯುತ್ತವೆ ಎಂಬ ಅಂಶಗಳು ಬಯಲಾಗಿವೆ. ಇಂತಹ ಕಳ್ಳರನ್ನು ಮಟ್ಟ ಹಾಕಲು ಜಿಲ್ಲಾ ಪೊಲೀಸ್ ಇಲಾಖೆಯು 'ಲಾಕ್ಡ್ ಹೌಸ್ ಬೀಟ್ ಸಿಸ್ಟಂ' ವ್ಯವಸ್ಥೆಯನ್ನು ಅನುಷ್ಠಾನಕ್ಕೆ ಮುಂದಾಗಿದ್ದು ಜನಸಾಮಾನ್ಯರಲ್ಲಿ ಕೊಂಚ ಆತ್ಮಸ್ಥೈರ್ಯ ನೀಡಿದಂತಾಗಿದೆ.

> **ಬೀಗ ಹಾಕಿದ ಮನೆಗಳನ್ನೆ ಟಾರ್ಗೆಟ್ ಮಾಡುವ ಕಳ್ಳತನ ಪ್ರಕರಣಗಳು ಇತ್ತಿಚೆಗೆ ಹೆಚ್ಚಾಗಿವೆ, ಅಂತಹ ಪ್ರಕರಣ ನಿಯಂತ್ರಣಕ್ಕೆ ಪೊಲೀಸ್ ಇಲಾಖೆ ಎಲ್‌ಹೆಚ್‌ಬಿಎಸ್ ವ್ಯವಸ್ಥೆ ಅನುಷ್ಠಾನ ಮಾಡಿದ್ದು, ಸಾರ್ವಜನಿಕರು ಮನೆಯಿಂದ ಹೊರ ಹೋಗುವಾಗ ಅಗತ್ಯ ಮಾಹಿತಿ ನೀಡಿ ಯಾವುದೇ ಆತಂಕವಿಲ್ಲದೆ ತೆರಳಬಹುದು. ಮನೆಗಳ ಸುರಕ್ಷತೆಗಾಗಿ ಜಾರಿಗೊಳಿಸಿದ ಈ ಯೋಜನೆಯನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು.**
>
> ■ **ಯಶೋಧಾ ವಂಟಗೋಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹಾವೇರಿ.**

ವಾಟ್ಸಾಪ್ ಮಾಹಿತಿ ಗೌಪ್ಯ: ಮನೆಯಿಂದ ಹೊರ ಹೋಗುವ ಸಾರ್ವಜನಿಕರು ಅಗತ್ಯ ಮಾಹಿತಿಯನ್ನು ಹಾವೇರಿ ಜಿಲ್ಲಾ ಪೊಲೀಸ್ ನಿಯಂತ್ರಣ ಕೊಠಡಿಯಲ್ಲಿ ನಿಗದಿಪಡಿಸಲಾದ ಮೊಬೈಲ್ ನಂಬರ್ 82779 84158 ನೇದ್ದಕ್ಕೆ ವಾಟ್ಸಾಪ್ ಮಾಡಬೇಕು. ಈ ಮಾಹಿತಿಯನ್ನು ಜಿಲ್ಲಾ ಪೊಲೀಸ್ ನಿಯಂತ್ರಣ ಕೊಠಡಿಯಿಂದ ಸಂಗ್ರಹಿಸಿ ಗೌಪ್ಯವಾಗಿಟ್ಟು, ಬಳಿಕ ಸಂಬಂಧಿತ ಪೊಲೀಸ್ ಠಾಣೆಯ ಬೀಟ್ ಪೊಲೀಸರಿಗೆ ಮಾಹಿತಿ ರವಾನಿಸುತ್ತದೆ.

ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಮಾನೆ ಭೂಮಿಪೂಜೆ

ಹಾನಗಲ್ಲ: ಬಡವರು, ಜನಸಾಮಾನ್ಯರ ಕಷ್ಟ ಅರಿತು, ಬೆಲೆ ಏರಿಕೆಯ ಬಿಸಿ ತಪ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಹೋತನಹಳ್ಳಿ ಗ್ರಾಮದಲ್ಲಿ 2025-26 ನೇ ಸಾಲಿನ ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ 10 ಲಕ್ಷ ರೂ. ವೆಚ್ಚದಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿದ ಅವರು, ಗ್ಯಾರಂಟಿ ಯೋಜನೆಗಳ ಬಗ್ಗೆ ವ್ಯಂಗ್ಯವಾಡುತ್ತಿದ್ದ ಬಿಜೆಪಿ ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ಅವೇ ಯೋಜನೆಗಳನ್ನು ನಕಲು ಮಾಡಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸುವ ಭರವಸೆಯೊಂದಿಗೆ ಅಧಿಕಾರಕ್ಕೆ ಬಂದಿರುವ ಬಿಜೆಪಿ ನಿಯಂತ್ರಿಸುವುದು ಒಂದೆಡೆ ಇರಲಿ, ಭಾರಿ ಪ್ರಮಾಣದಲ್ಲಿ ಏರಿಸಿ ಜನರನ್ನು ತೀವ್ರ ಸಮಸ್ಯೆಗೀಡು ಮಾಡಿದೆ. ಬಡಜನರ ಬದುಕಿಗೆ ಬರೆ ಎಳೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು ಇದೇ ಮೊದಲ ಬಾರಿಗೆ ತಾಲೂಕಿನ ಪ್ರತಿಯೊಂದು ಗ್ರಾಮಗಳಿಗೂ ಸಹ ಮೂಲಭೂತ ಸೌಲಭ್ಯ ಹೆಚ್ಚಿಸುವ ಕಾಮಗಾರಿಗಳಿಗೆ ಸಾಕಷ್ಟು ಅನುದಾನ ಒದಗಿಸಲಾಗಿದೆ ಎಂದು ತಿಳಿಸಿದರು.



ಕೆಪಿಸಿಸಿ ಸದಸ್ಯ ಟಾಕನಗೌಡ ಪಾಟೀಲ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ಮುಖಂಡರಾದ ಶಿವಾನಂದ ಕನ್ನಕ್ಕನವರ, ಶಿವಾನಂದ ಕಾಡಮ್ಮನವರ, ದಯಾನಂದ ಕನ್ನಕ್ಕನವರ, ಪ್ರಕಾಶಪ್ಪ ಲಕ್ಕೊಳ್ಳಿ, ಈರಪ್ಪ ಬೈಲವಾಲ ಸೇರಿದಂತೆ ಇನ್ನೂ ಹಲವರು ಇದ್ದರು.

ಪ್ರೋತ್ಸಾಹಧನ ಸೌಲಭ್ಯಕ್ಕೆ ಅರ್ಜಿ ಆಹ್ವಾನ

ಹಾವೇರಿ: ಕಳೆದ 2025-26ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಜರುಗಿದ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಮೆಡಿಕಲ್, ಇಂಜನೀಯರಿಂಗ್ ಹಾಗೂ ಇತರೇ ಕೋರ್ಸುಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಂದ ಪ್ರೋತ್ಸಾಹ ಧನ ಸೌಲಭ್ಯಕ್ಕೆ ಆನ್-ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ದ್ವಿತೀಯ ಪಿಯುಸಿ ಉತ್ತೀರ್ಣರಾದವರಿಗೆ ರೂ.20 ಸಾವಿರ, ಪದವಿಧರರಿಗೆ ರೂ.25 ಸಾವಿರ, ಸ್ನಾತಕೋತ್ತರ ಪದವೀಧರರಿಗೆ ರೂ.30 ಸಾವಿರ ಹಾಗೂ ಕೃಷಿ, ಇಂಜನೀಯರಿಂಗ್, ವೈದ್ಯಕೀಯ, ಪಶು ಸಂಗೋಪನೆ ಕೋರ್ಸುಗಳಿಗೆ ರೂ.35 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ, ಕೃಷಿ, ಪಶು ಸಂಗೋಪನೆ, ಇಂಜನೀಯರಿಂಗ್ ಹಾಗೂ ಮೆಡಿಕಲ್ ಕೋರ್ಸುಗಳಿಗೆ ಸಂಬಂಧಿಸಿದಂತೆ ಪ್ರತಿ ವರ್ಷ ಪಬ್ಲಿಕ್ ಪರೀಕ್ಷೆ ಇದ್ದಲ್ಲಿ ಪ್ರತಿ ವರ್ಷವೂ ಪ್ರಥಮ ಪ್ರಯತ್ನದಲ್ಲಿ ಪಾಸಾಗಿರಬೇಕು ಮತ್ತು ಅಂತಿಮವಾಗಿ ಪ್ರಥಮ ದರ್ಜೆಯಲ್ಲಿ ಪಾಸಾಗಿರಬೇಕು.

ಈ ಕೋರ್ಸುಗಳಲ್ಲಿ ಸೆಮಿಸ್ಟರ್ ಪದ್ಧತಿ ಇದ್ದಲ್ಲಿ ಎಲ್ಲ ಸೆಮಿಸ್ಟರ್‌ಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪಾಸಾಗಿರಬೇಕು ಮತ್ತು ಅಂತಿಮವಾಗಿ ಪ್ರಥಮ ದರ್ಜೆಯಲ್ಲಿ ಪಾಸಾಗಿರಬೇಕು.

ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್-ಸೈಟ್ https://swdservices. karnataka.gov.in/PrizeMoneyClientApp/ ನಲ್ಲಿರುವ ಆನ್‌ಲೈನ್ ಮೂಲಕ ಮೆಟ್ರಿಕ್ ನಂತರ (ಪದವಿ, ಸ್ನಾತಕೊತ್ತರ ಪದವಿ) ಪ್ರೋತ್ಸಾಹ ಧನ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ https://swdservices. karnataka.gov.in/Prize-Money ClientApp/ ಅಥವಾ ತಾಲೂಕಿನ ಸಹಾಯಕ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ ಅಥವಾ ಉಪ ನಿರ್ದೇಶಕರ ಕಾರ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾಡಳಿತ ಭವನ, ಹಾವೇರಿ ಇಲ್ಲಿ ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಿಯಾಯಿತಿ ದರದ ಬಿತ್ತನೆ ಬೀಜ ವಿತರಣೆಗೆ ಚಾಲನೆ

ಹಾವೇರಿ: ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ ಕೃಷಿ ಇಲಾಖೆಯಿಂದ ವಿತರಿಸಲಾಗುವ ರಿಯಾಯಿತಿ ದರದ ಬಿತ್ತನೆ ಬೀಜ ವಿತರಣೆಗೆ ಗುರುವಾರ ಜಿಲ್ಲಾ ಮಟ್ಟದ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಂ. ಹಿರೇಮಠ ಚಾಲನೆ ನೀಡಿದರು.

ನಗರದ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಆವರಣದಲ್ಲಿರುವ ರೈತ ಸಂಪರ್ಕ ಕೇಂದ್ರದಲ್ಲಿ ಗೋದಾಮಿನಲ್ಲಿ ಪೂಜೆ ಸಲ್ಲಿಸಿದ ಬಳಿಕ, ರೈತರಿಗೆ ಸೋಯಾಬಿನ್ ಬಿತ್ತನೆ ಬೀಜದ ಬ್ಯಾಗ್‌ನ್ನು ನೀಡುವ ಮೂಲಕ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪ್ರಸಕ್ತ ಮುಂಗಾರು ಹಂಗಾಮು ಪ್ರಾರಂಭಗೊಳ್ಳಲಿದ್ದು, ರೈತರು ಹದವರಿತ ಮಳೆಯಾದಾಗ ಬಿತ್ತನೆ ಕಾರ್ಯ ಕೈಗೊಳ್ಳಬೇಕು. ಈ ವರ್ಷ ಮಳೆ ಕೊರತೆಯ ಮುನ್ಸೂಚನೆ ಇದ್ದು ಸಕಾಲದಲ್ಲಿ ಬಿತ್ತನೆ ಮಾಡಿ, ಸೊಯಾಬಿನ್, ಶೇಂಗಾ, ಮೆಕ್ಕೆಜೋಳ, ಹೆಸರು ಸೇರಿದಂತೆ ಸದ್ಯ ಬಿತ್ತನೆಗೆ ಅವಶ್ಯಕ ಬೀಜಗಳ ದಾಸ್ತಾನು ಇದ್ದು, ನಿಗದಿಪಡಿಸಿದ ದಾಖಲೆಗಳೊಂದಿಗೆ ಸರದಿಯಲ್ಲಿ ಖರೀದಿಸಿ ಎಂದರು.

ಸಹಾಯಕ ಕೃಷಿ ನಿರ್ದೇಶಕ ವೀರಭದ್ರಪ್ಪ ಬಿ.ಎಚ್. ಮಾತನಾಡಿ, ಹಾವೇರಿ ತಾಲೂಕಿನ ಕರ್ಜಗಿ, ಹಾವೇರಿ, ಗುತ್ತಲ ರೈತ ಸಂಪರ್ಕ ಕೇಂದ್ರಗಳು ಹಾಗೂ ಹೆಚ್ಚುವರಿಯಾಗಿ ನೆಗಳೂರು, ಹೊಸರಿತ್ತಿ, ಮರೋಳ ಸೊಸೈಟಿಯಲ್ಲಿ ರಿಯಾಯಿತಿ ದರದ ಬಿತ್ತನೆ ಬೀಜಗಳ ಪೂರೈಕೆ ಮಾಡಲಾಗುತ್ತಿದೆ. ತಾಲೂಕಿನಲ್ಲಿ 950 ಕ್ವಿಂಟಲ್ ಸೋಯಾಬಿನ್, 215.36 ಕ್ವಿಂಟಾಲ್ ಮೆಕ್ಕೆಜೋಳ, 114.90 ಕ್ವಿಂಟಲ್ ತೊಗರಿ, 9.20 ಕ್ವಿಂಟಲ್ ಹೆಸರು ಹಾಗೂ 101.10 ಕ್ವಿಂಟಲ್ ಶೇಂಗಾ ದಾಸ್ತಾನು ಲಭ್ಯವಿದೆ. 1,663 ಮೆಟ್ರಿಕ್ ಟನ್ ಯೂರಿಯಾ, 789 ಮೆ.ಟನ್ ಡಿಎಪಿ, 130 ಟನ್ ಎಂಓಪಿ, 2688 ಟನ್ ಎನ್‌ಪಿಕೆ ಹಾಗೂ 138 ಟನ್ ಎಸ್‌ಎಸ್‌ಪಿ ರಸಗೊಬ್ಬರ ದಾಸ್ತಾನಿದೆ. ರೈತರ ಬೇಡಿಕೆಗೆ ಅನುಗುಣವಾಗಿ ಹಂತ ಹಂತವಾಗಿ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನು ಬರಲಿದ್ದು, ರೈತರಿಗೆ ಪೂರೈಸಲಾಗುತ್ತದೆ ಎಂದರು.



ಈ ವೇಳೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್‌ಎಫ್‌ಎನ್ ಗಾಜಿಗೌಡ್ರ, ತಾಲೂಕಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷಎಂ.ಎಂ. ಮೈದೂರ, ಶಹರ ಕಾಂಗ್ರೆಸ್ ಅಧ್ಯಕ್ಷ ಪ್ರಭು ಬಿಷ್ಟನಗೌಡ್ರ, ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಕಾರ್ಯಾಧ್ಯಕ್ಷ ಶಿವಬಸಪ್ಪ ಗೋವಿ, ಕೃಷಿ ಇಲಾಖೆಯ ಡಿಡಿಎ ಶಿವಕುಮಾರ ಮಲ್ಲಾಡದ, ಕೃಷಿ ಅಧಿಕಾರಿ ಬಸನಗೌಡ ಪಾಟೀಲ, ಧನಂಜಯ ಟಿ.ಎನ್., ತಾಂತ್ರಿಕ ವ್ಯವಸ್ಥಾಪಕ ವನರಾಜ ಬಣಕಾರ, ರೈತ ಮುಖಂಡರಾದ ರಾಜು ತರ್ಲಘಟ್ಟ, ಶಿವಯೋಗಿ ಹೊಸಗೌಡ್ರ, ರಾಕೇಶ ಸಜ್ಜನರ, ಸಿದ್ದನಗೌಡ ಗಡಿಯಪ್ಪಗೌಡ್ರ, ದಾದಾಪೀರ ಮುಲ್ಲಾ, ಬಸವರಾಜ ಪರಮ್ಮನವರ, ಮಹಾರುದ್ರಗೌಡ ಹಾಲಗಿ, ಕುಮಾರಗೌಡ ಗಡಿಯಪ್ಪಗೌಡ್ರ ಸೇರಿದಂತೆ ರೈತರು ಹಾಜರಿದ್ದರು.

ಮುಗಿಬಿದ್ದ ರೈತರು

ರಿಯಾಯಿತಿ ದರದ ಬಿತ್ತನೆ ಬೀಜಗಳನ್ನು ಪಡೆಯಲು ರೈತರು ಬೀಜ ವಿತರಣಾ ಕೇಂದ್ರಗಳಿಗೆ ಮುಗಿಬಿದ್ದಿದ್ದಾರೆ. ಹಾವೇರಿ, ಕರ್ಜಗಿ, ಬಂಕಾಪುರ, ರಟ್ಟೀಹಳ್ಳಿ ಸೇರಿದಂತೆ ಅನೇಕ ಕಡೆಗಳಲ್ಲಿ ಗುರುವಾರ ನಸುಕಿನ ಜಾವದಿಂದಲೇ ರೈತರು ಸರದಿಯಲ್ಲಿ ನಿಂತಿದ್ದರು. ಕೈಯಲ್ಲಿ ಆಧಾರ ಕಾರ್ಡ್, ಜಮೀನು ಪಹಣಿ, ಎಫ್‌ಐಡಿ ಸಂಖ್ಯೆ ಇರುವ ಚೀಟಿಯನ್ನು ಹಿಡಿದು ಕಾಯುತ್ತಾ ನಿಂತಿದ್ದರು. ಸರದಿ ಸಾಲಿನಲ್ಲಿ ಬರದೆ ನೇರವಾಗಿ ಬರುವ ರೈತರ ಮಧ್ಯೆ ವಾಗ್ವಾದ, ಮಾತಿನ ಚಕಮಕಿಗಳು ನಿರಂತರವಾಗಿ ನಡೆಯುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿ ಕಂಡುಬಂದವು.

ಗಾಜೀಗೌಡ್ರ ಮುನಿಸು

ರಿಯಾಯಿತಿ ದರದ ಬಿತ್ತನೆ ಬೀಜ ವಿತರಣೆ ಕಾರ್ಯಕ್ರಮಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್ ಎಫ್ ಎನ್ ಗಾಜೀಗೌಡ್ರಗೆ ಕೃಷಿ ಇಲಾಖೆ ಅಧಿಕಾರಿಗಳು ಆಹ್ವಾನ ನೀಡಿದ್ದರೂ ಸಹ ಗಾಜೀಗೌಡ್ರ ಬರುವುದಕ್ಕೂ ಮೊದಲೆ ರೈತರ ಗದ್ದಲ ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿ ಅಧಿಕಾರಿಗಳು, ಎಂ.ಎಂ. ಹಿರೇಮಠ ಸೇರಿದಂತೆ ಇನ್ನುಳಿದ ಕೆಲವರಿಂದ ಉದ್ಘಾಟನೆ ಮಾಡಿಸಿ, ಬೀಜ ವಿತರಣೆಗೆ ಚಾಲನೆ ನೀಡಿದರು. ಬಳಿಕ ಸ್ಥಳಕ್ಕಾಗಮಿಸಿದ ಗಾಜೀಗೌಡ್ರ ಅಧಿಕಾರಿಗಳ ನಡೆಗೆ ಮುನಿಸಿಕೊಂಡರು. ಕೃಷಿ ಎಡಿ ವೀರಭದ್ರಪ್ಪ ಅವರು ರೈತರಿಂದ ಒತ್ತಡ, ಗಲಾಟೆ ನಿಯಂತ್ರಿಸಲು ಬೇಗನೆ ಚಾಲನೆ ನೀಡಲಾಯಿತು ಎಂದು ಮನವೊಲಿಸಲು ಯತ್ನಿಸಿದರು.

ರಾಷ್ಟ್ರೀಯ ಡೆಂಘೀ ದಿನ: ಜಾಗೃತಿ ವಸ್ತು ಪ್ರದರ್ಶನ

ಹಾವೇರಿ: ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾ ಸರ್ವೇಕ್ಷಣ ಘಟಕದಿಂದ ರಾಷ್ಟ್ರೀಯ ಡೆಂಘೀ ದಿನದ ಅಂಗವಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಹಿನ್ನೆಲೆಯಲ್ಲಿ ಡೆಂಘೀ ಜಾಗೃತಿ ವಸ್ತುಪ್ರದರ್ಶನ ಜಿಲ್ಲಾ ಆಸ್ಪತ್ರೆಯ ಪ್ರಯೋಗಾಲಯದ (ಐಪಿಹೆಚ್ ಎಲ್) ಆವರಣದಲ್ಲಿ ಜರುಗಿತು.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಗದೀಶ ಪಾಟೀಲ ಉದ್ಘಾಟನೆ ನೆರವೇರಿಸಿದರು. ಜಿಲ್ಲಾ ಎಪಿಡಮಿಯಾಲಜಿಸ್ಟ್ ಡಾ.ಪ್ರೇಮಾ, ಸಹಾಯಕ ಎಂಟಮಾಲಜಿಸ್ಟ್ ಶ್ರೀಕಾಂತ ಪಾಟೀಲ, ಆರೋಗ್ಯ ಮೇಲ್ವಿಚಾರಣಾಧಿಕಾರಿ ಕ್ಯೂ.ಎಂ. ಕೋರಲಹಳ್ಳಿ, ಹಿರಿಯ ಪ್ರಯೋಗಶಾಲಾ ತಂತ್ರಜ್ಞಾಧಿಕಾರಿ ಯು.ಪಿ. ಹಿರೇಮಠ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಉಮೇಶ ಕರಮುಡಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರಶೇಖರ ಹಿತ್ತಲಮನಿ, ಆರೋಗ್ಯ ಇಲಾಖೆಯ ರವಿ ಕೆ.ಆರ್., ಕೃಷ್ಣಪ್ಪ, ಸತೀಶ ಇತರರು ಉಪಸ್ಥಿತರಿದ್ದರು.

ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮದಡಿ ಜಿಲ್ಲಾ ಸರ್ವೇಕ್ಷಣ ಘಟಕದಿಂದ ರಾಷ್ಟ್ರೀಯ ಡೆಂಘೀ ದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ಅರಿವು ಕಾರ್ಯಕ್ರಮ ಹಾಗೂ ವಸ್ತು ಪ್ರದರ್ಶನ ನಗರದ ಡಾ.ಸಂಜಯ ಡಾಂಗೆ ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಜರುಗಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಯಾನಂದ ಅವರು ಉದ್ಘಾಟನೆ ನೆರವೇರಿಸಿ ಮಾತನಾಡಿದರು. ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಗದೀಶ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.



ಸಹಾಯಕ ಎಂಟಮಾಲಜಿಸ್ಟ್ ಶ್ರೀಕಾಂತ ಪಾಟೀಲ ಅವರು ಡೆಂಘೀ ನಿಯಂತ್ರಣ ಕುರಿತು ಉಪನ್ಯಾಸ ನೀಡಿದರು. ಡಾ.ಸಂಜಯ ಡಾಂಗೆ, ಡಾ.ವಸಂತ, ಡಾ.ಶಿತಲ್, ಜಿಲ್ಲಾ ಎಪಿಡಮಿಯಾಲಜಿಸ್ಟ್ ಡಾ.ಪ್ರೇಮಾ, ಆರೋಗ್ಯ ಮೇಲ್ವಿಚಾರಣಾಧಿಕಾರಿ ಕ್ಯೂ.ಎಂ.ಕೋರಲಹಳ್ಳಿ, ಹಿರಿಯ ಪ್ರಯೋಗಶಾಲಾ ತಂತ್ರಜ್ಞಾಧಿಕಾರಿ ಯು.ಪಿ. ಹಿರೇಮಠ, ಸತೀಶ, ಉಷಾ ಇತರರು ಉಪಸ್ಥಿತರಿದ್ದರು. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಚಂದ್ರಶೇಖರ ಹಿತ್ತಲಮನಿ ಸ್ವಾಗತಿಸಿದರು. ಕುಶಲ ಕುಂದಗೋಳ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಕಿರುಸುದ್ದಿ

ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೂಡಲಗಿ: 110/11ಕೆವ್ಹಿ ವಿದ್ಯುತ್ ವಿತರಣಾ ಕೇಂದ್ರ ಯಾದವಾಡದಲ್ಲಿ 1ನೇ ತ್ರೈಮಾಸಿಕ ನಿರ್ವಹಣೆ ಕೆಲಸವನ್ನು ಮೇ 24ರಂದು ಕೈಕೊಳ್ಳಲು ಉದ್ದೇಶಿಸಿರುವುದರಿಂದ, 110ಕೆವ್ಹಿ ಯಾದವಾಡ ಕೇಂದ್ರದಿಂದ ಸರಬರಾಜು ಆಗುವ ಯಾದವಾಡ ಎನ್.ಜೆ.ವಾಯ್ ಮೇಲೆ ಬರುವ ಕಾಮನಕಟ್ಟಿ, ಯಾದವಾಡ, ತಿಮ್ಮಾಪೂರ, ಗುಲಗುಂಜಿಕೊಪ್ಪ, ಮಾನೋಮಿ, ಕೊಪದಟ್ಟಿ, ಕುರಬಟ್ಟಿ, ಗಿರಿಸಾಗರ ಗ್ರಾಮಗಳಲ್ಲಿ ಎಲ್ಲಾ 11ಕೆವ್ಹಿ ನೀರಾವರಿ ಪಂಪಸೆಟ್ಟ ಮಾರ್ಗಗಳಲ್ಲಿ ಮುಂಜಾನೆ 9 ರಿಂದ ಸಂಜೆ 6 ಘಂಟೆಯವರೆಗೆ ವಿದ್ಯುತ್ ನಿಲುಗಡೆ ಆಗುವುದರಿಂದ ಗ್ರಾಹಕರಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಕಾರಣ ಸಾರ್ವಜನಿಕರು ಸಹಕರಿಸಬೇಕು ಎಂದು ಹೆಸ್ಕಾಂ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಎಂ.ಎಸ್. ನಾಗನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಚಿಕ್ಕೋಡಿ: ಪಟ್ಟಣದ ಬಸವೇಶ್ವರ ವೃತ್ತದಲ್ಲಿರುವ ಚಿಕ್ಕೋಡಿ ವಿಭಾಗದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಅಂಚೆ ಜೀವ ವಿಮೆ ಹಾಗೂ ಗ್ರಾಮೀಣ ಅಂಚೆ ಜೀವ ವಿಮಾ ಉತ್ಪನ್ನಗಳನ್ನು ಮಾರಾಟ ಮಾಡಲು ನೇರ ಪ್ರತಿನಿಧಿಗಳ ನಿಯುಕ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. 10ನೇ ತರಗತಿ ಪೂರ್ಣಗೊಳಿಸಿದ, ಕನಿಷ್ಠ 18 ವಯೋಮಿತಿ ಹೊಂದಿದ ಅಭ್ಯರ್ಥಿಗಳು ಜೂನ್ 4, 2026ರಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ನೇರ ಸಂದರ್ಶನದಲ್ಲಿ ಸ್ವವಿವರ, ಭಾವಚಿತ್ರದೊಂದಿಗೆ ಭಾಗವಹಿಸಹುದಾಗಿದೆ ಎಂದು ಚಿಕ್ಕೋಡಿ ವಿಭಾಗದ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ರಾಯಬಾಗ: ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿಂದ 2026-27 ನೇ ಸಾಲಿಗೆ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು https://shp.karnataka.gov.in/bcwd ವೆಬ್ ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು. ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳು ಜೂ.8, ನಂತರದ ವಿದ್ಯಾರ್ಥಿಗಳಿಗೆ (ಪಿ.ಯು.ಸಿ ವಿದ್ಯಾರ್ಥಿಗಳಿಗೆ ಮಾತ್ರ) ಜೂ. 15 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಸಂಪರ್ಕಿಸಬಹುದಾಗಿದೆ ಎಂದು ತಾಲೂಕು ಕಲ್ಯಾಣ ಅಧಿಕಾರಿ ಕಲ್ಪನಾ ಕಾಂಬಳೆ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಗೋಕಾಕ: ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಪ್ರಮೀಳಾ ಬೇವಿನಗಿಡದ ತಿಳಿಸಿದ್ದಾರೆ. ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿರುವ ಅವರು, ಪ್ರವೇಶ ಬಯಸುವವರು ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2026-27ನೇ ಸಾಲಿಗೆ ಕೊನೆಯ ದಿನಾಂಕ ಜೂನ್ 8ರ ಒಳಗಾಗಿ ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಚೇರಿಗೆ ಸಂಪರ್ಕಿಸಲು ಕೋರಲಾಗಿದೆ.

ನಿಧನ ಸುದ್ದಿ

ವೀರನಗೌಡ ಪಾಟೀಲ



ಬೆಳಗಾವಿ : ಮೂಲತಃ ಚನ್ನಮ್ಮನ ಕಿತ್ತೂರು ನಿವಾಸಿ ಹಾಗೂ ಸದ್ಯ ಬೆಳಗಾವಿ ತಾಲೂಕಿನ ಬಸವನ ಕುಡಚಿಯಲ್ಲಿ ವಾಸವಾಗಿದ್ದ ವೀರನಗೌಡ ಬಸನಗೌಡ ಪಾಟೀಲ (80) ಮಂಗಳವಾರ ನಿಧನರಾಗಿದ್ದಾರೆ. ಮೃತರು ಪತ್ನಿ, ಮೂವರು ಪುತ್ರರು ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಬಳಗ ಅಗಲಿದ್ದಾರೆ.



ಬೆಳಗಾವಿ : ಇಲ್ಲಿನ ಅಯೋಧ್ಯಾ ನಗರದಲ್ಲಿ, ಗುರುಪುಷ್ಯಾಮೃತ ಯೋಗ ದಿನದ ನಿಮಿತ್ತ ಸರ್ವ ಲೋಕಸೇವಾ ಫೌಂಡೇಶನ ವತಿಯಿಂದ ಅರಳಿ, ಆಲ, ಬಿಲ್ವಪತ್ರೆಯ ಸಸಿಗಳನ್ನು ಸಂಸ್ಥೆಯ ಅಧ್ಯಕ್ಷರಾದ ವೀರೇಶ ಬಸಯ್ಯಾ ಹಿರೇಮಠ ಇವರ ನೇತೃತ್ವದಲ್ಲಿ ನೆಡಲಾಯಿತು.

ರಾಜ್ಯ ಮಟ್ಟದ ವಿಚಾರ ಸಂಕಿರಣ

ಬೆಳಗಾವಿ: ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ ಆಯೋಜಿತ ಬಂಡಾಯ ಸಾಹಿತ್ಯ ಹೊಸ ತಲೆಮಾರುಭಿ ಅಭಿಯಾನದ ಅಂಗವಾಗಿ ಬೆಳಗಾವಿ ಜಿಲ್ಲಾ ಘಟಕದ ಬಂಡಾಯ ಸಾಹಿತ್ಯ ಸಂಘಟನೆಯಿಂದ ಕನ್ನಡ ಸಿನಿಮಾ : ಪ್ರಗತಿಪರ ನೆಲೆಗಳ ಸ್ವರೂಪ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ ಹಾಗೂ ಕವಿಗೋಷ್ಠಿಯನ್ನು ಮೇ 23ರಂದು ಕುಮಾರ ಗಂಧರ್ವ ರಂಗಮಂದಿರ ಆವರಣದ ಬಸವರಾಜ ಕಟ್ಟೀಮನಿ ಸಭಾಭವನದಲ್ಲಿ ಆಯೋಜಿಸಲಾಗಿದೆ. ಅಂದು ಬೆಳಿಗ್ಗೆ 10.30ಕ್ಕೆ ಪ್ರೊ. ಬರಗೂರು ರಾಮಚಂದ್ರಪ್ಪ ಅಧ್ಯಕ್ಷತೆಯಲ್ಲಿ ಮೊದಲ ಗೋಷ್ಠಿ ನಡೆಯಲಿದ್ದು, ಸಾಹಿತ್ಯ ಮತ್ತು ಸಿನಿಮಾ :ಸೃಷ್ಟಿಸ್ವರೂಪ ಕುರಿತು ನದೀಮ ಸನದಿ, ಕನ್ನಡ ಸಿನಿಮಾ: ಪೌರಾಣಿಕ ವಸ್ತುವಿನಲ್ಲಿ ಪ್ರಗತಿಪರ ನೆಲೆ ವಿಷಯ ಕುರಿತು ನಿರ್ಮಲಾ ಬಟ್ಟಲ ಉಪನ್ಯಾಸ ನೀಡಲಿದ್ದಾರೆ. ವಿಜಯಕುಮಾರ ಎಂ.ಜಿ. ದಿಕ್ಸೂಚಿ ನುಡಿಗಳನ್ನು ಆಡಲಿದ್ದಾರೆ. ಮಧ್ಯಾಹ್ನ 1.30ಕ್ಕೆ ಎರಡನೇ ಗೋಷ್ಠಿ ಡಿ.ಎಸ್. ಚೌಗಲೆ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ.3.30ಕ್ಕೆ ಸತ್ಯಾನಂದ ಪಾತ್ರೋಟ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ಆಯೋಜಿಸಲಾಗಿದೆ. 5.30ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ರಾಜಪ್ಪ ದಳವಾಯಿ ಸಮಾರೋಪ ನುಡಿ ಆಡಲಿದ್ದಾರೆ. ಸತೀಶ ಕುಲಕರ್ಣಿ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸರಜೂ ಕಾಟ್ಕರ್ ಅಧ್ಯಕ್ಷತೆ ವಹಿಸಲಿದ್ದಾರೆ. ವಿಚಾರ ಸಂಕಿರಣದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಹಾಗೂ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಗುವುದು ಎಂದು ಬಂಡಾಯ ಸಾಹಿತ್ಯ ಸಂಘಟನೆಯ ಜಿಲ್ಲಾ ಸಂಚಾಲಕರಾದ ಪ್ರೊ. ಯಲ್ಲಪ್ಪ ಹಿಮ್ಮಡಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹುಬ್ಬಳ್ಳಿ/ನವಲಗುಂದ: ಉತ್ತರ ಕರ್ನಾಟಕ ಭಾಗದ ಪ್ರಮುಖ ನೀರಾವರಿ ಯೋಜನೆ ಮಹಾದಾಯಿ ಕಳಸಾ ಬಂಡೂರಿ ಯೋಜನೆಯನ್ನು ರಾಜ್ಯ ಹಾಗೂ ಕೇಂದ್ರ ಸರ್ಕಾರ ತಕ್ಷಣ ಜಾರಿಗೆ ತರುವಂತೆ ಕರ್ನಾಟಕ ರೈತ ಸೇನೆ ಆಗ್ರಹಿಸಿದೆ.

ಸಿಸಿ ರಸ್ತೆ ನಿರ್ಮಾಣದ ಕಾಮಗಾರಿಗೆ ಚಾಲನೆ

ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ

ಸವದತ್ತಿ: ತಾಲೂಕಿನ ಕುರುವಿನಕೊಪ್ಪ ಗ್ರಾಮದಲ್ಲಿ ಲೋಕೋಪಯೋಗಿ ಇಲಾಖೆಯ 2025-26ನೇ ಸಾಲಿನ ಮುಖ್ಯಮಂತ್ರಿ ಮೂಲಸೌಕರ್ಯ ಯೋಜನೆಯಡಿ ಮಂಜೂರಾಗಿರುವ ಒಟ್ಟು 1 ಕೋಟಿ ರೂ. ವೆಚ್ಚದ ಸಂಪೂರ್ಣ ಸಿ.ಸಿ. ರಸ್ತೆ ನಿರ್ಮಾಣದ ಮಹತ್ವದ ಕಾಮಗಾರಿಗೆ ಶಾಸಕ ವಿಶ್ವಾಸ ವೈದ್ಯ ಅವರು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಗ್ರಾಮೀಣ ಭಾಗದ ಜನರಿಗೆ ಸುಸಜ್ಜಿತ ರಸ್ತೆ ಸಂಪರ್ಕ ಕಲ್ಪಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಈ ರಸ್ತೆ ನಿರ್ಮಾಣದಿಂದ ದಶಕಗಳಿಂದ ಇದ್ದ ಸಂಚಾರದ ಸಮಸ್ಯೆ ನಿವಾರಣೆಯಾಗಲಿದ್ದು, ಶಾಲಾ ವಿದ್ಯಾರ್ಥಿಗಳಿಗೆ, ರೈತರಿಗೆ ಹಾಗೂ ಊರಿನ ಗ್ರಾಮಸ್ಥರಿಗೆ ಮತ್ತು ರಾಜ್ಯ ಹೆದ್ದಾರಿಗೆ ಸಂಪರ್ಕಿಸುವ ಸಾರ್ವಜನಿಕರಿಗೆ ದೊಡ್ಡ ಮಟ್ಟದ ಅನುಕೂಲವಾಗಲಿದೆ ಎಂದರು.



ನಿಗದಿತ ಅವಧಿಯೊಳಗೆ ಅತ್ಯಂತ ಗುಣಮಟ್ಟದ ವಸ್ತುಗಳನ್ನು ಬಳಸಿ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದು ಸಂಬಂಧಪಟ್ಟ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಇದೇ ಸಂದರ್ಭದಲ್ಲಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇದೇ ಸಂದರ್ಭದಲ್ಲಿ ಗ್ರಾಮದ ಶಂಕ್ರಯ್ಯ ಮಹಾಸ್ವಾಮಿಗಳು, ಪ್ರವೀಣ ರಾಮಪ್ಪನವರ, ಸುರೇಶ ತುಪ್ಪದ, ಪರುಶರಾಮ ಯಕ್ಕುಂಡಿ, ತಿರಕಪ್ಪ ತಮ್ಮನ್ನವರ, ಫಕೀರಪ್ಪ ಮೊರಬದ, ಮಂಜುನಾಥ ಅಣ್ಣಪ್ಪನವರ, ವಿಠ್ಠಲ ಹೂಲಿ, ದೊಡ್ಡೇಶ ಹರ್ಲಾಪೂರ, ರಮೇಶ್ ಅಥಣಿ, ಫಕೀರಪ್ಪ ಮಾದರ, ಲೋಕೋಪಯೋಗಿ ಇಲಾಖೆಯ ಅಧಿಕಾರಿ, ಹಾಗೂ ಕುರುವಿನಕೊಪ್ಪ ಗ್ರಾಮದ ನೂರಾರು ಸಾರ್ವಜನಿಕರು ಉಪಸ್ಥಿತರಿದ್ದರು.

ಕಾನೂನುಬಾಹಿರ ಕಸಾಯಿಖಾನೆ ಬಂದ್‌ಗೆ ಒತ್ತಾಯ

ಬೆಳಗಾವಿ : ಇದೇ ಮೇ 28 ರಂದು ಬಕ್ರಿದ್ ಹಬ್ಬದಂದು ಸಂಪೂರ್ಣವಾಗಿ ಜಿಲ್ಲಾದ್ಯಂತ ಕಸಾಯಿಖಾನೆಗಳನ್ನು ಬಂದ್ ಮಾಡುವಂತೆ ಆಗ್ರಹಿಸಿ, ಶ್ರೀರಾಮ ಸೇನೆಯ ಕಾರ್ಯಕರ್ತರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಗುರುವಾರ ಶ್ರೀರಾಮ ಸೇನೆಯ ಉಕ ಭಾಗದ ರಾಜ್ಯಾಧ್ಯಕ್ಷ ರವಿಕುಮಾರ ಕೋಕಿತರ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಅಕ್ರಮವಾಗಿ ಕಸಾಯಿಖಾನೆಗಳಿಗೆ ಗೋವುಗಳನ್ನು ಸಾಗಾಟ ಮಾಡಿ ಅವುಗಳು ಹತ್ಯೆ ಮಾಡುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಅಲ್ಲದೆ ಇದೇ ಮೇ 28 ರಂದು ಮುಸ್ಲಿಂಮರ ಹಬ್ಬ ಬಕ್ರಿದ್ ಹಬ್ಬದಂದು ಸಾಕಷ್ಟು ಪ್ರಾಣಿಗಳ ಬಲಿ ಮಾಡಲಾಗುತ್ತದೆ.

ಬಕ್ರಿದ್ ಕ್ಕೆ ಪ್ರಾಣಿಗಳನ್ನು ಸಾಗಾಟ ಮಾಡುವುದನ್ನು ಸಂಪೂರ್ಣವಾಗಿ ನಿಷೇಧ ಮಾಡಬೇಕೆಂದು ಜಿಲ್ಲಾಧಿಕಾರಿಗಳ ಕಛೇರಿ ಎದರು ಪ್ರತಿಭಟನೆ ನಡೆಸಿದರು.

ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಾಣಿಗಳನ್ನು ಅಕ್ರಮವಾಗಿ ಕಸಾಯಿಖಾನೆಗಳಿಗೆ ಸಾಗಾಟ ಮಾಡಿ ಅವುಗಳನ್ನು ಹತ್ಯೆ ಮಾಡಲಾಗುತ್ತಿದೆ. ಇದೇ 28 ಮೇ ರಂದು ನಡೆಯಲಿರುವ ಬಕ್ರೀದ್ ಹಬ್ಬದಂದು ಅಷ್ಟೇ ಅಲ್ಲ ಜಿಲ್ಲಾದ್ಯಂತ ಸಂಪೂರ್ಣವಾಗಿ ಪ್ರಾಣಿಗಳ ಹತ್ಯೆ ನಿಷೇಧಿಸಬೇಕು ಎಂದರು.

ಭಾರತ ಸಂವಿಧಾನದ ಕಲಂ 48 ರ ಪ್ರಕಾರ ರಾಜ್ಯವು ಕೃಷಿ ಮತ್ತು ಪಶುಸಂಗೋಪನೆಯನ್ನು ವೈಜ್ಞಾನಿಕ ರೀತಿಯಲ್ಲಿ ಸಂಘಟಿಸಿ, ಗೋವುಗಳು ಹಾಗೂ ಕೃಷಿಗೆ ಮತ್ತು ಹಾಲು ಉತ್ಪಾದನೆಗೆ ಉಪಯುಕ್ತ ಜಾನುವಾರುಗಳ ಸಂರಕ್ಷಣೆ ಹಾಗೂ ಹತ್ಯೆ ನಿಷೇಧಿಸಲು ಕ್ರಮ ಕೈಗೊಳ್ಳಬೇಕೆಂದು ನಿರ್ದೇಶನ ನೀಡಲಾಗಿದೆ. ಅದರಂತೆ ಕೂಡಲೇ ಸಂಪೂರ್ಣವಾಗಿ ಗೋ ಹತ್ಯೆ ನಿಷೇಧಿಸಬೇಕು ಎಂದು ಶ್ರೀ ರಾಮ ಸೇನೆ ಕಾರ್ಯಕರ್ತರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಳ್ಳುವುದರ ಮೂಲಕ ಕೆಲವೊಂದು ನಿಯಮಗಳನ್ನು ಜಾರಿ ಮಾಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಶ್ರೀರಾಮ ಸೇನೆ ಉಕ ಭಾಗದ ರಾಜ್ಯಾಧ್ಯಕ್ಷ ರವಿಕುಮಾರ ಕೋಕಿತರ, ವಿನಯ ಅಂಗೊಳ್ಳಿ, ಕಾರ್ಯದರ್ಶಿಗಳು, ಪದಾಧಿಕಾರಿಗಳು, ಸೇರಿದಂತೆ ಹಲವರು ಕಾರ್ಯಕರ್ತರು ಇದ್ದರು.



ಉತ್ತರವಲಯ ಪೊಲೀಸ್ ಮಹಾನಿರೀಕ್ಷರ ಭೇಟಿ

ಚನ್ನಮ್ಮನ ಕಿತ್ತೂರು: ಉತ್ತರವಲಯ ಪೊಲೀಸ್ ಮಹಾ ನಿರೀಕ್ಷಕ ಚೇತನ್ ಸಿಂಗ್ ರಾಥೋರ್ ಅವರು ಕಿತ್ತೂರಿನ ಪೋಲಿಸ್ ಠಾಣೆಗೆ ಭೇಟಿ ನೀಡಿದರು.ಸ್ಥಳೀಯ ಪೋಲಿಸ್ ವೃತ್ತ ಕಚೇರಿ ಪರಿವೀಕ್ಷಣೆ ನಡೆಸಿ ನಂತರ ಪೋಲಿಸ್ ಅಧಿಕಾರಿಗಳಿಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಇದಕ್ಕೂ ಪೂರ್ವದಲ್ಲಿ ಪೋಲಿಸರು ಗೌರವ ವಂದನೆ ಸಲ್ಲಿಸಿದರು.ಪ್ರೋಬೆಷನರಿ ಐಪಿಎಸ್ ಅಧಿಕಾರಿ ಡಾ. ಬಾನುಪ್ರಕಾಶ, ಬೈಲಹೊಂಗಲ ಡಿವೈಎಸ್‌ಪಿ ಡಾ. ವೀರಯ್ಯ ಹಿರೇಮಠ, ಸಿಪಿಐಯ್ ಶಿವಾನಂದ ಗುಡಗನಟ್ಟಿ, ಪಿಎಸ್‌ಐಯ್‌ಗಳಾದ ಪ್ರವೀಣ ಗಂಗೋಳ, ಗಂಗಾಧರ ಹಂಪಣ್ಣವರ ಸೇರಿದಂತೆ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.



ಉಚಿತ ಶಿಕ್ಷಣ ಪರಿಕರಗಳ ವಿತರಣೆ

ಮೂಡಲಗಿ : ಸಮೀಪದ ಕಲ್ಲೋಳಿಯ ಶ್ರೀ ಬಸವೇಶ್ವರ ಶಿಕ್ಷಣ ಸಂಸ್ಥೆಯಲ್ಲಿ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಒಂದರಿಂದ ಹತ್ತನೇ ತರಗತಿಯ ವರೆಗೆ ಉಚಿತ ಶಿಕ್ಷಣ ನೀಡಲು ಪುಸ್ತಕ, ಸಮವಸ್ತ್ರ, ನೋಟಬುಕ್ಸ ಸಾಕ್ಷರತೆಗೆ ಅವಶ್ಯ ಇರುವ ಸರ್ಕಾರ ನೀಡುವಂತೆ ಒಳ್ಳೆಯ ಗುಣಮಟ್ಟದ ಮೂಲ ಸೌಲಭ್ಯಗಳನ್ನು ಉಚಿತವಾಗಿ ನೀಡುತ್ತಿದೆ ಇದರ ಪ್ರಯೋಜನ ಪಡೆಯಬೇಕು ಎಂದು ಬಸವೇಶ್ವರ ಶಿಕ್ಷಣ ಸಂಸ್ಥೆಯ ಚೇರ್‌ಮನ್ ರಮೇಶ ಬೆಳಕೂಡ ಹೇಳಿದರು.

ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಪಿಯುಸಿ, ಪ್ರಥಮ ಡಿಗ್ರಿ ಪ್ರಥಮ ವರ್ಷದಲ್ಲಿ ಪ್ರವೇಶ ಪಡೆದುಕೊಂಡವರಿಗೆ ಒಂದು ಸಾವಿರ ರೂಪಾಯಿ ಉಚಿತ ಗಿಫ್ಟ್, ಒಂದು ಕಾಲೇಜ್ ಬ್ಯಾಗ್ ಆರು ವಿಷಯಗಳಿಗೆ ಆರು ನೋಟಬುಕ್‌ಗಳನ್ನು ಉಚಿತವಾಗಿ ನೀಡಿ ಮಾತನಾಡಿದರು

ಗುಣಮಟ್ಟದ ಶಿಕ್ಷಣ ನೀಡುವ ದರೊಂದಿಗೆ ನುರಿತ ಶಿಕ್ಷಕರು, ಕ್ರೀಡಾ ಉತ್ತೇಜನ ನೀಡುವ ಕಾರ್ಯದರ್ಶಿ ಡಾ ಭೋಜರಾಜ್ ಬೆಳಕೂಡ ಶಿಕ್ಷಣ ಧಣಿಗಳಾಗಿದ್ದು, ಆಧುನಿಕ ತಂತ್ರಜ್ಞಾನ ಸ್ಮಾರ್ಟ್ ಬೋರ್ಡ್ ನಲ್ಲಿ ಬೋಧನೆ ಮಾಡುವ ಮೂಲಕ ಶಾಫ್ಟವೇರ್ ತಂತ್ರಜ್ಞಾನ ಮೂಲಕ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪಾಲಕರಿಗೆ ಪ್ರತಿ ದಿನ ಗೈರು, ಹಾಜರ್ ಮಾಹಿತಿ ನೀಡಿ, ಇಡೀ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಮಗ್ರ ಮಾಹಿತಿ ಕಲಿಸುವುದುಂಟು,

ಈ ವ್ಯವಸ್ಥೆ ಸಾಮಾನ್ಯವಾಗಿ ಸುತ್ತಲಿನ ಗ್ರಾಮಗಳ ಜನರಿಗೆ ಅತೀ ಮೆಚ್ಚುಗೆ ಆಗಿದೆ ಎಂದು ಆಡಳಿತ ಅಧಿಕಾರಿ ಪ್ರಕಾಶ್ ಗರಗಟ್ಟಿ ಹೇಳಿದರು



ಉಪನ್ಯಾಸಕರ ಪರಿಶ್ರಮ ಶ್ಲಾಘನೀಯ

ರಾಯಬಾಗ: ಪಟ್ಟಣದ ಸರ್ಕಾರಿ ಪದವಿ ಕಾಲೇಜು ಉನ್ನತ ಶ್ರೇಣಿ ಪಡೆಯಲು ಇಲ್ಲಿರುವ ಉಪನ್ಯಾಸಕರ ಪರಿಶ್ರಮ ಬಹಳಷ್ಟಿದೆ ಎಂದು ಶಾಸಕ ಡಿ.ಎಮ್.ಐಹೊಳೆ ಹೇಳಿದರು.

ಬುಧವಾರ ಪಟ್ಟಣದ ಡಾ.ಬಾಬು ಜಗಜೀವನರಾಂ ಭವನದಲ್ಲಿ ಹಮ್ಮಿಕೊಂಡಿದ್ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿವಿಧ ಘಟಕಗಳ ಸಮಾರೋಪ ಸಮಾರಂಭ ಹಾಗೂ ಬಿ.ಎ., ಬಿ.ಕಾಂ. ಮತ್ತು ಬಿ.ಎಸ್ಸಿ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅವರು, ತಾಲೂಕಿನ ಬಡ ಮತ್ತು ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಪಟ್ಟಣದಲ್ಲಿ 18 ವರ್ಷಗಳ ಹಿಂದೆ ಪ್ರಾರಂಭಗೊಂಡ ಸರ್ಕಾರಿ ಪದವಿ ಕಾಲೇಜು, ಇಂದು ಇಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ತಮ್ಮ ಉತ್ತಮ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ. ಇಂದು ಸುಮಾರ 800 ಕ್ಕಿಂತ

ಹೆಚ್ಚಿನ ಸಂಖ್ಯೆಯಲ್ಲಿ ಈ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ವಿದ್ಯಾರ್ಥಿಗಳ ಇಲ್ಲಿ ಒಳ್ಳೆಯ ಶಿಕ್ಷಣ ಪಡೆದು ಕಾಲೇಜಿನ ಕೀರ್ತಿಯನ್ನು



ಹೆಚ್ಚಿಸಬೇಕೆಂದರು. ಚಿಕ್ಕೋಡಿ ಡಿ.ಐ.ಇ.ಟಿ ನಿವೃತ್ತ ಪ್ರಾಚಾರ್ಯ ಮೋಹನ ಜಿರಗಿಹಾಳ ಮಾತನಾಡಿದರು. ಕಾರ್ಯಕ್ರಮದಲ್ಲಿ ಮುಖಂಡರಾದ ಸದಾಶಿವ ಘೋರ್ಪಡೆ, ಪ್ರಾಚಾರ್ಯ ಎ.ಪಿ.ಮುಲ್ಲಾ, ಉಪನ್ಯಾಸಕರಾದ ಡಾ.ವಿವೇಕಾನಂದ

ಮಾನೆ, ಅಜೀಜ ಸನದಿ, ರಾಜಕುಮಾರ ಕಾಗೆ, ಸಂತೋಷ ಸಮಾಜೆ, ಡಾ.ಪ್ರಸಾದ್ ಆರ್.ಎ., ಡಾ.ವಿಜಯಲಕ್ಷ್ಮೀ ಜಿ., ಉತ್ತಮ ಕಾಂಬಳೆ ಹಾಗೂ ವಿದ್ಯಾರ್ಥಿಗಳು ಇದ್ದರು.

ಸರ್ಕಾರಿ ಶಾಲೆ ಉಳಿವಿಗೆ ಆಗ್ರಹ

ಬೆಳಗಾವಿ : ತಾಲೂಕಿನ ಕುಟ್ಟಲವಾಡಿ ಸರ್ಕಾರಿ ಶಾಲೆಯನ್ನು ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಮುಚ್ಚಿ, ಮಚ್ಚೆ ಶಾಲೆಗೆ ವಿಲೀನಗೊಳಿಸುವ ಸರ್ಕಾರದ ನಿರ್ಧಾರಿಸಿರುವುದನ್ನು ಖಂಡಿಸಿ ಕುಟ್ಟಲವಾಡಿ ಗ್ರಾಮಸ್ಥರು ಊರಿನ ಶಾಲೆ ಮುಂದೆ 'ನಮ್ಮೂರ ಶಾಲೆ ನಮ್ಮಯ ಕಣ್ಮಣಿ' ಎಂದು ಹೇಳುವುದರ ಮೂಲಕ ನಮ್ಮೂರ ಶಾಲೆಯನ್ನು ಯಾವುದೇ ಕಾರಣಕ್ಕೂ ಮುಚ್ಚಲು ಬಿಡುವುದಿಲ್ಲ ಪ್ರತಿಭಟನೆಯಲ್ಲಿ ಎಚ್ಚರಿಸಿದರು.

ಇದೇ ವೇಳೆ ಸಾರ್ವಜನಿಕ ಶಿಕ್ಷಣ ಉಳಿಸಿ ಸಮಿತಿಯ ನೀಲಕಂಠ ಕಣಬರಗಿ ಮಾತನಾಡಿ, ಊರಿನಲ್ಲಿ ಸರ್ಕಾರಿ ಶಾಲೆ ಇರುವುದರಿಂದ ಬಡ ಮಕ್ಕಳು ಶಿಕ್ಷಣ ಪಡೆಯುತ್ತಿದ್ದಾರೆ . ಈ ಶಾಲೆ ಮುಚ್ಚಿದರೆ ನಮ್ಮ ಚಿಕ್ಕ ಮಕ್ಕಳು ಬೇರೆ ಊರಿಗೆ ಹೋಗಿ ಕಲಿಯಲು ಸಾಧ್ಯವಿಲ್ಲ. ಸರ್ಕಾರವು ನಮ್ಮೂರ ಶಾಲೆ ಮುಚ್ಚಬಾರದು. ಬಡ ಮಕ್ಕಳ ಶಿಕ್ಷಣವನ್ನು ಕಸಿಯುವ ಕೆಪಿಎಸ್ ಮ್ಯಾಗ್ನೆಟ್ ಯೋಜನೆ ರದ್ದಾಗಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಮತ್ತೊರ್ವ ಎಐಡಿಎಸ್‌ಓ ಜಿಲ್ಲಾ ಸಂಚಾಲಕರಾದ ಮಹಾಂತೇಶ



ಬಿಳೂರ್ ಮಾತನಾಡಿ, ಸರ್ಕಾರವು ಬಡ ಜನರ ಬದುಕಿನತ್ತ ಗಮನಹರಿಸಿ ಊರಿನ ಸರ್ಕಾರಿ ಶಾಲೆಗಳನ್ನು ಮುಚ್ಚುವ ತನ್ನ ನಿರ್ಧಾರವನ್ನು ಕೈಬಿಡಬೇಕು ಮತ್ತು ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಸರ್ಕಾರಕ್ಕೆ ಆಗ್ರಹಿಸಿದರು.

ಈ ವೇಳೆ ಆನಂದ ದೇಸಾಯಿ, ಅನಂತ್, ಗುಂಡು ದೇಸಾಯಿ, ಪೋಷಕರು ಗ್ರಾಮಸ್ಥರು, ಸೇರಿದಂತೆ ವಿದ್ಯಾರ್ಥಿಗಳು ಇತರರು ಇದ್ದರು.

ನ್ಯಾಯಾಧೀಶರ ಬೀಳ್ಕೊಡುಗೆ ಸಮಾರಂಭ



ಸವದತ್ತಿ: ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ. ಸಿದ್ರಾಮ ರೆಡ್ಡಿ ಹಾಗೂ 1ನೇ ಹೆಚ್ಚುವರಿ ಸಿವಿಲ್ ನ್ಯಾಯಧೀಶರು ಹಾಗೂ ಜೆಎಂಎಫ್‌ಸಿ ಲಿಂಗಸಗೂರು ನ್ಯಾಯಾಲಯಕ್ಕೆ ವರ್ಗಾವಣೆಯಾದ ಪ್ರಯುಕ್ತ ವಕೀಲರ ಸಂಘ ಹಾಗೂ ತಾಲೂಕಿನ ಎಲ್ಲ ಸರ್ಕಾರಿ ಇಲಾಖೆಗಳ ಪರವಾಗಿ ನ್ಯಾಯವಾದಿಗಳ ಸಂಘದ ಹೊಸ ಸಬಾಭವನಲ್ಲಿ ಗೌರವಪೂರ್ವಕವಾಗಿ ಸತ್ಕರಿಸಿ ಬೀಳ್ಕೊಡಲಾಯಿತು.

ಕಾರ್ಯಕ್ರಮದಲ್ಲಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕಾ ಕಾನೂನು ಸೈವೆಗಳ ಸಮಿತಿಯ ಅಧ್ಯಕ್ಷರಾದ ಸಿದ್ದರಾಮ ಟಿ, ತಹಶೀಲ್ದಾರ್ ರಾದ ಮಲ್ಲಿಕಾರ್ಜುನ ಹೆಗ್ಗನ್ನವರ, ಸಹಾಯಕ ಸರ್ಕಾರಿ ಅಭಿಯೋಜಕರಾದ ಎಸ್.ಎಸ್.ಅಂಗಡಿ, ಮಂಜುನಾಥ ಸನ್ನಿಂಗನವರ ಮತ್ತು ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಜೆ.ಬಿ.ಮುನವಳ್ಳಿ, ಉಪಾಧ್ಯಕ್ಷರಾದ ಎಮ್. ಎಸ್. ಹುಬ್ಬಳ್ಳಿ, ಕಾರ್ಯದರ್ಶಿ ಎಸ್.ಎಸ್.ಕಾಳಪ್ಪನವರ ಹಾಗೂ ನ್ಯಾಯವಾದಿಗಳ ಸಂಘದ ಹಿರಿಯ ಕಿರಿಯ ಸದಸ್ಯರು ಇತರರು ಉಪಸ್ಥಿತರಿದ್ದರು.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಆಯ್ಕೆ

ರಾಮದುರ್ಗ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾ ಘಟಕದ 2026 ರಿಂದ 31 ರ ಅವಧಿಗೆ ಅಧ್ಯಕ್ಷರ ಸೇರಿದಂತೆ ವಿವಿಧ ಪದಾಧಿಕಾರಿಗಳ ಆಯ್ಕೆಗೆ ನಡೆದ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳು ಅವಿರೋಧವಾಗಿ ಆಯ್ಕೆಗೊಂಡಿವೆ ಎಂದು ಚುನಾವಣಾಧಿಕಾರಿ ಕೆ.ವೈ. ಗದಿಗೆನ್ನವರ ತಿಳಿಸಿದ್ದಾರೆ.

ಸುರೇಶ ವೆಂಕಟೇಶ ಪಾಟೀಲ- ಅಧ್ಯಕ್ಷ, ಶಿವಲಿಂಗಪ್ಪ ಚನಬಸಪ್ಪ ಹುರಕಡ್ಲಿ- ಪ್ರಧಾನ ಕಾರ್ಯದರ್ಶಿ, ರವೀಂದ್ರ ನಾರಾಯಣಪ್ಪ ಕೀಲಿಪುಟ್ಟಿ -ಖಜಾಂಚಿ, ನಿಂಗಪ್ಪ ಲಕ್ಷ್ಮಣ ಭಜಂತ್ರಿ - ಉಪಾಧ್ಯಕ್ಷ, ಮಹಾದೇವಿ ಭೀಮಪ್ಪ ಪಾಣಿ- ಮಹಿಳಾ ಉಪಾಧ್ಯಕ್ಷ, ರಜಿಯಾ ಹುಸೇನ ಬಾಶಾ -ಸಾಮಾನ್ಯ ಸಹ ಕಾರ್ಯದರ್ಶಿ, ಶ್ರೀದೇವಿ ಕಲ್ಲಪ್ಪ ಅಂಬಲಿ -ಮಹಿಳಾ ಸಹ ಕಾರ್ಯದರ್ಶಿ, ಅಶೋಕ ಶಿವಪ್ಪ ಗಾಣಿಗಿ- ಸಂಘಟನಾ ಕಾರ್ಯದರ್ಶಿ, ತಾರಾಮತಿ ಸೊಲಬನಗೌಡ ಹಿರಿಸ್ವನವರ- ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ತಾಲೂಕಾ ಗೌರವಾಧ್ಯಕ್ಷರಾಗಿ ಪರಪ್ಪ ನಿಂಗಪ್ಪ ಕುಂಬಾರ, ಜಿಲ್ಲಾ ಸಂಘಟನಾ ಕಾರ್ಯದರ್ಶಿಯಾಗಿ ಅಶೋಕ ವೆಂಕಪ್ಪ ಬೂದಿ, ನಿರ್ದೇಶಕರಾಗಿ ಲಕ್ಷ್ಮಣ ಮುದಕಪ್ಪ ಅಣ್ಣಿಗೇರಿ ಆಯ್ಕೆಯಾದ್ದಾರೆ. ಚುನಾವಣೆಯಲ್ಲಿ ಆಯ್ಕೆಗೊಂಡ ಎಲ್ಲಾ ಪದಾಧಿಕಾರಿಗಳಿಗೆ ಚುನಾವಣಾಧಿಕಾರಿ ಕೆ.ವೈ. ಗದಿಗೆನ್ನವರ ಪ್ರಮಾಣಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಸಹಾಯಕ ಚುನಾವಣಾಧಿಕಾರಿಯಾಗಿ ಎ.ಎ. ಮುರ್ತೋಜಿ ಕಾರ್ಯ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಕಾಗವಾಡ: ಐನಾಪುರ ಕುಡಚಿ ರಸ್ತೆಗೆ ಹೊಂದಿಕೊಂಡ ಬಾರಿಗಡ್ಡಿ ರಸ್ತೆ ಹಾಗೂ ಐನಾಪುರ- ಕೃಷ್ಣಾಕಿತ್ತೂರು ರಸ್ತೆಗೆ ಹೊಂದಿಕೊಂಡ ಅನಗಲ ರಸ್ತೆಗಳಿಗೆ ಬಹು ದಿನಗಳಿಂದ ರೈತರ ಬೇಡಿಕೆಯಾಗಿತ್ತು, ಶಾಸಕ ರಾಜು ಕಾಗೆ ಅವರ ಪ್ರಯತ್ನದಿಂದ ಇಂದು ಕಾಯಕಲ್ಪ ಸಿಕ್ಕಿದೆ ಎಂದು ಐನಾಪುರ ಪ ಪಂ ಸದಸ್ಯ ಅರುಣ ಗಾಣಿಗೇರ ಹೇಳಿದರು.

ಅವರು ಗುರುವಾರ ತಾಲೂಕಿನ ಐನಾಪುರ ಪಟ್ಟಣದ ಅನಗಲ್ಲ ಹಾಗೂ ಬಾರಿಗಡಿ ರಸ್ತೆಗಳ ಅಭಿವೃದಿಗೆ ಸನ್ 2025-26ನೇ ಸಾಲಿನ ಮುಖ್ಯಮಂತ್ರಿಗಳ ಮೂಲಭೂತ ಸೌಕರ್ಯ ವಿಶೇಷ ಅನುದಾನದಲ್ಲಿ ಮಂಜೂರಾದ 90 ಲಕ್ಷ ರೂ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಐನಾಪುರ ಪಟ್ಟಣದ ಎಲ್ಲ ಸಂಪರ್ಕ ರಸ್ತೆಗಳು ಹಾಗೂ ಅಭಿವೃದ್ಧಿ ಕಾಮಗಾರಿಗಳು ಚಾಲ್ತಿಯಲ್ಲಿದ್ದು, ಮುಂದಿನ ದಿನಮಾನದಲ್ಲಿ ಶಾಸಕ ರಾಜು ಕಾಗೆಯವರು ಇನ್ನೂ ಹೆಚ್ಚಿನ ಅನುದಾನ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ಪ ಪಂ ಸದಸ್ಯ ಹಾಗೂ ಪಿಕೆಪಿಎಸ್ ನ ಅಧ್ಯಕ್ಷ



ಪ್ರವೀಣ ಗಾಣಿಗೇರ ಮಾತನಾಡಿ, ಶಾಸಕ ರಾಜು ಕಾಗೆ ಅವರು ಕಳೆದ 20 ವರ್ಷಗಳಿಂದ ಕಾಗವಾಡ ಕ್ಷೇತ್ರದ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ಅನುದಾನ ತಂದು ಜನರ ಮೂಲಭೂತ ಸಮಸ್ಯೆಗಳಿಗೆ ಸ್ಪಂದಿಸುತ್ತ ಬಂದಿದ್ದು ಈ ಭಾಗದ ಜನರಿಗೆ ನೆಮ್ಮದಿ ತಂದಿದೆ ಎಂದರು.

ಈ ಸಂದರ್ಭದಲ್ಲಿ ಜಿ ಪಂ ಅಭಿಯಂತರ ವೀರಣ್ಣ ವಾಲಿ, ಮಡಿವಾಳ ಪಾಟೀಲ,ಸುಭಾಷ್ ಪಾಟೀಲ, ಚಮನ ರಾವ ಪಾಟೀಲ,ಗೋಪಾಲ ಕಟ್ಟಿ,ನಾರಾಯಣ ಕಟ್ಟಿ, ಸಂಜಯ ಬಿರಡಿ, ಸುರೇಶ ಅಡಿಸೇರಿ, ಕುಮಾರ ಜಯಕರ, ಪ್ರವೀಣ ಕುಲಕರ್ಣಿ, ಸುನಿಲ ಅವಟಿ,ಶಿವಾನಂದ ಬೆಳಕೂಡ, ವಿಜಯ ಹರಳೆ, ಮಹಾಲಿಂಗ ಕಮತೆ,ಗುಳಪ್ಪಾ ಚೌಗಲಾ,ಅಶೋಕ ಅಪರಾಜ,ಗುಂಡು ಖವಟಕೊಪ್ಪ,ಅರವಿಂದ ಕಾರ್ಚಿ,ಗುತ್ತಿಗೆದಾರ ಬಸವರಾಜ ಭಂಗಿ, ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು. ಇತರರು ಇದ್ದರು.

ಕಿರುಸುದ್ದಿ

ಅರ್ಜಿ ಆಹ್ವಾನ

ರಾಯಬಾಗ: ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ ಪೂರ್ವ ಬಾಲಕ/ಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ 2026-27ನೇ ಸಾಲಿಗೆ ಹೊಸದಾಗಿ ಪ್ರವೇಶ ಬಯಸುವ ಹಿಂದುಳಿದ ವರ್ಗಗಳಿಗೆ ಸೇರಿದ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪ್ರವೇಶ ಬಯಸುವ ವಿದ್ಯಾರ್ಥಿಗಳು ಜೂನ್ 8 ರೊಳಗೆ https://shp.karnataka.gov.in/bcwd ಅನ್ನು ಸಂಪರ್ಕಿಸಿ, ಆನ್ ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಿ, ರಾಯಬಾಗ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳ ಕಛೇರಿ ಅಥವಾ ಸಂಬಂಧಪಟ್ಟ ನಿಲಯ ಮೇಲ್ವಿಚಾರಕರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿಗಳು, ದಾದಾಸಾಹೇಬ ಪಾಟೀಲ ನಗರ, ಮಲ್ಲಿಕಾರ್ಜುನ ಗುಡಿ ಹತ್ತಿರ ರಾಯಬಾಗ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವಂತೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಅಧಿಕಾರಿ ಕಲ್ಪನಾ ಕಾಂಬಳೆ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ನಾಳೆ

ಕುಡಚಿ: ಕುಡಚಿ 110/33/11 ಕೆವಿ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ಮೇ 23ರಂದು ಬೆಳಿಗ್ಗೆ 9 ಗಂಟೆಯಿಂದ ಸಾಯಂಕಾಲ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಕೇಂದ್ರದ ಉಪಕರಣಗಳ ಮತ್ತು ಪರಿವರ್ತಕಗಳ ಮೊದಲ ತ್ರೈಮಾಸಿಕ ನಿರ್ವಹಣೆಯ ಕೆಲಸ ಕೈಗೊಳ್ಳುವ ಹಿನ್ನೆಲೆಯಲ್ಲಿ ಉಪಕೇಂದ್ರದ ವ್ಯಾಪ್ತಿಯಲ್ಲಿ ಬರುವ 11 ಕೆವಿ ಹೊರ ಹೋಗುವ ವಿದ್ಯುತ್ ಮಾರ್ಗಗಳಾದ ಎಫ್1-ಗುಂಡವಾಡ, ಎಫ್2-ಕುಡಚಿ ಪಟ್ಟಣ, ಎಫ್4-ಕವ್ವ ತೋಟ, ಎಫ್5-ಧರಣ, ಎಫ್7-ಶಿಡ್ಲಭಾವಿ-1, ಎಫ್8- ವಾಟರ್ ಸಪ್ಲಾಯ್, ಎಫ್ 9-ಲಂಗರ್ ತೋಟ, ಎಫ್10-ಶಿಡ್ಲಭಾವಿ-2, ಎಫ್11-ಗ್ರಾಮೀಣ ಎನ್. ಜೆ. ವಾಯ್. 33 ಕೆವಿ ಹೊರ ಹೋಗುವ ವಿದ್ಯುತ್ ಮಾರ್ಗಗಳಾದ ಎಫ್1- ಚಿಂಚಲಿ, ಎಫ್2-ಶಿರಗೂರ ಮಾರ್ಗಗಗಳಲ್ಲಿ ಬೆಳಿಗ್ಗೆ 9ರಿಂದ ಸಂಜೆ 6ರ ವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದ್ದು ರೈತರು ಸಾರ್ವಜನಿಕರು ಸಹಕರಿಸಬೇಕೆಂದು ಸಹಾಯಕ ಅಭಿಯಂತರರು ತಿಳಿಸಿದ್ದಾರೆ ಎಂದು 110ಕೆವಿ ವಿ.ವಿ. ಉಪ ಕೇಂದ್ರ ಎಸ್.ಒ ಕುಬೇರ ನಾಗರಬೆಟ್ಟ ಮಾಹಿತಿ ನೀಡಿದ್ದಾರೆ.

ನಾಳೆ ಕಾಮಗಾರಿಗೆ ಚಾಲನೆ

ಐಗಳಿ : ಸಮೀಪದ ಕನ್ನಾಳ ಗ್ರಾಮದಲ್ಲಿ ಮೇ 23ರಂದು ಸಂಜೆ 5 ಗಂಟೆಗೆ ಶಾಸಕರ ನಿಧಿಯಲ್ಲಿ ವಿವಿಧ ಕಾಮಗಾರಿಗೆ ಭೂಮಿ ಪೂಜೆಯನ್ನು ಅಥಣಿ ಮತಕ್ಷೇತ್ರದ ಶಾಸಕ ಲಕ್ಷ್ಮಣ ಸವದಿ ಚಾಲನೇ ನೀಡಲಿದ್ದಾರೆ. ಸರಕಾರಿ ಆಸ್ಪತ್ರೆ ಕೇಂದ್ರ, ಶಾಲಾ ಕಟ್ಟಡ, ಶ್ರೀ ದುರ್ಗಾದೇವಿಯ ಸಮುದಾಯ ಭವನ ಸೇರಿದಂತೆ ಅನೇಕ ಕಾಮಗಾರಿಗೆ ಶಂಕುಸ್ಥಾಪನೆ ಮಾಡಲಿದ್ದಾರೆ ಎಲ್ಲ ಅಭಿಮಾನಿಗಳು ನಿಗದಿತ ಸಮಯಕ್ಕೆ ಹಾಜರ ಇರಲು ಧುರೀಣ ವೆಂಕಣ್ಣಾ ಅಸ್ಕಿ ತಿಳಿಸಿದ್ದಾರೆ.

ಜೂನ್ 2ರವರೆಗೆ ಶಿಬಿರ

ಐಗಳಿ : ಸಮೀಪದ ಬಿಳ್ಳೂರ ಗ್ರಾಮದ ಶ್ರೀ ಗುರು ಬಸವ ವಿರಕ್ತ ಮಠದಲ್ಲಿ ಯುವ ಶಕ್ತಿ ಸಂವರ್ಧನ ಶಿಬಿರವು ಮೇ 24 ರಿಂದ ಜೂನ 2 ರ ವರೆಗೆ ಮುಂಜಾನೆ 6 ರಿಂದ 8 ರ ವರೆಗೆ ಸಂಜೆ 6 ರಿಂದ 8 ರ ವರೆಗೆ ಶಿಬಿರ ಜರುಗಲಿದೆ.

ಶಿಬಿರದ ಮಾರ್ಗದರ್ಶಕರು ಹಾಗೂ ವಿರಕ್ತ ಮಠದ ಪೀಠಾಧ್ಯಕ್ಷರು ಪೂಜ್ಯ ಗುರುಚನ್ನಬಸವ ಮಹಾ ಸ್ವಾಮಿಗಳು ನೀಡಲಿದ್ದಾರೆ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮಹಾ ಸಂಕಲ್ಪದ ಪೂರ್ಣತೆಗಾಗಿ ಯುವಕರಿಗೆ ತಿಳಿಸುವದು ಎಲ್ಲ ರೀತಿಯಿಂದ ಶಕ್ತಿವಂತರಾಗಲು ಹಾಗೂ ಅದಮ್ಯ ಉತ್ಸಾಹದ ಚಿಲುಮೆಯಂತಿರುವ ಯುವ ಶಕ್ತಿಗೆ ಯೋಗ್ಯ ಮಾರ್ಗದರ್ಶನ ಮಾಡುವದು ಜೊತೆಗೆ ಸಂಸ್ಕಾರ ಬಗ್ಗೆ ಹೇಳುವದು ಸುಂದರ ಬದುಕಿನ ದಾರಿ ತೋರಿಸುವದು ಅಲ್ಲದೆ ಅನೇಕ ವಿಚಾರಗಳನ್ನು ತಿಳಿಸುವದು ಈ ಶಿಬಿರದಲ್ಲಿ 10 ನೇ ತರಗತಿಯಿಂದ ಮೇಲಿನ ಯುವಕರಿಗೆ ಮಾತ್ರ ಇದೆ ಶಿಬಿರದ ಲಾಭ ಪಡೆಯಲು ಶ್ರೀ ವಿರಕ್ತ ಮಠ ಪರ ತಿಳಿಸಿದ್ದಾರೆ.

ಅಪರಿಚಿತ ವೃದ್ಧೆ ಸಾವು

ಬೆಳಗಾವಿ : ಬೆಳಗಾವಿಯ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಅಪರಿಚಿತ ವೃದ್ಧೆಯು ಮೃತಪಟ್ಟಿದ್ದಾಳೆ. ಸದರಿ ವೃದ್ಧೆಯ ಹೆಸರು, ವಿಳಾಸ ಹಾಗೂ ಅವಳ ಸಂಬಂಧಿಕರ ಬಗ್ಗೆ ಯಾವುದೇ ಸುಳಿವು ಪತ್ತೆಯಾಗಿರುವದಿಲ್ಲ. ಈ ಕುರಿತು ಬೆಳಗಾವಿ ಎಪಿಎಮ್ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವೃದ್ಧೆಯ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸ್ ಇನಸ್ಪೆಕ್ಟರ ಎಪಿ.ಎಮ್.ಸಿ. ಪೊಲೀಸ್ ಠಾಣೆ ಬೆಳಗಾವಿ ನಗರ ರವರಿಗೆ ಸಂಪರ್ಕಿಸಬಹುದು ಅಥವಾ ಎ.ಪಿ.ಎಮ್.ಸಿ ಪೊಲೀಸ ಠಾಣೆ ಸಂಪರ್ಕಿಸಬಹುದು ಎಂದು ಎಪಿಎಮ್ಸಿ ಪೊಲೀಸ್ ಠಾಣೆಯ ಠಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಖಾನಾಪುರ ಪಟ್ಟಣದ ಸರ್ಕಾರಿ ಪದವಿ ಕಾಲೇಜು ಆಯೋಜಿಸಿದ್ದ ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ದಾನಿಗಳನ್ನು ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಶಾಸಕ ವಿಠ್ಠಲ ಹಲಗೇಕರ ಹಾಗೂ ಇತರರನ್ನು ಸನ್ಮಾನಿಸಲಾಯಿತು.

ಸಂಗೀತ ಬೈಠಕ್ ಅವಶ್ಯ: ಹೆಗಡೆ

ಧಾರವಾಡ: ಸಂಗೀತ ಬೆಳವಣಿಗೆ, ಪ್ರತಿಭಾನ್ವಿತ ಯುವ ಕಲಾವಿದರಿಗೆ ವೇದಿಕೆ ಕಲ್ಪಿಸಲು ಸಂಗೀತದ ಬೈಠಕ್ ಅವಶ್ಯ ಎಂದು ಬೆಂಗಳೂರಿನ ಸಪ್ತಕ ಸಂಸ್ಥೆಯ ಸಂಸ್ಥಾಪಕ ಜಿ.ಎಸ್. ಹೆಗಡೆ ಹೇಳಿದರು.

ಬೆಂಗಳೂರಿನ ಸಪ್ತಕ ಹಾಗೂ ಧಾರವಾಡದ ಶೃತಿ ನಂದನ ಸಂಸ್ಥೆ ಇಲ್ಲಿನ ಕಲ್ಯಾಣನಗರದ ರವಿ ಕಟ್ಟಿ ಅವರ ನಿವಾಸದಲ್ಲಿ ಹಮ್ಮಿಕೊಂಡ ಸಂಗೀತ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಸಿತಾರ ವಾದಕರಾದ ಉಸ್ತಾದ್ ಶಫೀಕಖಾನ್ ಮಾತನಾಡಿ, ಇಂತಹ ಬೈಠಕ್‌ಗಳು ಯುವ ಪ್ರತಿಭೆಗಳ ಕಲೆ ಮುನ್ನಲೆಗೆ ತರಲಿವೆ ಎಂದರು. ವಿದೂಷಿ ಶುಭಾಂಗಿ ಜಾಧವ ಅವರ ಶಿಷ್ಯೆ ಶಿವಾನಿ ಕವಠೇಕರ ಅವರ ಗಾಯನ ಪ್ರಸ್ತುತಿಯೊಂದಿಗೆ ಚಾಲನೆ ದೊರೆಯಿತು. ಶಿವಾನಿ ಮಧುವಂತಿ ರಾಗ ಹಾಗೂ ಮರಾಠಿ ಅಭಂಗವನ್ನು ಪ್ರಸ್ತುತಪಡಿಸಿದರು. ಉಸ್ತಾದ್ ಶಫೀಕಖಾನ್ ಹಾಗೂ ಶೃತಿ ಸಮನ್ವಿತಾ ಕಟ್ಟಿ ಮನಮೋಹಕ ರಾಗೇಶ್ರೀ ರಾಗ ಪ್ರಸ್ತುತಪಡಿಸಿದರು. ದೀಪ್ತಿ ಪಾಟೀಲ ಮಾರುಬಿಹಾಗ ರಾಗವನ್ನು ಸಾದರಪಡಿಸಿದರು. ಡಾ. ಶ್ರೀಹರಿ ದಿಗ್ಗಾವಿ, ಜಯತೀರ್ಥ ಪಂಚಮುಖಿ ತಬಲಾ, ಬಸವರಾಜ ಹಿರೇಮಠ ಸಂವಾದಿನಿಯಲ್ಲಿ ಸಾಥ್ ನೀಡಿದರು. ಪ್ರಕಾಶ ಬಾಳಿಕಾಯಿ ಅವರನ್ನು ಸನ್ಮಾನಿಸಲಾಯಿತು. ಸಂಗೀತಗಾರ ಪಂ.ಹನುಮಂತ ಬುರ್ಲಿ, ರಾಧಾ ದೇಸಾಯಿ, ಜೆ.ನಿರಂಜನ, ಪ್ರವೀಣ ಹೂಗಾರ, ವೇಣುಗೋಪಾಲ ಜೋಶಿ, ಕೃಷ್ಣ ಜೋಶಿ, ರಮೇಶ ಭಟ್ಟ, ನೂರಜಹಾನ್ ನದಾಫ್, ಲತಾ ಪಾಟೀಲ ಇದ್ದರು.



ನೇಸರಗಿ: ಸಮೀಪದ ಸುತಗಟ್ಟಿ ಗ್ರಾಮದಲ್ಲಿ ಐಸಿಎಆರ್-ಕೆಎಲ್ಇ ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ ಹಾಗೂ ಇನಾಮದಾರ ಶುಗರ್ಸ್, ಮರಕುಂಬಿ ವತಿಯಿಂದ ಕಬ್ಬು ಬೆಳೆಯಲ್ಲಿ ಸಮತೋಲನ ರಸಗೊಬ್ಬರಗಳ ಬಳಕೆ ಮತ್ತು ಇತರೆ ಕೃಷಿ ಸಾಮಗ್ರಿಗಳ ಕುರಿತು ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಅನ್ನದಾತರಿಗೆ ನೀರು ಒದಗಿಸಿ

ಹುಕ್ಕೇರಿ: ಸಮೀಪದ ಹಿಡಕಲ ಜಲಾಶಯದಿಂದ ಬಾಗಲಕೋಟೆವರೆಗೆ ನೀರು ಹರಿಯುತ್ತಿದೆ. ಆದರೆ, ಹುಕ್ಕೇರಿ ಕ್ಷೇತ್ರದ ರೈತರ ಜಮೀನುಗಳಿಗೆ ನೀರು ಸಿಗದೆ ಸಂಕಷ್ಟ ಎದುರಾಗಿದೆ ಎಂದು ರಾಜ್ಯ ರೈತ ಸಂಘಟನೆ ಹಸಿರು ಸೇನೆ ರಾಜ್ಯಾಧ್ಯಕ್ಷ ಚೂನಪ್ಪಾ ಪೂಜೇರಿ ಆರೋಪಿಸಿದರು.

ಪಟ್ಟಣದ ಬಸವೇಶ್ವರ ವೃತ್ತದಲ್ಲಿ ಗುರುವಾರ ರೈತ ಸಂಘಟನೆ ಹಮ್ಮಿಕೊಂಡಿದ್ದ ಹುಕ್ಕೇರಿ ತಾಲೂಕು ಸಮಗ್ರ ನೀರಾವರಿ ಬೃಹತ್ ಪ್ರತಿಭಟನೆಯಲ್ಲಿ ಮಾತನಾಡಿದರು.

ಶಾಸಕ ನಿಖಿಲ್ ಕತ್ತಿ ಅವರು ನಮ್ಮ ತಾಲೂಕಿನ ರೈತರಿಗೆ ನೀರು ಕೊಡಿಸುವಂತೆ ಒತ್ತಾಯಿಸಿ ಸುವರ್ಣಸೌಧದ ಎದುರು ಸಾವಿರಾರು ಕಾರ್ಯಕರ್ತರೊಂದಿಗೆ ಧರಣಿ ಕುಳಿತುಕೊಳ್ಳಬೇಕು ಎಂದು ಆಗ್ರಹಿಸಿದರು.

ತಾಲೂಕಿನ ರೈತರು 50 ವರ್ಷಗಳಿಂದ ಕತ್ತಿ ನಂಬಿದ್ದಾರೆ. ಅವರ ಜಮೀನುಗಳಿಗೆ ನೀರು ಒದಗಿಸುವ ಜವಾಬ್ದಾರಿ ಶಾಸಕರದ್ದಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ

ಜಿಲ್ಲಾಧಿಕಾರಿಗಳಿಗೆರೈತರುಧರಣಿನಡೆಸಿದರೂ ಸ್ಪಂದಿಸಲು ಸಮಯವಿಲ್ಲದಂತಾಗಿದೆ. ರೈತರ ಸಹನೆ ಕಟ್ಟೆ ಒಡೆಯುವ ಮೊದಲು ಸಚಿವರು ಆಗಮಿಸಿ ಸಮಸ್ಯೆ ಬಗೆಹರಿಸಬೇಕು ಸಚಿವ ಸತೀಶ ಜಾರಕಿಹೊಳಿ ಅವರಿಗೆ ಸಂಸದರ ಚುನಾವಣೆ ಸಮಯದಲ್ಲಿ ಮನೆ-ಮನೆ ತಿರುಗಿದವರಿಗೆ ರೈತರ ನೀರಿನ ಪರಿಸ್ಥಿತಿ ಗೊತ್ತಿರಬೇಕು.ರೈತರು ಮತ ಹಾಕಿ ಕಳುಹಿಸಿದ್ದಾರೆ. ಅವರ ಋಣ ತೀರಿಸುವುದು ಜನಪ್ರತಿನಿಧಿಗಳ ಕರ್ತವ್ಯ. ವಾಗಿದೆ. ನೀರಾವರಿ ಇಲ್ಲದೆ ಬೆಳೆ ಇಲ್ಲ, ಆದಾಯ ಇಲ್ಲ. ಇದರಿಂದ ರೈತ ಕುಟುಂಬದ

ಮಕ್ಕಳಿಗೆ ಮದುವೆಗೂ ತೊಂದರೆ ಆಗುತ್ತಿದೆ ಎಂಬುದು ಕಟು ವಾಸ್ತವಾಗಿದೆ ಎಂದು ಸಮಾಧಾನ ವ್ಯಕ್ತಪಡಿಸಿದರು.



> ನೀರಾವರಿಗೆ ಆದ್ಯತೆ ಕೊಡಿ. ರಾಜ್ಯ ಬಜೆಟ್‌ನಲ್ಲಿ ನೀರಾವರಿಗೆ ನಿರ್ದಿಷ್ಟ ಹಂಚಿಕೆ ಆಗುವವರೆಗೆ ಹೋರಾಟ ಅನಿವಾರ್ಯವಾಗಿದೆ.
> ■ ಚೂನಪ್ಪಾ ಪೂಜೇರಿ, ರಾಜ್ಯಾಧ್ಯಕ್ಷ

ಶಾಸಕ ನಿಖಿಲ ಕತ್ತಿ ಮಾತನಾಡಿ, ಕ್ಷೇತ್ರಕ್ಕೆ ಸಂಕೇಶ್ವರ ಮರುವಿಂಗಡಣೆ ಆದ ಮೇಲೆ ಹುಕ್ಕೇರಿ ಭಾಗಕ್ಕೆ ನೀರಿನ ಅಭಾವವಾಗಿದೆ. ಸಂಕೇಶ್ವರ ಭಾಗದ ಸಂಪೂರ್ಣ ನೀರಾವರಿ ಮಾಡಬೇಕು ಹುಕ್ಕೇರಿ ಮತಕ್ಷೇತ್ರದಲ್ಲಿ 41 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಯಶಸ್ವಿಯಾಗಿ ಪ್ರಾರಂಭಿಸಿದ್ದೇವೆ. ಇದರ ಜತೆಗೆ ಅಡವಿಸಿದ್ದೇಶ್ವರ ಮತ್ತು ಶಂಕರಲಿಂಗ ಏತ ನೀರಾವರಿ ಯೋಜನೆ ಮುಕ್ತಾಯ ಹಂತದಲ್ಲಿದ್ದು, ಆದಷ್ಟು ಬೇಗ ಲೋಕಾರ್ಪಣೆ ಮಾಡಲಿದ್ದೇವೆ. ಬೇಸಿಗೆಯಲ್ಲಿ ಬತ್ತುವ ಹಿರಣ್ಯಕೇಶಿ ನದಿಯನ್ನು 12 ತಿಂಗಳು ನೀರು ತುಂಬಿರುವಂತೆ ಮಾಡಲು ಸುಲ್ತಾನಪೂರ, ಯರನಾಳ, ಬಡಕುಂದ್ರಿ, ಕೋಚರಿ ಮತ್ತು ಗೋಟೂರ ಬ್ಯಾರೇಜುಗಳಿಗೆ ನೀರು ತುಂಬಿಸುವ ಯೋಜನಾ ಕಾಮಗಾರಿ ಮುಕ್ತಾಯ ಹಂತದಲ್ಲಿದೆ. ಅದು ಸಹ ಆದಷ್ಟು ಬೇಗ ಲೋಕಾರ್ಪಣೆ ಆಗಲಿದೆ ಎಂದರು.

ನಿಡಸೋಶಿಯ ಜಗದ್ಗುರು ಡಾ, ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ, ವೀರಕ್ತಮಠದ ಶಿವಬಸವ ಸ್ವಾಮಿಜಿ, ಮಾತನಾಡಿ ರೈತರಿಗೆ ನೀರು ವಿದ್ಯುತ್ ಸರಿಯಾಗಿ ಒದಗಿಸಿದಲ್ಲಿ ಸರಕಾರ ಸಹಾಧನ ಅವಶ್ಯಕತೆ ಇಲ್ಲ. ಹುಕ್ಕೇರಿ ಮತಕ್ಷೇತ್ರದ ನೀರಾವರಿಯಿಂದ ವಂಚಿತವಾದ ಪ್ರದೇಶವನ್ನು ಶೀಘ್ರವಾಗಿ ಸರಕಾರ ನೀರಾವರಿ ಒಳಪಡಿಸಬೇಕು ಎಂದು ಅಗ್ರಹಿಸಿದರು.

ಜಗದೀಶ ದೇವರೆಡ್ಡಿ, ರಾಜು ಪವಾರ, ಸತ್ಯಪ್ಪಾ ಮಲ್ಲಪೂರ, ಮಂಜು ಪೂಜೇರಿ, ರಾಹುಲ್ ಕುಬಕಟ್ಟಿ ಸೇರಿದಂತೆ ರೈತ ಮುಖಂಡರು ಮಾತನಾಡಿದರು. ರಾಜ್ಯ ರೈತ ಸಂಘಟನೆ ಹಸಿರು ಸೇನೆಯ ಸಂಘಟನೇಯ ಗೌರವಾಧ್ಯಕ್ಷ ಶಶಿಕಾಂತ ಗುರುಜಿ, ಸತ್ಯಪ್ಪಾ ನಾಯಿಕ, ಎಕೆ ಪಾಟೀಲ, ಉದಯ ಹುಕ್ಕೇರಿ, ಭಾಗಿ ಗುರು ಕುಲಕರ್ಣಿ ರಾಜು ಮುನ್ನೋಳಿ, ಶೀಥಲ ಮತ್ತಿತರಿದ್ದರು.

ಗ್ಯಾರಂಟಿ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ಒತ್ತು: ತಾಪಂ ಇಒ

ಚನ್ನಮ್ಮನ ಕಿತ್ತೂರು: ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ನಿಜವಾದ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಲು ಅಧಿಕಾರಿಗಳು ಇನ್ನಷ್ಟು ಚುರುಕಾಗಿ ಹಾಗೂ ಪರಸ್ಪರ ಸಮನ್ವಯದಿಂದ ಕೆಲಸ ಮಾಡಬೇಕೆಂದು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ನಿಂಗಪ್ಪ ಮಸಳಿ ತಿಳಿಸಿದರು.

ತಾಲೂಕು ಪಂಚಾಯತ್ ಕಿತ್ತೂರು ಸಭಾಭವನದಲ್ಲಿ ಮಂಗಳವಾರ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಯೋಜನೆಗಳಡಿ ಸ್ವೀಕರಿಸಲಾಗಿರುವ ಅರ್ಜಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದರೊಂದಿಗೆ ಯಾವುದೇ ಹಂತದಲ್ಲೂ ವಿಳಂಬ ಉಂಟಾಗದಂತೆ ಕ್ರಮವಹಿಸಬೇಕು. ಸ್ಥಳೀಯ ಮಟ್ಟದಲ್ಲಿ ಎದುರಾಗುವ ಸಮಸ್ಯೆಗಳನ್ನು ತಕ್ಷಣ ಗುರುತಿಸಿ ಪರಿಹಾರ ಒದಗಿಸುವ ಮೂಲಕ ಫಲಾನುಭವಿಗಳಿಗೆ ಸೌಲಭ್ಯ ತಲುಪಿಸುವಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದು ಅವರು ಸೂಚಿಸಿದರು.

ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ, ಜವಾಬ್ದಾರಿ ಮತ್ತು ಸಮನ್ವಯತೆ ಪ್ರಮುಖ ಪಾತ್ರ ವಹಿಸುತ್ತವೆ. ಈ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಉತ್ತಮ ಫಲಿತಾಂಶ ಸಾಧಿಸಲು ಸಾಧ್ಯವೆಂದು ಅವರು ಅಭಿಪ್ರಾಯಪಟ್ಟರು.

ಜಿಲ್ಲಾ ಗ್ಯಾರಂಟಿ ಸಮಿತಿಯ ಉಪಾಧ್ಯಕ್ಷ ರುದ್ರಯ್ಯ ಹಿರೇಮಠ ಮಾತನಾಡಿ, ಸರ್ಕಾರದ ಈ ಯೋಜನೆಗಳು ಸಾಮಾನ್ಯ ಜನರ ಜೀವನಮಟ್ಟವನ್ನು ಉತ್ತಮಗೊಳಿಸುವಲ್ಲಿ ಸಹಾಯಕವಾಗಿವೆ. ಆದ್ದರಿಂದ ಅರ್ಹ ಫಲಾನುಭವಿಗಳಿಗೆ ಯಾವುದೇ ಅಡಚಣೆ ಇಲ್ಲದೆ ಸೌಲಭ್ಯ ದೊರಕುವಂತೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ತಾಲೂಕು ಗ್ಯಾರಂಟಿ ಸಮಿತಿಯ ಅಧ್ಯಕ್ಷ ಗಂಗಪ್ಪ ಹುರಕಡ್ಲಿ ಮಾತನಾಡಿದರು.

ಸಭೆಯಲ್ಲಿ ತಾಪಂ ಸಹಾಯಕ ನಿರ್ದೇಶಕರು ಮಹಮ್ಮದ್ ಗೌಸ್ ರಿಸಲ್ದಾರ್, ವಿಜಯ್ ಪಾಟೀಲ್, ಕಚೇರಿ ವ್ಯವಸ್ಥಾಪಕಿ ರಾಜೇಶ್ವರಿ ಪಟ್ಟಣಶೆಟ್ಟಿ ಸೇರಿದಂತೆ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು, ಸಮಿತಿ ಸದಸ್ಯರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ಸಭೆಯಲ್ಲಿ ಯೋಜನೆಗಳ ಪ್ರಗತಿ ಕುರಿತು ಚರ್ಚಿಸಿ ಮುಂದಿನ ಕ್ರಮಗಳ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು.



ತಂದೆ- ತಾಯಿ, ಗುರು ಗೌರವಿಸಿ:ಡಾ.ಸಿದ್ದಣ್ಣ

ರಾಮದುರ್ಗ: ಸತತ ಪ್ರಯತ್ನ, ಕಲಿತ ವಿದ್ಯೆ ನೆನಪು, ಗೆಳತನ ತಾಯಿ ತಂದೆ ಗುರು ಹಿರಿಯರ ಮೇಲಿನ ಪ್ರೀತಿ ಶಾಶ್ವತವಾಗಿರಬೇಕು ಎಂದು ಜಾನಪದ ಆಶುಕವಿ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಡಾ.ಸಿದ್ದಣ್ಣ ಬಿದರಿ ಹೇಳಿದರು.

ಸ್ಥಳೀಯ ವಿದ್ಯಾ ಪ್ರಸಾರಕ ಸಮಿತಿಯ ಸಿ.ಎಸ್.ಬೆಂಬಳಗಿ ಕಲಾ, ಶಾ.ಎಂ.ಆರ್ .ಪಾಲರೇಶಾ ವಿಜ್ಞಾನ ಹಾಗೂ ಜಿ.ಎಲ್.ರಾಠಿ ವಾಣಿಜ್ಯ ಮಹಾವಿದ್ಯಾಲಯದ 60ನೆಯ ವಾರ್ಷಿಕೋತ್ಸವದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಹಿರಿಯರಿಗೆ, ತಂದೆ ತಾಯಿಗಳಿಗೆ ಗೌರವ ಕೊಡುವ ಕೆಲಸ ಮಾಡಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಪ್ರಸಾರಕ ಸಮಿತಿಯ ಅಧ್ಯಕ್ಷ ಎಸ್. ಎಸ್. ಸುಲ್ತಾನಪೂರ ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿನಿ ದ್ರಾಕ್ಷಾಯನಿ ಬಡಿಗೇರ ರಚಿಸಿದ ಕಥಾ ಸಂಕಲನ ನೈಜ ಬದುಕಿನ ಅನಾವರಣ ಹಾಗೂ ವೆಂಕಟೇಶ ಒಂಟನೂರ ರಚಿಸಿದ ಅಂತರಾಳದ ಮಾತು ಪುಸ್ತಕ ಬಿಡುಗಡೆ ಮಾಡಲಾಯಿತು.

ಮಹಾವಿದ್ಯಾಲಯದ ಪ್ರಥಮ ಸ್ಥಾನ ಪಡೆದ ಹನಮಂತ ಚನ್ನದಾಸರ ಬಿ.ಎ. ಅಂತಿಮ ವರ್ಷ, ಬಿ.ಎಸ್ಸಿ. ಅಂತಿಮ ವರ್ಷದಲ್ಲಿ ಪ್ರಥಮ ಸ್ಥಾನ ಪಡೆದ ರೇಷ್ಮಾ ಎಲ್.ಇಮ್ಮಾಬಾಯಿ ಹಾಗೂ ಬಿ.ಕಾಂ. ಅಂತಿಮ ವರ್ಷದಲ್ಲಿ ಪ್ರಥಮ ಸ್ಥಾನ ಪಡೆದ ಕುಮಾರಿ ಲಕ್ಷ್ಮೀ ಜಿ.ಪಾಟೀಲ ಮತ್ತು 2025-26ನೆಯ ಸಾಲಿನ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಕಬಡ್ಡಿ, ನೆಟ್‌ಬಾಲ್ ಹಾಗೂ ಚೆಸ್ ಆಟದಲ್ಲಿ ಒಟ್ಟು 10 ಬ್ಲ್ಯೂಗಳಾಗಿದ್ದ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಸನ್ಮಾನಿಸಲಾಯಿತು.

ಪುರಷರ ವಿಭಾಗದಲ್ಲಿ ಸಮಗ್ರ ವೀರಾಗ್ರಣಿ ಪ್ರಶಸ್ತಿಯನ್ನು ಸಿದ್ದಲಿಂಗಪ್ಪ ಕ್ವಾರಿ ಹಾಗೂ ಸಿದ್ದಪ್ಪ ಕಲ್ಲೂರ ಹಾಗೂ ಮಹಿಳೆಯರ ವಿಭಾಗದಲ್ಲಿ ಸಮಗ್ರ ವೀರಾಗ್ರಣಿ ಪ್ರಶಸ್ತಿಯನ್ನು ಪ್ರೀಯಾ ಬಂಡಿವಡ್ಡರ ಹಾಗೂ ಸಾನಿಯಾ ಹಾಜಿ ಪಡೆದುಕೊಂಡರು. ಪ್ರಾಚಾರ್ಯ ಡಾ. ಪಿ. ಬಿ. ತೆಗ್ಗಿಹಳ್ಳಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಮಖಾನಾ ಉಪಾಧ್ಯಕ್ಷ ಎ. ಡಿ. ಕಾಮತ್ ವಾರ್ಷಿಕ ವರದಿ ಮಂಡಿಸಿದರು.

ವಿದ್ಯಾ ಪ್ರಸಾರಕ ಸಮಿತಿಯ ಉಪಾಧ್ಯಕ್ಷ ಪಿ. ಎಂ. ಪಟ್ಟಣ, ಗೌರವ ಕಾರ್ಯದರ್ಶಿ ಆರ್. ಪಿ. ಜಗತಾಪ, ಸದಸ್ಯರಾದ ಡಾ.ವ್ಹಿ.ಬಿ.ಕುಲಗೋಡ, ವ್ಹಿ. ಎ. ಅದ್ಯಾಪಕರ, ಎಸ್. ಜಿ.ಚಿಕ್ಕೋಡ, ಎ. ವ್ಹಿ. ಅದ್ಯಾಪಕರ, ಆರ್.ಜಿ.ಮ್ಯಾಮಟ್ಟಿ, ಪ್ರಭಾಕರ ಬೆಂಬಳಗಿ, ಪ್ರೇಮನಾಥ ಬೆಂಬಳಗಿ ಕಾರ್ಯಕ್ರಮದಲ್ಲಿದ್ದರು.



15ನೇ ಹಣಕಾಸು ಯೋಜನೆಯ ಅನುದಾನ ಬಿಡುಗಡೆಗೆ ಮನವಿ

ಖಾನಾಪುರ: ಬೆಳಗಾವಿ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತಿಗಳಿಗೆ 15ನೇ ಹಣಕಾಸು ಯೋಜನೆಯಡಿ ಅನುದಾನ ಬಿಡುಗಡೆಯಾಗುವಲ್ಲಿ ವಿಳಂಬವಾಗಿರುವ ಕಾರಣ ಗ್ರಾಮ ಪಂಚಾಯತಿಗಳಲ್ಲಿ ಆರ್ಥಿಕ ಮುಗ್ಗಟ್ಟು ಎದುರಾಗಿದ್ದು, ಮುಂದಿನ ಮಳೆಗಾಲದ ಸಂದರ್ಭದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ತುರ್ತು ನಿರ್ವಹಣೆಗಾಗಿ ಪ್ರತಿ ಗ್ರಾಮ ಪಂಚಾಯತಿಗೆ ತಲಾ 10 ಲಕ್ಷ ವಿಶೇಷ ಅನುದಾನವನ್ನು ಮಂಜೂರು ಮಾಡಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪಂಚಾಯತ್ ರಾಜ್ ಇಲಾಖೆಯ ಆಯುಕ್ತರಿಗೆ ಲಿಖಿತ ಮನವಿಯನ್ನು ಸಲ್ಲಿಸಲಾಗಿದೆ ಎಂದು ಸರ್ಕಾರಿ ನೌಕರರ ಸಂಘದ ಆರ್‌ಡಿಪಿಆರ್ ಇಲಾಖೆಯ ಪ್ರತಿನಿಧಿ ಬಾಲರಾಜ್ ಭಜಂತ್ರಿ ಮಾಹಿತಿ ನೀಡಿದ್ದಾರೆ.

ಪಟ್ಟಣದಲ್ಲಿ ಗುರುವಾರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಬೆಳಗಾವಿ ಜಿಲ್ಲೆಯ ಶೇ.80ರಷ್ಟು ಗ್ರಾಮ ಪಂಚಾಯತಿಗಳಿಗೆ ತೆರಿಗೆ ವಸೂಲಾತಿಯಿಂದ ವಾರ್ಷಿಕ 5 ರಿಂದ 10 ಲಕ್ಷ ಆರ್ಥಿಕ ಸಂಪನ್ಮೂಲ ದೊರೆಯುತ್ತಿದ್ದು, ಈ ಹಣದಲ್ಲಿ ಗ್ರಾಮ ಪಂಚಾಯತಿಗಳ ನಿರ್ವಹಣೆ ಕಷ್ಟಕರವಾಗಿದೆ. ಈ ಹಣದಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಕುಡಿಯುವ ನೀರು ಸರಬರಾಜು, ಬೀದಿ ದೀಪಗಳ ನಿರ್ವಹಣೆ, ಗ್ರಾಪಂ ಸಿಬ್ಬಂದಿ ವೇತನ ಪಾವತಿ, ಚರಂಡಿಗಳ ಸ್ವಚ್ಛತೆ, ಕಸ ವಿಲೇವಾರಿ ವಾಹನಗಳ

> ರಾಜ್ಯದ ಯಾವ ಗ್ರಾಮ ಪಂಚಾಯತಿಗೂ 2025-26ನೇ ಆರ್ಥಿಕ ವರ್ಷದ 15ನೇ ಹಣಕಾಸು ಆಯೋಗದ ಅನುದಾನ ಇದುವರೆಗೂ ಬಿಡುಗಡೆಯಾಗಿಲ್ಲ. ಈ ಸಮಸ್ಯೆಯನ್ನು ನಮ್ಮ ಸಂಘದ ರಾಜ್ಯ ಘಟಕ ಲಿಖಿತ ಮನವಿಯ ಮೂಲಕ ಆಯುಕ್ತರ ಗಮನಕ್ಕೆ ತಂದಿದೆ.
> ■ ಜ್ಯೋತಿಬಾ ಕಾಮಕರ, ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘದ ಖಾನಾಪುರ ತಾಲೂಕು ಘಟಕದ ಅಧ್ಯಕ್ಷ.

ನಿರ್ವಹಣೆ, ಸ್ವಚ್ಛತಾ ಕಾರ್ಮಿಕರ ವೇತನ ಪಾವತಿ ಮಾಡುವುದು ಅಸಾಧ್ಯ. ಹೀಗಾಗಿ ಕೂಡಲೇ ಇಲಾಖೆಯಿಂದ ಪ್ರತಿ ಗ್ರಾಮ ಪಂಚಾಯತಿಗಳಿಗೆ ತಲಾ 10 ಲಕ್ಷ ವಿಶೇಷ ಆರ್ಥಿಕ ಅನುದಾನ ಒದಗಿಸಬೇಕು ಎಂದು ಇಲಾಖೆಯ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ. ನಮ್ಮ ಸಂಘದ ಮನವಿ ಸ್ವೀಕರಿಸಿರುವ ಆಯುಕ್ತರು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಅನುದಾನ ಒದಗಿಸುವ ಬಗ್ಗೆ ಭರವಸೆ ನೀಡಿದ್ದಾರೆ. ಅನುದಾನ ಲಭ್ಯವಾದರೆ ಎಲ್ಲ ಗ್ರಾಮ ಪಂಚಾಯತಿಗಳಿಗೆ ಅನುಕೂಲವಾಗಲಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ತಾಲೂಕಿನ ಸರ್ಕಾರಿ ನೌಕರರ ಮತ್ತು ಪಿಡಿಒಗಳ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಇದ್ದರು.

ಕನ್ನಡದ ಕಡೆಗಣನೆ; ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ

ಬೆಳಗಾವಿ : ಕನ್ನಡ ನಾಡು ನುಡಿ ರಕ್ಷಣೆಗಾಗಿ ಕನ್ನಡಪರ ಸಂಘಟನೆಗಳು ಹಗಲಿರುಳು ಶ್ರಮಿಸುತ್ತಿದ್ದು, ಅದರಲ್ಲಿ ಗಡಿನಾಡು ಕನ್ನಡಿಗರ ಸೇನೆಯು, ವಿಶೇಷವಾಗಿ ಗಡಿ ಭಾಗದಲ್ಲಿ ಇರುವ ಗ್ರಾಮಗಳಲ್ಲಿ ಕನ್ನಡದ ಜಾಗೃತಿಗಾಗಿ ಕನ್ನಡ ಭಾಷೆಯು ಯಾವ ಗ್ರಾಮದಲ್ಲಿ ಕಡಿಮೆ ಇದೆಯೋ ಅಲ್ಲಿ ಕನ್ನಡ ಬೆಳೆಸುವ ಉದ್ದೇಶವನ್ನು ಇಟ್ಟುಕೊಂಡಿದ್ದು, ಕಳೆದ ಆರು ತಿಂಗಳಿನಿಂದ ವಿಶೇಷ ಅಭಿಯಾನ ಪ್ರಾರಂಭಿಸಿದೆ. ಇನ್ನೂ ಪರಿಣಾಮಕಾರಿಯಾದ ಫಲಿತಾಂಶ ಬಾರದೆ ಇರುವುದರಿಂದ ಕೆಲ ಗ್ರಾಮ ಪಂಚಾಯತಿ ಅಧಿಕಾರಿಗಳ ವಿರುದ್ಧ ಆಕ್ರೋಶವನ್ನು ಹೊರ ಹಾಕಿದವು.


ಹೊನಗಾ, ಕಡೋಲಿ ಗ್ರಾಮಗಳಲ್ಲಿ, ರಾಜ್ಯ ಸರ್ಕಾರದ ಆದೇಶದ ಪ್ರಕಾರ ಕನ್ನಡ ಭಾಷೆಯ ಅನುಷ್ಠಾನ ಆಗದೇ, ವಾಣಿಜ್ಯ ಉದ್ದಿಮೆಗಳು ಹಾಗೂ ಸಂಸ್ಥೆಗಳಲ್ಲಿ ಅನ್ಯ ಭಾಷೆಯ ನಾಮಫಲಕಗಳು ಹಾಗೂ ಅನ್ಯಭಾಷೆಯ ಬೋರ್ಡ್‌ಗಳನ್ನು ಅಂಗಡಿ ಇತ್ಯಾದಿಗಳಿಗೆ ಹಾಕಿಕೊಂಡು ಕನ್ನಡ ಭಾಷೆಯನ್ನು ಕಡೆಗಣನೆ ಮಾಡಲಾಗುತ್ತಿದೆ ಎಂದು ಗಡಿನಾಡು ಕನ್ನಡಿಗರ ಸೇನೆಯ ಪದಾಧಿಕಾರಿಗಳು ಅಸಮಾಧಾನವನ್ನು ಹೊರ ಹಾಕಿವೆ. ಕಳೆದ ಆರು ತಿಂಗಳ ಹಿಂದೆ ಗಡಿ ಭಾಗದ ಗ್ರಾಮಗಳಲ್ಲಿ ಕನ್ನಡ ಭಾಷೆಯ ಕಡ್ಡಾಯ ಅನುಷ್ಠಾನಕ್ಕಾಗಿ ಸಂಘಟನೆಯಿಂದ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಯಶವಂತ ಕುಮಾರ ಅವರಿಗೆ ಮನವಿ ಸಲ್ಲಿಸಲಾಗಿತ್ತು. ತಕ್ಷಣವೇ ಸ್ಪಂದನೆ ನೀಡಿ, ಕನ್ನಡ ನಮ್ಮ ಮಾತೃ ಭಾಷೆ ಎಂದು ಒಬ್ಬ ಕನ್ನಡದ ಅಧಿಕಾರಿಯಾಗಿ ಹೆಮ್ಮೆಯಿಂದ, ಕನ್ನಡ ಭಾಷೆ ಕಡ್ಡಾಯವಾಗಿ ಜಾರಿಯಾಗಬೇಕು ಎಂದು ಆದೇಶ ಹೊರಡಿಸಿದ್ದರು, ಆದರೆ, ತಾಪಂ ಅಧಿಕಾರಿಗಳಿಗೆ ಗ್ರಾಪಂ ನಲ್ಲಿ ಬೆಲೆ ಕೊಡುತ್ತಿಲ್ಲ ಎಂದು ಗ್ರಾಮಪಂ ಗಳ ವಿರುದ್ಧ ಕನ್ನಡಪರ ಸಂಘಟನೆಗಳು ಆಕ್ರೋಶವನ್ನು ಹೊರ ಹಾಕಿದವು. ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ ಸಿಇಒ ನೇತೃತ್ವದಲ್ಲಿ ಗಡಿ ಭಾಗದಲ್ಲಿರುವ ಗ್ರಾಪಂ ಅಧಿಕಾರಿಗಳಿಗೆ ಕನ್ನಡ ಕಡ್ಡಾಯ ಎಂದು ಕಟ್ಟುನಿಟ್ಟಿನ ಆದೇಶ ನೀಡಬೇಕೆಂದು ಆಗ್ರಹಿಸಿದರು. ಒಂದು ವೇಳೆ ಬೆಳಗಾವಿಯ ಗಡಿ ಭಾಗದಲ್ಲಿ ಕನ್ನಡ ಬಳಕೆ ಮಾಡದೆ ಅನ್ಯ ಭಾಷೆಯನ್ನು ಮಾತ್ರ ಬಳಕೆ ಮಾಡಿದಲ್ಲಿ ಗಡಿ ಭಾಗದ ಗ್ರಾಪಂ ಕಚೇರಿಗಳ ಮುಂದೆ ಉಗ್ರ ಧರಣಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪದವಿ ಶಿಕ್ಷಣ ವಿದ್ಯಾರ್ಥಿ ಜೀವನದ ಮಹತ್ವದ ಘಟ್ಟ

ಖಾನಾಪುರ: ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ಕಾಲೇಜಿನ ಸಾಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್ ಮತ್ತು ಸ್ಕೌಟ್ಸ್, ಗೈಡ್ಸ್ ಚಟುವಟಿಕೆಗಳಲ್ಲಿ ಸಾಧಕರ ಸತ್ಕಾರ ಸಮಾರಂಭ ಗುರುವಾರ ಪಟ್ಟಣದ ಹೊರವಲಯದ ಶನಾಯಾ ಪಾಮ್ಸ್ ಸಭಾಗೃಹದಲ್ಲಿ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ವಿಠ್ಠಲ ಹಲಗೇಕರ ಬಳಿಕ ಮಾತನಾಡಿ, ಪದವಿ ಶಿಕ್ಷಣ ವಿದ್ಯಾರ್ಥಿಗಳಿಗೆ ತಮ್ಮ ಬದುಕು ರೂಪಿಸಿಕೊಳ್ಳುವ ಸೂಕ್ತ ವೇದಿಕೆ. ಇದನ್ನು ಯಶಸ್ವಿಯಾಗಿ ಮುಗಿಸಿದಾಗ ವಿದ್ಯಾರ್ಥಿಗಳ ಭವಿಷ್ಯ ಪರಿಪೂರ್ಣವಾಗಲಿದೆ. ಕಾಲೇಜಿನ ವಿದ್ಯಾರ್ಥಿಗಳು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ, ಕ್ರೀಡೆ, ಎನ್.ಎಸ್.ಎಸ್, ರೆಡ್-ಕ್ರಾಸ್ ಮತ್ತಿತರ ಕ್ಷೇತ್ರಗಳಲ್ಲಿ ತಮ್ಮದೇ ಆದ ವಿಶೇಷ ಸಾಧನೆಗಳನ್ನು ಮಾಡಿರುವುದನ್ನು ಗಮನಿಸಿದಾಗ ಈ ಕಾಲೇಜಿನಲ್ಲಿ ಪರಿಪೂರ್ಣತೆ ಇರುವುದು ಗೋಚರಿಸುತ್ತದೆ ಎಂದು ಅಭಿಪ್ರಾಯ ಪಟ್ಟರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಕೆಎಲ್ಇ ಸಂಸ್ಥೆಯ ತರಬೇತಿ ಮತ್ತು ಅಭಿವೃದ್ಧಿ ಅಧಿಕಾರಿ ಸಮೀರ ಮಜಲಿ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ.ಡಿ.ಎಮ್.ಜವಳಕರ ವಹಿಸಿದ್ದರು. ಇದೇ ಸಂಧರ್ಭದಲ್ಲಿ ಕಾಲೇಜಿನ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ವಿಶೇಷ ಸಾಧನೆಗೈದ ವಿದ್ಯಾರ್ಥಿಗಳನ್ನು, ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರನ್ನು, ಕಾಲೇಜಿನ ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ರಕ್ತದಾನ ನೀಡಿದ ದಾನಿಗಳನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು.



>> ಖಾನಾಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಾರ್ಷಿಕ ಸ್ನೇಹ ಸಮ್ಮೇಳನ ಸಂಪನ್ನ

ಕಾರ್ಯಕ್ರಮದಲ್ಲಿ ಅಪ್ಪಯ್ಯ ಕೊಡೊಳಿ, ಜಾರ್ಡನ್ ಗೋನ್ಸಾಲ್ವಿಸ್, ವಿಠ್ಠಲ ಹೊಸೂರ, ಮಲ್ಲನಗೌಡ ಪಾಟೀಲ, ಎಸ್,ವಿ ಪತಂಗೆ, ಎಸ್.ಬಿ ಮೊರಬ, ರಾಜೇಂದ್ರ ರಾಯ್ಕಾ, ರವಿ ಪಾಟೀಲ ಸೇರಿದಂತೆ ಕಾಲೇಜು ಅಭಿವೃದ್ಧಿ ಸಮಿತಿಯ ಸದಸ್ಯರು, ಕಾಲೇಜಿನ ಪ್ರಾಧ್ಯಾಪಕರು, ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು. ಡಾ.ರೇಷ್ಮಾ ಸದಲಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ಅಂಬರೀಷ ರೇವತಗಾಂವ ಸ್ವಾಗತಿಸಿದರು. ಡಾ.ಸಿ.ಬಿ ತಾಬೋಜಿ ಅತಿಥಿಗಳನ್ನು ಪರಿಚಯಿಸಿದರು. ಡಾ.ಪ್ರಶಾಂತ ಸಿದ್ನಾಳ, ಭಾಗ್ಯಶ್ರೀ ಪಾಟೀಲ ಮತ್ತು ಚಿತ್ರಾ ಬಡಿಗೇರ ನಿರೂಪಿಸಿದರು. ಡಾ.ಗೀತಾಂಜಲಿ ಕುರಡಗಿ ವಂದಿಸಿದರು.

ಮೇ 25ರಿಂದ ರೈತರಿಂದ ನಿರಂತರ ಹೋರಾಟ

ರಾಮದುರ್ಗ: ವೀರಭದ್ರೇಶ್ವರ ಮತ್ತು ಸಾಲಾಪುರ ಏತ ನೀರಾವರಿ ಯೋಜನೆ ಶೀಘ್ರ ಅನುಷ್ಠಾನಕ್ಕೆ ಒತ್ತಾಯಿಸಿ ಸಾಲಹಳ್ಳಿಯಲ್ಲಿ ಮೇ 25ರಿಂದ ನಡೆಯುವ ರೈತರ ಹೋರಾಟವನ್ನು ಉಗ್ರರೂಪದಲ್ಲಿ ಮಾಡದೇ ಸಾಂಕೇತಿಕವಾಗಿ ಹೋರಾಟ, ಪ್ರತಿಭಟನೆ ಮಾಡಬೇಕು ಎಂದು ತಹಶೀಲ್ದಾರ್ ಪ್ರಕಾಶ ಹೊಳೆಪ್ಪಗೋಳ ರೈತರಲ್ಲಿ ಮನವಿ ಮಾಡಿದರು.

ಬುಧವಾರ ತಾಲೂಕಿನ ಸಾಲಹಳ್ಳಿಯ ಬಬಲಾದಿ ಮಠದಲ್ಲಿ ತಾಲೂಕು ಆಡಳಿತ ಮತ್ತು ರೈತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಬಾಗಲಕೋಟೆ-ಬೆಳಗಾವಿ ರಾಜ್ಯ ಹೆದ್ದಾರಿಯನ್ನು ನಿರಂತರವಾಗಿ ಬಂದ್ ಮಾಡುವುದರಿಂದ ಮಾಹಿತಿಯೇ ಇಲ್ಲದೇ ಇಲ್ಲಿ ಬಂದು ಸಿಕ್ಕಿಹಾಕಿಕೊಳ್ಳುವ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ. ದೂರದ ಪ್ರಯಾಣಿಕರಿಗೆ, ಅಂಬ್ಯುಲೆನ್ಸ್ ಸರ್ಕಾರಿ ವಾಹನಗಳಿಗೆ ಸಂಚರಿಸಲು ಅವಕಾಶ ನೀಡಬೇಕು ಎಂದು ಕೋರಿದರು.

ಗುರ್ಲಾಪೂರ ಮಾದರಿಯಲ್ಲಿ ಹೆದ್ದಾರಿ ಬಂದ್ ಮಾಡಿ ಹೋರಾಟ ಮಾಡಲು ಅಧಿಕಾರಿಗಳು ಯಾವುದೇ ಅಡತಡೆ ಮಾಡುವುದಿಲ್ಲ. ಎಲ್ಲ ರೀತಿಯ ಸಹಾಯ ಸಹಕಾರ ನೀಡಲಾಗುವುದು. ರೈತರ ಬೇಡಿಕೆಗಳು ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಈಡೇರಿಕೆ ಸಾಧ್ಯವಿಲ್ಲ. ಸರ್ಕಾರದ ಮಟ್ಟದಲ್ಲಿ ಸಮಸ್ಯೆಗೆ ಇತ್ಯರ್ಥ ಕಾಣಬೇಕಿದೆ. ಜಿಲ್ಲಾ ಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ಚರ್ಚಿಸಿ ಸರ್ಕಾರದ ಗಮನ ಸೆಳೆಯಲು ರೈತರು ಮುಂದಾಗಬೇಕು ಎಂದು ತಿಳಿಸಿದರು.



ಲಿಖಿತ ಭರವಸೆಗೆ ಪಟ್ಟು
ಸರ್ಕಾರ ಪ್ರತಿನಿಧಿ ರೈತರ ಹೋರಾಟದ ವೇದಿಕೆಗೆ ಬಂದು ಲಿಖಿತ ಭರವಸೆ ನೀಡುವ ತನಕ ಹೋರಾಟ ನಿಲ್ಲುವುದಿಲ್ಲ ಎಂದು ರೈತ ಮುಖಂಡ ಜಗದೀಶ ದೇವರಡ್ಡಿ ತಿಳಿಸಿದರು.

ಡಿವೈಎಸ್‌ಪಿ ಚಿದಂಬರ ಮಡಿವಾಳರ ಮಾತನಾಡಿ, ಗೊಡಚಿಯಿಂದ ನಡೆಯುವ ಪಾದಯಾತ್ರೆ ಮತ್ತು ಸಾಲಹಳ್ಳಿಯಲ್ಲಿ ನಡೆಯುವ ಹೋರಾಟದಲ್ಲಿ ಅಗತ್ಯ ಸಿಬ್ಬಂದಿ ಜೊತೆಗೆ ಸೂಕ್ತ ಬಂದೋಬಸ್ತ್ ಮಾಡಲಾಗುವುದು. ಪ್ರತಿಭಟನೆಕಾರರು ಯಾರೂ ಕಾನೂನು ಕೈಗೆ ತೆಗೆದುಕೊಳ್ಳದಂತೆ ಮುಖ್ಯಸ್ಥರು ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಹೇಳಿದರು.

ಸಭೆಯಲ್ಲಿ ನೀರಾವರಿ ಇಲಾಖೆಯ ಎಇಇ ಶ್ರೀನಿವಾಸ ಅರಿಷನಗೋಡಿ, ಸಿಪಿಐ ವಿನಾಯಕ ಬಡಿಗೇರ, ರೈತ ಮುಖಂಡರಾದ ಬಿ. ಎಸ್. ನಾಯಕ, ಮಾರುತಿ ಕೊಪ್ಪದ, ಶಿವಾನಂದ ದೊಡವಾಡ ಸೇರಿದಂತೆ ಹಲವರು ಇದ್ದರು.

ಕಿರುಸುದ್ದಿ

ಪ್ರ.ಕಾರ್ಯದರ್ಶಿ ಆಗಿ ಆಯ್ಕೆ



ಬಾದಾಮಿ: ಕೆಪಿಸಿಸಿ ಕಾರ್ಮಿಕ ವಿಭಾಗದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನ್ಯಾಯವಾದಿ ವೈ.ಸಿ.ಕಾಂಬಳೆ ಇವರನ್ನು ನೇಮಕ ಮಾಡಿ ರಾಜ್ಯ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷ ಪುಟ್ಟಸ್ವಾಮಿಗೌಡ ನೇಮಕಾತಿ ಮಾಡಿ ಆದೇಶ ಹೊರಡಿಸಿದ್ದಾರೆ. ಸದರಿಯವರಿಗೆ ಬೆಂಗಳೂರಿನಲ್ಲಿ ನೇಮಕಾತಿ ಆದೇಶ ಸ್ವೀಕರಿಸಿದರು.

ಸಾರಿಗೆ ಸಂಸ್ಥೆ ಅಧಿಕಾರಿಗಳ ಸಭೆ ಇಂದು



ಕೆರೂರ: ಬೀಳಗಿ ಮತಕ್ಷೇತ್ರದ ಗ್ರಾಮಗಳ ಪ್ರಯಾಣಿಕರ ಸಮಸ್ಯೆಗಳ ಕುರಿತು ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಜೆ.ಟಿ.ಪಾಟೀಲ ಅವರು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಅಧಿಕಾರಿಗಳ ಸಭೆ ಮೇ 22ರಂದು ಮಧ್ಯಾಹ್ನ 1ಕ್ಕೆ ಬಾಗಲಕೋಟೆ ನವನಗರ ಬಸ್ ನಿಲ್ದಾಣದ ಹತ್ತಿರವಿರುವ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಕಚೇರಿಯಲ್ಲಿ ಕರೆದಿದ್ದಾರೆ. ಆದ್ದರಿಂದ ಬಸ್ ಸಂಚಾರದ ಸಮಸ್ಯೆಗಳಿರುವ ಬೀಳಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳ ಸಾರ್ವಜನಿಕರು, ವಿದ್ಯಾರ್ಥಿಗಳು ಈ ಸಭೆಗೆ ಆಗಮಿಸಬೇಕೆಂದು ಶಾಸಕರ ಆಪ್ತಕಾರ್ಯದರ್ಶಿ ವೆಂಕಟೇಶ ಜಂಬಗಿ ವಿನಂತಿಸಿದ್ದಾರೆ.

ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ಇಂದು

ಕಲಾದಗಿ: ಬಾಗಲಕೋಟೆ ತಾಲೂಕಿನ ಬೀಳಗಿ ಮತಕ್ಷೇತ್ರ ವ್ಯಾಪ್ತಿಯ ಗದ್ದನಕೇರಿ ಗ್ರಾಮದಲ್ಲಿ ಸಂಜೆ 4.30ಕ್ಕೆ ಶಿವು ರಾಠೋಡ ಮನೆಯಿಂದ ಪ್ರವೀಣ ದಾಸರ ಅವರ ಮನೆಯವರೆಗೆ ಸಿಸಿ ರಸ್ತೆ ಕಾಮಗಾರಿ ಹಾಗೂ ಗದ್ದನಕೇರಿ ಗ್ರಾಮದ ಶ್ರೀ ಸಿದ್ದರಾಮೇಶ್ವರ ದೇವಸ್ಥಾನ ಅಭಿವೃದ್ಧಿ ಪಡಿಸುವ ಕಾಮಗಾರಿ, ಸಂಜೆ 5.15ಕ್ಕೆ ತುಳಸಿಗೇರಿ ಗ್ರಾಮದ ಸಮೀಪದ ಮುಖ್ಯರಸ್ತೆಯಿಂದ ತುಗಲಗಟ್ಟಿ ದೇವಸ್ಥಾನಕ್ಕೆ ಹೋಗುವ ರಸ್ತೆ ಸುಧಾರಣೆ ಕಾಮಗಾರಿ, ತುಳಸಿಗೇರಿ ಗ್ರಾಮದ ದುರ್ಗಾದೇವಿ ದೇವಸ್ಥಾನದ ದ್ವಾರ ನಿರ್ಮಾಣ ಕಾಮಗಾರಿಗಳಿಗೆ ಭೂಮಿಪೂಜೆ ಕಾರ್ಯಕ್ರಮವನ್ನು ಬೀಳಗಿ ಶಾಸಕ ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷ ಜೆ.ಟಿ.ಪಾಟೀಲ ನೆರವೇರಿಸುವರು ಎಂದು ಶಾಸಕರ ಆಪ್ತ ಕಾರ್ಯದರ್ಶಿ ವೆಂಕಟೇಶ ಜಂಬಗಿ ತಿಳಿಸಿದ್ದಾರೆ.

ಸಿದ್ದು ಹತ್ಯೆ ಪ್ರಕರಣ: ಆರೋಪಿಗಳ ಬಂಧನ

ಜಮಖಂಡಿ: ತಾಲೂಕಿನ ಕುರುಗೋಡ ಗ್ರಾಮದಲ್ಲಿ ಇತ್ತೀಚಿಗೆ ನಡೆದ ಸಿದ್ದು ಮಲ್ಲಪ್ಪ ಬಿರಾದಾರ ಹತ್ಯೆಗೆ ಸಂಬಂಧಿಸಿದಂತೆ ಜಮೀನಿನ ವಿವಾದದ ಸತ್ಯವನ್ನು ಪೊಲೀಸರು ಹೊರಹಾಕಿ ಶ್ರೀಶೈಲ ಮಲ್ಲಪ್ಪ ಬಿರಾದಾರ(29) ಕುರುಗೋಡ, ರವಿ ಶಂಕರ ಶಿವಪೂಜೆ(32) ಜತ್ತ ತಾಲೂಕು ಬಿಳ್ಳೂರ, ಬಸವರಾಜ ಅಪ್ಪಾಸಾಹೇಬ ಹಗರಿ (22) ಬಿಳ್ಳೂರ, ಆಕಾಶ ಶಂಕರ ಯಳ್ಳೂರ (21) ಬಿಳ್ಳೂರ, ಪ್ರಥಮೇಶ ಸಂಜಯ ಮಹಾಜನ (21) ಬಿಳ್ಳೂರ ಐದು ಜನ ಆರೋಪಿತರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ ಎಂದು ಮೂಲಗಳಿಂದ ತಿಳಿದು ಬಂದಿದೆ

ಅಕ್ರಮ ಮರಳು ದಂಧೆ: ಕ್ರಮಕ್ಕೆ ಆಗ್ರಹ

ಬೀಳಗಿ: ತಾಲೂಕಿನ ಘಟಪ್ರಭಾ ನದಿ ಶಿರಗುಪ್ಪಿ ಗ್ರಾಮದ ವ್ಯಾಪ್ತಿಯಲ್ಲಿ ಅಕ್ರಮ ಮರಳು ಸಾಗಾಟ ದಂಧೆ ನಡೆಯುತ್ತಿದ್ದು, ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಅಕ್ರಮ ಮರಳು ದಂಧೆಗೆ ಶಾಶ್ವತ ಕಡಿವಾಣ ಹಾಕಬೇಕಿದೆ. ಶಿರಗುಪ್ಪಿ ಗ್ರಾಮದಲ್ಲಿ ಸುಮಾರು 10-15 ಟ್ರ್ಯಾಕ್ಟರ್‌ಗಳು ನದಿಯಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದು, ನದಿ ತಟಗಳು ಕುಸಿಯುತ್ತವೆ. ನದಿಯ ಅಂತರ್ಜಲ ಮಟ್ಟ ತಗ್ಗಿ, ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ. ಗುರುವಾರ ಕಂದಾಯ ಇಲಾಖೆ ಅಧಿಕಾರಿಗಳು ಶಿರಗುಪ್ಪಿಯಲ್ಲಿ ದಾಳಿ ಮಾಡಿದಾಗ ಎರಡು ಟ್ರ್ಯಾಕ್ಟರ್ ವಶಕ್ಕೆ ಪಡೆದಿದ್ದಾರೆಂದು ತಿಳಿದು ಬಂದಿದೆ.ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆಯಾದ ಘಟಪ್ರಭಾ ನದಿ ತೀರದ ಪ್ರದೇಶದಲ್ಲಿ ಅಕ್ರಮವಾಗಿ ಎರೆ ಮಣ್ಣು ಸಾಗಾಟ ನಡದೇ ಇದೆ. ತಾಲೂಕಿನ ವಿವಿಧೆಡೆ ನದಿಯ ಹಿನ್ನೀರು ಕಡಿಮೆಯಾಗುತ್ತಿದ್ದಂತೆ ಅವ್ಯಾಹತವಾಗಿ ಅಕ್ರಮ ಮಣ್ಣು ಸಾಗಾಟ ದಂಧೆ ಪ್ರಾರಂಭವಾಗುತ್ತದೆ ಎಂದು ಸಾರ್ವಜನಿಕರು ಹೇಳುವ ಮಾತಾಗಿದೆ. ಮಣ್ಣು ಸಾಗಾಟ ಮಾಡುವ ಟಿಪ್ಪರ ಚಾಲಕರಿಗೆ ರಸ್ತೆಗೆ ನೀರು ಹೊಡೆದು ಧೂಳು ಏಳುವದನ್ನು ತಪ್ಪಿಸಬೇಕೆಂದು ಸಾರ್ವಜನಿಕರು ಪ್ರಶ್ನಿಸಿದರೆ ವಾಹನ ಚಾಲಕರು ತಿರುಗಿ ನಮಗೆ ಧಮಕಿ ಹಾಕುತ್ತಾರೆಂದು ಸಾರ್ವಜನಿಕರ ಆರೋಪವಾಗಿದೆ.



ಜಮಖಂಡಿ: ತೋಟಗಾರಿಕೆ ಇಲಾಖೆಯಲ್ಲಿ ಹೊಸ ತಳಿಗಳ ಆವಿಷ್ಕಾರಕ್ಕಾಗಿ ಮತ್ತು ರೈತರಿಗೆ ವಿನೂತ ಮಾದರಿ ಕೃಷಿಗೆ ಉತ್ತೇಜನಕ್ಕಾಗಿ ತಾಲೂಕಿನ ಚಿಕ್ಕಲಕಿ ಕ್ರಾಸ್ ಹತ್ತಿರ ತೋಟಗಾರಿಕೆ ಇಲಾಖೆಗೆ ನೀಡಲು ಸುಮಾರು ಹತ್ತು ಎಕರೆ ಜಮೀನನ್ನು ಶಾಸಕ ಜಗದೀಶ ಗುಡಗುಂಟಿ ವೀಕ್ಷಿಸಿ ಕಂದಾಯ ಇಲಾಖೆ ಮತು ತೋಟಗಾರಿಕೆ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ ಸರ್ಕಾರ ಕ್ಕೆ ಇದರ ಬಗ್ಗೆ ಪ್ರಸ್ತಾವನೆ ಸಲ್ಲಿಸಿಲು ಸೂಚನೆ ನಿಡಿದ್ದಾರೆ. ತೋಟಗಾರಿಕಾ ಸಹಾಯಕ ನಿರ್ದೇಶಕ ಸಚಿನ ಮಾಚಕನೂರ, ಕಂದಾಯ ಇಲಾಖೆ ಅಧಿಕಾರಿಗಳು ರೈತ ಮುಖಂಡರು ತೋಟಗಾರಿಕಾ ಅಧಿಕಾರಿಗಳು ಉಪಸ್ಥಿತರಿದ್ದರು.

ಪಠ್ಯಪುಸ್ತಕ ವಿತರಣೆಗೆ ಚಾಲನೆ

ಬಾದಾಮಿ: ಸರ್ಕಾರದಿಂದ ಸರಬರಾಜಾಗಿರುವ ಪಠ್ಯಪುಸ್ತಕಗಳನ್ನು ಶಾಲಾ ಪ್ರಾರಂಭೋತ್ಸವದ ದಿನ ವಿತರಣೆ ಮಾಡಬೇಕು. ಸಮವಸ್ತ್ರ, ಪಠ್ಯಪುಸ್ತಕ, ಬಿಸಿಯೂಟ, ಶೂ ಸೇರಿದಂತೆ ಅನೇಕ ಪ್ರೋತ್ಸಾಹಕ ಯೋಜನೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಿ ದಾಖಲಾತಿ ಹೆಚ್ಚಳ ಮಾಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಹೇಳಿದರು.

ಪಟ್ಟಣದ ಎಪಿಎಂಸಿ ಗೂಡಾವನದಲ್ಲಿ ರಾಜ್ಯ ಸರ್ಕಾರದಿಂದ ಸರಬರಾಜಾಗಿರುವ ಶಾಲಾ ಮಕ್ಕಳಿಗೆ 2026-27 ನೇ ನೂತನ ಶೈಕ್ಷಣಿಕ ವರ್ಷಕ್ಕೆ ಉಚಿತ ಪಠ್ಯಪುಸ್ತಕ ವಿತರಣೆಗೆ ಚಾಲನೆ ನೀಡಿ ಮಾತನಾಡಿ, ಶಿಕ್ಷಣದಿಂದ ಮಾತ್ರ ನಮ್ಮ ಜೀವನ ರೂಪಿಸಿಕೊಳ್ಳಲು ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಉತ್ತಮ ಸಂಸ್ಕಾರ ಜೊತೆಗೆ ಶಿಕ್ಷಣ ಪಡೆದು ಉನ್ನತ ಹುದ್ದೆ ಅಲಂಕರಿಸಬೇಕು. ಸರ್ಕಾರದ ಸೌಲಭ್ಯ ಪಡೆದು ವಿದ್ಯಾರ್ಥಿಗಳು ಉತ್ತಮವಾಗಿ ವಿದ್ಯಾಭ್ಯಾಸ ಮಾಡಬೇಕು. ವಿದ್ಯಾವಂತರಾಗಿ ದೇಶದ ಅಭಿವೃದ್ಧಿಗೆ ಸಹಾಯಕರಾಗಿ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಈ ವೇಳೆ ತಾಲೂಕಾ ದೈಹಿಕ ಶಿಕ್ಷಣ ಪರೀಕ್ಷಕ ಬಿ.ಎಚ್.ಹಳಗೇರಿ, ಪಠ್ಯಪುಸ್ತಕ ನೋಡಲ್ ಅಧಿಕಾರಿ ಎಸ್.ಪಿ.ಗೌಡರ ಹಾಗೂ ಎಸ್.ಬಿ.ಉಳ್ಳಾಗಡ್ಡಿ, ಆಡಗಲ್ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ಬಸವರಾಜ ಅಂಗಡಿ, ತಾಲೂಕಾ ಪ್ರೌಢಶಾಲೆ ಮುಖ್ಯೋಪಾಧ್ಯಯರ ಸಂಘದ ಅಧ್ಯಕ್ಷ ಬಿ.ಎಸ್.ಅಬ್ಬಿಗೇರಿ, ಎಂ.ಸಿ.ಜುಮ್ಮನ್ನವರ ಸೇರಿದಂತೆ ವಿವಿದ ಶಾಲೆಯ ಮುಖ್ಯಶಿಕ್ಷಕರು ಹಾಜರಿದ್ದರು.



ಬಾದಾಮಿ: ಪಟ್ಟಣದ ಎಪಿಎಂಸಿ ಗೂಡಾವನದಲ್ಲಿ ರಾಜ್ಯ ಸರ್ಕಾರದಿಂದ ಸರಬರಾಜಾಗಿರುವ ಶಾಲಾ ಮಕ್ಕಳಿಗೆ 2026-27 ನೇ ನೂತನ ಶೈಕ್ಷಣಿಕ ವರ್ಷಕ್ಕೆ ಉಚಿತ ಪಠ್ಯಪುಸ್ತಕ ವಿತರಣೆಗೆ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಚಾಲನೆ ನೀಡಿದರು.

ಕಾಮಗಾರಿಗೆ ಶಾಸಕ ವಿಜಯಾನಂದ ಕಾಶಪ್ಪನವರ ಭೂಮಿಪೂಜೆ

ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ

ಹುನಗುಂದ: ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ 18.99 ಕೋಟಿ ಎನ್‌ಎಚ್‌ಎಂ ಯೋಜನೆ ಅನುದಾನ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ 50 ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಕಟ್ಟಡ ಕಾಮಗಾರಿಗೆ ಇತ್ತೀಚಿಗೆ ಶಾಸಕ ವಿಜಯಾನಂದ ಕಾಶಪ್ಪನವರ ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಶಾಸಕ ವಿಜಯಾನಂದ ಕಾಶಪ್ಪನವರ ಮಾತನಾಡಿ,ಆರೋಗ್ಯ, ಶಿಕ್ಷಣ, ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿವ ಕೆಲಸ ಮಾಡಿದ್ದೇನೆ ಹುನಗುಂದಕ್ಕೆ 50 ಹಾಸಿಗೆ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಕೆಲವೊಂದು ತಾಂತ್ರಿಕ ಸಮಸ್ಯೆಗಳಿಂದ ಅನುಮತಿ ಕೊಡುವ ಹಂತದಲ್ಲಿ ಇರಲಿಲ್ಲ. ಹುನಗುಂದಕ್ಕೆ ತಾಯಿ ಮಕ್ಕಳ ಆಸ್ಪತ್ರೆ ಬಹಳಷ್ಟು ಅವಶ್ಯಕತೆ ಇತ್ತು. ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಗ್ಯ ಸಚಿವ ದಿನೇಶ ಗುಂಡೂರಾವ ಭೇಟಿ ಮಾಡಿ ವಿನಂತಿಸಿ ಕೊಂಡಾಗ ಮುಖ್ಯಮಂತ್ರಿಗಳು ವಿಶೇಷ ಆದೇಶ ಮಾಡಿ ಕ್ಯಾಬಿನೆಟ್ ಸಚಿವ ಸಂಪುಟದಲ್ಲಿ ಈ ವಿಷಯ ಪ್ರಸ್ತಾಪ ಮಾಡಿ. ಹುನುಗುಂದ ಮುಧೋಳ ಮುದ್ದೇಬಿಹಾಳ ತಾಲೂಕುಗಳಿಗೆ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಅನುಮೋದನೆ ನೀಡಿ ಅನುದಾನ ನೀಡಿದ್ದಾರೆ ಎಂದರು.

ನಮ್ಮ ತಾಯಿಯವರು ಎಂಟು ತಿಂಗಳ ಅವಧಿಯಲ್ಲಿ ಇದನ್ನು ಮೇಲ್ದರ್ಜೆಗೇರಿಸಿ 100 ಹಾಸಿಗೆ ಆಸ್ಪತ್ರೆಯನ್ನು ತಂದರು. ಈ ನೂರು ಹಾಸಿಗೆ ಆಸ್ಪತ್ರೆಗೆ ಅನೇಕ ಸೌಕರ್ಯಗಳ ಕೊರತೆ ಇತ್ತು. ಬ್ಲಡ್ ಬ್ಯಾಂಕ್, ಡಯಾಲಿಸಿಸ್, ಐಸಿಯು, ಲ್ಯಾಬ್ರೊಟರಿ ಸೇರಿದಂತೆ ಅನೇಕ ಸೌಲಭ್ಯಗಳನ್ನು ಒದಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇನೆ. ನನ್ನ ಕಳೆದ ಅವಧಿಯಲ್ಲಿ ಬ್ಲಡ್ ಬ್ಯಾಂಕ್ ಮಂಜೂರಾತಿ ತಂದು ಉದ್ಘಾಟನೆಯನ್ನು ಕೂಡ ಮಾಡಿದ್ದೆ. 2018ರವರೆಗೆ ಚಾಲ್ತಿಯಲ್ಲಿ ಇತ್ತು ಆದರೆ 2018 ರಿಂದ 23ರ ಅವಧಿಯಲ್ಲಿ ಆ ಬ್ಲಡ್ ಬ್ಯಾಂಕ್ ರಿನಿವಲ್ ಮಾಡದೇ ಧೂಳ ಹಿಡಿಸುವ ಕೆಲಸ ಹಿಂದಿನ ಶಾಸಕರು ಮಾಡಿದ್ದರು. ನಾನು ಮತ್ತೆ ಶಾಸಕನಾದ ಮೇಲೆ ರಿನಿವಲ್ ಮಾಡಿ ಪುನಃ ಪ್ರಾರಂಭಿಸಿದ್ದೇನೆ. ಆಸ್ಪತ್ರೆ ಕಾಮಗಾರಿ ಗುಣಮಟ್ಟದಿಂದ ಮತ್ತು ನಿಗದಿತ ಅವಧಿಯಲ್ಲಿ ಮುಗಿಸುವ ಕಾರ್ಯವಾಗಲಿ ಎಂದು ಗುತ್ತಿಗೆದಾರರಿಗೆ ಸೂಚಿಸಿದರು.

ನಿವೃತ್ತ ಶಿಕ್ಷಕರಾದ ಎಸ್ಕೆ ಕೊನೆಸಾಗರ ಮತ್ತು ವಿಜಯ ಗದ್ದನಕೇರಿ, ಆರೋಗ್ಯ ರಕ್ಷಾ ಸಮಿತಿಯ ಉಪಾಧ್ಯಕ್ಷ ಶಿವಾನಂದ ಕಂಠಿ ಮಾತನಾಡಿದರು ಆರೋಗ್ಯ ರಕ್ಷಾ ಸಮಿತಿಯ ಸದಸ್ಯ ಸಂಜೀವ ಜೋಶಿ, ರಫೀಕ್ ವಾಲಿಕಾರ, ಶಕುಂತಲಾ ಗಂಜೀಹಾಳ, ಶೇಖರಪ್ಪ ಬಾದವಾಡಗಿ, ಬಸವರಾಜ ಗದ್ದಿ, ಸಂಗಣ್ಣ ಗಂಜೀಹಾಳ, ಸಿದ್ದಲಿಂಗಪ್ಪ ಬೀಳಗಿ, ರವಿ ಹುಚನೂರ, ನೀಲಪ್ಪ ತಪೇಲಿ,ಹನಮಂತ ನಡುವಿನಮನಿ, ದೀಪಾ ಸುಂಕದ, ಶಕುಂತಲಾ ಬೆಲ್ಲದ, ತಾಲೂಕು ವೈದ್ಯಾಧಿಕಾರಿ ಸಂಗಮೇಶ ಅಂಗಡಿ ಸೇರಿದಂತೆ ಅನೇಕರು ಇದ್ದರು. ಯಮನಪ್ಪ ಸ್ವಾಗತಿಸಿದರು, ಗುರುಲಿಂಗಪ್ಪ ಭದ್ರಣ್ಣವರ ನಿರೂಪಿಸಿ ವಂದಿಸಿದರು.



> ಹುನಗುಂದ ರೈತರ ಪಂಪ್ ಸೆಟ್ಗಳಿಗೆ ನಿರಂತರ ವಿದ್ಯುತನ್ನು ನೀಡಲು 40ಎಕರೆ ಜಮೀನನಲ್ಲಿ 120 ಕೋಟಿ ಅನುದಾನದಲ್ಲಿ 220 ಕೆವಿ ವಿದ್ಯುತ್ ಸ್ಟೇಷನ್ ಮಂಜೂರಾಗಿ ಟೆಂಡರ್ ಹಂತದಲ್ಲಿದೆ. ಇನ್ನು 3 ಕೋಟಿ ಅನುದಾನದಲ್ಲಿ ಕುಣಬೆಂಚಿ ಮತ್ತು ಮರೋಳ ಗ್ರಾಮಗಳಿಗೆ 110 ಕೆ ವಿ ಸ್ಟೇಷನ್ ಟೆಂಡರ್ ಆಗಿ ಕಾಮಗಾರಿ ಪ್ರಗತಿಯಲ್ಲಿದೆ. ಹುನಗುಂದದಲ್ಲಿ ಒಂದು ಈಜುಕೊಳ, ಮತ್ತು ಕ್ರೀಡಾಂಗಣಕ್ಕೆ ನಿರ್ಮಾಣ ಮಾಡಲಾಗುವುದು.
>
> ■ ವಿಜಯಾನಂದ ಕಾಶಪ್ಪನವರ. ಹುನಗುಂದ ಮತಕ್ಷೇತ್ರ ಶಾಸಕರು

ನುಡಿದಂತೆ ನಡೆದ ಕಾಂಗ್ರೆಸ್ ಸರ್ಕಾರ: ಶಾಸಕ ಪಾಟೀಲ

ಬೀಳಗಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದ ಸರ್ಕಾರವಾಗಿದ್ದು, ಎಲ್ಲ ಸಮುದಾಯ ಮತ್ತು ಧರ್ಮದವರಿಗೆ ತಾರತಮ್ಯ ಮಾಡದೇ ಪಂಚ ಗ್ಯಾರಂಟಿ ಯೋಜನೆಯನ್ನು ಜಾರಿಗೊಳಿಸಿದ ಶ್ರೇಯಸ್ಸು ಸಿಎಂ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಸಲ್ಲುತ್ತದೆ ಎಂದು ಹಟ್ಟಿ ಚಿನ್ನದ ಗಣಿ ನಿಗಮದ ಅಧ್ಯಕ್ಷರು, ಶಾಸಕ ಜೆ.ಟಿ.ಪಾಟೀಲ ಹೇಳಿದರು.

ತಾಲೂಕಿನ ಬಿಸನಾಳ ಗ್ರಾಮದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ವತಿಯಿಂದ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ) 20 ಲಕ್ಷ ರೂ. ಅನುದಾನದಲ್ಲಿ ಅಮೋಘ ಸಿದ್ದೇಶ್ವರ ಸಮುದಾಯ ಭವನ ನಿರ್ಮಾಣ ಕಾಮಗಾರಿ ಮತ್ತು 2024-25ನೇ ಸಾಲಿನ ಮುಜರಾಯಿ ಇಲಾಖೆ ದೇವಸ್ಥಾನಗಳ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಅಂದಾಜು 5 ಲಕ್ಷ ರೂ. ವೆಚ್ಚದಲ್ಲಿ ಜರುಗಲಿರುವ ಕಾಳಮ್ಮದೇವಿ ದೇವಸ್ಥಾನ ಜೀರ್ಣೋದ್ಧಾರದ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಯೋಜನಾ ವರದಿ ಪ್ರಕಾರ ಗುಣಮಟ್ಟದ ಕೆಲಸವಾಗಬೇಕು. ಕಾಲಮಿತಿಯಲ್ಲಿ ಕೆಲಸವನ್ನು ಪೂರ್ಣಗೊಳಿಸಬೇಕು. ಗ್ರಾಮಸ್ಥರು ಮುಂದೆ ನಿಂತುಕೊಂಡು ಕೆಲಸ ತೆಗೆದುಕೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ಈ ಸಂದರ್ಭದಲ್ಲಿ ಅಮೋಘ ಸಿದ್ದೇಶ್ವರ ದೇವಾಲಯದ ಅರ್ಚಕ ಲಕ್ಷ್ಮಣ ಪೂಜಾರಿ, ಜಿಪಂ ಕೆಡಿಪಿ ಸದಸ್ಯ ಗೋವಿಂದಗೌಡ ಪಾಟೀಲ, ತಾಪಂ ಮಾಜಿ ಅಧ್ಯಕ್ಷೆ ಪ್ರೇಮಾ ಹಲಗಲಿ, ತಾಪಂ ಮಾಜಿ ಉಪಾಧ್ಯಕ್ಷೆ ರೇಖಾ ಕಟ್ಟೆಪ್ಪನವರ, ವೆಂಕಟೇಶ ನಾಯಿಕ, ರಾಮಣ್ಣ ನಾಯಿಕ, ಸಿದ್ದು ಸಂಕನ್ನವರ, ರಾಮಣ್ಣ ಆನಿಕೇರಿ, ಶಿವಾನಂದ ಬಿಸನಾಳ, ಹನುಮಂತ ಕಟ್ಟೆಪ್ಪನ್ನವರ, ವಿಠ್ಠಲ ಕಂಬಾರ, ಶ್ರೀಶೈಲ ಜೋಗೆನ್ನವರ, ಮಹಿಬೂಬಸಾಬ ಅಲ್ಲಾಡಿ, ಮಹಿಬೂಬಸಾಬ ಬಬಲೇಶ್ವರ, ರುದ್ರಪ್ಪ ಕಡಪಟ್ಟಿ, ರಮೇಶ ನಾಯ್ಕರ ಮತ್ತಿತರಿದ್ದರು.



ಎಮ್ಮೆಗಳ ಕಳ್ಳತನ: 6ಜನರ ಬಂಧನ


ಜಮಖಂಡಿ: ಸ್ಥಳೀಯ ಗ್ರಾಮೀಣ ಠಾಣಾ ವ್ಯಾಪ್ತಿಯಲ್ಲಿ ಎಮ್ಮೆಗಳ ಕಳ್ಳತನದ ಪ್ರಕರಣ ದಾಖಲಾಗಿದ್ದು, ಅದನ್ನು ಬೇಧಿಸಿದ ಪೊಲೀಸರು 6 ಜನ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ತಿಳಿದು ಬಂದಿದೆ.



ನಗರದ ಜಂಬಗಿ ರಸ್ತೆಯಲ್ಲಿ ಅನುಮಾನಾಸ್ಪದವಾಗಿ ಎರಡು ವಾಹನಗಳಲ್ಲಿ ದನ-ಕರುಗಳನ್ನು ತುಂಬಿಕೊಂಡು ತಿರುಗಾಡುತ್ತಿರುವಾಗ ಗ್ರಾಮೀಣ ಠಾಣಾಧಿಕಾರಿ ಗಂಗಾಧರ ಪೂಜಾರಿ ಮತ್ತು ಸಿಬ್ಬಂದಿಗಳು ವಿಚಾರಣೆ ನಡೆಸಿ ಆರು ಜನ ಕಳ್ಳರನ್ನು ಅವಶಪಡಿಕೊಂಡು ತನಿಖೆ ನಡೆಸಿದಾಗ ತಾಲೂಕಿನ ಕುಂಬಾರಹಳ್ಳದಲ್ಲಿ ಒಂದು, ಶೂರ್ಪಾಲಿಯಲ್ಲಿ ಎರಡು ಎಮ್ಮೆಗಳನ್ನು ಕಳುವು ಮಾಡಿದ್ದಾಗಿ ಒಪ್ಪಿಕೊಂಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದ್ದ ಎರಡು ವಾಹನಗಳ ಸಮೇತ ಆರು ಜನರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದಾರೆ.

ಜಂಗಿ ನಿಕಾಲಿ ಕುಸ್ತಿಗೆ ಚಾಲನೆ

ಝುಳಕಿ: ಸೋಲು ಗೇಲವು ಮುಖ್ಯವಲ್ಲ, ಕುಸ್ತಿ ಪಂದ್ಯದಲ್ಲಿ ಭಾಗವಹಿಸುವುದು ಮುಖ್ಯ ಎಂದು ಪಿಕೆಪಿಎಸ್ ಉಪಾಧ್ಯಕ್ಷ ಅಣ್ಣರಾಯ ಬಬಲಾದ ಹೇಳಿದರು.ಸಮಿಪದ ಅಂಜುಟಗಿ ಗ್ರಾಮದಲ್ಲಿ ನಡೆದ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಆಯೋಜಿಸಿದ ಜಂಗಿ ನಿಕಾಲಿ ಕುಸ್ತಿ ಪಂದ್ಯಕ್ಕೆ ಚಾಲನೆ ನೀಡಿ ಮಾತನಾಡಿ, ಕುಸ್ತಿ ಕಲೆ ಪುರುಷ ಕ್ರೀಡೆಗಳಲ್ಲೆಲ್ಲ. ಅತ್ಯಂತ ಶ್ರೇಷವೆಂದು ಪರಿಗಣಿಸಲ್ಪಟ್ಟಿದೆ. ಕುಸ್ತಿ ಶರೀರದ ಎಲ್ಲ ಭಾಗಗಳಿಗೂ ವ್ಯಾಯಾಮ ಒದುಗಿಸಿ ದೇಹವನ್ನು ಸಮಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಿ ಶಕ್ತಿಗಳನ್ನು ಬಲಪಡಿಸುತ್ತದೆ. ಯುವಕರು ಕುಸ್ತಿ ಪಂದ್ಯಗಳಲ್ಲಿ ಭಾಗವಹಿಸಿ ದುಷ್ಟ ಚಟಕ್ಕೆ ಬಲಿಯಾಗದೆ ಸದೃಢ ದೇಹಕ್ಕೆ ಕುಸ್ತಿ ಪಂದ್ಯ ಉತ್ತಮ ಎಂದರು.ಈ ಸಂದರ್ಭದಲ್ಲಿ ಜಾತ್ರಾ ಕಮಿಟಿ ಅಧ್ಯಕ್ಷರು, ಸದಸ್ಯರು ಹಾಗೂ ಸಮಸ್ತ ಗ್ರಾಮದ ಗ್ರಾಮಸ್ಥರು, ಸುತ್ತಮುತ್ತಲಿನ ಗ್ರಾಮಸ್ಥರು ಇದ್ದರು.




ಬೀದಿ ನಾಯಿಗಳ ಹಾವಳಿ: ನಿಯಂತ್ರಣಕ್ಕೆ ಆಗ್ರಹ

ಗುಳೇದಗುಡ್ಡ: ಪಟ್ಟಣದ ಪ್ರಮುಖ ಬೀದಿಗಳಲ್ಲಿ, ಬಸ್ ನಿಲ್ದಾಣ, ಮಾರ್ಕೆಟ್ ಪ್ರದೇಶದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಬೀದಿ ನಾಯಿಗಳಿಂದ ಸಾರ್ವಜನಿಕರು ಭಯ ಪಡುವಂತಾಗಿದೆ.

ರಸ್ತೆಯಲ್ಲಿ ಓಡಾಡುವ ಮಕ್ಕಳು, ಮಹಿಳೆಯರು, ವೃದ್ದರೂ ಸೇರಿದಂತೆ ಸಾರ್ವಜನಿಕರಿಗೆ ಕಚ್ಚುತ್ತಿವೆ. ಕೆಲವು ಪ್ರದೇಶದಲ್ಲಿ ಹಿಂಡು ಹಿಂಡಾಗಿ ಬೀದಿನಾಯಿಗಳು ತಿರುಗಾಡಿ ಸಾರ್ವಜನಿಕರಿಗೆ ಭಯ ಮೂಡಿಸುತ್ತಿವೆ. ದ್ವಿಚಕ್ರ ವಾಹನಗಳ ಬೆನ್ನು ಹತ್ತುವುದು, ಅಡ್ಡಗಟ್ಟಿ ಕಚ್ಚಲು ಬರುತ್ತಿವೆ. ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಕೋರ್ಟ್ ಆದೇಶವಿದ್ದರೂ ಪಟ್ಟಣದ ಪುರಸಭೆ ಈ ರವರೆಗೆ ಯಾವ ಕ್ರಮಕ್ಕೈಗೊಂಡಿಲ್ಲ. ಬೀದಿ ನಾಯಿಗಳನ್ನು ನಿಯಂತ್ರಿಸುವ ಮೂಲಕ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ತಪ್ಪಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದರು.

ಸರ್ಕಾರಿ ಆಸ್ಪತ್ರೆ ದಾಖಲೆ ಪ್ರಕಾರ ಕಳೆದ ನಾಲ್ಕು ತಿಂಗಳಲ್ಲಿ ಪಟ್ಟಣದಲ್ಲಿ ಒಟ್ಟು 162 ಜನರು ಬೀದಿ ನಾಯಿ ಕಚ್ಚಿಸಿಕೊಂಡು, ಆಸ್ಪತ್ರೆಯಲ್ಲಿ ಚುಚ್ಚುಮದ್ದು ಪಡೆದಿದ್ದಾರೆ. ನಾಯಿ ಕಡಿತದ ರೇಬಿಸ್ ನಿರೋಧಕ ಚುಚ್ಚುಮದ್ದು ಸಂಗ್ರಹ ಇದೆ. ನಾಯಿ ಕಡಿತಕ್ಕೆ ಒಳಗಾದ ಎಲ್ಲರಿಗೂ ಚುಚ್ಚುಮದ್ದು ನೀಡಲಾಗುತ್ತಿದೆ ಎಂದು ಸಮುದಾಯ ಆರೋಗ್ಯ ಕೇಂದ್ರ ಮುಖ್ಯ ವೈದ್ಯಾಧಿಕಾರಿ ಡಾ.ನಾಗರಾಜ ಕುರಿ ತಿಳಿಸಿದ್ದಾರೆ. ಸರ್ಕಾರದ ನಿರ್ದೇಶನದಂತೆ ಬೀದಿ ನಾಯಿಗಳ ನಿಯಂತ್ರಣಕ್ಕೆ ಸರ್ಕಾರ ಜಿಲ್ಲೆಯಲ್ಲಿ ಜಮಖಂಡಿ ಹಾಗೂ ಬಾಗಲಕೋಟೆ ಎರಡು ಘಟಕಗಳನ್ನು ತೆರೆದು, ನಿರ್ವಹಣೆಗಾಗಿ ಟೆಂಡರ್ ಕರೆಯಲಾಗಿದೆ. ಜಿಲ್ಲಾ ನಗರಾಭಿವೃದ್ಧಿ ಕೋಶದೊಂದಿಗೆ ನಾವು ಪುರಸಭೆಯವರು ಕೂಡಾ ಸಹಕಾರ ನೀಡಿ, ಶೀಘ್ರ ಬೀದಿ ನಾಯಿ ಹಾವಳಿ ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿ ಎ.ಎಚ್.ಮುಜಾವರ ತಿಳಿಸಿದ್ದಾರೆ.



ಧರ್ಮಗಳ ಮಧ್ಯೆ ಸಾಮರಸ್ಯ ಬೆಳೆಯಲಿ: ಶಾಸಕ ಜೆಟಿಪಾ

ಗಲಗಲಿ: ವಿವಿಧ ಧರ್ಮಗಳ ಮಧ್ಯೆ ಸಾಮರಸ್ಯ ಬೆಳಯಬೇಕಾಗಿದೆ. ದೇಶದಲ್ಲಿ ಕೆಲವರು ಧರ್ಮ-ಧರ್ಮಗಳ ಮಧ್ಯೆ ವಿಷ ಬೀಜ ಬಿತ್ತಿ ಒಡಕುತರುತ್ತಾರೆ. ಇದರಿಂದ ದೇಶಕ್ಕೆ ಹಾನಿಯಾಗುತ್ತದೆ ಎಂಬುದು ಅಂಥ ಜನರಿಗೆ ಗೊತ್ತಿರುವದಿಲ್ಲ ಅಂತಹ ಜನರ ಬಗ್ಗೆ ಜನತೆ ಎಚ್ಚರಿಕೆಯಿಂದ ಇರಬೇಕು ಎಂದು ಶಾಸಕ ಹಾಗೂ ಹಟ್ಟಿ ಚಿನ್ನದಗಣಿ ಕಂಪನಿ ನಿಯಮಿತ ಅಧ್ಯಕ್ಷ ಜೆ.ಟಿ.ಪಾಟೀಲ ಹೇಳಿದರು.

ಅವರು ಸ್ಥಳೀಯ ಶ್ರೀರಾಚುಟೇಶ್ವರ ದೇವಸ್ಥಾನದ ಸಭಾಭವನದಲ್ಲಿ ದೇವಸ್ಥಾನ ಅಭಿವೃದ್ಧಿ ಪಡಿಸುವ ಕಾಮಗಾರಿ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಗಲಗಲಿ ಗ್ರಾಮವು ಸಂಸ್ಕಾರಯುತ ಜನತೆ ವಾಸಿಸುವ ಊರಾಗಿದ್ದು, ದೂರದ ಕಾಶಿಯಲ್ಲಿಯೂ ಈ ಊರಿನ ಪ್ರಸಿದ್ದಿಯಿದೆ. ಇಲ್ಲಿನ ಆರಾಧ್ಯದೈವ ಗಾಲವ ಮಹರ್ಷಿಯ ಬಗ್ಗೆ ಸ್ಮರಿಸುವ ಕಾಶಿಯಲ್ಲಿದ್ದಾರೆ. ಇದು ಈ ಊರಿನ ವೈಶಿಷ್ಠ ಎಂದರು. ಯುಕೆಪಿ ಬಾಧಿತ ಸಂತ್ರಸ್ಥರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಬಾಗಲಕೋಟ ಆರ್‌ಆರ್ ಕಛೇರಿಯಲ್ಲಿ ಮೇ23ರಂದು ಸಭೆ ನಡೆಯಲಿದೆ. ಸಂತ್ರಸ್ಥರು ತಮ್ಮ ಸಮಸ್ಯೆಗಳ ಬಗ್ಗೆ ಸಭೆಯ ಗಮನಕ್ಕೆ ತರುವಂತೆ ತಿಳಿಸಿದರು. ಈ ವೇಳೆ ಹಿರಿಯರಾದ ಈರಣ್ಣಸ್ವಾಮಿ ಬುಕ್ಕಿಟಗಾರ, ಈಶ್ವರಯ್ಯ ಪುರಾಣಿಕ, ಬಿ.ಜಿ.ಹಿರೇಮಠ, ಈರಣ್ಣಗೌಡ ನ್ಯಾಮಗೌಡ, ಮಲಕಾಜಪ್ಪ ಶೆಟ್ಟರ, ಗೋವಿಂದಗೌಡ ಪಾಟೀಲ ಮುಂತಾದವರಿದ್ದರು. ರಮೇಶ ಬಗಲಿ ನಿರೂಪಿಸಿ ವಂದಿಸಿದರು.



ಕ್ರಿಕೆಟ್ ಪಂದ್ಯಾವಳಿ ಸಮಾರೋಪ: ಬಹುಮಾನ ವಿತರಣೆ

ಮಹಾಲಿಂಗಪುರ: ಯಾವುದೇ ಕ್ರೀಡೆಗಳಲ್ಲಿ ಕೇವಲ ಸೋಲು-ಗೆಲುವಿನ ಲೆಕ್ಕಾಚಾರಕ್ಕಿಂತ ಭಾಗವಹಿಸಿ, ಏಕಾಗ್ರತೆಯಿಂದ ಆಟವಾಡುವದು ಬಹುಮುಖ್ಯ ಎಂದು ವಿಜಯಪುರ ಡಿಸಿಸಿ ಬ್ಯಾಂಕ್ ನಿರ್ದೇಶಕಿ, ಬಾಗಲಕೋಟೆ ಜಿಲ್ಲಾ ಮಹಿಳಾ ಕಾಂಗ್ರೆಸ್ ಮುಖಂಡ ಸಂಯುಕ್ತಾ ಶಿ.ಪಾಟೀಲ ಹೇಳಿದರು.

ಪಟ್ಟಣದ ಮಹಾತ್ಮಾ ಗಾಂಧಿ ಕ್ರೀಡಾಂಗಣದಲ್ಲಿ ಪವರ್ ಸ್ಟಾರ್ ಪುನೀತರಾಜಕುಮಾರ, ದಿ.ಜಾವೇದ ಬಾಗವಾನ ಅವರ ಸ್ಮರಣಾರ್ಥ 6 ದಿನಗಳ ಕಾಲ ಜಾಮಿಯಾ ಕ್ರಿಕೇಟ್ ಕ್ಲಬ್ ವತಿಯಿಂದ ಜರುಗಿದ ಬಾಗಲಕೋಟೆ ಪ್ರೇಮಿಯರ್ ಲೀಗ್ ಪಂದ್ಯಾವಳಿ ಸಮಾರೋಪ ಹಾಗೂ ಬಹುಮಾನ ವಿತರಣೆ ಸಮಾರಂಭದಲ್ಲಿ ಮಾತನಾಡಿದರು.

ಹೆಸ್ಕಾಂ ಸೆಕ್ಷನ್ ಆಪೀಸರ್ ರಾಜೇಶ ಬಾಗೋಜಿ, ಗೋಕಾಕನ ಸಂತೋಷ ಮಾಲಪಾನಿ, ತೇರದಾಳದ ಯುವ ಮುಖಂಡ ಸಚಿನ ಮುರಗುಂಡಿ, ಪತ್ರಕರ್ತ ಜಯರಾಮಶೆಟ್ಟಿ ಮಾತನಾಡಿದರು. ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ರಾಯರ ಅಧ್ಯಕ್ಷತೆವಹಿಸಿ ಮಾತನಾಡಿದರು.

ಪುರಸಭೆ ಮಾಜಿ ಸದಸ್ಯೆ ಸವಿತಾ ರಾಯರ, ಕಾಂಗ್ರೆಸ್ ಮಹಿಳಾ ಮುಖಂಡ ಸಂಯುಕ್ತಾ ಪಾಟೀಲ, ಕವಿತಾ ಕೊಣ್ಣೂರ ಅವರನ್ನು ಸನ್ಮಾನಿಸಿದರು. ಗೋಕಾಕನ ಉದ್ಯಮಿ ಕಿಶೋರ ಭಟ್ಟ, ಸಮೀರ ಗೋಕಾಕ, ರಮೀಜ್ ಗೋಕಾಕ, ಶ್ರೀಶೈಲ ಭಜಂತ್ರಿ, ಅಶೋಕ ಜ.ಅಂಗಡಿ, ಶ್ರೀಶೈಲಗೌಡ ಪಾಟೀಲ, ಪಾಪಾ ನಾಲಬಂದ, ಹುಚ್ಚೇಶ ವಡ್ಡರ, ಶ್ರೀಕಾಂತ ಮಾಗಿ, ಇಸಾಕ ಐನಾಪೂರ, ಇಲಿಯಾಸ್ ಯಾದವಾಡ, ಜೀತು ಕೆಸರಗೊಪ್ಪ ಅತಿಥಿಗಳಾಗಿ ಬಾಗವಹಿಸಿದ್ದರು. ಪಂದ್ಯಾವಳಿಯ ಸಂಘಟಕರಾದ ಮಹಾದೇವ ಕಡಬಲ್ಲವರ, ಸೈಯದ್ ಶೇಕ್, ಇಜಾಜ್ ಯಾದವಾಡ, ಆವೇಶ ನದಾಫ್, ಆಪ್ರೀದಿ ಫಕಾಲಿ, ಪ್ರಭು ನೀಲಾರಿ, ಅವಿನಾಶ ಜಾಧವ, ಯಾಸೀನ ಪಾಂಡು, ಸಾಜೀದ ಸಿಂದಗಿ, ಸಲ್ಮಾನ ಡಾಂಗೆ, ಮೋದಿನ ತಟಗಾರ, ಸಿಕಂದರ ಸಾಂಗ್ಲೀಕರ ಸೇರಿದಂತೆ ಹಲವರು ಇದ್ದರು. ಜಿಲ್ಲಾ ಕಾನಿಪ ಸದಸ್ಯ ಚಂದ್ರಶೇಖರ ಮೋರೆ ಪ್ರಾಸ್ತಾವಿಕವಾಗಿ ಮಾತನಾಡಿ ನಿರೂಪಿಸಿ-ವಂದಿಸಿದರು.



12 ತಂಡಗಳು ಭಾಗಿ

ಪಂದ್ಯಾವಳಿಯಲ್ಲಿ ಭಾಗವಹಿಸಿದ 12 ತಂಡಗಳಲ್ಲಿ ಬಾಗಲಕೋಟೆ ತಂಡ ಹಾಗೂ ಮಹಾಲಿಂಗಪುರದ ರಾಯಲ್ ಚಾಲೆಂಚರ್ಸ್ ತಂಡಗಳು ಪೈನಲ್ ಪ್ರವೇಶಿಸಿ, ಬಾಗಲಕೋಟೆ ತಂಡವು ನಗದು 2 ಲಕ್ಷ ಬಹುಮಾನದೊಂದಿಗೆ ಚಾಂಪಿಯನ್ ಪ್ರಶಸ್ತಿ ಟ್ರೋಫಿ ಪಡೆದುಕೊಂಡಿತ್ತು. ರಾಯಲ್ ಚಾಲೆಂಚರ್ಸ್ ತಂಡ ರನ್ನರ್ ಆಫ್ ನಗದು 1 ಲಕ್ಷ ರೂ., ಟ್ರೋಫಿ ಪಡೆಯಿತು. ಡೇರಿಂಗ್ ಡೆವಿಲ್ಸ್ ತಂಡವು 3ನೇ, ಮಿಲನ್ ಪೆಂಡಾರಿ ತಂಡ 4ನೇ ಬಹುಮಾನ ಪಡೆದವು. ವಯಕ್ತಿಕ ವಿಭಾಗದಲ್ಲಿ ಬಾಗಲಕೋಟೆ ತಂಡದ ಅನೀಲ ನಾಯಕ ಉತ್ತಮ ಬ್ಯಾಟ್ಸಮನ್ ಹಾಗೂ ಮ್ಯಾನ ಆಫ್ ದಿ ಸಿರೀಜ್ ಪ್ರಶಸ್ತಿ ಪಡೆದರು. ಡೆರಿಂಗ್ ಡೆವಿಲ್ಸ್ ತಂಡದ ಪರಶುರಾಮ ಚಲವಾದಿ ಉತ್ತಮ ಬೌಲರ್ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡರು.

ಪಾಳು ಬಿದ್ದ ತುಳಸಿಗೇರಿ ಬಸ್ ನಿಲ್ದಾಣ

▸ ನಿತೀಶ ಪಾಟೀಲ

ಕಲಾದಗಿ: ಸಮೀಪದ ಐತಿಹಾಸಿಕ ಧಾರ್ಮಿಕ ಕ್ಷೇತ್ರ ತುಳಸಿಗೇರಿಯಲ್ಲಿ ಸುಸಜ್ಜಿತ ಬಸ್ ನಿಲ್ದಾಣವಿಲ್ಲದೇ ನಿತ್ಯ ಪ್ರಯಾಣಿಕರು, ದೇವಸ್ಥಾನಕ್ಕೆ ಬರುವ ಭಕ್ತರು ಪರದಾಡುತ್ತಿದ್ದು, ರಣ ಬಿಸಿಲಿಗೆ ಗಿಡ-ಮರಗಳ ನೆರಳೇ ಪ್ರಯಾಣಿಕರಿಗೆ ಆಸರೆಯಾಗಿದೆ. ಗ್ರಾಮದ ಜನಸಂಖ್ಯೆ ಹಾಗೂ ಬೆಳವಣಿಗೆ ತಕ್ಕಂತೆ ವೈಜ್ಞಾನಿಕ ಸ್ಥಳದಲ್ಲಿ ಬಸ್ ನಿಲ್ದಾಣ ನಿರ್ಮಿಸಿದರು ಜನರ ಪಾಲಿಗೆ ಇದ್ದೂ ಇಲ್ಲದಂತಾಗಿದೆ.

ತುಳಸಿಗೇರಿ ಗ್ರಾಮದ ರಾಜ್ಯ ಹೆದ್ದಾರಿ ದೇವನಾಳ ರಸ್ತೆ ತಿರುವಿನಲ್ಲಿರುವ ಬಸ್ ನಿಲ್ದಾಣಕ್ಕೆ ಮೆಟ್ಟಿಲುಗಳು ಇಲ್ಲದೇ ಪ್ರಯಾಣಿಕರ ಬಳಕೆಯಾಗದೆ ಉಳಿದಿರುವುದರಿಂದ ನಾನಾ ರೀತಿಯ ವ್ಯಾಪಾರಿಗಳಿಗೆ ಬಸ್ ನಿಲ್ದಾಣದ ಮುಂದಿನ ಆವರಣ ಬಳಕೆಯಾಗುತ್ತಿದೆ. ಕೆಎಸ್‌ಆರ್‌ಟಿಸಿ ಬಸ್‌ಗಳ ನಿಲುಗಡೆಗಾಗಿ ದಶಕಗಳ ಹಿಂದೆಯೆ ನಿರ್ಮಿಸಲಾಗಿದ್ದ ಬಸ್ ನಿಲ್ದಾಣ ಮೂಲ ಸೌಕರ್ಯದ ಕೊರತೆಯಿಂದಾಗಿ ಯಾವ ಪ್ರಯಾಣಿಕರು ಆ ಕಡೆ ತಲೆ ಎತ್ತಿಯೂ ನೋಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ತೀವ್ರಗತಿಯಲ್ಲಿ ಬೆಳೆಯುತ್ತಿರುವ ತುಳಸಿಗೇರಿ ಗ್ರಾಮಕ್ಕೆ ಸುಂದರ ಹಾಗೂ ಸುಸಜ್ಜಿತ ಬಸ್ ನಿಲ್ದಾಣದ ಅವಶ್ಯಕತೆ ಇದ್ದು, ಅಲ್ಲಿನ ಆಸನ ಸ್ವಚ್ಛತೆ, ಬೆಳಕು, ನೀರಿನ ಅವ್ಯವಸ್ಥೆಯಿಂದಾಗಿ ಅದರ ಬಳಕೆ ಇಲ್ಲದೇ ಪಾಳು ಬಿದ್ದಂತಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.



ತುಳಸಿಗೇರಿ ಐತಿಹಾಸಿಕ ಆಂಜನೇಯ ದೇವಸ್ಥಾನಕ್ಕೆ ರಾಜ್ಯ ಸೇರಿದಂತೆ ಪಕ್ಕದ ರಾಜ್ಯಗಳ ವಿವಿಧ ಭಾಗಗಳಿಂದ ಕಾರ್ತಿಕ ಮಾಸ ಹಾಗೂ ಅಮವಾಸ್ಯೆ ಸೇರಿದಂತೆ ವಿಶೇಷ ದಿನಗಳಲ್ಲಿ ಸಾವಿರಾರು ಭಕ್ತರು ಈ ಕ್ಷೇತ್ರಕ್ಕೆ ಹರಿದು ಬರುತ್ತಾರೆ. ಆದರೆ ದಶಕಗಳಿಂದಲೂ ಸುಸಜ್ಜಿತ ಬಸ್ ನಿಲ್ದಾಣಕ್ಕಾಗಿ ಗ್ರಾಮಸ್ಥರು ಗೋಗರೆದರೂ ಬೇಡಿಕೆ ಮಾತ್ರ ಈಡೇರುತ್ತಿಲ್ಲ. ಗ್ರಾಮದ ಸೂಕ್ತ ಸ್ಥಳದಲ್ಲಿ ವೈಜ್ಞಾನಿಕವಾಗಿ ದೊಡ್ಡ ಬಸ್ ನಿಲ್ದಾಣ ನಿರ್ಮಿಸಬೇಕೆಂದು ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ ಗ್ರಾಮಸ್ಥರ ಆಗ್ರಹವಾಗಿದೆ.

> ಈಗಿರುವ ಬಸ್ ನಿಲ್ದಾಣದಲ್ಲಿ ಸೂಕ್ತ ಮೂಲಭೂತ ಸೌಲಭ್ಯ ಹಾಗೂ ಮೆಟ್ಟಿಲುಗಳನ್ನು ಕಲ್ಪಿಸಬೇಕು. ಎಲ್ಲ ಬಸ್‌ಗಳು ಅದೇ ಬಸ್ ನಿಲ್ದಾಣದ ಮುಂದೆ ನಿಲ್ಲಿಸುವಂತೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಕ್ಷೇತ್ರದ ಶಾಸಕರು ಸೂಚಿಸಬೇಕು. ನೂತನವಾಗಿ ವೈಜ್ಞಾನಿಕವಾಗಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಿಕೊಡಬೇಕು.
>
> ■ ಭೀಮಣ್ಣ ದಾಸನ್ನವರ, ತುಳಸಿಗೇರಿ ಗ್ರಾಮಸ್ಥ

> ಈಗಿರುವ ಬಸ್ ನಿಲ್ದಾಣವು ಬಹು ವರ್ಷಗಳ ಹಿಂದೆ ರಸ್ತೆ ಅಗಲೀಕರಣ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿಗಳ ಸುಧಾರಣಾ ಯೋಜನೆಯಲ್ಲಿ ನಿರ್ಮಾಣವಾಗಿರುವ ಸಾಧ್ಯತೆಗಳಿದ್ದು, ನಮ್ಮ ಇಲಾಖೆಗೆ ಹಸ್ತಾಂತರಿಸಿದ ಬಗ್ಗೆ ಲಿಖಿತ ರೂಪದ ದಾಖಲೆಗಳಿಲ್ಲ, ಮುಂದೆ ನಮ್ಮ ಇಲಾಖೆಗೆ ಹಸ್ತಾಂತರವಾದರೆ ಅನುದಾನ ಮೀಸಲಿಟ್ಟು ಬಸ್ ನಿಲ್ದಾಣದ ಅಭಿವೃದ್ಧಿ ಮಾಡುತ್ತೇವೆ.
>
> ■ ಆಂಜನೇಯ ಲಮಾಣಿ, ಬಾಗಲಕೋಟೆ ಲೋಕೋಪಯೋಗಿ ಇಲಾಖೆ ಅಧಿಕಾರಿ

ಕಿರುಸುದ್ದಿ

ಕ್ಯಾಂಪಸ್ ಸಂದರ್ಶನ ಮೇ 25ರಂದು

ವಿಜಯಪುರ: ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಬಿಎಲ್‌ಡಿಇ ಆಶ್ರಯದಲ್ಲಿ ಆಶ್ರಮ ರಸ್ತೆಯಲ್ಲಿರುವ ಬಿಎಲ್‌ಡಿಇ ಐಟಿಐ ಕಾಲೇಜಿನ ಆವರಣದಲ್ಲಿ ಹೊಂಡಾ ಮೋಟರ್ ಸೈಕಲ್ ಸ್ಕೂಟರ್ ಇಂಡಿಯಾ ಪ್ರೈ.ಲಿ ಕಂಪನಿ ನರಸಾಪೂರ ಕೊಲಾರ ಇವರ ವತಿಯಿಂದ ಅಪ್ರೆಂಟಿಶಿಪ್‌ಗಾಗಿ ಕ್ಯಾಂಪಸ್ ಸಂದರ್ಶನ ಮೇ 25ರಂದು ಬೆಳಗ್ಗೆ 10ಕ್ಕೆ ಆಯೋಜಿಸಲಾಗಿದೆ.ಐಟಿಐ ಪಾಸಾದ 24 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ತಮ್ಮ ಶಾಲಾ ದಾಖಲಾತಿಗಳು, ಸ್ವವಿವರ ಆಧಾರ್ ಕಾರ್ಡ್‌ನೊಂದಿಗೆ ಶಾಲಾ ಶೈಕ್ಷಣಿಕ ಅಗತ್ಯ ದಾಖಲೆಗಳೊಂದಿಗೆ ಭಾಗವಹಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗೆ 9916853605 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 22ರಂದು ಕಣ್ಣಿನ ತಪಾಸಣೆ

ಸಿಂದಗಿ: ನಗರದ ಸಾರಂಗಮಠ-ಗಚ್ಚಿನಮಠದ ಚೆನ್ನವೀರಸ್ವಾಮಿಗಳವರ 35ನೇ ಪುಣ್ಯ ಸ್ಮರಣೆಯ ನಿಮಿತ್ತ ಮೇ 22ರಂದು ಬೆಳಗ್ಗೆ 11ಕ್ಕೆ ಉಚಿತ ನೇತ್ರ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆ ಶಿಬಿರ ನೇತ್ರ ತಜ್ಞ ಡಾ.ಪ್ರಭುಗೌಡ ಚಬನೂರ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಕಡ್ಡಾಯವಾಗಿ ಆಧಾರ್ ಕಾರ್ಡ್ ತೆಗೆದುಕೊಂಡು ಬರಬೇಕು ಎಂದು ಆಯೋಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಂಜೆ 6.30ಕ್ಕೆ ನಗರದ ಸಾರಂಗಮಠದ ಆವರಣದಲ್ಲಿರುವ ಸಿದ್ಧಲಿಂಗ ಶ್ರೀಗಳ ಕಾನ್ಸರೆನ್ಸ್ ಹಾಲ್‌ನಲ್ಲಿ ಚೆನ್ನವೀರ ಮಹಾಸ್ವಾಮೀಜಿ ಅವರ 35ನೇ ಪುಣ್ಯಸ್ಮರಣೋತ್ಸವ ಹಮ್ಮಿಕೊಳ್ಳಲಾಗಿದೆ.

ಕಾಲುವೆಗಳಿಗೆ ನೀರು ಹರಿಸಲು ಆಗ್ರಹ

ಕೊಲ್ಹಾರ: ಜನ-ಜಾನುವಾರುಗಳಿಗೆ ಕುಡಿಯಲು ನೀರಿಲ್ಲದೆ ಪರದಾಡುವ ಸ್ಥಿತಿಯಲ್ಲಿವೆ. ಕಾಲುವೆಗಳಿಗೆ ನೀರು ಹರಿಸಿ ಜಿಲ್ಲೆಯ ಎಲ್ಲ ಕೆರೆಗಳನ್ನು ಪೂರ್ಣ ಪ್ರಮಾಣದಲ್ಲಿ ಭರ್ತಿ ಮಾಡಲು ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾ ಬಿಜೆಪಿ ವಕ್ತಾರ ರೈತ ಮುಖಂಡ ತುಳಸಿಗೇರಿ ಹಗೆದಾಳ ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಈ ಬಾರಿ ಬೇಸಿಗೆ ತಾಪ ಹೆಚ್ಚಿರುವುದರಿಂದ ಅಲ್ಪ ಪ್ರಮಾಣದಲ್ಲಿ ಹರಿಸಿದ ನೀರು ಬೇಗನೆ ಆವಿಯಾಗಿ ಖಾಲಿಯಾಗುತ್ತಿದೆ. ಈಗಾಗಲೇ ಆಲಮಟ್ಟಿ ಜಲಾಶಯ ವ್ಯಾಪ್ತಿಯಲ್ಲಿ ಬರುವ ಚಿಮ್ಮಲಗಿ ಏತ ನೀರಾವರಿಗೆ ಆ ಭಾಗದ ಶಾಸಕರ ಅಳತೆಯಂತೆ ನೀರು ಹರಿಸುತ್ತಿದ್ದೀರಿ. ಆದರೆ ಅದೇ ಜಲಾಶಯದ ವ್ಯಾಪ್ತಿಗೆ ಬರುವ ಮುಳವಾಡ ಏತ ನೀರಾವರಿ ಒಂದು, ಎರಡು ಹಂತದ ಕಾಲುವೆಗಳಿಗೆ ನೀರು ಹರಿಸಿ ಜನಜಾನುವಾರುಗಳಿಗೆ ಕುಡಿಯಲು ನೀರು ಹರಿಸಬೇಕು ಎಂದು ಆಗ್ರಹಿಸಿದರು.

ಮಲ್ಲಮ್ಮನವರ ಆದರ್ಶ ಅಳವಡಿಸಿಕೊಳ್ಳಿ: ಸಂಗಪ್ಪ



ಬಸವನಬಾಗೇವಾಡಿ: ಹೇಮರೆಡ್ಡಿ ಮಲ್ಲಮ್ಮನವರ ತ್ಯಾಗ, ಸೇವಾ ಮನೋಭಾವ ಇಂದಿನ ಯುವಪೀಳಿಗೆಗೆ ಮಾದರಿಯಾಗಿದೆ ಅವರ ಆದರ್ಶ ಗುಣಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಸಂಘದ ಅಧ್ಯಕ್ಷ ಸಂಗಪ್ಪ ಹುಣಶಿಕಟ್ಟಿ ಹೇಳಿದರು.

ತಾಲೂಕಿನ ಮನಗೂಳಿ ಪಟ್ಟಣದಲ್ಲಿ ಹೇಮರೆಡ್ಡಿ ಮಲ್ಲಮ್ಮ ಸೇವಾ ಸಂಘದ ನೇತೃತ್ವದಲ್ಲಿ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಿ ಮಾತನಾಡಿದರು. ಕಾರ್ಯಕ್ರಮಕ್ಕೂ ಮುಂಚೆ ಹೇಮರೆಡ್ಡಿ ಮಲ್ಲಮ್ಮನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ನಂತರ ಊರಿನ ಪ್ರಮುಖ ಬೀದಿಗಳಲ್ಲಿ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಗಣ್ಯರಿಂದ ಹೇಮರೆಡ್ಡಿ ಮಲ್ಲಮ್ಮನವರ ಜೀವನ ಚರಿತ್ರೆ ಸ್ಮರಣೆ ಮಾಡಲಾಯಿತು. ಈ ವೇಳೆ ಸಂಘದ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು, ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲ ಹೆಣ್ಣು ಮಕ್ಕಳಿಗೆ ಉಡಿ ತುಂಬಿದರು.



ಬಸವನಬಾಗೇವಾಡಿ: ಸ್ಥಳೀಯ ಪೊಲೀಸ್ ಠಾಣೆಗೆ ನೂತನವಾಗಿ ಅಧಿಕಾರ ಸ್ವೀಕರಿಸಿದ ಪೊಲೀಸ್ ಉಪವಿಭಾಗದ ಅಧೀಕ್ಷಕ(ಡಿವೈಎಸ್ಪಿ) ಚಂದ್ರಕಾಂತ ನಂದರೆಡ್ಡಿ ಅವರನ್ನು ಸನ್ಮಾನಿಸಿದರು. ಈ ವೇಳೆ ಜೆಡಿಎಸ್ ತಾಲೂಕಾ ಅಧ್ಯಕ್ಷ ಜಗದೀಶ ಕೊಟ್ರಶೆಟ್ಟಿ, ಬಾಬು ನಿಡಗುಂದಿ, ಸಂಗಮೇಶ ವಾಡೇದ, ಡಾ. ಎಸ್.ಎಸ್.ಡಂಬಳ, ಡಾ.ಅಮರೇಶ ಮಿಣಜಗಿ ಅಭಿನಂದಿಸಿದರು.

ಬಸ್ ನಿಲ್ದಾಣ ನಿರ್ಮಾಣಕ್ಕೆ ಜಾಗೆ ಮಂಜೂರು

ಸಿಂದಗಿ: 50ಸಾವಿರಕ್ಕೂ ಅಧಿಕ ಜನಸಂಖ್ಯೆ ಹೊಂದಿದ ನಿಮಿತ್ತ ಸಿಂದಗಿ ಪುರಸಭೆ ನಗರಸಭೆಯಾಗಿ ಮೇಲ್ದರ್ಜೆಗೆ ಏರಿದೆ. ಪ್ರಸ್ತುತ ನಗರದ ಹೃದಯ ಭಾಗದಲ್ಲಿರುವ ಚೆನ್ನವೀರ ಸ್ವಾಮೀಜಿ ಕೇಂದ್ರ ಬಸ್ ನಿಲ್ದಾಣ ಪ್ರಮಾಣದಲ್ಲಿ ಕಡಿಮೆ ಇದ್ದು, ಪ್ರಾಯಾಣಿಕರಿಗೂ, ಸಾರ್ವಜನಿಕರಿಗೂ ಸಮಸ್ಯೆ ಉಂಟಾಗುತ್ತಿದೆ. ಹೆಚ್ಚುವರಿಯಾಗಿ ನೂತನ ಬಸ್ ನಿಲ್ದಾಣದ ಅವಶ್ಯಕತೆ ಮನಗಂಡು ಸ್ಯಾಟ್‌ಲೈಟ್ ಬಸ್ ನಿಲ್ದಾಣದ ನಿರ್ಮಾಣಕ್ಕೆ ಮುನ್ನುಡಿ ಬರೆಯಲಾಗಿದೆ ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ನಗರಸಭೆ ವ್ಯಾಪ್ತಿಯಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಸ್ಯಾಟ್‌ಲೈಟ್ ಬಸ್ ನಿಲ್ದಾಣಕ್ಕೆ ನಿರ್ಮಾಣಕ್ಕೆ ಗೋಲಗೇರಿ ರಸ್ತೆಯಲ್ಲಿರುವ ಗ್ರಾಮೀಣ ನಿರ್ಮಿತ ಕೇಂದ್ರಕ್ಕೆ ಸಂಬಂಧಪಟ್ಟ 2ಎ ಭೂಮಿಯಲ್ಲಿ 1ಎ 13ಗುಂಟೆ ಭೂಮಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವಿಜಯಪುರ ವಿಭಾಗದ ಹೆಸರಿಗೆ ವರ್ಗಾವಣೆಗೊಂಡಿದೆ. ಮತ್ತು ಸ್ಯಾಟ್‌ಲೈಟ್ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ನಗರಾಭಿವೃದ್ಧಿ ಇಲಾಖೆ ಸಚಿವರು ರೂ.50ಲಕ್ಷ ಅನುದಾನವನ್ನು ಬಿಡುಗಡು ಮಾಡಿದ್ದಾರೆ. ಜಮೀನು ಸಾರಿಗೆ ನಿಗಮಕ್ಕೆ ವರ್ಗಾವಣೆಯಾಗಿದ್ದರಿಂದ ನೂತನ ಸ್ಯಾಟ್‌ಲೈಟ್ ಬಸ್ ನಿಲ್ದಾಣ ನಿರ್ಮಾಣ ಮಾಡುವುದಕ್ಕಾಗಿ ಸಾರಿಗೆ ನಿಗಮದಿಂದ ರೂ.1 ಕೋಟಿ ಮಂಜೂರು ಆಗಲಿದೆ ಎಂದಿದ್ದಾರೆ.



ದೇವರಹಿಪ್ಪರಗಿ: ವಿಜಯಪುರ ನಗರದಲ್ಲಿ ನಡೆಯುತ್ತಿರುವ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ ಕ್ರೀಡಾ ಹಬ್ಬಕ್ಕೆ ಗುರುವಾರ ಆಗಮಿಸಿದ್ದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಅಧ್ಯಕ್ಷರು ಹಾಗೂ ಜೇವರ್ಗಿ ಕ್ಷೇತ್ರದ ಶಾಸಕ ಡಾ.ಅಜಯಸಿಂಗ್ ಧರ್ಮಸಿಂಗ ಅವರನ್ನು ದೇವರಹಿಪ್ಪರಗಿ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಮಲ್ಲನಗೌಡ ಬಿರಾದಾರ (ಕೆಸರಟ್ಟಿ) ಆತ್ಮೀಯವಾಗಿ ಸ್ವಾಗತಿಸಿ, ಸನ್ಮಾನಿಸಿದರು. ರಾಜಕೀಯ ಮುಖಂಡರು, ಅಧಿಕಾರಿಗಳು ಹಾಗೂ ರಾಜ್ಯಮಟ್ಟದ ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಪ್ರವಾಸೋದ್ಯಮ ಅಭಿವೃದ್ಧಿ ವಿಶೇಷ ಸಮಿತಿ ಸಭೆ | ಡಿಸಿ ಸೂಚನೆ

ಅನಧಿಕೃತ ಹೋಂಸ್ಟೇ ವಿರುದ್ಧ ಕ್ರಮ

ವಿಜಯಪುರ: ಜಿಲ್ಲೆಯಲ್ಲಿನ ಹೋಂಸ್ಟೇ ಮಾಲೀಕರು ಪ್ರವಾಸೋದ್ಯಮ ಇಲಾಖೆ ಮಾರ್ಗಸೂಚಿಗಳನ್ವಯ ನಡೆಸಬೇಕು. ಇಲ್ಲದಿದ್ದರೆ ಇದನ್ನು ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಿದ್ದು, ಅನಧಿಕೃತವಾಗಿ ಹೋಂ ಸ್ಟೇ ನಡೆಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಹೇಳಿದರು.

ನಗರದ ಡಿಸಿ ಕಚೇರಿಯ ಕೆಸ್ವಾನ ಸಭಾಂಗಣದಲ್ಲಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ವಿಶೇಷ ಸಮಿತಿ ಸಭೆಯಲ್ಲಿ 2025-26 ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಸಹಾಯಧನದೊಂದಿಗೆ ಮೊಬೈಲ್ ಕ್ಯಾಂಟಿನ್ ಖರೀದಿಸುವ ಯೋಜನೆಗೆ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಅವರು ಮಾತನಾಡಿ, ಭವಿಷ್ಯದ ದಿನಗಳಲ್ಲಿ ಅನಧಿಕೃತ ಹೋಂಸ್ಟೇ ನಿರ್ವಹಿಸಿದಲ್ಲಿ ಅಂತವರ ವಿರುದ್ಧ ಕಾನೂನು ಕ್ರಮ ವಹಿಸಲಾಗುವುದು. ನಗರದಲ್ಲಿ ಪುರಾತನ ನೀರು ಸರಬರಾಜು ವ್ಯವಸ್ಥೆ (ಕರೇಜ್) ಅನುಷ್ಠಾನಗೊಳಿಸುವ ಸಂಬಂಧ ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ತಕ್ಷಣವೇ ಕ್ರಿಯಾಯೋಜನೆ (ಡಿಪಿಆರ್) ಸಿದ್ಧಪಡಿಸಬೇಕು ಎಂದರು.

ಸಾರ್ವಜನಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್ ಆರ್) ಅನುದಾನದಡಿ ನಗರದ ಐತಿಹಾಸಿಕ ತಾಜಬಾವಡಿ ಸ್ಮಾರಕವನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಪುರಾತತ್ವ ವಸ್ತು ಸಂಗ್ರಹಾಲಯ ಇಲಾಖೆಯ ಅಧಿಕಾರಿಗಳು ಪ್ರವಾಸೋದ್ಯಮ ಇಲಾಖೆಸಮನ್ವಯದೊಂದಿಗೆಸ್ಥಳ



ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಸೂಚಿಸಿದರು.

ನಗರದ ಐತಿಹಾಸಿಕ ಸ್ಮಾರಕಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅವರಿಗೆ ಸೂಚಿಸಿದರು.

ಜಿಲ್ಲೆಯಲ್ಲಿರುವ ಪ್ರಮುಖ ಪ್ರವಾಸಿ ತಾಣಗಳಿಗೆ ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ತಾಲೂಕ ಪಂಚಾಯಿತಿ(ಮನರೇಗಾ), ಸ್ವಚ್ಛ ಭಾರತ ಮಿಷನ್ ಹಾಗೂ ಮಹಾನಗರ ಪಾಲಿಕೆ ಅನುದಾನದಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಪ್ರಸ್ತಾವನೆ ಸಲ್ಲಿಸಲು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರಿಗೆ ಸೂಚಿಸಿದರು.

ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಮಹಿಳೆ ಮತ್ತು ಮಕ್ಕಳ ಸಂರಕ್ಷಣೆಗಾಗಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ಪ್ರವಾಸಿ ಮಿತ್ರ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಎಂದು ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

2024-25ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲೆಯ ಆಲಮಟ್ಟಿ ಜಲಾಶಯದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಜಲಕ್ರೀಡೆಗಳು ಮತ್ತು ಜಲಸಾಹಸ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು, ಕ್ರೂಸ್ ಟೂರಿಸಂ ಅಭಿವೃದ್ಧಿ ಪಡಿಸಲು

> **ನಗರದಲ್ಲಿ ಪುರಾತನ ನೀರು ಸರಬರಾಜು ವ್ಯವಸ್ಥೆ (ಕರೇಜ್) ಅನುಷ್ಠಾನಗೊಳಿಸುವ ಸಂಬಂಧ ಪುರಾತತ್ವ ವಸ್ತು ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ತಕ್ಷಣವೇ ಕ್ರಿಯಾಯೋಜನೆ (ಡಿಪಿಆರ್) ಸಿದ್ಧಪಡಿಸಬೇಕು.**
> ■ **ಡಾ.ಆನಂದ ಕೆ. ಡಿಸಿ**

ಈಗಾಗಲೇ ಸಮಿತಿ ಶಿಫಾರಸು ಮಾಡಿರುವಂತೆ ಆಲಮಟ್ಟಿ ಹಿನ್ನಿರಿನ ಪ್ರದೇಶದಲ್ಲಿ ಬರುವ ಮರೆಮಟ್ಟಿ ಗ್ರಾಮದ ವ್ಯಾಪ್ತಿಯಲ್ಲಿ ನಿವೇಶನ ಗುರುತಿಸಲಾಗಿದ್ದು, ಈ ನಿವೇಶನಕ್ಕೆ ಕೆಬಿಜೆಎನ್‌ಎಲ್ ಅಧಿಕಾರಿಗಳು ಅನುಮತಿ ನೀಡಬೇಕು ಎನ್ನುವ ಕುರಿತು ಆಲಮಟ್ಟಿ ಕೆಬಿಜೆಎನ್‌ಎಲ್ ಮುಖ್ಯ ಅಭಿಯಂತರರೊಂದಿಗೆ ಇದೇ ವೇಳೆ ಚರ್ಚಿಸಲಾಯಿತು.

ಪ್ರವಾಸೋದ್ಯಮ ಇಲಾಖೆಯಿಂದ ಮಂಜೂರಾಗಿರುವ ಯಾತ್ರಿ ನಿವಾಸ, ಮೂಲಭೂತ ಸೌಕರ್ಯ ಕಾಮಗಾರಿಗಳ ಪ್ರಗತಿ ಪರಿಶೀಲನೆ ಮಾಡಿ ಪೂರ್ಣಗೊಂಡ ಕಾಮಗಾರಿಗಳನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಲು ಹಾಗೂ ಪ್ರಾರಂಭಿಸದೇ ಇರುವ ಕಾಮಗಾರಿಗಳನ್ನು ಕೈಗೊಳ್ಳಲು ಹಾಗೂ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಕೆಆರ್‌ಡಿಎಲ್ ನಿರ್ಮಿತಿ ಕೇಂದ್ರ ಹಾಗೂ ಲೋಕೋಪೂಗಿ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜೀವನ ಉನ್ನತಿಗೆ ಧರ್ಮ ಮುಖ್ಯ: ಶ್ರೀ

ಚಡಚಣ: ಮಾನವ ಜೀವನದ ಉನ್ನತಿಗೆ ಮತ್ತು ಶ್ರೇಯಸ್ಸಿಗೆ ಧರ್ಮ ಮುಖ್ಯವಾಗಿದ್ದು, ತಾನು ಎಲ್ಲರಿಗಾಗಿ ಅನ್ನುವುದೇ ನಿಜವಾದ ಧರ್ಮ ಎಂದು ಬಾಳೆಹೊನ್ನೂರು ರಂಭಾಪುರಿ ಮಠದಡಾ.ಪ್ರಸನ್ನ ರೇಣುಕವೀರಸೋಮೇಶ್ವರ ಶಿವಾಚಾರ್ಯ ಭಗವತ್ಪಾದರು ಹೇಳಿದರು.

ಸಮೀಪದ ಹಾವಿನಾಳ ಗ್ರಾಮದ ಚರಮೂರ್ತಿ ಮಠದ ಪೀಠಾಧ್ಯಕ್ಷ ಗುರು ವಿಜಯಮಹಾಂತೇಶ್ವರ ಶಿವಾಚಾರ್ಯರ ದ್ವಾದಶ ಪಟ್ಟಾಕಾರ ವರ್ಧಂತಿ ಮಹೋತ್ಸವ, ತುಲಾಭಾರ ಮತ್ತು ಪುರಾಣ ಮಹಾಮಂಗಲ ಸಮಾರಂಭದ ನಿಮಿತ್ತ ಜಗದ್ಗುರು ಪಂಚ ಪೀಠಾಃಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ, ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ಹತ್ತಳ್ಳಿ-ಹಾವಿನಾಳ ಮಠದ ಗುರುಗು ರುಪಾದೇಶ್ವರ ಶಿವಾಚಾರ್ಯರು ಅಧ್ಯಕ್ಷತೆ ವಹಿಸಿ ಆಶೀರ್ವಚನ ನೀಡಿ, ನಮ್ಮ ಬದುಕು ಇನ್ನೊಬ್ಬರಿಗೆಮಾದರಿಯಾಗಬೇಕಲ್ಲದೆಮಾರಕವಾಗಬಾರದು. ಪೂರ್ವಜರ ಅನುಭವದ ನುಡಿಗಳು ಬದುಕಿ ಬಾಳುವ ಜನಾಂಗಕ್ಕೆ ಆಶಾಕಿರಣ. ಪುಟ ಪುಸ್ತಕ ಬದಲಿಸಬಹುದು. ಆದರೆ ಇತಿಹಾಸವನ್ನು ಬದಲಿಸಲು ಯಾರಿಂದಲೂ ಸಾಧ್ಯವಾಗದು ಎಂದರು.

ಹಾವಿನಾಳದ ಚರಮೂರ್ತಿ ಮಠದ ವಿಜಯಮಹಾಂತೇಶ್ವರ ಶಿವಾಚರ್ಯರು ನೇತೃತ್ವವನ್ನು ವಹಿಸಿದ್ದರು.

ಚಿಟಗುಪ್ಪಾದ ಗುರುಲಿಂಗ ಶಿವಾಚಾರ್ಯರು, ಹಿರೂರ-ತಾಳಿಕೋಟ ಹಿರೇಮಠದ ಜಯಸಿದ್ದೇಶ್ವರ ಶೀವಾಚಾರ್ಯರು, ಆಲಮೇಲದ ಚಂದ್ರಶೇಖರ ಶಿವಾಚಾರ್ಯರು, ತಡವಲಗಾದರಾಚೋಟೇಶ್ವರಶಿವಾಚಾರ್ಯರು, ರಾಣೆಬೆನ್ನೂರದಶಿವಯೋಗಿಶೀವಾಚಾರ್ಯರು, ಗುಡ್ಡಾಪೂರದ ಗುರುಪಾದ ಶಿವಾಚಾರ್ಯರು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಧರ್ಮ ಸಭೆಯಲ್ಲಿ ಚಡಚಣದ ಖ್ಯಾತ ಜವಳಿ ವ್ಯಾಪಾರಿ, ಅಜೀತ ಮುತ್ತಿೀನ, ಎಮ್.ಆರ್.ಪಾಟೀಲ (ಬಳ್ಳೊಳ್ಳಿ), ಸಿದ್ದಣ್ಣಸಾವುಕಾರ ಬಿರಾದಾರ, ಪ.ಪಂ.ಮಾಜಿ ಅಧ್ಯಕ್ಷ ಬಾಬುಗೌಡ ಪಾಟೀಲ, ಡಾ.ಎಸ್. ಆರ್. ಡೋಣಗಾಂವ, ಎಸ್.ಆರ್. ಅವಜಿ, ರವಿಗೌಡ ಪಾಟೀಲ, ಗಣಪತಿ ಬಾಣಿಕೋಲ, ಧಾನಮ್ಮಗೌಡತಿ ಪಾಟೀಲ ಸೇರಿದಂತೆ, ಸಾವಿರಾರು ಭಕ್ತರು ಇದ್ದರು.

ನಿವೃತ್ತ ಪ್ರಾಚಾರ್ಯ ಎಸ್.ಕೆ. ಕುಲಕರ್ಣಿ ನಿರೂಪಿಸಿದರು, ಬಾಳಾಸಾಹೇಬ ಗುಲಗಂಜಿಹಾಳ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು.





ಬಸವನಬಾಗೇವಾಡಿ: ಸ್ಥಳೀಯ ಬಿಎಲ್‌ಡಿಇ ಸಂಸ್ಥೆ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ ಗುರುವಾರ ಭಯೋತ್ಪಾದನಾ ವಿರೋಧಿ ದಿನಾಚರಣೆ ಆಚರಿಸಿದರು. ಪ್ರಾಧ್ಯಾಪಕರು, ವಿದ್ಯಾರ್ಥಿಗಳಿಗೆ ಭಯೋತ್ಪಾದನಾ ವಿರೋಧಿ ದಿನದ ನಿಮಿತ್ತ ಡಾ.ಬಿ.ಎಂ.ಸಾಲವಾಡಗಿ ಅವರು ಪ್ರಮಾಣ ವಚನ ಬೋಧಿಸಿದರು. ಪ್ರಾಚಾರ್ಯ ಡಾ.ಎ.ವಿ.ಸೂರ್ಯವಂಶಿ, ಡಾ.ಎಸ್.ಎಂ.ಬಿಜಾಪುರ, ಎಂ.ಕೆ.ಯಾದವ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿಯವರು ಪ್ರಮಾಣವಚನ ಸ್ವೀಕರಿಸಿದರು.

ಭಯೋತ್ಪಾದನೆ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿ

ದೇವರಹಿಪ್ಪರಗಿ: ಸಮಾಜದಲ್ಲಿ ಶಾಂತಿ,ಸೌಹಾರ್ದತೆ ಹಾಗೂ ಏಕತೆಯನ್ನು ಕಾಪಾಡುವ ನಿಟ್ಟಿನಲ್ಲಿ ಯುವಕರಲ್ಲಿ ಭಯೋತ್ಪಾದನೆ ಹಾಗೂ ಹಿಂಸಾಚಾರದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಬೇಕಾಗಿದೆ ಎಂದು ತಹಶೀಲದಾರ್ ನಿಂಗಣ್ಣ ಬಿರಾದಾರ ಹೇಳಿದರು.

ಪಟ್ಟಣದ ತಹಶೀಲದಾರರ ಕಚೇರಿಯಲ್ಲಿ ನಡೆದ ಭಯೋತ್ಪಾದನೆ ವಿರೋಧಿ ದಿನದ ಪ್ರತಿಜ್ಞಾವಿಧಿ ಬೋಧನಾ ಕಾರ್ಯಕ್ರಮದಲ್ಲಿ ಮಾತನಾಡಿ, ಶಿರಸ್ತೇದಾರರಾದ ಸುರೇಶ ಮ್ಯಾಗೇರಿಯವರು ಕಚೇರಿಯ ಎಲ್ಲ ಸಿಬ್ಬಂದಿ ವರ್ಗದವರಿಗೆ ಭಯೋತ್ಪಾದನಾ ವಿರೋಧಿ ದಿನದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಇದೇ ದಿನ ಭಯೋತ್ಪಾದಕರ ದಾಳಿಗೆ 1991 ರಲ್ಲಿ ಬಲಿಯಾದ ಮಾಜಿ ಪ್ರಧಾನಿ ರಾಜೀವಗಾಂಧಿಯವರನ್ನು ಸ್ಮರಿಸಿದರು.

ಉಪತಹಶೀಲದಾರ ಗಿರಿಜಾಬಾಯಿ ಸಜ್ಜನ,ಶಿರಸ್ತೇದಾರ ಡಿ.ಬಿ. ಭೋವಿ, ಶಿಲ್ಪಾ ಶಿಂಪಿ,ಅಮೋಘಸಿದ್ದ ದಳವಾಯಿ, ಜೆ.ಪಿ.ಬಿರಾದಾರ,ಕುಮಾರ ಅವರಾದಿ,ವಿಟ್ಠಲ ವಾಲೀಕಾರ,ಚನಬಸು ಹೊಸಮನಿ,ಅಬುಲ ಕಲಾಮ ಮೋಮಿನ, ವಿಜಯಲಕ್ಷ್ಮೀ ಗಂಗಶೆಟ್ಟಿ ರಾಜು ಕಂಠಿ, ನಾಗೇಶ ದೊಡಮನಿ, ಇತರರಿದ್ದರು.



ಕಠಿಣ ಪರಿಶ್ರಮದಿಂದ ನಿಗದಿತ ಗುರಿ ಸಾಧಿಸಿ: ಯಶವಂತ

ತಾಳಿಕೋಟೆ: ಸಮಾಜದಲ್ಲಿ ವ್ಯಕ್ತಿಗೆ ಗೌರವ ಮತ್ತು ಉನ್ನತ ಸ್ಥಾನಮಾನ ದೊರೆಯಬೇಕಾದರೆ ಶಿಕ್ಷಣವೆಂಬ ಅಸ್ತ್ರ ಅತ್ಯಗತ್ಯ. ವಿದ್ಯಾರ್ಥಿಗಳು ಕಠಿಣ ಪರಿಶ್ರಮದಿಂದ ನಿಗದಿತ ಗುರಿ ತಲುಪಬೇಕು ಎಂದು ಜಮಖಂಡಿ ಸರ್ಕಾರಿ ಮಹಿಳಾ ಕಾಲೇಜಿನ ಸಾಹಿತಿ ಹಾಗೂ ಸಂಯೋಜಕ ಡಾ.ಯಶವಂತ ಕೊಕ್ಕನವರ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಪಟ್ಟಣದ ವಿರಕ್ತಶ್ರೀ ಸಭಾಭವನದಲ್ಲಿ ವೀರಶೈವ ವಿದ್ಯಾವರ್ಧಕ ಸಂಘದ ಖಾಸ್ಗತೇಶ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದಲ್ಲಿ 2025-26ನೇ ಸಾಲಿನ ಸಾಂಸ್ಕೃತಿಕ, ಕ್ರೀಡೆ, ಎನ್‌ಎಸ್‌ಎಸ್, ಎನ್‌ಸಿಸಿ ಸೇರಿದಂತೆ ವಿವಿಧ ಚಟುವಟಿಕೆಗಳ ಮುಕ್ತಾಯ ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುವ ಸಮಾರಂಭದಲ್ಲಿ ಮಾತನಾಡಿದರು.

ಪ್ರಾಚಾರ್ಯ ಡಾ.ಡಿ.ಬಿ.ಮೂಗಡ್ಲಿಮಠ ಸ್ವಾಗತ ಭಾಷಣ ಮಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಗುರಿ, ಸಮಯಪ್ರಜ್ಞೆ ಹಾಗೂ ದೃಢಸಂಕಲ್ಪ ಅಳವಡಿಸಿಕೊಂಡು ಉತ್ತಮ ಉದ್ಯೋಗದೊಂದಿಗೆ ಉಜ್ವಲ ಬದುಕು ರೂಪಿಸಿಕೊಳ್ಳಬೇಕು ಎಂದರು.

ಸಂಸ್ಥೆ ಚೇರಮನ್ ವಿ.ಸಿ.ಹಿರೇಮಠ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಮಹಾವಿದ್ಯಾಲಯವು ಕಳೆದ 49 ವರ್ಷಗಳಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಸೌರಭ ನೀಡುತ್ತಾ ಬಂದಿದ್ದು, ಪ್ರಸ್ತುತ 50ನೇ



ವರ್ಷದ ಸುವರ್ಣ ಸಂಭ್ರಮದಲ್ಲಿದೆ. ಈ ನೆನಪಿನಲ್ಲಿ ಸಂಸ್ಥೆ ಮತ್ತಷ್ಟು ಅಭಿವೃದ್ಧಿ ಪಡಿಸಲಾಗುವುದು ಎಂದರು.

ವಿವಿ ಸಂಘದ ಕಾರ್ಯದರ್ಶಿ ಎಂ.ಎಸ್.ಸರಶೆಟ್ಟಿ, ಉಪಾಧ್ಯಕ್ಷ ಕೆ.ಎಸ್.ಮುರಾಳ, ನಿರ್ದೇಶಕರು, ಸಂಚಾಲಕ ಡಾ.ಅಶೋಕ ರಾಠೋಡ, ವಿದ್ಯಾರ್ಥಿ ಪ್ರತಿನಿಧಿ ವಿದ್ಯಾಶ್ರೀ ಅಗಸರ ಹಾಗೂ ಬೋಧಕ-ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ಮಮತಾಜ ಪ್ರಾರ್ಥಿಸಿದರು. ಡಾ.ಸುಜಾತಾ ಚಲವಾದಿ ಅತಿಥಿಗಳನ್ನು ಪರಿಚಯಿಸಿದರು. ಕೆ.ಬಿ.ದೇಸಾಯಿ ಬಹುಮಾನ ವಿತರಿಸಿದರು. ಡಾ.ದೀಪಾ ಮಾಳಗೆ ಹಾಗೂ ಸಂಗೀತಾ ಕೊಡೆಕಲ್ಲಮಠ ನಿರೂಪಿಸಿದರು. ಲಲಿತಾ ಗೌಡರ ವಂದಿಸಿದರು.

ನಾರಾಯಣಪೂರ ಜಲಾಶಯದಿಂದ 3 ಟಿಎಂಸಿ ನೀರು ಬಿಡುಗಡೆಗೆ ಮನವಿ

ಸಿಂದಗಿ: ನಾರಾಯಣಪೂರ ಜಲಾಶಯದಿಂದ ಇಂಡಿ ಶಾಖಾ ಕಾಲುವೆ ಹಾಗೂ ಇಂಡಿ ಏತನೀರಾವರಿ ಕಾಲುವೆಗಳ ಮುಖಾಂತರ ಹರಿದು ಬರುತ್ತಿರುವ 2 ಟಿಎಂಸಿ ನೀರು ಕೇವಲ ವಿಜಯಪುರ ಜಿಲ್ಲೆಗೆ ಮಾತ್ರ ಸಂಬಂಧಿಸಿದೆ. ಆದರೆ ಜೇವರ್ಗಿ ತಾಲೂಕಿನ ಅಲ್ಲಾಪೂರ, ಅರಳಗುಂಡಗಿ, ಬಳುಂಡಗಿ ಗ್ರಾಮಕ್ಕೆ ಪೂರಕವಾಗಿ ಒಟ್ಟು 3ಟಿಎಂಸಿ ನೀರು ಹರಿ ಬಿಟ್ಟಲ್ಲಿ ಜೇವರ್ಗಿ ಸೇರಿದಂತೆ ವಿಜಯಪುರ ಜಿಲ್ಲೆಯ ಹಲವು ತಾಲೂಕುಗಳು ಈ ಬವಣೆಯನ್ನು ತಪ್ಪಿಸಿಕೊಳ್ಳುತ್ತವೆ 2ಟಿಎಂಸಿ ಬದಲು 3 ಟಿಎಂಸಿ ನೀರು ನಾರಾಯಣಪೂರ ಜಲಾಶಯದಿಂದ ಬಿಡಬೇಕು ಎಂದು ಶಾಸಕ ಅಜಯಸಿಂಗ, ಶಾಸಕ ಅಶೋಕ ಮನಗೂಳಿ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ ಅವರಿಗೆ ದೂರವಾಣಿ ಮೂಲಕ ಮಾತನಾಡಿ ಮನವಿ ಮಾಡಿದರು.

ತಾಲೂಕಿನ ರಾಂಪೂರ ಪಿಎ ಗ್ರಾಮದ ಕೃಷ್ಣಾ ಭಾಗ್ಯ ಜಲ ನಿಗಮ ಕಛೇರಿಯಲ್ಲಿ ಅಧಿಕಾರಿಗಳಿಗೊಂದಿಗೆ ಚರ್ಚೆ ಮತ್ತು ರೈತರೊಂದಿಗೆ ಸಮಾಲೋಚನೆ ನಡೆಸಿ ಮಾಧ್ಯಮದವರೊಂದಿಗೆ ಮಾತನಾಡಿದರು.

ಶಾಸಕ ಅಶೋಕ ಮನಗೂಳಿ ಮಾತನಾಡಿ 3ಟಿಎಂಸಿ ನೀರು ಹರಿದು



ಬಂದರೆ ಸಿಂದಗಿ, ಇಂಡಿ, ದೇವರಹಿಪ್ಪರಗಿ, ನಾಗಠಾಣ, ಚಡಚಣ, ಜೇವರ್ಗಿ, ಅಫಜಲಪುರ ತಾಲೂಕುಗಳಿಗೆ ಕುಡಿಯುವ ನೀರಿನ ಸಮಸ್ಯೆ ಬರುವುದಿಲ್ಲ. ಡಿಸಿಎಂ ಡಿ.ಕೆ.ಶಿವಕುಮಾರ ಅವರಿಗೆ ದೂರವಾಣಿ ಮೂಲಕ ಮಾತನಾಡಿ ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದೇವೆ ಎಂದರು.

ಈ ವೇಳೆ ರಾಂಪೂರ ಕೃಷ್ಣಾ ಭಾಗ್ಯ ಜಲನಿಗಮದ ಅಧಿಕಾರಿ ಮನೋಜಕುಮಾರ, ಉಜ್ವಲ ಸೋನಾವನೆ, ಕಾಂಗ್ರೆಸ್ ಮುಖಂಡ ಕುಮಾರ ದೇಸಾಯಿ, ನೂರಅಹ್ಮದ ಅತ್ತಾರ ಹಾಗೂ ರೈತರು ಇದ್ದರು.

ಅರಣ್ಯ ಇಲಾಖೆ ಜೇನುನೊಣಗಳ ಸಾಕಾಣಿಕೆ ಕಾರ್ಯ ಶ್ಲಾಘನೀಯ

ಆಲಮಟ್ಟಿ: ಜೇನು ನೊಣಗಳು ಇಡಿ ಪರಿಸರ ಸಮತೋಲನದಲ್ಲಿ ಇಡುವ ಏಕೈಕ ಜೀವಿ ಎಂದರೆ ಅದು ಜೇನುನೊಣಗಳ ಸಮೂಹ ಇಂದು ಆಧುನಿಕತೆ ಹೆಸರನಲ್ಲಿ ಇಡಿ ಪರಿಸರ ಹಾಳಾಗುತ್ತಿದ್ದು, ಕೃಷಿ ಕ್ಷೇತ್ರದಲ್ಲಿ ವಿಷಯುಕ್ತ ರಸಾಯನಿಕ, ಗೊಬ್ಬರ, ಕೀಟನಾಶಕ ಬಳಕೆಯಿಂದ ಜೇನುನೊಣಗಳ ಗೂಡು ನಶಿಸಿ ಹೋಗುತ್ತಿರುವುದು ವಿಷಾದನೀಯವಾದದ್ದು ಎಂದು ಹಿರಿಯೂರದ ಜೇನು ತಜ್ಞ ಹಾಗೂ ಕೃಷಿ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಶಾಂತ ವೀರಯ್ಯ ಹೇಳಿದರು.

ಕೃಷ್ಣಾ ಭಾಗ್ಯ ಜಲ ನಿಗಮದ ಅರಣ್ಯ ವಿಭಾಗದಿಂದ ವಿಶ್ವ ಜೇನು ದಿನಾಚರಣೆ ಪ್ರಯುಕ್ತ ಆಲಮಟ್ಟಿ ಅರಣ್ಯ ವಿಭಾಗದ ಸಸ್ಯಪಾಲನೆ ಕೇಂದ್ರದಲ್ಲಿ ಜರುಗಿದ ಸಭೆಯಲ್ಲಿ ಮಾತನಾಡಿ, ಇಂತ ಸಮಯದಲ್ಲಿ ಆಲಮಟ್ಟಿ ಅರಣ್ಯ ಇಲಾಖೆ ಜೇನುನೊಣಗಳ ಸಾಕಾಣಿಕೆ ಜೊತೆಗೆ



ಜೇನು ಉತ್ಪಾದನೆಗೆ ಆದ್ಯತೆ ನೀಡಿದ್ದು ಶ್ಲಾಘನೀಯ ಎಂದರು.

ಅರಣ್ಯ ಇಲಾಖೆ ವಲಯ ಅರಣ್ಯಾಧಿಕಾರಿ ಮಹೇಶ ಪಾಟೀಲ ಮಾತನಾಡಿ, ಒಂದು ವೇಳೆ ಜೇನುನೊಣಗಳ ಸಂತತಿ ಸಂಪೂರ್ಣ ನಾಶವಾದರೆ ಮನುಷ್ಯ ನಾಲ್ಕು ದಿನ ಕೂಡಾ ಬಕುವುದಿಲ್ಲ. ಹೀಗಾಗಿ ಪ್ರತಿಯೊಬ್ಬ ರೈತರು ತಮ್ಮ ಜಮೀನುಗಳಲ್ಲಿ ಕನಿಷ್ಠ 5 ಜೇನು ಪೆಟ್ಟಿಗೆಗಳನ್ನಾದರು ಇಟ್ಟು ಜೇನು ಸಾಕಾಣಿಕೆ ಮಾಡಿದರೆ ಆದಾಯದ ಜೊತೆಗೆ ಹೊಲದಲ್ಲಿ ಬೆಳೆದ ಪೈರುಗಳಿಗೆ ಜೇನುನೊಣಗಳು ಪರಾಗ ಸ್ಪರ್ಶ ಮಾಡುವುದರಿಂದ ಇಳುವರಿ ಕೂಡಾ ಜಾಸ್ತಿ ಬರುವುದು ಎಂದರು.

ಈ ವೇಳೆ ಡಿಎಫ್‌ಓ ಎನ್. ಕೆ.ಬಾಗಾಯತ್ ಮಾತನಾಡಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ ಲೆಕ್ಕಪರಿಶೋಧಕ ಜಾಹಗೀರದಾರ, ಅರಣ್ಯ ಇಲಾಖೆ ಎಸಿಎಫ್ ಶಿವಾನಂದ, ರಮೇಶ ಚವ್ಹಾಣ, ಆರ್‌ಎಫ್‌ಓ ಯಶವಂತ ರಾಠೋಡ, ಜೇನು ಸಾಕಾಣಿಕೆ ಪ್ರವರ್ತಕ ಶಿವಯೋಗಿ ಹಿರೇಮಠ, ಅರಣ್ಯ ಇಲಾಖೆ ಸೇರಿದಂತೆ ಮುಂತಾದವರು ಇದ್ದರು.

ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಮುಂದಾಗಲಿ

ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಮತ್ತು ಯರನಾಳ ಆನ್‌ಲೈನ್ ಔಷಧ ಮಾರಾಟ ಮತ್ತು ಇ-ಫಾರ್ಮಸಿ ನೀತಿ ವಿರೋಧಿಸಿ ಅಖಿಲ ಭಾರತ ಔಷಧ ವ್ಯಾಪಾರಿಗಳ ಸಂಘಟನೆ ಕರೆ ನೀಡಿರುವ ದೇಶವ್ಯಾಪಿ ಬಂದ್‌ಗೆ ಮನಗೂಳಿ ಹಾಗೂ ಯರನಾಳ ಗ್ರಾಮದ ವ್ಯಾಪಾರಸ್ಥರು ಪ್ರತಿಭಟನೆ ನಡೆಸಿ ಬೆಂಬಲ ಸೂಚಿಸಿದರು.

ಈ ವೇಳೆ ಅಧ್ಯಕ್ಷ ರಾಜಶೇಖರ ಹಿಪ್ಪರಗಿ, ಉಪಾಧ್ಯಕ್ಷ ಪ್ರವೀಣ ತೇಲಿ ಮತ್ತು ಪ್ರವೀಣ ಕೊಪ್ಪದ ಮಾತನಾಡಿ, ದೇಶದ ಔಷಧ ವ್ಯಾಪಾರಿಗಳ ಹಿತರಕ್ಷಣೆ ಹಾಗೂ ವ್ಯವಹಾರದ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರ ಮುಂದಾಗಬೇಕಿದೆ. ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಫಾರ್ಮಸಿಗಳ ಔಷಧ ಮಾರಾಟದ ಕುರಿತು ಸಹ ಸರ್ಕಾರ ಕ್ರಮಕ್ಕೆ ಮುಂದಾಗಬೇಕಿದೆ. ಅದನ್ನು ಸಂಘಟನೆ ಮೂಲಕ ನಾವು ಸರ್ಕಾರದ ಗಮನ ಸೆಳೆಯುವುದು ಅಗತ್ಯ ಎಂದರು.

ಹಿರಿಯರಾದ ಜಿ.ಎಸ್.ಸಜ್ಜನ, ಬಸವರಾಜ ಕುಂಬಾರ, ನಿಜಾಮ ಬರಿ ಇನಾಮದಾರ್, ಡಾ.ಆರ್. ಕೆ.ಪತ್ತಾರ, ಡಾ.ಕಾರಜೋಳಮಠ, ಡಾ.ವಿಜಯ ಬೂದಿಹಾಳ, ಡಾ.ವಿ.ಐ.ಕುಂಬಾರ, ಶ್ರೀಧರ ಮಾನೆ, ಸುದೀಪ ರಕ್ಕಸಗಿ ಇದ್ದರು.



ರಾಜಕಾಲುವೆ ತಕ್ಷಣ ಸ್ವಚ್ಛಗೊಳಿಸಿ: ಮೇಯರ್ ಸೂಚನೆ

ವಿಜಯಪುರ: ನಗರದ ಪ್ರಮುಖ ರಾಜ ಕಾಲುವೆಗಳು, ಒಳಚರಂಡಿ, ಮಳೆ ನೀರು ಹರಿವಿನ ಮಾರ್ಗ ತಕ್ಷಣ ಸ್ವಚ್ಛಗೊಳಿಸುವಂತೆ ಮಹಾನಗರ ಪಾಲಿಕೆ ಮೇಯರ್ ಎಂ.ಎಸ್. ಕರಡಿ ಅಧಿಕಾರಿಗಳಿಗೆ ಸೂಚಿಸಿದರು.

ನಗರ ವ್ಯಾಪ್ತಿಯಲ್ಲಿ ಮುಂಗಾರು ಹಾಗೂ ಪ್ರವಾಹ ಪರಿಸ್ಥಿತಿ ಸಮರ್ಥವಾಗಿ ಎದುರಿಸಲು ಪಾಲಿಕೆಯ ಸಭಾಂಗಣದಲ್ಲಿ ಅಧಿಕಾರಿಗಳೊಂದಿಗೆ ಗುರುವಾರ ಹಮ್ಮಿಕೊಂಡಿದ್ದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ನೀರು ನಿಲ್ಲುವ ಪ್ರದೇಶಗಳಲ್ಲಿ ಅಗತ್ಯ ಪಂಪ್ ಸೆಟ್ ಸಿದ್ಧವಾಗಿಡಬೇಕು. ತುರ್ತು ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳುವುದು ಹಾಗೂ ಸಾರ್ವಜನಿಕರಿಗೆ ಯಾವುದೇ ತೊಂದರೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಬೇಕು ಎಂದು ಮೇಯರ್ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಅಗ್ನಿಶಾಮಕ ದಳ, ಆರೋಗ್ಯ ಇಲಾಖೆ, ವಿದ್ಯುತ್ ಇಲಾಖೆ ಹಾಗೂ ಇತರೆ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ತುರ್ತು ಪರಿಸ್ಥಿತಿಗಳನ್ನು ಎದುರಿಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಲು ಸೂಚಿಸಿದರು.



ಸಾರ್ವಜನಿಕರು ಮಳೆ ಸಂದರ್ಭದಲ್ಲಿ ಎಚ್ಚರಿಕೆಯಿಂದ ಇರಬೇಕು. ಯಾವುದೇ ತುರ್ತು ಪರಿಸ್ಥಿತಿ ಉಂಟಾದಲ್ಲಿ ಮಹಾನಗರ ಪಾಲಿಕೆಯ ಸಹಾಯವಾಣಿ (ಸಂಖ್ಯೆ: 08352-222474) ಸಂಪರ್ಕಿಸಲು ಮೇಯರ್ ಮನವಿ ಮಾಡಲಾಯಿತು.

ಸಭೆಯಲ್ಲಿ ಮುಂಗಾರು ಸಂದರ್ಭದಲ್ಲಿ ಸಂಭವಿಸಬಹುದಾದ ಜಲಾವೃತ ಪ್ರದೇಶಗಳು, ಮಳೆ ನೀರಿನ ಹರಿವು, ಚರಂಡಿ ಸ್ವಚ್ಛತೆ, ರಸ್ತೆ ಹಾನಿ, ಕುಡಿಯುವ ನೀರಿನ ವ್ಯವಸ್ಥೆ ಹಾಗೂ ತುರ್ತು ಪರಿಸ್ಥಿತಿಗಳ ನಿರ್ವಹಣೆ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು.

ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ ಸೇರಿದಂತೆ ವಿವಿಧ ವಿಭಾಗಗಳ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಇದ್ದರು.

ಕಿರುಸುದ್ದಿ

ತಾಲೂಕು ಪ್ರಾ. ಶಾ.ಶಿಕ್ಷಕರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ

ಯಲಬುರ್ಗಾ: ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿದ್ದಲಿಂಗಪ್ಪ ಶ್ಯಾಗೋಟಿ ಹಾಗೂ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಶರಣಯ್ಯ ಸರಗಣಾಚಾರ ನೇತೃತ್ವದಲ್ಲಿ ಸಭೆ ಸೇರಿ ಗುರುವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ 2026ರಿಂದ 2031ರ ಅವಧಿಯವರೆಗೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಶಿಕ್ಷಕರಾದ ಶಿವಬಸಪ್ಪ ಧರಣಾ (ತಾಲೂಕಾಧ್ಯಕ್ಷ), ಮುಳಗುಂದ ಬಸವರಾಜ (ಪ್ರಧಾನ ಕಾರ್ಯದರ್ಶಿ), ನಾಗರಾಜ ನಡುವಲಕೇರಿ (ಉಪಾಧ್ಯಕ್ಷರು), ಗಂಗಮ್ಮ ಸೊಬಗಿನ (ಉಪಾಧ್ಯಕ್ಷರು ಮಹಿಳಾ), ಧರ್ಮಣ್ಣ ಬಿಂಗಿ(ಖಜಾಂಚಿ), ಬಾಲದಂಡಪ್ಪ ತಳವಾರ (ಸಹಕಾರ್ಯದರ್ಶಿಗಳು), ಶಾಂತಮ್ಮ ಜಂತ್ಲಿ (ಸಹಕಾರ್ಯದರ್ಶಿಗಳು), ಆಂಜನೇಯ (ಸಂಘಟನಾ ಕಾರ್ಯದರ್ಶಿಗಳು), ಬಸಮ್ಮ ಚಲುವಾದಿ(ಸಂಘಟನಾ ಕಾರ್ಯದರ್ಶಿಗಳು ಮಹಿಳಾ) ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಶಿಕ್ಷಕರ ಸಮಸ್ಯೆಗೆ ಸ್ಪಂಧಿಸುವೆ: ಬಳಿಕ ಶಿವಬಸಪ್ಪ ಧರಣಾ ತಾಲೂಕಾಧ್ಯಕ್ಷ ಮಾತನಾಡಿ ನನ್ನನ್ನು 2ನೇ ಅವಧಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ ಆಯ್ಕೆ ಮಾಡುವಲ್ಲಿ ಸಂಘದ ಆಯ್ಕೆ ಸಮಿತಿಯ ಹಿರಿಯರು, ಎಲ್ಲ ಸದಸ್ಯರು ಸೇರಿದಂತೆ ತಾಲೂಕಿನ ಎಲ್ಲ ಶಿಕ್ಷಕರು, ಗುರುಮಾತೆಯರಿಗೆ ಚಿರಋಣಿಯಾಗಿದ್ದೇನೆ ಜತೆಗೆ ಶಿಕ್ಷಕರ ಯಾವುದೇ ಸಮಸ್ಯೆಗಳಿರಲಿ ಅವುಗಳಿಗೆ ಸ್ಪಂಧಿಸುವ ಮೂಲಕ ಬೇಡಿಕೆಗಳ ಈಡೇರಿಕೆಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ನವೋದಯ ಶಾಲೆಗೆ ಆಯ್ಕೆ



ಕುಷ್ಟಗಿ: ತಾಲೂಕಿನ ನಾರಿನಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ ಭೂಮಿಕಾ ತಂದೆ ನಾರಾಯಣಪ್ಪ ಪೂಜಾರಿ ನವೋದಯ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಆಯ್ಕೆಯಾಗಿದ್ದಾಳೆ. ವಿದ್ಯಾರ್ಥಿಯ ಸಾಧನೆಗೆ ಶಿಕ್ಷಕರು ಹಾಗೂ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು.

ಇಂದು ಪ್ರತಿಭಾ ಪುರಸ್ಕಾರ



ಕುಷ್ಟಗಿ: ಪಟ್ಟಣದ ಸಂತೆ ಮೈದಾನದಲ್ಲಿ ಸಂಗೀತಕ್ಕೆ ಸಾವಿಲ್ಲ ಸ್ನೇಹಕ್ಕೆ ಜಾತಿ ಇಲ್ಲ ಗೆಳೆಯರ ಬಳಗದ ವತಿಯಿಂದ ಮೇ 22ರಂದು ಸಂಜೆ 6:30ಕ್ಕೆ ನೆಚ್ಚಿನ ಗೀತೆಗಳ ಗಾನ ಸಂಭ್ರಮ ಹಾಗೂ ಪಟ್ಟಣದ ಸರ್ಕಾರಿ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ 90%ಕ್ಕಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ 2025–26ನೇ ಶೈಕ್ಷಣಿಕ ವರ್ಷದ ಸಾಧಕರಿಗೆ ಪ್ರತಿಭಾಪುರಸ್ಕಾರ ಜರುಗಲಿದೆ ಎಂದು ಸರ್ವಧರ್ಮ ಆರಾಧಕರು ಹಾಗೂ ಭಗತ್ ಸಿಂಗ್ ಸೇವಾ ಸಂಸ್ಥೆಯ ಅಧ್ಯಕ್ಷ ವಜೀರ್ ಬಿ.ಗೋನಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮ ಮದ್ಯ ಮಾರಾಟ: ಆರೋಪಿ ಬಂಧನ



ಕುಷ್ಟಗಿ: ತಾಲೂಕಿನ ಕೆಸೂರು–ದೋಟಿಹಾಳ ಹೊರ ಹೊಲಯದ ಹೋಟೆಲ್ ಒಂದರಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿರುವ ಘಟನೆ ಬುಧವಾರ ರಾತ್ರಿ ನಡೆದಿದೆ. ಕೇಸೂರು ಗ್ರಾಮದ ಶುಖಮುನಿ ಹನಮಂತ ಕಾಟಾಪೂರು, ನಾಗರಾಜ ಹನಮಂತ ಕಾಟಾಪೂರು ಬಂಧಿತರು. ಹೋಟೆಲ್‌ನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದು, ಸುಮಾರು 3600 ಬೆಲೆಯುಳ್ಳ 6ಲೀ.480 ಎಂ.ಎಲ್ ಮದ್ಯ ಜಪ್ತಿ ಮಾಡಲಾಗಿದೆ. ಸಿಪಿಐ ವಿಶ್ವನಾಥ ಹಿರೇಗೌಡ್ರ, ಪಿಎಸ್ಸೈ ಹನುಮಂತಪ್ಪ ತಳವಾರ ನೇತೃತ್ವದಲ್ಲಿ ದಾಳಿ ನಡೆಸಲಾಗಿತ್ತು. ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಯಲಬುರ್ಗಾ: ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿದ್ದಲಿಂಗಪ್ಪ ಶ್ಯಾಗೋಟಿ ಹಾಗೂ ಮುಖ್ಯೋಪಾಧ್ಯಾಯರ ಸಂಘದ ಅಧ್ಯಕ್ಷ ಶರಣಯ್ಯ ಸರಗಣಾಚಾರ ನೇತೃತ್ವದಲ್ಲಿ ಸಭೆ ಸೇರಿ ಗುರುವಾರ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಕ್ಕೆ 2026ರಿಂದ 2031ರ ಅವಧಿಯವರೆಗೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ವಿಮಾನ ನಿಲ್ದಾಣದ ಕಾಮಗಾರಿ ಸ್ಥಳಕ್ಕೆ ಡಿಸಿ ಭೇಟಿ

ರಾಯಚೂರು: ಜಿಲ್ಲಾಧಿಕಾರಿ ಪೂವಿತಾ ಎಸ್. ನಗರದ ಹೊರ ವಲಯದ ಯರಮರಸ್ ಬಳಿಯಲ್ಲಿ ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿದರು.

ಅವರು ಮೊದಲು ವಿಮಾನ ನಿಲ್ದಾಣದ ರನ್ ವೇ ಕಾಮಗಾರಿಯ ವೀಕ್ಷಣೆ ನಡೆಸಿ ಕಾಮಗಾರಿಯ ಪ್ರಗತಿಯ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಒಟ್ಟು 1.7 ಕಿ.ಮೀ ಉದ್ದದ ರನ್ ವೇ ದಲ್ಲಿ ಇದುವರೆಗೆ 850 ಮೀಟರ್‌ನ?ು ರನ್‌ವೆಗೆ ಮೊರಂ ಹಾಕಿದ್ದು, ಬಾಕಿ ಕಾಮಗಾರಿ ಪ್ರಗತಿ ಹಂತದಲ್ಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಪ್ಯಾಸೆಂಜರ್ ಟರ್ಮಿನಲ್ ಬಿಲ್ಡಿಂಗ್‌ಗೆ ಭೇಟಿ ನೀಡಿ ಪರಿಶೀಲಿಸಿದರು. ಈ ಕಟ್ಟಡಕ್ಕೆ ಈಗಾಗಲೇ ಕಾಲಂ ಮತ್ತು ಚೆತ್ ಹಾಕಿದ್ದು, ಈಗ ರೂಪ್ ಟ್ರಸ್ ಕಾಮಗಾರಿ ಕೈಗೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಈ ವೇಳೆ ಎಲೆಕ್ಟ್ರಿಕಲ್ ಸಬ್ ಸ್ಟೇ?ನ್ ಬಿಲ್ಡಿಂಗ್–1 ಮತ್ತು ಬಿಲ್ಡಿಂಗ್ 2ರ ಕಾಮಗಾರಿಗಳ ಬಗ್ಗೆ ಸಹ ಜಿಲ್ಲಾಧಿಕಾರಿ ಪರಿಶೀಲಿಸಿದರು. ಒಟ್ಟು 12 ಸೆಕ್ಯುರಿಟಿ ವಾಚ್ ಟವರ್‌ಗಳಲ್ಲಿ ಇದೀಗ 8 ಟವರ್‌ಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ವಿಮಾನ ನಿಲ್ದಾಣದ ಕಾಂಪೌಂಡ್ ಒಳಭಾಗದಲ್ಲಿನ ಆಂತರಿಕ ರಸ್ತೆಗಳ ನಿರ್ಮಾಣ ಕಾಮಗಾರಿಯು ಸಹ ಪ್ರಗತಿಯಲ್ಲಿದೆ. ವಿಮಾನ ನಿಲ್ದಾಣದ ಒಟ್ಟು 8 ಕಿ.ಮೀಟರ್ ಕಾಂಪೌಂಡ್ ನಿರ್ಮಾಣ ಕಾರ್ಯವು ಈಗಾಗಲೇ ಪೂರ್ಣಗೊಂಡಿದೆ ಮಾಹಿತಿ ನೀಡಿದರು.



ರಾಯಚೂರು: ಜಿಲ್ಲಾಧಿಕಾರಿ ಪೂವಿತಾ ಎಸ್. ನಗರದ ಹೊರ ವಲಯದ ಯರಮರಸ್ ಬಳಿಯಲ್ಲಿ ನಿರ್ಮಾಣ ಹಂತದಲ್ಲಿರುವ ವಿಮಾನ ನಿಲ್ದಾಣದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪ್ರಗತಿ ಪರಿಶೀಲನೆ ನಡೆಸಿದರು. ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ವೆಂಕಟೇಶ ಗಲಗ, ಸಹಾಯಕ ಅಭಿಯಂತರ ಮಹೇಶ್, ಗುತ್ತಿಗೆದಾರ ಕಂಪನಿ ಕೆಎಂವಿದ ಪ್ರತಿನಿಧಿ ಪ್ರವೀಣ್ ಹಾಗೂ ಇನ್ನಿತರರಿದ್ದರು.

ಅನ್ನದಾತರಿಗೆ ಪರಿಹಾರ ಕೊಡಿ

ಕೊಪ್ಪಳ: ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬಾಳೆ, ಎಲೆ ಸೇರಿ ವಿವಿಧ ತೋಟಗಾರಿಕೆ ಬೆಳೆ ಬೆಳೆದು ಮಳೆ ಹಾಗೂ ಗಾಳಿಯಿಂದ ನಷ್ಟ ಹೊಂದಿದ ರೈತರಿಗೆ ಕೂಡಲೇ ಪರಿಹಾರ ವಿತರಿಸುವಂತೆ ಒತ್ತಾಯಿಸಿ, ಕೊಪ್ಪಳ ಬಿಜೆಪಿ ಗ್ರಾಮೀಣ ಮಂಡಲ ವತಿಯಿಂದ ಗುರುವಾರ ನಗರದಲ್ಲಿ ವಿನೂತನ ರೀತಿಯಲ್ಲಿ ಪ್ರತಿಭಟನೆ ನಡೆಸಿ, ಗಮನ ಸೆಳೆಯಿತು.

ಪ್ರಧಾನಿ ನರೇಂದ್ರ ಮೋದಿ ಅವರ ಮನವಿಯಂತೆ ದೇಶದಲ್ಲಿ ಹೆಚ್ಚುತ್ತಿರುವ ಇಂಧನ ಬಳಕೆ, ಪೆಟ್ರೋಲ್–ಡೀಸೆಲ್ ಮೇಲಿನ ಅವಲಂಬನೆ ಕಡಿಮೆ ಮಾಡುವ ಅಗತ್ಯತೆ ಹಾಗೂ ಪರಿಸರ ಸಂರಕ್ಷಣೆ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಬಿಜೆಪಿ ನಾಯಕರು ಸೈಕಲ್ ಹಾಗೂ ಎಲೆಕ್ಟ್ರಿಕಲ್ ಬೈಕ್‌ಗಳಲ್ಲಿ ತೆರಳಿ ವಿಭಿನ್ನ ರೀತಿಯಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಅಶೋಕ ವೃತ್ತದಲ್ಲಿ ಜಮಾಯಿಸಿದ ಬಿಜೆಪಿ ಮುಖಂಡರು, ಅಲ್ಲಿಂದ ಡಿಸಿ ಕಚೇರಿಯವರೆಗೆ ಸೈಕಲ್ ಹಾಗೂ ಎಲೆಕ್ಟ್ರಿಕ್ ಬೈಕ್ ಮುಖಾಂತರ ಡಿಸಿ ಕಚೇರಿಯವರೆಗೆ ತೆರಳಿ ನಾಗರಿಕರಲ್ಲಿ ಪರಿಸರ ಜಾಗೃತಿ ಮೂಡಿಸಿದರು. ನಂತರ ರೈತರೊಂದಿಗೆ ಬಿಜೆಪಿ ನಾಯಕರು, ಜಿಲ್ಲಾಡಳಿತ ಭವನಕ್ಕೆ ಮುತ್ತಿಗೆ ಹಾಕಲು ಪ್ರಯತ್ನಿಸಿದರು. ಈ ವೇಳೆ ವಿಪ ಸದಸ್ಯೆ ಹೇಮಲತಾ ನಾಯಕ್, ಕೊಪ್ಪಳ ಲೋಕಸಭಾ ಕ್ಷೇತ್ರದ ನಿಕಟಪೂರ್ವ ಅಭ್ಯರ್ಥಿ ಬಸವರಾಜ ಕ್ಯಾವಟರ್ ಸೇರಿ ಇನ್ನಿತರ ನಾಯಕರನ್ನು ಪೊಲೀಸರು ತಡೆದರು.

ಬಳಿಕ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಧರಣಿ ಕುಳಿತ ಬಿಜೆಪಿ ನಾಯಕರು, ಸರಕಾರದ ವಿಳಂಭ ದೋರಣೆ ನೀತಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ, ಬೇಜವಾಬ್ದಾರಿ ಮೆರೆಯುತ್ತಿರುವ ಸ್ಥಳೀಯ ಶಾಸಕ ರಾಘವೇಂದ್ರ ಹಿಟ್ನಾಳ್ ಎಂದು ಘೋಷಣೆ ಕೂಗಿ ಆಡಳಿತ ವ್ಯವಸ್ಥೆಯ ಕಾರ್ಯ ವೈಖರಿ ಖಂಡಿಸಿದರು. ಕೊನೆಗೆ ಸ್ಥಳಕ್ಕಾಗಮಿಸಿದ ಎಡಿಸಿ ಸಿದ್ದರಾಮೇಶ್ವರ ಅವರಿಗೆ ಮನವಿ ಸಲ್ಲಿಸಲಾಯಿತು.



> **ರೈತರು ದೇಶದ ಅನ್ನದಾತರು. ರೈತ ಉಳಿದರೆ ದೇಶ ಉಳಿಯುತ್ತದೆ ಎಂಬ ನಿಟ್ಟಿನಲ್ಲಿ ಸರ್ಕಾರ ರೈತರ ಸಂಕಷ್ಟಕ್ಕೆ ತಕ್ಷಣ ಸ್ಪಂದಿಸಬೇಕು. ಕೇವಲ ಭರವಸೆಗಳಲ್ಲ, ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಪರಿಹಾರದ ಹಣ ಜಮಾ ಮಾಡುವ ಕೆಲಸವಾಗಬೇಕು.**
>
> ■ ಡಾ.ಕೆ.ಬಸವರಾಜ ಕ್ಯಾವಟರ್, ರಾಜ್ಯ ಬಿಜೆಪಿ ಕಾರ್ಯಕಾರಣಿ ಸದಸ್ಯ

ಈ ವೇಳೆ ವಿಧಾನ ಪರಿಷತ್ ಸದಸ್ಯೆ ಹೇಮಲತಾ ನಾಯಕ್ ಮಾತನಾಡಿ, ಒಂದು ಎಕರೆ ಬಾಳೆ ಬೆಳೆ ಬೆಳೆಯಲು ರೈತರು ಲಕ್ಷಾಂತರ ರೂ. ಸಾಲ ಮಾಡಿ ಹೂಡಿಕೆ ಮಾಡಿದ್ದರೂ, ಅಕಾಲಿಕ ಮಳೆ ಮತ್ತು ಗಾಳಿಯಿಂದ ಕೈಗೆ ಬಂದ ಬೆಳೆ ಸಂಪೂರ್ಣ ಹಾನಿಗೊಳಗಾಗಿದೆ. ಇದರಿಂದ ರೈತರ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿ ಬದುಕಿನ ಮೇಲೆಯೇ ಆತಂಕ ಎದುರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.

ಗ್ರಾಮೀಣ ಮಂಡಲ ಅಧ್ಯಕ್ಷ ವೀರೇಶ ಸಜ್ಜನ್, ಚಂದ್ರಶೇಖರ ಪಾಟೀಲ್ ಹಲಗೇರಿ, ಮಹಾಂತೇಶ್ ಪಾಟೀಲ್ ಮೈನಲ್ಲಿ, ಪಕೀರಪ್ಪ ಆರೇರ್, ಗಣೇಶ್ ಹೊರಟತ್ನಾಳ, ಪ್ರದೀಪ್ ಹಿಟ್ನಾಳ್, ರೈತ ಮೋರ್ಚಾ ಜಿಲ್ಲಾ ಅಧ್ಯಕ್ಷ ಅಶೋಕ್ ಗುಳದಳ್ಳಿ, ತಾಲೂಕು ಅಧ್ಯಕ್ಷ ವೀರೇಶ್ ಕಸನಖಂಡಿ, ಜಿಲ್ಲಾ ಕಾರ್ಯದರ್ಶಿ ಸುನಿಲ್ ಹೆಸರೂರ್, ಪ್ರಭುಗೌಡ ಪಾಟೀಲ, ಮಹೇಶ್ ಅಂಗಡಿ, ಅಂದಪ್ಪ ಯಲ್ಲಮ್ಮನವರ, ಗುರಪ್ಪ ಗೋಡೆಕಾರ್, ಮಹಿಳಾ ನಗರ ಘಟಕದ ಅಧ್ಯಕ್ಷರು ಜಯಶ್ರೀ ಆರೇರ್, ಗ್ರಾಮೀಣ ಮಂಡಲ ಮಹಿಳಾ ಅಧ್ಯಕ್ಷರಾದ ಅನುರಾಧ ಬಿಸನಳ್ಳಿ, ಬಸವರೆಡ್ಡಿ ಬೈರಾಪುರ್, ರಾಜು ಬಾಕ್ಲೆ, ಗವಿರಾಜ್ ಗೊರವರ, ರಮೇಶ್ ಕವಲೂರು, ದೇವಪ್ಪ ಹ್ಯಾಟಿ, ಚನ್ನಬಸವ ಗಾಳಿ, ದೇವರಾಜ್ ಹಲಸಮುದ್ರ, ಮಹಾಲಕ್ಷ್ಮಿ ಕಂದಾರಿ, ಉಮೇಶ್ ಕುದ್ರೇಕರ್, ರಾಜ್ಯ ಕಾರ್ಯಕಾರಣಿ ಸದಸ್ಯರಾದ ಶೋಭಾ ನಗರಿ, ಮಾರುತಿ ಹಡಪದ, ನೀಲಕಂಠಯ್ಯ ಹಿರೇಮಠ, ದೀಪಕ್ ಹಿರೇಮಠ, ನಾಗರಾಜ್ ದೊಡ್ಡಮನಿ, ವಿಜಯಪಾಟೀಲ ಹಲಗೇರಿ, ಶರಣಯ್ಯ ಮುಂದರಗಿಮಠ, ಶರಣಪ್ಪ ಮಡಿವಾಳರ, ಚಂದ್ರು ಗೋಸಿ, ರಮೇಶ್ ಕರಡಿ, ಖಜಾ ಹುಸೇನ್ ಇದ್ದರು.

ಕಳಪೆ ಬೀಜ ವಿತರಿಸಲು ದಾಸ್ತಾನು: ಆರೋಪ

ಕುಕನೂರು: ಮುಂಗಾರು ಹಂಗಾಮು ಆರಂಭಕ್ಕೆ ದಿನಗಣನೆ ಆರಂಭವಾಗಿರುವ ಬೆನ್ನಲ್ಲೇ, ಇಲ್ಲಿನ ಸ್ಥಳೀಯ ರೈತ ಸಂಪರ್ಕ ಕೇಂದ್ರದಲ್ಲಿ ರೈತರಿಗೆ ವಿತರಿಸಲು ಕಳಪೆ ಗುಣಮಟ್ಟದ ಹೆಸರು ಬೀಜಗಳನ್ನು ದಾಸ್ತಾನು ಮಾಡಿರುವುದನ್ನು ಖಂಡಿಸಿ ಸ್ಥಳೀಯ ರೈತ ಮುಖಂಡ ದೇವಪ್ಪ ಸೋಬಾನಾದ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಕುಕನೂರಿನ ರೈತ ಸಂಪರ್ಕ ಕೇಂದ್ರದಲ್ಲಿ ಮುಂಗಾರು ಮುಂಗಾರು ಬೆಳೆ ಹೆಸರು ಮತ್ತು ತೊಗರೆಯನ್ನ ವಿತರಣೆ ಮಾಡುವುದಕ್ಕಾಗಿ ಸಂಗ್ರಹಣೆ ಮಾಡಿದ್ದ 2,400 ಕೆಜಿ ಹೆಸರು ಬೀಜಗಳು ಕಳಪೆ ಗುಣಮಟ್ಟದಾಗಿದೆ ಎಂದು ಕುಕನೂರು ತಾಲೂಕಿನ ರೈತ ಮುಖಂಡರು ಖಂಡಿಸಿ ಪ್ರತಿರೋಧ ವ್ಯಕ್ತಪಡಿಸಿದರು.

ಸರ್ಕಾರದ ರಿಯಾಯಿತಿ ದರದ ಬೀಜ ನಂಬಿ ಬಂದರೆ ನಮಗೆ ದ್ರೋಹ ಬಗೆಯಲಾಗುತ್ತಿದೆ ಎಂದು ರೈತರು ಆಕ್ರೋಶ ಹೊರಹಾಕಿದ್ದಾರೆ.

ಕೀಟಬಾಧೆ, ಧೂಳು ಮಿಶ್ರಿತ ಬೀಜಗಳು: ಪ್ರಸಕ್ತ ಸಾಲಿನ ಮುಂಗಾರು ಬಿತ್ತನೆಗಾಗಿ ರೈತ ಸಂಪರ್ಕ ಕೇಂದ್ರಕ್ಕೆ ನೂರಾರು ಚೀಲ ಹೆಸರು ಬೀಜಗಳು ಪೂರೈಕೆಯಾಗಿವೆ. ಆದರೆ, ವಿತರಣೆಗೆ ಮುನ್ನ ಬೀಜಗಳ ಗುಣಮಟ್ಟವನ್ನು ಪರಿಶೀಲಿಸಿದ ರೈತರಿಗೆ ತೀವ್ರ ನಿರಾಶೆಯಾಗಿದೆ ಎಂದು ಹೇಳಬಹುದು.

ಈ ಕುರಿತು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಪ್ರಮೋದ್ ಕುಮಾರ್ ತುಂಬಳರನ್ನು ಸಂಪರ್ಕಿಸಿದಾಗ, ಬೀಜಗಳ ಗುಣಮಟ್ಟದ ಕುರಿತು ರೈತರು ಆಕ್ಷೇಪ ಎತ್ತಿರುವುದು ಗಮನಕ್ಕೆ ಬಂದಿದೆ. ತಕ್ಷಣವೇ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ. ಮೇಲಧಿಕಾರಿಗಳ ಗಮನಕ್ಕೆ ತಂದು, ಬೀಜಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ರೈತರಿಗೆ ಯಾವುದೇ ಅನ್ಯಾಯವಾಗಲು ಬಿಡುವುದಿಲ್ಲ, ಶೀಘ್ರ ಪರ್ಯಾಯ ಗುಣಮಟ್ಟದ ಬೀಜಗಳನ್ನು ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ.

ಶರಣಪ್ಪ ಚಂಡೂರ, ಬಸವರಾಜ ದಿವಟರ, ಈಶಪ್ಪ ಶಬರದ, ಬಸವರಾಜ ಇಬೇರಿ, ದೊಡ್ಡ ಶರಣಪ್ಪ ಚಂಡೂರ, ಎಲ್ಲಪ್ಪ ಕಲಾಲ್, ಸೇರಿದಂತೆ ರೈತ ಮುಖಂಡರು ಇತರರು ಉಪಸ್ಥಿತರಿದ್ದರು.



ಶೀಘ್ರ ತಂಬಾಕು ಮುಕ್ತ ಗ್ರಾಮ ಘೋಷಿಸಿ

ಕಲಬುರಗಿ: ತಂಬಾಕು ಮುಕ್ತ ಸಮಾಜ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಬರುವ ಜುಲೈ ಮಾಹೆಯ ಅಂತ್ಯದೊಳಗೆ ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ ಒಂದು ಗ್ರಾಮವನ್ನಾದರು ತಂಬಾಕು ಮುಕ್ತ ಗ್ರಾಮವನ್ನಾಗಿಸಿ ಘೋಷಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗುರುವಾರ ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಜಿಲ್ಲಾ ಸಮನ್ವಯ ಸಮಿತಿಯ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇದಕ್ಕೆ ಪೂರಕವಾಗಿ ಜೂನ್ ಅಂತ್ಯದೊಳಗೆ ಜಿಲ್ಲೆಯ 261 ಗ್ರಾಮ ಪಂಚಾಯತಿಯಲ್ಲಿ ಗ್ರಾಮ ತಂಬಾಕು ನಿಯಂತ್ರಣ ಸಮಿತಿ ರಚಿಸಿಕೊಂಡು ಗ್ರಾಮ ಸಭೆಯಲ್ಲಿ ತಂಬಾಕು ಮುಕ್ತ ಗ್ರಾಮ ಕುರಿತು ಚರ್ಚಿಸಬೇಕು ಎಂದರು.

ಜೂ.2ರಂದು ವಿಶ್ವ ತಂಬಾಕು ದಿನಾಚರಣೆ ಆಯೋಜಿಸಲು ಸಭೆಯಲ್ಲಿ ನಿರ್ಧರಿಸಲಾಯಿತು. ದಿನಾಚರಣೆ ಅಂಗವಾಗಿ ಚಿತ್ರಕಲಾ ಸ್ಪರ್ಧೆ, ಜಾಗೃತಿ ಜಾಥಾ, ಆರೋಗ್ಯ ತಪಾಸಣಾ ಶಿಬಿರ, ತಂಬಾಕು ಉತ್ಪನ್ನಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಕುರಿತು ವಿದ್ಯಾರ್ಥಿಗಳಿಂದ ಮೈಮ್ ಸ್ಕಿಟ್ ಪ್ರದರ್ಶನ ಹೀಗೆ ವಿವಿಧ ಚಟುವಟಿಕೆಗಳನ್ನು ಆಯೋಜಿಸುವಂತೆ ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಅಧಿಕಾರಿಗಳಿಗೆ ರಾಯಪ್ಪ ಹುಣಸಗಿ ನಿರ್ದೇಶನ ನೀಡಿದರು.

ವಿಭಾಗೀಯ ತಂಬಾಕು ನಿಯಂತ್ರಣ ಕೋಶದ ಸಂಯೋಜಕ ಮಹಾಂತೇಶ್ ಉಳ್ಳಾಗಡ್ಡಿ ಮತ್ತು ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ಸುಜಾತಾ ಪಾಟೀಲ ಅವರು ಕಳೆದ 4–5 ವರ್ಷದಲ್ಲಿ ಜಿಲ್ಲೆಯಲ್ಲಿ ಕೋಟ್ಪಾ ಕಾಯ್ದೆ ಅನುಷ್ಠಾನ, ಜಂಟಿ ಕಾರ್ಯಚರಣೆ ನಡೆಸಿ ಅಂಗಡಿಗಳ ಮೇಲೆ ಮಾಡಿದ ದಾಳಿ, ಸಂಗ್ರಹಿಸಿದ ದಂಡ, ತಂಬಾಕು ಮುಕ್ತ ಗ್ರಾಮ ಮಾಡುವ ನಿಟ್ಟಿನಲ್ಲಿ ಕೈಗೊಂಡ ಕೆಲಸ ಕಾರ್ಯಗಳ ಕುರಿತು ಪ್ರಾತ್ಯಕ್ಷಿಕೆ ಮೂಲಕ ಸಭೆಗೆ ಮಾಹಿತಿ ನೀಡಿದರು. ಜಿಪಂ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಡಿಎಚ್‌ಒ ಡಾ.ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ರಾಕೇಶ್ ಕಾಂಬ್ಳೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ್, ಕಲಬುರಗಿ ಟಿಎಚ್‌ಒ ಡಾ. ಮಾರುತಿ ಕಾಂಬ್ಳೆ, ಅಫಜಲಪೂರ ಟಿಎಚ್‌ಒ ಡಾ ಚೇತನ್ ದುಮಾಲೆ, ಸೋಶಿಯಲ್ ವರ್ಕರ್ ಆರತಿ ಧನಶ್ರೀ, ಜಿಲ್ಲಾ ಸೈಕ್ಯಾಟ್ರಿಕ್ ಕೌನ್ಸಿಲರ್ ಮಂಜುನಾಥ ಕಂಬಾಳಿಮಠ, ಡಿಇಒ ರವಿಕುಮಾರ್ ಪೂಜಾರಿ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳಿದ್ದರು.



ಅಂಗನವಾಡಿ ಕಾರ್ಯಕರ್ತೆಗೆ ಬೀಳ್ಕೊಡುಗೆ ಸಮಾರಂಭ

ಯಲಬುರ್ಗಾ: ಸಂಸ್ಕಾರವಂತ ಸಮಾಜ ನಿರ್ಮಾಣದ ರುವಾರಿಗಳು ಅಂಗನವಾಡಿ ತಾಯಿಯಂದಿರು ಎಂದು ಅಂಗನವಾಡಿ ಮೇಲ್ವಿಚಾರಕಿಯಾಗದ ಚೆನ್ನಮ್ಮ ಶಾನುಭೋಗಾರ್ ಹೇಳಿದರು.

ತಾಲೂಕಿನ ತೊಂಡಿಹಾಳ ಗ್ರಾಮದ 3ನೇ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯಾದ ಶಕುಂತಲಾ ಕಳಕನಗೌಡ ಕೆಂಚನಗೌಡ್ರ ಕರಮುಡಿ ಅಂಗನವಾಡಿ ಕೇಂದ್ರದಲ್ಲಿ ವಯೋನಿವೃತ್ತಿ ಕಾರ್ಯಕ್ರಮ ನಡೆಯಿತು.

ಇವರು ತೊಂಡಿಹಾಳ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ 1984 ರಲ್ಲಿ ಸೇವೆಯನ್ನು ಪ್ರಾರಂಭಿಸಿದರು. ತದನಂತರ 2026 ರ ವರೆಗೆ ಅಂಗನವಾಡಿ ಕೇಂದ್ರದ ಸೇವೆ ಸೇರಿ ಸುದೀರ್ಘ 42 ವರ್ಷ ಸೇವೆ ಸಲ್ಲಿಸಿ ಏ.31ರಂದು ಸೇವಾ ನಿವೃತ್ತಿ ಹೊಂದಿದರು. ಮುಧೋಳ ವಲಯದ ಕರಮುಡಿ, ತೊಂಡಿಹಾಳ್, ಬಂಡಿಹಾಳ್, ಹಿರೇಮ್ಯಾಗೇರಿ, ಎಚ್.ಸೋಂಪುರ್, ಸಂಕನೂರ, ಶಿರಗುಂಪಿ, ಕತ್ರಾಳ ಗ್ರಾಮದ ಅಂಗನವಾಡಿ ಕಾರ್ಯಕರ್ತೆಯರು, ಗ್ರಾಮಸ್ಥರು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಶಕುಂತಲಾ ಕಳಕನಗೌಡ ಕೆಂಚನಗೌಡ್ರ ವಯೋನಿವೃತ್ತಿ ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.

ಅಂಗನವಾಡಿ ಕಾರ್ಯಕರ್ತೆಯರು ತಾವು ಪಡೆಯುವ ಗೌರವಧನಕ್ಕೆ ಮೀರಿ ನಿಸ್ವಾರ್ಥ ಸೇವೆ ಮಾಡುತ್ತಿದ್ದಾರೆ. ಇವರಿಂದ ಮಕ್ಕಳು ಸಂಸ್ಕಾರ ಮತ್ತು ಶಿಸ್ತನ್ನು ಪಡೆದು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪಗೊಳ್ಳುತ್ತಿದ್ದಾರೆ. ಇಂತಹ ಕಾರ್ಯಕರ್ತೆಯರ ಬೀಳ್ಕೊಡುಗೆ ಸಮಾರಂಭಕ್ಕೆ ಪಾಲ್ಗೊಂಡು ಸನ್ಮಾನಿಸಿದ್ದು ತುಂಬಾ ಸಂತೋಷ ಉಂಟು ಮಾಡಿದೆ ಎಂದರು.



ಅಂಗನವಾಡಿ ಕಾರ್ಯಕರ್ತೆಯರಾದ ತಮ್ಮ ಉಣಚಗೇರಿ, ಎಲ್ಲೂ ಬಾಯಿ ಮ್ಯಾಗೇರಿ, ರತ್ನಾ ದೇವಕ್ಕಿ, ಮಂಜುಳಾ, ಅಯ್ಯಮ್ಮ, ಗೀತಾ, ಸವಿತಾ, ಚೆನ್ನಮ್ಮ, ಅಕ್ಕಮ್ಮ, ಸರೋಜಾ, ಶಾರದಾ, ದ್ರಾಕ್ಷಾಯಿಣಿ, ಗಂಗಾಂಬಿಕ, ನೀಲಮ್ಮ, ಸಂಗಮ್ಮ, ಬಸಮ್ಮ, ಗೀತಾ, ಶಾಂತ, ಬಸವರಾಜೇಶ್ವರಿ, ರೇಣುಕಾ, ಸಹಾಯಕಿಯರು ಮತ್ತು ಪುಟಾಣಿ ಮಕ್ಕಳು, ಮುಧೋಳ ವಲಯದ ಎಲ್ಲ ಅಂಗನವಾಡಿ ಕಾರ್ಯಕತೆರ್ಯರು ಹಾಗೂ ಸಹಾಯಕಿಯರು ಬಳಗದಿಂದ ಶುಭಾಶಯಗಳು ಮುಧೋಳ ವಲಯದ ಅಂಗನವಾಡಿ ಕಾರ್ಯಕರ್ತೆಯರಿಂದ ಗೌರವಪೂರ್ವಕ ಅಭಿನಂದನೆಗಳು ತಿಳಿಸಿದರು.

ನೀರು ಬಳಕೆದಾರರ ಸಂಘಕ್ಕೆ ಅಧ್ಯಕ್ಷರಾಗಿ ಶಿವಪ್ರಸಾದ್ ರಾವ್ ಆಯ್ಕೆ

ಮುನಿರಾಬಾದ್: ಶಿವಪುರ ಗ್ರಾಮದಲ್ಲಿ ಇಂದು ನಡೆದ ನೀರು ಬಳಕೆದಾರರ ಸಹಕಾರ ಸಂಘದ ನೂತನ ಚುನಾವಣೆಯನ್ನು ನಡೆಸಲಾಯಿತು. 12 ಸ್ಥಾನಗಳಿಗೆ ಸದಸ್ಯರು ಅವಿರೋಧವಾಗಿ ಆಯ್ಕೆಯಾದರು.

ನಂತರ ಅಧ್ಯಕ್ಷ ,ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಕೆಗೆ ಗೊಂದಲ ಉಂಟಾಯಿತು. ನಂತರ ಸದಸ್ಯರಲ್ಲಿ ಒಮ್ಮತ ಮೂಡಿಸಿ ಗೊಂದಲಕ್ಕೆ ತೆರೆ ಎಳೆದರು. ಎರಡು ನಾಮಪತ್ರಗಳು ಮಾತ್ರ ಸಲ್ಲಿಸಲಾಗಿತ್ತು. ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅಧ್ಯಕ್ಷ ಉಪಾಧ್ಯಕ್ಷರನ್ನು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣೆ ಅಧಿಕಾರಿಗಳು ಘೋಷಣೆ ಮಾಡಿದರು. ಕೆ.ರಾಮರಾವ್ ಅಧ್ಯಕ್ಷರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಶಿವಪುರ, ಪರಪ್ಪ ನೀರು ಸಹಕಾರ ಸಂಘ ಉಪಾಧ್ಯಕ್ಷರು, ಸದಸ್ಯರುಗಳಾದ ಶೇಖ್ ಸಾಬ್, ಸಿ.ಶ್ರೀನಿವಾಸ್ ರಾವ್, ಎಂ.ನಾಗರಾಜ್, ಶರಣಪ್ಪ ಆನೆಗುಂದಿ, ಮಂಜುನಾಥ್



ಸಾರೆಪ್ಪ, ನಿಂಗಪ್ಪ ಶಿವಪುರ್, ಮಾರ್ಕಂಡಪ್ಪ ಶೆಲೊಡಿ, ಕೆ.ಎಂ.ಪಾರ್ವತಮ್ಮ, ಗಿರಿಜಮ್ಮ ಶೆಲೊಡಿ ಬಸವರಾಜ್ ಹೋಳಗಿ ಕಾರ್ಯದರ್ಶಿ, ಮುಖಂಡರಾದ ಚನ್ನಪ್ಪ ಗೌಡ್ರು, ಮಹಾಲಿಂಗಯ್ಯ, ಚನ್ನಪ್ಪ ಕೇರಿ, ಹನುಮೇಶ್ ಶಿವಪುರ, ಮಂಜಪ್ಪ ತೋಟರ್, ಸುರೇಶ್ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಡಾ.ಸಿ.ಬಿ.ಚಿಲ್ಕರಾಗಿ, ಶಾಮೀದ್ ಸಾಬಗೆ ಬೀಳ್ಕೊಡುಗೆ

ಗಂಗಾವತಿ: ನಗರದ ಶ್ರೀಕೊಲ್ಲಿ ನಾಗೇಶ್ವರರಾವ್ ಗಂಗಯ್ಯ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಹಿರಿಯ ಪ್ರಾಧ್ಯಾಪಕ ಡಾ.ಸಿ.ಬಿ.ಚಿಲಕರಾಗಿ ಹಾಗೂ ವ್ಯವಸ್ಥಾಪಕ ಶಾಮೀದ್ ಸಾಬ ಅವರ ಬೀಳ್ಕೊಡುಗೆ ಸಮಾರಂಭ ಹೃದಯಸ್ಪರ್ಶಿಯಾಗಿ ನೆರವೇರಿತು.

ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಮುಮ್ತಾಜ್ ಬೇಗಂ ಮಾತನಾಡಿ, ನಾಡಿನ ಖ್ಯಾತ ವಿದ್ವಾಂಸರಲ್ಲಿ ಒಬ್ಬರಾಗಿರುವ ಡಾ.ಚಿಲಕರಾಗಿ ಅನುಭಾವಿ ಪರಂಪರೆಯ ಆಳವಾದ ಜ್ಞಾನವುಳ್ಳವರು. ತತ್ವಪದ ಸಾಹಿತ್ಯದ ಅಧಿಕೃತ ಸಂಶೋಧಕರು. ಕವಿ, ವಿಮರ್ಶಕರಾಗಿ ಅಪಾರ ಸಾಧನೆ ಮಾಡಿದವರು. ಕಲ್ಯಾಣ ಕರ್ನಾಟಕದ ತತ್ವಪದ ಸಾಹಿತ್ಯ ಪರಂಪರೆಯ ಕುರಿತು ಕ್ಷೇತ್ರ ಕಾರ್ಯದ ಮೂಲಕ ಬಹಳ ಮಾಹಿತಿ ಸಂಗ್ರಹಿಸಿದ್ದಾರೆ. 'ಸೂರ್ಯಕಂದ್ಲಿಲಿಡಿದು ಬರಲಿ' ಸಂಕಲನಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸುತ್ತಿಗೆ ಆಯ್ಕೆಯಾದ ಹತ್ತು ಕೃತಿಗಳಲ್ಲಿ ಒಂದಾಗಿತ್ತು. ಅದ್ಭುತ ಬೋಧಕರಾಗಿ, ಹಳೆಗನ್ನಡವನ್ನು ರಸವತ್ತಾಗಿ ಹೇಳುವ ಚಿಲಕರಾಗಿಯವರ ಪಾಠ ಕೇಳುವುದೇ ಸೊಗಸು. ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಅನುಭವ ಪಡೆದವರಾಗಿದ್ದಾರೆ. ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಈ ಭಾಗದ ಸಾಹಿತ್ಯ ಪರಂಪರೆಯ ಮೇಲೆ ಬೆಳಕು ಚೆಲ್ಲುತ್ತಿದ್ದಾರೆ. ಗಂಗಾವತಿಯಲ್ಲಿಯೇ ರಾಮುಲುಕಾಲೇಜಿನವಿದ್ಯಾರ್ಥಿಯಾಗಿ ಮೊನ್ನೆ ತಾನೆ ನಡೆದ ಕಾರಟಗಿ ತಾಲೂಕಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದದ್ದು ನಮಗೆಲ್ಲ ಹೆಮ್ಮೆ. ಅವರ ಸಾಹಿತ್ಯ ಸೇವೆ ಇನ್ನಷ್ಟು ಹೊರಬರಲಿ'' ಎಂದರು. ವ್ಯವಸ್ಥಾಪಕರಾದ ಶಾಮೀದರವರು ಮೆದು ಸ್ವಭಾವದವರು. ಕಡಿಮೆ ಮಾತಿನ ಹೆಚ್ಚು ಕೆಲಸದ ವ್ಯಕ್ತಿ ಎಂದರು.



ಸನ್ಮಾನ ಸ್ವೀಕರಿಸಿ ಮಾತನಾಡಿದ ಡಾ.ಚಿನ್ನಬಸಪ್ಪ ಚಿಲ್ಕರಾಗಿ, ಕಡುಬಡತನದ ಕುಟುಂಬದಿಂದ ಬಂದ ನಾನು ಎಲ್ಲ ಗುರುವೃಂದದ ಆಶೀರ್ವಾದದಿಂದ ಇಲ್ಲಿಗೆ ಬಂದಿರುವೆ. ಎಲ್ಲರ ಪ್ರತಿಪಾತ್ರನಾದುದದಕ್ಕೆ ನಾನು ಧನ್ಯತಾ ಭಾವ ಹೊಂದಿರುವೆನು. ನನ್ನ ಸೇವಾವಧಿಯಲ್ಲಿ ಹಲವು ಕಾಲೇಜಿನ ಪ್ರಾಚಾರ್ಯರು, ಪ್ರಾಧ್ಯಾಪಕ ವೃಂದ,ಅತಿಥಿ ಉಪನ್ಯಾಸಕರು ಶಿಕ್ಷಕೇತರರ ಅಭಿಮಾನ ನನಗೆ ಸಿಕ್ಕಿದೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಪ್ರಭಾರಿ ಪ್ರಾಚಾರ್ಯ ಡಾ.ಜೆ.ಕೃಷ್ಣ ಹಾಗೂ ಪ್ರಾಧ್ಯಾಪಕ ಇಬ್ರಾಹಿಂಸಾಬ, ಫಣಿರಾಜ್, ಅನಿತಾ, ಸುಮಲತಾ, ಉಪನ್ಯಾಸಕ ಡಾ.ಬಸವರಾಜ ಗೌಡನಬಾವಿ, ಗುಂಡೂರು ಪವನ್ ಕುಮಾರ, ಶಿವಕುಮಾರ ಉಪಾಸಿ, ಕನಕಾಪುರ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯ ಗೋಪಾಲಕೃಷ್ಣ ಕನಕಗಿರಿ, ವೀರೇಶ, ಕು.ಗೌತಮಿ ಇತರರು ಮಾತನಾಡಿದರು.

ಡಾ.ಚನ್ನಬಸಪ್ಪ ಚಿಲಕರಾಗಿ, ನಾಗರತ್ನ ಚಿಲಕರಾಗಿ ಹಾಗೂ ಶ್ಯಾಮಿದಸಾಬ ಅವರನ್ನು ಸನ್ಮಾನಿಸಲಾಯಿತು. ಪ್ರಾರ್ಥನೆ ಡಾ.ಲಕ್ಷ್ಮೀಬಾಯಿ, ಸ್ವಾಗತ ರವಿ ಹಾದಿಮನಿ, ನಿರೂಪಣೆ ವಂದನಾರ್ಪಣೆ ಡಾ.ಪದ್ಮ ನೆರವೇರಿಸಿದರು. ಅನಿಲಕುಮಾರ, ಡಾ.ಅನಿಲ ಎಡ್ವರ್ಡ್, ಡಾ.ಅಶೋಕ, ಕೆ.ಎನ್. ರವಿ, ಅಂಜುಮ್, ಅನಿತಾ, ಪತ್ರಾಂಕಿತ ವ್ಯವಸ್ಥಾಪಕಿ ರಾಘಮ್ಮ, ಪ್ರತಿಭಾ, ಅತಿಥಿ ಉಪನ್ಯಾಸಕರಾದ ಡಾ.ಪಾಗುಂಡಪ್ಪ, ಡಾ.ಕೇಶವಮೂರ್ತಿ, ಬಾಲಪ್ಪ ಬಡಿಗೇರ್, ಡಾ.ಮುದುಕನಗೌಡ, ಡಾ.ಬಸವರಾಜ ಗಡಾದ್, ಕೆ.ರವಿಕುಮಾರ್, ಅಶ್ರಫ್ ಅಳ್ಳಳ್ಳಿ, ಮಣಿಕಂಠ, ಪ್ರಜ್ವಲ್, ಶಾಂತರಾಜ್, ಡಾ.ಸತೀಶ್ ಉಪಸ್ಥಿತರಿದ್ದರು.

ಉತ್ತಮ ಸಂಶೋಧನೆಗಳಿಂದ ರಾಷ್ಟ್ರದ ಪ್ರಗತಿ: ಪ್ರೊ.ಶೋಭಾ

ಕನಕಗಿರಿ: ಸಂಶೋಧನೆಯು ಕತ್ತಲೆಯಿಂದ ಬೆಳಕಿನೆಡೆಗಿನ ಪ್ರಯಾಣವಿದ್ದಂತೆ. ಯಾವುದೇ ಒಂದು ದೇಶ ಅಥವಾ ಸಮಾಜದ ಪ್ರಗತಿಯು ಅಲ್ಲಿ ನಡೆಯುವ ಸಂಶೋಧನೆಗಳ ಗುಣಮಟ್ಟದ ಮೇಲೆ ಆಧಾರಿತವಾಗಿರುತ್ತದೆ. ಯಾವ ದೇಶಗಳು ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಹೂಡಿಕೆ ಮಾಡುತ್ತವೆಯೋ, ಆ ದೇಶಗಳು ಆರ್ಥಿಕವಾಗಿ ಹೆಚ್ಚು ಬಲಿಷ್ಠವಾಗಿರುತ್ತವೆ ಎಂದು ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ ಪ್ರೊ.ಶೋಭಾ ಜಿ. ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಪಂಪಣ್ಣ ಶರಣಪ್ಪ ಗುಗ್ಗಳಶೆಟ್ರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಂತರಿಕ ಗುಣಮಟ್ಟ ಭರವಸೆ ಕೋಶ (ಐಕ್ಯೂಎಸಿ) ಹಾಗೂ ಸಂಶೋಧನಾ ಘಟಕದ ವತಿಯಿಂದ 'ಸಂಶೋಧನಾ ವಿಧಾನದಲ್ಲಿ ಹೊಸ ಪ್ರವೃತ್ತಿಗಳು' ವಿಷಯದ ಮೇಲೆ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವಿಚಾರಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಂಶೋಧನೆಯಿಂದಾಗಿ ಹೊಸ ಉದ್ಯಮಗಳು ಸೃಷ್ಟಿಯಾಗುತ್ತವೆ, ಉದ್ಯೋಗಾವಕಾಶಗಳು ಹೆಚ್ಚುತ್ತವೆ ಮತ್ತು ದೇಶದ ಉತ್ಪಾದನಾ ಸಾಮರ್ಥ್ಯ ವೃದ್ಧಿಯಾಗುತ್ತದೆಎಂದು ಹೇಳಿದರು.

ಬಳಿಕ ಡಾ.ಕೆ.ಸಿ.ಕುಲಕರ್ಣಿ ಮಾತನಾಡಿ,



ಸಂಶೋಧನೆ ಎಂಬುದು ನಮ್ಮ ಜ್ಞಾನವನ್ನು ಹೆಚ್ಚಿಸಲು ಮತ್ತು ಹೊಸ ವಿಷಯಗಳನ್ನು ಕಂಡುಹಿಡಿಯಲು ಮಾಡುವ ಒಂದು ವ್ಯವಸ್ಥಿತ ಪ್ರಯತ್ನ. ಮಾನವನ ಪ್ರಗತಿಯಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ. ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಆಹಾರದ ಕೊರತೆ, ಜನಸಂಖ್ಯೆ ಸ್ಫೋಟ ಅಥವಾ ಹೊಸ ಬಗೆಯ ಸಾಂಕ್ರಾಮಿಕ ರೋಗಗಳನ್ನು ಎದುರಿಸಲು ಇಂದಿನಿಂದಲೇ ಸಂಶೋಧನೆಗಳು ನಡೆಯಬೇಕಾಗುತ್ತದೆ. ಇದು ಭವಿಷ್ಯವನ್ನು ಸುರಕ್ಷಿತವಾಗಿಸುವ ಮುನ್ನೆಚ್ಚರಿಕಾ ಕ್ರಮವಾಗಿದೆಎಂದರು.

ನಂತರ ಕಾಲೇಜಿನ ಪ್ರಾಂಶುಪಾಲ ಡಾ. ಬಜರಂಗಬಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸಂಶೋಧನೆ ಎಂಬುದು ನಿರಂತರವಾಗಿ ಹರಿಯುವ ನದಿಯಂತೆ. ನಮಗೆ ಈಗಾಗಲೇ ತಿಳಿದಿರುವ ವಿ?ಯಗಳನ್ನು ಇನ್ನ?ು ಆಳವಾಗಿ ಅರ್ಥಮಾಡಿಕೊಳ್ಳಲು ಮತ್ತು ಜಗತ್ತಿನ ಬಗ್ಗೆ ಹೊಸ ವಿ?ಯಗಳನ್ನು ಕಲಿಯಲು ಇದು ಸಹಾಯ ಮಾಡುತ್ತದೆ. ಇಂದು ನಾವು ಕಾಣುತ್ತಿರುವ ಪ್ರತಿಯೊಂದು ಸೌಕರ್ಯದ ಹಿಂದೆ ಯಾರೋ ಒಬ್ಬರ ನಿರಂತರ ಸಂಶೋಧನೆ ಮತ್ತು ಪರಿಶ್ರಮ ಅಡಗಿದೆ ಎಂದರು.

ರಕ್ಷಿತ್.ಎ ಮಾತನಾಡಿದರು. ಕಾಲೇಜಿನ ಭೂದಾನಿ ಬಸವರಾಜ್ ಗುಗ್ಗಳಶೆಟ್ರ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಪ್ರೊ.ಪ್ರಕಾಶ್.ಕೆ.ಬಡಿಗೇರ್, ನಫೀಸ್ ಬಾನು, ಡಾ.ವೀರೇಶ ಕೆಂಗಲ್, ಲಲಿತಾ ಎನ್.ಕೆ., ಅಮರೇಶ್.ವಿ, ಫರ್ಹಾನ್ ತಾಜ್, ರಾಘವೇಂದ್ರ ವಿವಿಧ ವಿಶ್ವವಿದ್ಯಾಲಯಗಳಿಂದ ಆಗಮಿಸಿದ್ದ ಸಂಶೋಧನಾರ್ಥಿಗಳು, ವಿವಿಧ ವಿಭಾಗಗಳ ಉಪನ್ಯಾಸಕರು ಸೇರಿದಂತೆ ವಿದ್ಯಾರ್ಥಿಗಳಿದ್ದರು.

ಕಿರುಸುದ್ದಿ

ತಹಶೀಲ್ದಾರ್‌ಗೆ ಅಭಿನಂದಿಸಿದ ಜಿಲ್ಲಾಧಿಕಾರಿ

◆ **ಹಗರಿಬೊಮ್ಮನಹಳ್ಳಿ:** ಎಜೆಎಸ್‌ಕೆನ ವಿವಿಧ ಪ್ರಮಾಣ ಪತ್ರಗಳನ್ನು ಫೆಬ್ರವರಿ ಹಾಗೂ ಮಾರ್ಚ್-2026ರಲ್ಲಿ ನಿಗದಿತ ಅವಧಿಗೂ ಮುನ್ನ ಶೇ.100ರಷ್ಟು ಅರ್ಜಿ ವಿಲೇವಾರಿ ಮಾಡಿದ ಕೀರ್ತಿಗೆ ಭಾಜನಾರಾಗಿದ್ದಕ್ಕೆ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿಕ್ಕಾಗಿ



ವಿಜಯನಗರ ಜಿಲ್ಲೆಯ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಅವರು ಹಗರಿಬೊಮ್ಮನಹಳ್ಳಿ ತಹಶೀಲ್ದಾರ್ ಆರ್.ಕವಿತಾ ಹಾಗೂ ಹಂಪಸಾಗರ ಉಪ ತಹಶೀಲ್ದಾರ್ ಅವರಿಗೆ ಅಭಿನಂದನಾ ಪತ್ರ ನೀಡಿ ಸನ್ಮಾನಿಸಿ ಶುಭ ಹಾರೈಸಿದರು.

ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

◆ **ಹಗರಿಬೊಮ್ಮನಹಳ್ಳಿ:** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 2026-27ನೇ ಸಾಲಿನ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಕೊಟ್ರೇಶ್ ನಾಯ್ಕ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪತ್ರಿಕೆಯೊಂದಿಗೆ ಮಾತನಾಡಿದ ಅವರು, ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯಗಳಾದ ಬಾಚಿಗೊಂಡನಹಳ್ಳಿ, ಬನ್ನಿಕಲ್ಲು ಹಗರಿಬೊಮ್ಮನಹಳ್ಳಿ ಹನಸಿ, ಮಾಲವಿ ಮೋರಗೇರಿ ತೆಲಿಗೋಳಿ ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಸಲ್ಲಿಸಬಹುದು. ಬಾಲಕಿಯರು ಬಾಚಿಗೊಂಡನಹಳ್ಳಿ ಹಗರಿಬೊಮ್ಮನಹಳ್ಳಿ ಸೊನ್ನ ಹನಸಿ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶ ಬಯಸುವ ಪ್ರವರ್ಗ 1, 2ಎ, 2ಬಿ, 3ಬಿ, ಹಾಗೂ ಪ.ಜಾತಿ, ಪಂಗಡಗಳಿಗೆ ಸೇರಿದ ಮೆಟ್ರಿಕ್ ಪೂರ್ವ ಬಾಲಕ ಬಾಲಕಿಯರು ದಿನಾಂಕ ಜೂ.8ರೊಳಗಾಗಿ ಅರ್ಜಿ ಸಲ್ಲಿಸಬೇಕು. ಮತ್ತು ಮೆಟ್ರಿಕ್ ನಂತರದ ಪಿಯುಸಿ ವ್ಯಾಸಂಗ ಮಾಡುತ್ತಿರುವ ಬಾಲಕ, ಬಾಲಕಿಯರು ವಿದ್ಯಾರ್ಥಿನಿಯಗಳ ಪ್ರವೇಶಕ್ಕೆ ದಿನಾಂಕ ಜೂ.15ರೊಳಗಾಗಿ ಅಗತ್ಯ ದಾಖಲಾತಿಯೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಹಗರಿಬೊಮ್ಮನಹಳ್ಳಿಯ ಎಪಿಎಂಸಿ ಹತ್ತಿರವಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಕಚೇರಿಯ ಅಧಿಕಾರಿಗಳನ್ನು ಸಂಪರ್ಕಿಸಲು ತಿಳಿಸಲಾಗಿದೆ.

ರೇಷನ್ ಕಾರ್ಡ್ ತಿದ್ದುಪಡಿ ಅವಧಿ ವಿಸ್ತರಣೆ

◆ **ವಿಜಯನಗರ:** ಜಿಲ್ಲೆಯ ಪಡಿತರ ಚೀಟಿದಾರರಿಗೆ ಪಡಿತರ ಚೀಟಿಯಲ್ಲಿನ ತಿದ್ದುಪಡಿ ಸೇವೆಗಳ ಅವಧಿಯನ್ನು ದಿನಾಂಕ ಮೇ 8ರಿಂದ 2027ರ ಮಾ.31ರವರೆಗೆ ವಿಸ್ತರಿಸಲಾಗಿದ್ದು, ಸಾರ್ವಜನಿಕರು ಹತ್ತಿರದ ಗ್ರಾಮ ಒನ್ ಹಾಗೂ ಕರ್ನಾಟಕ ಒನ್ ಕೇಂದ್ರಗಳ ಮೂಲಕ ಈ ಸೌಲಭ್ಯ ಪಡೆಯಬಹುದು ಎಂದು ಆಹಾರ ಇಲಾಖೆ ಉಪ ನಿರ್ದೇಶಕ ರಿಯಾಜ್ ತಿಳಿಸಿದ್ದಾರೆ. ಸೇವಾ ಶುಲ್ಕಗಳ ವಿವರ: ಪಡಿತರ ಚೀಟಿ ತಿದ್ದುಪಡಿ ಹೆಸರು ಸೇರ್ಪಡೆ, ತೆಗೆದು ಹಾಕುವುದು, ವಿಳಾಸ ಅಥವಾ ನ್ಯಾಯಬೆಲೆ ಅಂಗಡಿ ಬದಲಾವಣೆ ಹಾಗೂ ಇ-ಕೆವೈಸಿ ಪ್ರಕ್ರಿಯೆಗಳಿಗೆ ರೂ. 25 ನಿಗದಿಪಡಿಸಲಾಗಿದೆ. ಹೊಸ ಪಡಿತರ ಚೀಟಿ ಅರ್ಜಿ ಶುಲ್ಕ ರೂ. 50 ಹಾಗೂ ಆದ್ಯತೇತರ ಕುಟುಂಬಗಳ ಸ್ವ-ಇಚ್ಚೆ ನೋಂದಣಿ ಶುಲ್ಕ ರೂ.20 ನಿಗಧಿಪಡಿಸಲಾಗಿದೆ. (ಈ ಸೇವೆಗಳು ಪ್ರಸ್ತುತ ಸ್ಥಗಿತಗೊಳಿಸಲಾಗಿದೆ). ಅರ್ಜಿ ವಿಲೇವಾರಿ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕರು ಆಯಾ ತಾಲ್ಲೂಕು ಕಚೇರಿಯ ಆಹಾರ ಶಾಖೆಯನ್ನು ಸಂಪರ್ಕಿಸಬಹುದು ಎಂದು ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ ಸುದ್ದಿ

ಅಮ್ಮರ್ ಕೊಟ್ರೇಶಪ್ಪ

◆ **ಹಗರಿಬೊಮ್ಮನಹಳ್ಳಿ:** ತಾಲೂಕಿನ ಮಾಲವಿ ಗ್ರಾಮದ ರೈತ ಸೇವಾ ಸಹಕಾರಿ ಸಂಘದ (ಆರ್‌ಎಸ್‌ಎಸ್‌ಎನ್) ಮಾಜಿ ಅಧ್ಯಕ್ಷ ಗ್ರಾಮ ಪಂಚಾಯತಿ ಮಾಜಿ ಸದಸ್ಯ ಕಾತ್ಯಾಯನ ಮರಡಿ ಅಮ್ಮರ್ ಕೊಟ್ರೇಶಪ್ಪ (61) ಅನಾರೋಗ್ಯದಿಂದ ಗುರುವಾರ ಸಂಜೆ ನಿಧನರಾಗಿದ್ದಾರೆ. ಪತ್ನಿ, ಒಬ್ಬ ಪುತ್ರಿ, ಇಬ್ಬರು ಪುತ್ರರು ಅಪಾರ ಬಂಧು



ಬಾಂಧವರನ್ನು ಅಗಲಿದ ಮೃತರ ಅಂತ್ಯ ಸಂಸ್ಕಾರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಸ್ವಗ್ರಾಮ ಮಾಲವಿ ಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ.



ವಿಜಯನಗರ: ಭಯೋತ್ಪಾದನಾ ವಿರೋಧಿ ದಿನಾಚರಣೆ ಅಂಗವಾಗಿ ಹೊಸಪೇಟೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ಪ್ರತಿಜ್ಞಾವಿಧಿ ಭೋಧಿಸಿದರು. ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ವಿವಿಧ ಇಲಾಖೆ ಅಧಿಕಾರಿಗಳು ಸಿಬ್ಬಂದಿ ಇದ್ದರು.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಪುಣ್ಯಸ್ಮರಣೆ

◆ **ಬಳ್ಳಾರಿ:** ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ, ಜಿಲ್ಲಾ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಲ್ಲಂ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ಆಧುನಿಕ ಭಾರತ ನಿರ್ಮಾಣ ಅಡಿಗಲ್ಲು ಹಾಕಿದ ಭಾರತದ ಡಿಜಿಟಲ್ ಕ್ರಾಂತಿಯ ಹರಿಕಾರ ಮಾಜಿ ಪ್ರಧಾನಿ ದಿ.ರಾಜೀವ್ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪಗಳನ್ನು ಹಾಕುವ ಮೂಲಕ ಗುರುವಾರ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು.

ಈ ವೇಳೆ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹಾಗೂ ಮುಖಂಡರು ಸೇರಿ ರಾಜೀವ್ ಗಾಂಧಿ ಅವರು ದೇಶಕ್ಕೆ ನೀಡಿದ ಕೊಡುಗೆಗಳ ಕುರಿತು ಸ್ಮರಿಸಿದರು.

ಈ ಸಂಧರ್ಭದಲ್ಲಿ ಕಾಂಗ್ರೆಸ್ ನ ಹಿರಿಯ ನಾಯಕರಾದ ಎ. ಮಾನಯ್ಯ, ವಿರಸೇನಾ ರೆಡ್ಡಿ, ಕ್ರೈಸ್ತ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕ ಜಿ.ಜೆ.ರವಿಕುಮಾರ್, ಡಿಸಿಸಿ ಕಾರ್ಯಾಧ್ಯಕ್ಷ ಬೊಯಪಾಟಿ ವಿಷ್ಣುವರ್ಧನ್, ಡಿಸಿಸಿ ಉಪಾಧ್ಯಕ್ಷ ಕೆ.ಶ್ರೀನಿವಾಸುಲು, ಡಿಸಿಸಿ ಪ್ರಧಾನ ಕಾರ್ಯದರ್ಶಿ ಆಯಾಜ್ ಅಹಮ್ಮದ್, ನಗರ ಪ್ರಚಾರ ಸಮಿತಿಯ ಜಿಲ್ಲಾಧ್ಯಕ್ಷ ಈರನ್ನ ಗೌಡ, ಕೆಪಿಸಿಸಿ ವಕ್ತರ ಬಿ.ಎಂ.ಪಾಟೀಲ, ಮುಂಚೂಣಿ ಘಟಕಗಳ ಅಧ್ಯಕ್ಷರಾದ ಎರುಕುಲ ಸ್ವಾಮಿ, ಅಲಿವೇಲು ಸುರೇಶ್, ಧನುಂಜಯ್ ಹಮಲ್, ಶ್ರೀಕಾಂತ್, ಅತ್ತವುಲ್ಲ, ಡಿಸಿಸಿ ಕಾರ್ಯಕಾರಿಣಿ ಸಮಿತಿಯ ಸದಸ್ಯರಾದ ವೆಂಕಟಲಕ್ಷ್ಮಿ ನಾರಾಯಣ, ಮುಖಂಡರಾದ ಬಿ.ಎ.ಮಲ್ಲೇಶ್ವರಿ, ಪರ್ವಿನ್ ಭಾನು, ಗೋನಾಳ್ ನಾಗಭೂಷಣ್ ಗೌಡ, ವಿಜಯ್, ಲಿಂಗರಾಜು ಇತರರು ಉಪಸ್ಥಿತರಿದ್ದರು.



ಬಳ್ಳಾರಿ: ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ, ಜಿಲ್ಲಾ ನಗರ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಅಲ್ಲಂ ಪ್ರಶಾಂತ್ ಅವರ ಅಧ್ಯಕ್ಷತೆಯಲ್ಲಿ ಆಧುನಿಕ ಭಾರತ ನಿರ್ಮಾಣ ಅಡಿಗಲ್ಲು ಹಾಕಿದ ಭಾರತದ ಡಿಜಿಟಲ್ ಕ್ರಾಂತಿಯ ಹರಿಕಾರ ಮಾಜಿ ಪ್ರಧಾನಿ ದಿ.ರಾಜೀವ್ ಗಾಂಧಿ ಅವರ ಭಾವಚಿತ್ರಕ್ಕೆ ಪುಷ್ಪಗಳನ್ನು ಹಾಕುವ ಮೂಲಕ ಗುರುವಾರ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು.

ಜಿಲ್ಲಾಧಿಕಾರಿ ಕವಿತಾ ಮನ್ನಿಕೇರಿ ಅಭಿಮತ

ಶಿಕ್ಷಣ ಕ್ಷೇತ್ರದಲ್ಲಿ ಪಿಡಿಐಟಿ ಕೊಡುಗೆ ಅಪಾರ

◆ **ವಿಜಯನಗರ:** ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘವು ಈ ಪ್ರಾಂತ್ಯದಲ್ಲಿ ಶೈಕ್ಷಣಿಕವಾಗಿ ಉತ್ತಮ ಕೆಲಸವನ್ನು ಮಾಡುತ್ತಿದೆ ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ಹೇಳಿದರು.

ಹೊಸಪೇಟೆ ನಗರದ ಪ್ರೌಢದೇವರಾಯ ತಾಂತ್ರಿಕ ಮಹಾ ವಿದ್ಯಾಲಯದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪಿಡಿಐಟಿ ಕಾಲೇಜ್ ವತಿಯಿಂದ ಪ್ರತಿಭಾವಂತ ವಿದ್ಯಾರ್ಥಿಗಳು ಹೊರಹೊಮ್ಮುತ್ತಿದ್ದಾರೆ. ವಿದ್ಯಾರ್ಥಿಗಳು ಕೇವಲ ಎಂಜಿನಿಯರಿಂಗ್ ಅಲ್ಲದೇ ವಿವಿಧ ಕ್ಷೇತ್ರಗಳಲ್ಲಿಯೂ ಉನ್ನತ ಶಿಕ್ಷಣವನ್ನು ಹೊಂದಿ ಸಮಾಜಕ್ಕೆ ಸೇವೆ ಸಲ್ಲಿಸಬೇಕು ವಿದ್ಯಾರ್ಥಿ ಜೀವನದಲ್ಲಿ ಪರಿಶ್ರಮ ಅಭ್ಯಾಸದಿಂದ ಯಶಸ್ಸನ್ನು ಸಾಧಿಸಬಹುದು ಎಂದು ಸಲಹೆ ನೀಡಿದರು.

ತೋರಣಗಲ್ಲಿನ ಜೆಎಸ್‌ಡಬ್ಲ್ಯು ಸ್ಟೀಲ್ಸ್ ಲಿಮಿಟೆಡ್‌ನ ಮಾಜಿ ಅಧ್ಯಕ್ಷ ರಾಜಶೇಖರ ಪಟ್ಟಣಶೆಟ್ಟಿ ಹಾಗೂ ಎಂಎಸ್‌ಪಿಎಲ್‌ನ ಕಾರ್ಪೊರೇಟ್ ಕಮ್ಯುನಿಕೇಷನ್ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಪ್ರಭುದೇವಪ್ಪ, ಅಧ್ಯಕ್ಷತೆಯನ್ನು ವಹಿಸಿದ್ದ ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಉಪಾಧ್ಯಕ್ಷರಾದ ಜಾನೆಕುಂಟೆ ಬಸವರಾಜ ಮಾತನಾಡಿದರು.



> ಭಾರತ ಯುವಶಕ್ತಿಯೊಂದಿಗೆ ಜಾಗತಿಕವಾಗಿ ಮುನ್ನಡೆಯುತ್ತಿದೆ. 2014 ರಲ್ಲಿ ಕೇವಲ 380 ಸ್ಟಾರ್ಟ್ ಅಪ್‌ಗಳು ಇದ್ದವು. ಆದರೆ ಈಗ 1.90,000 ಸ್ಟಾರ್ಟ್ ಅಪ್‌ಗಳು ಶೇ.60 ಪ್ರತಿಶತ 30 ರಿಂದ 40 ರ ವಯಸ್ಸಿನ ಯುವಕರಿಂದ ನಡೆಯುತ್ತಿವೆ. ಎಐ (ಕೃತಕ ಬುದ್ಧಿಮತ್ತೆ) ಇದಕ್ಕೆ ಪೂರಕವಾಗಿ ಕೆಲಸ ಮಾಡುತ್ತಿದೆ. ಎಐನಿಂದ ಹೊಸ ಉದ್ಯೋಗಾವಕಾಶಗಳು ದೊರೆಯಲಿವೆ. ವಿದ್ಯಾರ್ಥಿಗಳು ಎಐ ಅನ್ನು ಪಳಗಿಸುವ ಚಾಕಚಕ್ಯತೆಯನ್ನು ಹೊಂದಿರಬೇಕು.
>
> ■ ಡಾ.ಕರುಣಾಕರ ರೈ.ಬಿ., ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಾರ್ಯಕಾರಿ ಮಂಡಳಿಯ ಸದಸ್ಯ

ನಗರದ ಎಂಎಸ್‌ಪಿಎಲ್‌ನ ಕಾರ್ಪೊರೇಟ್ ಕಮ್ಯುನಿಕೇಷನ್ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕರಾದ ಕೆ.ಪ್ರಭುದೇವಪ್ಪ ಹಾಗೂ ಬಲ್ಡೋಟಾ ಗ್ರೂಪ್‌ನ ಉಪಾಧ್ಯಕ್ಷರಾದ ಎಚ್.ಕೆ.ರಮೇಶ್ ಈ ಸಮಾರಂಭದಲ್ಲಿ ಆರು ವಿಭಾಗದ ಪ್ರತಿಭಾವಂತ ಟಾಪರ್‌ಗಳಾದ, ಮೈಕಾನಿಕಲ್ ವಿಭಾಗದ ಕು.ಜಹೀರ್ ಅಹಮದ್ ಖಾನ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಕು.ಎಚ್ ಏನ್ ಸಂಜಯ್, ಗಣಕಯಂತ್ರ ವಿಭಾಗದ ಕು.ಸಮೀನಾ ಫಾತಿಮಾ, ಸಿವಿಲ್ ಎಂಜಿನಿಯರಿಂಗ್ ವಿಭಾಗದ ಕು.ಆಫ್ರೀನ್ ಎಸ್., ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಕು.ಕೌಸರ್ ಜಬೀನ್, ಹಾಗೂ ಎಂಬಿಎ ವಿಭಾಗದ ಕು.ಜೊಯ್ ಪ್ರಿಯ ಬಿ. ಎಂಬ ವಿದ್ಯಾರ್ಥಿಗಳಿಗೆ ಎಂಎಸ್‌ಪಿಎಲ್ ಸಂಸ್ಥೆಯಿಂದ ಒಂದು ಲಕ್ಷ ರೂ. ಮೌಲ್ಯದ ಚಿನ್ನದ ಪದಕಗಳನ್ನು ನೀಡಿ ಪುರಸ್ಕರಿಸಿದರು.

ಪ್ರಾಂಶುಪಾಲ ಡಾ.ಯು. ಎಂ.ರೋಹಿತ್ ಕಾಲೇಜಿನ ವಾರ್ಷಿಕ ವರದಿ ಓದಿದರು. ವೀ.ವಿ.ಸಂಘದ ವತಿಯಿಂದ ಎಲ್ಲ ವಿಭಾಗದ ಅತ್ಯಂತ ಹೆಚ್ಚು ಶ್ರೇಣಿಯಲ್ಲಿ ಉತ್ತೀರ್ಣಗೊಂಡ 6 ವಿದ್ಯಾರ್ಥಿಗಳಿಗೆ ತಲಾ ಹತ್ತು ಸಾವಿರ ನಗದು ಬಹುಮಾನ ವಿತರಿಸಲಾಯಿತು.

ಡಾಕ್ಟರೇಟ್ ಪಡೆದ ಉಪನ್ಯಾಸಕರಾದ ಡಾ.ಚಂದ್ರಕುಮಾರ್ ಚಕ್ರಸಾಲಿ, ಡಾ.ಶಮಿತಾ ಎಚ್. ಎಂ., ಡಾ.ಮಾಲತೇಶ್ ಕೆ. ಹಾಗೂ ಡಾ.ರವಿಕುಮಾರ್ ಎಸ್.ಪಿ. ಅವರಿಗೆ ಗೌರವಿಸಲಾಯಿತು. ಪಿಡಿಐಟಿಯ ಆಡಳಿತ ಮಂಡಳಿ ಅಧ್ಯಕ್ಷ ಕಲ್ಗುಡಿ ಮಂಜುನಾಥ್, ಪಿಡಿಐಟಿಯ ಆಡಳಿತ ಮಂಡಳಿಯ ಸದಸ್ಯರಾದ ಐ.ಎನ್. ಸಂಗನಬಸಪ್ಪ, ಅನಿಲ್ ಆರ್. ಜವಳಿ, ಬಿ ಚಂದ್ರಮೌಳಿ ಮತ್ತು ಮುಖಂಡರಾದ ಗುಡೆಕೋಟೆ ನಾಗರಾಜ್, ಮೆಟ್ರಿ ಮಲ್ಲಿಕಾರ್ಜುನ, ಕೋರಿ ಶೆಟ್ರು ನಿಂಗಪ್ಪ, ಕುಮಾರಸ್ವಾಮಿ ಮತ್ತು ಪ್ರಾಂಶುಪಾಲ ಡಾ.ರೋಹಿತ್ ಯು.ಎಂ., ಉಪಪ್ರಾಂಶುಪಾಲ ಡಾ.ಪಾರ್ವತಿ ಕಡ್ಲಿ ಹಾಗೂ ಕಾರ್ಯಕ್ರಮದ ಸಂಯೋಜಕ ಡಾ.ರವಿಕುಮಾರ್ ಎಸ್.ಪಿ. ಉಪಸ್ಥಿತರಿದ್ದರು.

ಗ್ರಾಮೀಣ ಅಭಿವೃದ್ಧಿ ಕಾಮಗಾರಿಗೆ ಚಾಲನೆ

◆ **ಕೂಡ್ಲಿಗಿ:** ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಬದ್ಧರಾಗಿರುವ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಶ್ರೀನಿವಾಸ್ ಎನ್ .ಟಿ. ಅವರು ಗುರುವಾರ ಸಿದ್ದಾಪುರ ಗ್ರಾಮದಲ್ಲಿ ವಿವಿಧ ಪ್ರಮುಖ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಗುದ್ದಲಿ ಪೂಜೆ ನೆರವೇರಿಸಿದರು.

ಗ್ರಾಮದ ಸರ್ವಾಂಗೀಣ ಪ್ರಗತಿಗಾಗಿ ಹಮ್ಮಿಕೊಳ್ಳಲಾದ ಕಾಮಗಾರಿಗಳ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ (ಎಸ್ .ಸಿ. ಕಾಲೋನಿ)1 ಕೋಟಿ ಸಿ.ಸಿ. ರಸ್ತೆ ಮತ್ತು ಚರಂಡಿ ನಿರ್ಮಾಣ ಉದ್ಘಾಟನೆ 30 ಲಕ್ಷ ರೂ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕೊಠಡಿ ನಿರ್ಮಾಣ 20 ಲಕ್ಷ ರೂ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆ ಕೊಠಡಿ ನಿರ್ಮಾಣ 12 ಲಕ್ಷ ರೂ. ಗ್ರಾಮಸ್ಥರ ಕುಂದುಕೊರತೆ ಆಲಿಸಿದ ಶಾಸಕರು: ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ಬಳಿಕ, ಶಾಸಕರು ಸಿದ್ದಾಪುರ ಗ್ರಾಮದ ಪ್ರಮುಖ ಓಣಿಗಳಲ್ಲಿ ಪಾದಯಾತ್ರೆ ನಡೆಸಿ ಸ್ಥಳೀಯ ಪರಿಸ್ಥಿತಿಯನ್ನು ವೀಕ್ಷಿಸಿದರು.

ಊರಿನ ಮುಖಂಡರು, ಶಿಕ್ಷಕರು, ಮಹಿಳೆಯರು ಹಾಗೂ ರೈತರನ್ನು ಖುದ್ದಾಗಿ ಭೇಟಿಯಾಗಿ ಅವರ ಕುಂದುಕೊರತೆಗಳನ್ನು ಆಲಿಸಿದರು.

ಅರ್ಹರಿಗೆ ವಸತಿ ಕಲ್ಪಿಸುವ ಭರವಸೆ: ಗ್ರಾಮದ ಬಡ ಕುಟುಂಬಗಳು ಎದುರಿಸುತ್ತಿರುವ ವಸತಿ ಸಮಸ್ಯೆಯನ್ನು ಶಾಸಕರ ಗಮನಕ್ಕೆ ತಂದ ಸಾರ್ವಜನಿಕರು, ತಮಗೆ ಆಶ್ರಯ ಮನೆಗಳನ್ನು ಕಲ್ಪಿಸಿಕೊಡಬೇಕಾಗಿ ಮನವಿ ಮಾಡಿದರು. ಸಾರ್ವಜನಿಕರ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಶಾಸಕರು, ಮುಂದಿನ ದಿನಗಳಲ್ಲಿ ಗ್ರಾಪಂ ಮಟ್ಟದಲ್ಲಿ ಸರ್ವೆ ನಡೆಸಿ ಅರ್ಹ ಫಲಾನುಭವಿಗಳಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡುವುದಾಗಿ ಭರವಸೆ ನೀಡಿದರು.

ಸ್ಥಳೀಯ ಮುಖಂಡರಾದ ಶರಣೇಶ, ಬಸವರಾಜ, ರಾಮಣ್ಣ, ಮಲ್ಲಿಕಾರ್ಜುನ, ದೇವೇಂದ್ರಪ್ಪ, ರಾಮಣ್ಣ ಸೇರಿದಂತೆ ಊರಿನ ಪ್ರಮುಖರು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದು.



ಮಾನವೀಯ ಮೌಲ್ಯ ಬದುಕಿಗೆ ದಾರಿದೀಪ

◆ **ಹೂವಿನಹಡಗಲಿ:** ವೇಗದ ಜಂಜಾಟದಲ್ಲಿ ಮಾನವೀಯ ಮೌಲ್ಯಗಳು ಬದುಕಿಗೆ ದಾರಿದೀಪ ಎಂದು ಜ್ಞಾನೋದಯ ವಿದ್ಯಾ ಸಂಸ್ಥೆಯ ಅಧ್ಯಕ್ಷ ಕೋಡಿಹಳ್ಳಿ ಮುದುಕಪ್ಪ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಜ್ಞಾನಗಂಗಾ ಪ್ರೌಢಶಾಲೆಯಲ್ಲಿ ಗುರುವಾರ ಜ್ಞಾನ ಬೆಳಕು ಅಕಾಡೆಮಿ ವತಿಯಿಂದ ಆಯೋಜಿಸಲಾದ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಇಂತಹ ತರಬೇತಿ ಶಿಬಿರಗಳು ಅತ್ಯಂತ ಅಗತ್ಯ. ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಬೆಳೆಸುವ ಕಾರ್ಯವನ್ನು ಅಕಾಡೆಮಿ ಉತ್ತಮವಾಗಿ ನಿರ್ವಹಿಸುತ್ತಿದೆ ಎಂದು ತಿಳಿಸಿದರು.


ತಾಲೂಕು ದೈಹಿಕ ಪರಿವೀಕ್ಷಕ ರಫಿ ಅಹಮದ್ ಕವಾಸ್ ಮಾತನಾಡಿ, ಬೇಸಿಗೆ ರಜೆಯನ್ನು ಸದುಪಯೋಗಪಡಿಸಿಕೊಂಡು ಮಕ್ಕಳು ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಿರುವುದು ಸಂತಸದ ವಿಷಯ. ಶಿಕ್ಷಣದ ಜೊತೆಗೆ ಸಂಸ್ಕಾರ ಮತ್ತು ಆತ್ಮವಿಶ್ವಾಸವೂ ಅಗತ್ಯ ಎಂದು ತಿಳಿಸಿದರು.

ಕನ್ನಡ ಜಾಗೃತಿ ಸಮಿತಿ ಜಿಲ್ಲಾ ಸದಸ್ಯ ಸುರೇಶ ಅಂಗಡಿ ಮಾತನಾಡಿ, ಸಾವಿತ್ರಿ ಬಾಯಿ ಫುಲೆ ಮೇಡಂ ಕ್ಯೂರಿ ಸಾಧಕರ ಸಾಧನೆ ನಿಮಗೆ ಸ್ಫೂರ್ತಿ ಆಗಲಿ ಎಂದು ತಿಳಿಸಿದರು.

ಎಸ್‌ಎಂಎನ್ ಫೌಂಡೇಶನ್‌ನ ಎಸ್. ಎಂ.ಶಿವರಾಜ್ ಮಾತನಾಡಿ, ತಮ್ಮ ಸಂಸ್ಥೆಯ ಮೂಲಕ ಬಡ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ಸಹಕಾರ ನೀಡುವುದಾಗಿ ತಿಳಿಸಿದರು. ಬಾಹುಬಲಿ ಆಂಗ್ಲ ಮಾಧ್ಯಮ ಶಾಲೆಯ ಅಧ್ಯಕ್ಷ ಕಿರಣ್‌ಕುಮಾರ್ ಜೈನ್, ಪಟ್ಟಣ ಶಿಕ್ಷಣ ಸಂಯೋಜಕ ವೀರೇಶ್ ಬಗಲಿ ಮಾತನಾಡಿದರು. ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

2025-26ರ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸುಧಾ ಜಿ, ಅಪ್ಸನಾ ಎಸ್., ಅನುಪಮಾ ಐ., ಮಮತಾ ಇನ್ನಿತರ 10 ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಜ್ಞಾನ ಬೆಳಕು ಅಕಾಡೆಮಿಯ ಸದಸ್ಯರಾದ ವಿಜಯ್ ಲಿಂಗದಹಳ್ಳಿ ಪ್ರಾಸ್ತವಿಕವಾಗಿ ಮಾತನಾಡಿದರು. ಉಮೇಶ್ ಸೊಪ್ಪಿನ್ ಸಭೆಯಲ್ಲಿ ಶಿಬಿರದ ಸಾಧಕಗಳ ಬಗ್ಗೆ ಮಾತನಾಡಿದರು. ಅಕಾಡೆಮಿಯ ವಿಶ್ವನಾಥ್ ಬಾರಿಕರ ಲೋಕೇಶ್ ಅಂಗಡಿ ನಿರ್ವಹಿಸಿದರು. ಶಿಕ್ಷಕರಾದ ವೀಣಾ ಡಿ., ರೇಖಾ ಎಂ., ಮಂಜುಳಾ ಜಾಡರ್ ಮತ್ತು ನಿಂಗಪ್ಪ ಭೇಟಿ ಇದ್ದರು. ನಂತರ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.



ಮಾದಕ ವಸ್ತಗಳ ಸೇವನೆಯಿಂದ ದೂರವಿರಿ: ಸಿಪಿಐ ಅಂಬಣ್ಣ

◆ **ಸಿರುಗುಪ್ಪ:** ಮಾದಕ ವಸ್ತುಗಳ ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ದುಶ್ಚಟದಿಂದ ಪ್ರತಿಯೊಬ್ಬರೂ ದೂರು ಇರಬೇಕು ಎಂದು ಅಬಕಾರಿ ಇಲಾಖೆಯ ಸಿಪಿಐ ಎ.ಜಿ.ಅಂಬಣ್ಣ ಹೇಳಿದರು.

ನಗರದ ಟಿಎಸ್‌ಎಚ್‌ಎಂಎಸ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಎ ಮತ್ತು ಬಿ ಘಟಕ, ಅಬಕಾರಿ ಇಲಾಖೆ ಆಶ್ರಯದಲ್ಲಿ ಗುರುವಾರ ನಡೆದ ಮಾದಕ ವಸ್ತುಗಳ ಸೇವನೆ ನಿಷೇಧ ಜಾಗೃತಿ ಕಾರ್ಯಕ್ರಮ ಹಾಗೂ ಭಯೋತ್ಪಾದನಾ ವಿರೋಧಿ ದಿನಾಚರಣೆಯಲ್ಲಿ ಮಾತನಾಡಿದರು.

1985ರ ಮಾದಕ ವಸ್ತುಗಳ ನಿಷೇಧ ಕಾಯ್ದೆ ಅನ್ವಯ ಮಾದಕ ವಸ್ತಗಳನ್ನು ಬೆಳೆಸುವುದು. ಮಾರಾಟ ಮಾಡುವುದು, ಸೇವಿಸುವುದು ಮತ್ತು ಸಾಗಿಸುವುದು ಕಾನೂನಿ ಪ್ರಕಾರ ಶಿಕ್ಷಾರ್ಹ ಅಪರಾಧ. ಮಾದಕ ವಸ್ತುಗಳ ಸೇವನೆಯು ವ್ಯಕ್ತಿಯ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸಂಪೂರ್ಣವಾಗಿ ಹಾಳುಮಾಡುತ್ತದೆ. ಇದರಿಂದ ದೂರವಿದ್ದು, ಉತ್ತಮ ಜೀವನಶೈಲಿ, ಶಿಕ್ಷಣ ಮತ್ತು ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ನಮ್ಮೆಲ್ಲರ ಆದ್ಯತೆಯಾಗಬೇಕು ಎಂದರು. ಸಮಾಜ ಘಾತುಕ ಚಟುವಟಿಕೆಯಾದ ಭಯೋತ್ಪಾದನೆಯ ಕಾರ್ಯಕ್ಕೂ ಕೂಡ ಪರೋಕ್ಷ ಪ್ರೇರಣೆ ನೀಡುವುದರಿಂದ ವಿದ್ಯಾರ್ಥಿಗಳು ಮಾದಕ ವಸ್ತುಗಳಿಂದ ಅಂತರ ಕಾಯ್ದುಕೊಂಡು,



ಮಾನಸಿಕವಾಗಿ, ಬೌದ್ಧಿಕವಾಗಿ,ಐಹಿಕವಾಗಿ ಸ್ವಾಸ್ಥ್ಯ ಕಾಪಾಡಿಕೊಂಡು ತಮ್ಮ ಭವಿಷ್ಯವನ್ನು ರೂಪಿಕೊಳ್ಳಲು ಕರೆ ನೀಡುತ್ತಾ, ವಿದ್ಯಾರ್ಥಿಗಳಲ್ಲಿ ಜಾಗೃತಿಯನ್ನು ಮೂಡಿಸಿದರು. ಅಬಕಾರಿ ಅಧಿಕಾರಿ ಹಿರಿಯ ಪ್ರಾಧ್ಯಾಪಕ ಕೃಷ್ಣಪ್ಪ ಮಾತನಾಡಿದರು.

ಪ್ರಾಧ್ಯಾಪಕ ರಾಮಣ್ಣ ಪೂಜಾರಿ ಅವರು ಭಯೋತ್ಪಾದನ ಮತ್ತು ಮಾದಕ ನಿಯಂತ್ರಣದ ಪ್ರತಿಜ್ಞಾ ವಿಧಿಯನ್ನು ಭೋಧಿಸಿದರು.

ಎನ್‌ಎಸ್‌ಎಸ್-'ಎ' ಘಟಕಾಧಿಕಾರಿ ಡಾ.ಕೆ.ಎಂ.ಚಂದ್ರಕಾಂತ, 'ಬಿ' ಘಟಕಾಧಿಕಾರಿ ಬಕಾಡೆ ಪಂಪಾಪತಿ, ಪ್ರಾಧ್ಯಾಪಕರಾ ಡಾ.ಶಾಲಿನಿ ಎ., ಪ್ರಶಾಂತ ಬಾಬು ಟಿ.ಎಸ್., ಸುರೇಶ, ಡಾ.ರಾಜೇಂದ್ರ, ರೇಣುಕಾ, ಮಮತಾ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಾಜಿ ಸಚಿವ ಈಟಿ ಶಂಭುನಾಥ್ ಜನ್ಮದಿನಾಚರಣೆ

◆ **ಹೂವಿನಹಡಗಲಿ:** ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಮಾಜಿ ಸಚಿವ ಈಟಿ ಶಂಭುನಾಥ್ ಅವರ ಜನ್ಮದಿನಾಚರಣೆ ಪ್ರಯುಕ್ತ ಅವರ ಸಮಾಧಿಗೆ ಕ್ಷೇತ್ರದ ಶಾಸಕ ಕೃಷ್ಣ ನಾಯಕ್ ಅವರು ಪುಷ್ಪ ನಮನ ಸಲ್ಲಿಸಿದರು.

ಈಟಿ ಶಂಭುನಾಥ್ ಸಾಹೇಬರ ಅಭಿಮಾನಿಗಳು ಹಾಗೂ ಅವರ ಅನುಯಾಯಿಗಳು ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ಹಾಗೂ ಬ್ರೆಡ್ ಗಳನ್ನು ವಿತರಿಸಲಾಯಿತು.

ಮಂಡಲದ ಅಧ್ಯಕ್ಷರಾದ ಪೂಜಾರ್ ಮಲ್ಲಿಕಾರ್ಜುನ್ ಮುಖಂಡರಾದ ಎಂ.ಪರಮೇಶ್ವರಪ್ಪ ವಕೀಲರು, ಎಚ್.ಪೂಜಪ್ಪ, ಬೀರಬ್ಬಿ ಕರಂಗಿ ಸುಭಾಷ್ ಚಂದ್ರ ಬಸವರಾಜ್, ಶಿವಕುಮಾರ್ ವಕೀಲರು ಕಣದಾಳ ಶಂಕ್ರಪ್ಪ, ಸಿರಾಜ್ ಬಾವಿಹಳ್ಳಿ, ಆರ್.ಟಿ.ನಾಗರಾಜ್, ಕಾಯಣ್ಣನವರ್ ಕೃಷ್ಣ, ಬಿ.ರಾಮುಮೂರ್ತಿ, ಗುರುಗೌಡ ಜಾಡರ್, ನಾಗರಾಜ್ ಇತರರಿದ್ದರು.



ರಾಜ್ಯದಲ್ಲಿ ಕನ್ನಡಿಗನೇ ಸಾರ್ವಭೌಮ: ಶಾಸಕ ಭರತ್ ರೆಡ್ಡಿ

◆ **ಬಳ್ಳಾರಿ:** ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ ಎಂದು ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದರು.

ನಗರದ ಖಾಸಗಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕರ್ನಾಟಕ ಯುವ ಜಾಗೃತಿ ವೇದಿಕೆಯನ್ನು ಉದ್ಘಾಟಿಸಿ ಮಾತನಾಡಿದರು. ಕನ್ನಡ ನೆಲದ ಉದ್ಯೋಗಗಳು ಕನ್ನಡಿಗರಿಗೆ ಸಿಗಬೇಕು, ಕನ್ನಡಿಗರಿಗೆ ಸಿಗಬೇಕಾದ ಅವಕಾಶಗಳು ಹಿಂದಿ ಮಾತಾಡುವವರ ಪಾಲಾಗುತ್ತಿವೆ ಎಂದು ವಿಷಾದ ವ್ಯಕ್ತಪಡಿಸಿದರು.

ನಮ್ಮ ನೆಲ ನಮ್ಮ ಹಕ್ಕು-ನಮ್ಮ ಉದ್ಯೋಗ ನಮ್ಮ ಹಕ್ಕು ಎಂಬ ಘೋಷಣೆಯಡಿ ಹೋರಾಟ ಕಟ್ಟೋಣ. ನಮ್ಮ ಯುವಕರಿಗೆ ಉದ್ಯೋಗ ದೊರಕಿಸಿಕೊಡಲು ನಾನು ಬದ್ಧ ಎಂದರು.

ನಗರದಲ್ಲಿ ಜನರು, ಅಕ್ಕ ತಂಗಿಯರು ನನ್ನನ್ನು ಭೇಟಿ ಮಾಡಿದಾಗ ಉದ್ಯೋಗ ಕೊಡಿಸುವಂತೆ ಕೇಳುತ್ತಾರೆ. ಆದರೆ, ನಮ್ಮ ನೆಲದಲ್ಲಿ ಸಾವಿರಾರು ಕೋಟಿ ಸಂಪಾದಿಸುವ ಕಾರ್ಖಾನೆಯವರು ಹೊರ ರಾಜ್ಯದವರಿಗೆ ಉದ್ಯೋಗ ನೀಡುತ್ತಾರೆ. ನಾವೆಲ್ಲ ಸೇರಿ ಹೋರಾಟ ಕಟ್ಟೋಣ, ನಾವೆಲ್ಲ ಸೇರಿ ನಮ್ಮ ಯುವಕರ ಬೇಡಿಕೆಗಳಿಗಾಗಿ ಹೋರಾಡೋಣ, ಯುವಶಕ್ತಿ ಮುಂದೆ ಯಾವ ಶಕ್ತಿಯೂ ಇಲ್ಲ. ವ್ಯವಸ್ಥೆಯನ್ನು ಪ್ರಶ್ನಿಸುವ ಮನೋಭಾವ ರೂಢಿಸಿಕೊಳ್ಳೋಣ ಎಂದರು.

ನಮ್ಮ ನೆಲ ನಮ್ಮ ಜಲ ನಮ್ಮ ಹಕ್ಕು ಆಗಿದೆ. ಸ್ಥಳೀಯವಾಗಿ ಇರುವ ಉದ್ಯೋಗಗಳನ್ನು ಸ್ಥಳೀಯರಿಗೇ



ನೀಡಬೇಕೆಂದು ಸಿಎಂ-ಡಿಸಿಎಂ ಅವರಿಗೆ ಮನವಿ ಮಾಡುವೆ, ಯುವಕರಿಗೆ ಉದ್ಯೋಗ ದೊರಕಿಸುವ ಸಂಬಂಧ ಸ್ಥಳೀಯವಾಗಿಯೂ ಬೃಹತ್ ಹೋರಾಟ ಆಯೋಜಿಸಲಿದ್ದೇವೆ. ನೀವೆಲ್ಲ ದೊಡ್ಡ ಸಂಖ್ಯೆಯಲ್ಲಿ ಭಾಗಿಯಾಗಬೇಕು ಎಂದರು.

ನಾವು ಯುವಕರು ಪ್ರಶ್ನೆ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು, ಗುಮಾಸ್ತನಿಂದ ಪ್ರಧಾನಿಯವರಿಗೆ ಎಲ್ಲರನ್ನೂ ಪ್ರಶ್ನೆ ಮಾಡಬೇಕು, ನಿಮಗೆ ಪ್ರಶ್ನಿಸುವ ಹಕ್ಕಿದೆ, ಮಾತಾಡಿ, ಬಾಬಾಸಾಹೇಬ ಅಂಬೇಡ್ಕರ್ ಅವರು ಕೊಟ್ಟ ಅಧಿಕಾರವನ್ನು ನಾವು ಬಳಸೋಣ, ಡಾ.ಅಂಬೇಡ್ಕರ್ ಅವರನ್ನು ಸ್ಮರಿಸೋಣ, ಐತಿಹಾಸಿಕ ವ್ಯಕ್ತಿಗಳ ಬಗ್ಗೆ ತಿಳಿಯೋಣ ಎಂದರು.

ಕಾಂಗ್ರೆಸ್ ಮುಖಂಡ ಸುಬ್ಬರಾಯುಡು, ಸಂಘಟನೆಯ ಸಂಸ್ಥಾಪಕ ಯಾಳ್ಪಿ ವಲಿ ಬಾಷ ಮತ್ತು ನಿಯೋಜಿತ ಪದಾಧಿಕಾರಿಗಳು ಇದ್ದರು.

ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ

◆ **ಸಿರುಗುಪ್ಪ:** ನಗರದ ತಾಲೂಕು ಕ್ರೀಡಾಂಗಣದಲ್ಲಿ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿ ನಡೆಯಿತು.

ಹಳ್ಳಿ ಮನೆ ನಾಗರಾಜ ಮತ್ತು ಮಂಜು ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಈ ಪಂದ್ಯಾವಳಿಯನ್ನು ಬಿಜೆಪಿ ಯುವ ಘಟಕದ ಜಿಲ್ಲಾಧ್ಯಕ್ಷ ಎಂ.ಎಸ್.ಸಿದ್ದಪ್ಪ ಅವರು ಉದ್ಘಾಟಿಸಿ ಮಾತನಾಡಿ, ಕ್ರೀಡಾಪಟುಗಳಿಗೆ ಪ್ರೋತ್ಸಾಹಿಸಿ ಶುಭಾಶಯಗಳು ತಿಳಿಸಿದರು. ಯಾವುದೇ ಕ್ರೀಡೆಗಳಿರಲಿ, ಕ್ರೀಡೆಗಳಿಂದ ಮಾನಸಿಕ ಮತ್ತು ದೈಹಿಕವಾಗಿ ಆರೋಗ್ಯಕರವಾಗಿ ಇರಲೂ ಸಹಕಾರಿಯಾಗಿದೆ. ಕ್ರೀಡೆ ಪ್ರತಿಯೊಬ್ಬರಿಗೂ ಬಹಳ ಅವಶ್ಯಕ. ಪ್ರತಿಯೊಬ್ಬ ವ್ಯಕ್ತಿಯು ಕ್ರೀಡೆಗಳಲ್ಲಿ ಭಾಗವಹಿಸಬೇಕು, ಸೋಲು, ಗೆಲುವು, ಮುಖ್ಯವಲ್ಲ, ಕ್ರೀಡೆಗಳಲ್ಲಿ ಭಾಗವಹಿಸುವುದು ಮುಖ್ಯ ಎಂದರು.

ನಗರಸಭೆ ಸದಸ್ಯ ವಿಕ್ರಂ ಜೈನ್ ಮಾತನಾಡಿ, ಕ್ರೀಡಾಪಟುಗಳು ಅತ್ಯಂತ ಉತ್ಸಾಹದಿಂದ ಆಟವಾಡಬೇಕು. ಕ್ರೀಡೆಯಲ್ಲಿ ಸೋಲು, ಗೆಲುವು ಸಾಮಾನ್ಯ. ಆದರೆ, ಭಾಗವಹಿಸುವುದು ಮುಖ್ಯ, ತೀರ್ಪುಗಾರರ ನಿರ್ಣಯಕ್ಕೆ ಎಲ್ಲರೂ ಬದ್ಧರಾಗಿರಬೇಕು ಎಂದರು. ನಿವೃತ್ತ ಪ್ರಾಚಾರ್ಯ ಬಸವರಾಜ್, ಶ್ರೀನಿವಾಸ್, ಲೋಕೇಶ್, ನರೇಶ್, ರಾಘವೇಂದ್ರ, ಅಂಜಿ, ಜಡಪ್ಪ ಇತರರಿದ್ದರು.



ಶಿಸ್ತು, ಮೌಲ್ಯ ರೂಢಿಸಿಕೊಳ್ಳಿ: ಶಾಸಕ ಗಣೇಶ

◆ **ಕುರುಗೋಡು:** ವಿದ್ಯಾರ್ಥಿಗಳು ದೂರದೃಷ್ಟಿ ಮತ್ತು ದೀರ್ಘಕಾಲೀನ ಗುರಿ ಹೊಂದಿರಬೇಕು. ಶೈಕ್ಷಣಿಕ ಸಾಧನೆಯ ಜತೆಯಲ್ಲಿ ಶಿಸ್ತು, ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು ಎಂದು ಕಂಪ್ಲಿ ಶಾಸಕ ಜೆ.ಎನ್.ಗಣೇಶ ವಿದ್ಯಾರ್ಥಿಗಳಿಗೆ ನೀಡಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 2025-26ನೇ ಸಾಲಿನ ಕಾಲೇಜು ವಾರ್ಷಿಕೋತ್ಸವ ಅಂತಿಮ ವರ್ಷದ ಪದವಿ ಮುಗಿಸಿದ ವಿದ್ಯಾರ್ಥಿಗಳ ಬೀಳ್ಕೊಡಗೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಾಧನೆ ಯಾವತ್ತೂ ಒಂದೇ ದಿನದಲ್ಲಿ ಆಗುವಂತದಲ್ಲ ಅದಕ್ಕೆ ಕಠಿಣ ಶ್ರಮ ಬೇಕು ವಿದ್ಯಾರ್ಥಿಗಳು ವಿದ್ಯಾಭ್ಯಾಸ ದಿನಗಳಲ್ಲಿ ಶ್ರಮವಹಿಸಿ ಶಿಕ್ಷಣ ಕಲಿತು ಪೋಷಕರಿಗೆ ಸಮಾಜಕ್ಕೆ ಹೆಸರು ತರಬೇಕು ಕಠಿಣ ಶ್ರಮ ಸಾಧನೆಗೆ ದಾರಿ ಎಂದು ಹೇಳಿದರು. ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್.ಗಂಗಾಧರಯ್ಯ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಬಳ್ಳಾರಿ ವಿದ್ಯಾತ್ ಸ್ಥಾವರ ಉತ್ತಮವಾಗಿ ಕಾರ್ಯ ನಿರ್ವಹಿಸುವ ಮೂಲಕ ಹೆಸರು ಪಡೆದಿದೆ. ಘಟಕ ಮೂರರಲ್ಲಿ 700 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯನ್ನು ಮಾಡುವ ಮೂಲಕ ಸಾಧನೆಗೈದಿದೆ. ಇದಕ್ಕೆ ಅಲ್ಲಿ ಕಾರ್ಯ ನಿರ್ವಹಿಸುವ ಎಂಜಿನಿಯರ್‌ಗಳು ಕಾರ್ಮಿಕರ ಶ್ರಮದ ಫಲವಾಗಿದೆ. ಅಲ್ಲದೆ ಕಾರ್ಮಿಕರಿಗೆ ಸುರಕ್ಷಿತ ಹಾಗೂ ಜಾಗುರಕತೆಗೆ ಆದ್ಯತೆ ನೀಡಲು ಸಲಹೆ ನೀಡಿದ್ದೇನೆ. ವಿದ್ಯಾರ್ಥಿಗಳು ತಾಂತ್ರಿಕ ವಿಭಾಗದಲ್ಲಿ ಆಸಕ್ತಿವಹಿಸಿ ರಾಷ್ಟ್ರದ ತಂತ್ರಜ್ಞಾನದಲ್ಲಿ



ಕೆಲಸ ಮಾಡುವಂತಗಲಿ ಇತಿಹಾಸ ತಿಳಿದವನು ಇತಿಹಾಸ ಸೃಷ್ಟಿಸುತ್ತಾನೆ ಎಂದು ಹೇಳಿದರು.

ಕಾಲೇಜು ಪ್ರಾಂಶುಪಾಲರಾದ ಡಾ.ಶಾಂತಲಾ, ಶಿಕ್ಷಣ ಎಂಬುವುದು ಮನುಷ್ಯನಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುತ್ತದೆಯಾದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಮಾಜದ ಮಾದರಿ ವ್ಯಕ್ತಿಯಾಗಿ ರೂಪುಗೊಂಡು ದೇಶದ ಬೆನ್ನೆಲುಬಾಗಬೇಕು ಎಂದರು. ಮುಖ್ಯ ಅತಿಥಿಗಳಾಗಿ ಪುರಸಭೆ ಅಧ್ಯಕ್ಷ ಜಿ.ಮಂಜುನಾಥ ಉಪಾಧ್ಯಕ್ಷರಾದ ನಾಗವೇಣಿ ಹಾಗೂ ಪುರಸಭೆ ಮಾಜಿ ಅಧ್ಯಕ್ಷ ಶೇಖಣ್ಣ ಮತ್ತು ಓಂಕಾರಪ್ಪ ಅಂಜಿನಪ್ಪ ವಿಶೇಷ ಆಹ್ವಾನಿತರಾಗಿ ವಿದ್ಯುತ್ ಇಲಾಖೆ ಕಾರ್ಯನಿರ್ವಾಹಕ ಅಧಿಕಾರಿ ಕೆ.ಆರ್. ಗಂಗಾಧರಯ್ಯ, ವಿದ್ಯುತ್ ಇಲಾಖೆ ಅಭಿಯಂತರರಾದ ನಾಗರಾಜ್ ವಿ., ಸಂಚಾಲಕ ಕಾಲೇಜಿನ ಐಕ್ಯೂಎಸಿ ಡಾ.ಚನ್ನಬಸವಯ್ಯ ಹೆ.ಎಂ. ಹಾಗೂ ಕಾಲೇಜು ಕನ್ನಡ ಉಪನ್ಯಾಸಕ ಡಾ.ತಿಪ್ಪೇರುದ್ರ ಸಂಡೂರು ಇತರರಿದ್ದರು.